# ಮೂಲ ಶಿಕ್ಷಣದಲ್ಲಿ ಡಿಪ್ಲೊಮಾ
# (ಡಿ.ಎಲ್.ಇಡಿ)

## *ಕೋರ್ಸ್ - 502*

*ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಸಂಬಂಧಿ ಕಾರ್ಯ ಪ್ರಕ್ರಿಯೆಗಳು*

## ವಿಭಾಗ – 4

## ಕಲಿಕೆಯ ಗುಣಮಾಪನ


**ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ**

ಎ–24/25, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,

ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309

ಜಾಲತಾಣ : www.nios.ac.in

## ಪರಿಣಿತರ ಸಮಿತಿ

ಡಾ॥ ಸಿತಾಂಶು ಎಸ್.ಜೆನಾ
ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ
ಶ್ರೀ ಬಿ.ಕೆ. ತ್ರಿಪಾಠಿ
ಭಾ.ಆ.ಸೆ. ಪ್ರಮುಖ ಸಚಿವರು,
ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,
ಝಾರ್ಖಂಡ್ ಸರ್ಕಾರ, ರಾಂಚಿ
ಪ್ರೋ ಎ.ಕೆ. ಶರ್ಮಾ
ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ
ನವದೆಹಲಿ
ಪ್ರೋ.ಎಸ್.ವಿ.ಎಸ್.ಚೌಧರಿ
ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.
ನವದೆಹಲಿ
ಪ್ರೋ.ಸಿ.ಬಿ.ಶರ್ಮಾ
ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ
ಮುಕ್ತ ವಿಶ್ವವಿದ್ಯಾಲಯ, ನವದೆಹಲಿ
ಪ್ರೋ. ಎಸ್.ಸಿ. ಅಗರ್‌ಕರ್
ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ
ಕೇಂದ್ರ, ಮುಂಬಯಿ

ಪ್ರೋ.ಸಿ.ಎಸ್. ನಾಗರಾಜು
ಭೂತಪೂರ್ವಪ್ರಾಚಾರ್ಯರು
ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು
ಪ್ರೋ. ಕೆ.ದೊರೈಸ್ವಾಮಿ
ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು
ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ
ಪ್ರೊ. ಬಿ. ಫಾಲಚಂದ್ರ
ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,
ಹಾಗೂ ಬೋಧನಾ ವಿಭಾಗದ ವರಿಷ್ಠರು ಆರ್‌ಇಐ
(ಎನ್‌ಸಿಇಆರ್‌ಟಿ) ಮೈಸೂರು
ಪ್ರೋ. ಕೆ.ಕೆ. ವಸಿಷ್ಠ
ಭೂತಪೂರ್ವ ಮುಖ್ಯಸ್ಥರು, ಡಿಇಇ,
ಎನ್‌ಸಿಇಜರ್‌ಟಿ, ನವದೆಹಲಿ
ಪ್ರೊ. ವಸುಧಾ ಕಾಮತ್
ಉಪಕುಲಪತಿಗಳು ಎಸ್ಎನ್‌ಡಿಟಿ ಮಹಿಳಾ
ವಿಶ್ವವಿದ್ಯಾಲಯ, ಮುಂಬಯಿ

ಡಾ. ಹೂಮ ಮಸೂದ್
ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ
ಪ್ರೊ॥ ಪವನ್ ಸುಧೀರ್
ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ
ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ
ಶ್ರೀ ಬಿನಯ ಪಟ್ನಾಯಕ್
ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,
ರಾಂಚಿ
ಡಾ. ಕುಲದೀಪ್ ಅಗರವಾಲ್
ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,
ನೊಯಿಡಾ
ಪ್ರೋ. ಎಸ್.ಸಿ. ಪಾಂಡಾ
ವರಿಷ್ಠ ಸಮಾಲೋಚಕರು (ಶೈಕ್ಷಣಿಕ)
ಡಾ॥ ಕುಜನ್ ಬಲಾ
ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)
ಎನ್.ಐ.ಓ.ಎಸ್. ನೊಯಿಡಾ.

## ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು

ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ

## ಪಠ್ಯಲೇಖಕರು

ಡಾ॥ ಮೊಹಿತ್ ಮೋಹನ್ ಮೊಹಂತಿ
ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ
ಒಡಿಶಾ
ಡಾ॥ ಪರಶುರಾಮ್ ರಾಯಸಿಂಗ್
ನಿವೃತ್ತ ರೀಡರ್ (ಶಿಕ್ಷಣ)
ಎನ್.ಡಿ.ಡ್ಲ್ಯೂ ಅಧ್ಯಾಪಕ ಶಿಕ್ಷಣ
ಮಹಾವಿದ್ಯಾಲಯ, ಭುವನೇಶ್ವರ
ಶ್ರೀ ಸುದರ್ಶನ ಸಂತಾರ
ವರಿಷ್ಟ ಅಧ್ಯಾಪಕ ಶಿಕ್ಷಕರು
ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ
ಶ್ರೀ ತಪಸ್ ಕುಮಾರ್ ನಾಯಕ್
ವರಿಷ್ಟ ಅಧ್ಯಾಪಕರ ಶಿಕ್ಷಕರು
ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು
ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ
ಶ್ರೀಮತಿ. ಸುಚಪ್ರವಾ ಮೊಹಾಪಾತ್ರ
ವರಿಷ್ಟ ಅಧ್ಯಾಪಕ ಶಿಕ್ಷಕರು
ಡಿ.ಐ.ಇ.ಟಿ. ಕಟಕ್ ನರಸಿಂಗಪುರ್

ಡಾ॥ ಜಿ.ಸಿ. ನಂದಾ
ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ
ಮಹಾವಿದ್ಯಾಲಯ ಭುವನೇಶ್ವರ
ಶ್ರೀ ಕಾರ್ತಿಕೇಶ್ವರ ಜಿಹರಾ
ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು
ಡಿ.ಐ.ಇ.ಟಿ ಕೊರಾಪುಟ್ ಜೆಪುರ್
ಶ್ರೀಮತಿ. ಲಿಪಿಕಾ ಸಾಹು
ವರಿಸ್ಠ ಅಧ್ಯಾಪಕ ಶಿಕ್ಷಕರು
ಡಿ.ಐ.ಇ. ಟಿ. ನಯಾಘರ್ ರಜಸುನಖಾಲ
ಶ್ರೀ ಪೂರ್ಣಚಂದ್ರಬ್ರಹ್ಮ
ವರಿಷ್ಠ ಅಧ್ಯಾಪಕರ ಶಿಕ್ಷಕರು
ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ಧ
ಡಾ॥ ರಾಜೇಂದ್ರ ಕುಮಾರ ನಾಯಕ್
ಉಪನ್ಯಾಸಕರು ಶಿಕ್ಷಣ ವಿಭಾಗ
ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್

ಶ್ರೀಮತಿ ಚಂದ್ರಿಕಾ ನಾಯಕ್
ವರಿಷ್ಠ ಅಧ್ಯಾಪಕರ ಶಿಕ್ಷಕರು
ಡಿ.ಐ.ಇಟಿ. ನವಘರ್ ರಾಜಸುಂಬಾಲ
ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ
ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್
ಢೆಂಡಿಪಾಡ
ಶ್ರೀ ಪ್ರಶಾಂತಕುಮಾರ ರಥ್
ಪ್ರಾಂಶುಪಾಲರು ಡಿ.ಐ.ಇಟಿ. ಪುರಿ
ಡಾ॥ ದುರ್ಗಾಚರಣ ರಾಣಾ
ನಿವೃತ್ತರೀಡರ್ (ಶಿಕ್ಷಣ)
ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್
ಶ್ರೀ ಅನಂತ ಕಿಶೋರ ಸ್ವಾರ್ಯಿ
ಯೋಜನ ಪ್ರಬಂಧಕರು ಯುವ ಮತ್ತು
ಸಾಮಾಜಿಕ ಅಭಿವೃದ್ಧಿ
ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ

## ವಿಷಯ ಸಂಪಾದಕರು

ಡಾ॥ ಸುಶ್ಮಿತಾ ಮಿತ್ರ
ಭೂತಪೂರ್ವ ನಿರ್ದೇಶಕರು
ಎಸ್‌ಎಸ್‌ಎಸ್. ಎಂಐಓಕೆಎಸ್. ನೋಯಿಡಾ.

## ಭಾಷಾ ಸಂಪಾದಕರು

ಡಾ. ಎ.ಡಿ. ತಿವಾರಿ
ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ
ಎನ್‌ಸಿಇಆರ್‌ಟಿ ನವದೆಹಲಿ

## ಕಾರ್ಯಕ್ರಮ ಸಂಯೋಜಕರು

ಡಾ॥ ಕುಲದೀಪ ಅಗರವಾಲ್
ನಿರ್ದೇಶಕರು (ಶೈಕ್ಷಣಿಕ)
ಎನ್.ಐ.ಓ.ಎಸ್. ನೊಯಿಡಾ

ಪ್ರೋ॥ ಎಸ್.ಪಿ. ಪಾಂಡ
ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)
ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ

ಡಾ॥ ಕರ್ಚ್ ಬಾಲಾ
ಕಾರ್ಯಪಾಲಕ ಅಧಿಕಾರಿ (ಆಧ್ಯಾಪಕ ಶಿಕ್ಷಣ)
ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ

## ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ

ಶ್ರೀ. ಖಿ.ಎನ್. ಉಪ್ರೇತಿ.
ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.
ನೊಯಿಡಾ
ಶ್ರೀ ಧರ್ಮಾನಂದ ಜೋಶಿ
ಕಾರ್ಯಪಾಲಕ ಸಹಾಯಕರು, ಮುದ್ರಣ
ಎನ್.ಐ.ಓ.ಎಸ್. ನೊಯಿಡಾ

## ಬೆರಳಚ್ಚು

ಶಿವಂ ಗ್ರಾಫಿಕ್ಸ್
431, ರಿಶಿನಗರ್, ದೆಹಲಿ–34

## ಕಛೇರಿ ಸಹಾಯಕರು

ಶ್ರೀಮತಿ. ಸುಷ್ಮಾ
ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,
ಎನ್.ಐ.ಓ.ಎಸ್. ನೊಯಿಡಾ.

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾದ್ಯಮಿಕ ಮತ್ತು ಉಚ್ಚಮಾದ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಿಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯುವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ-ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

ಅಂಕಾಂಶಗಳು (8=6+2)

| ವಿಭಾಗ | ಪಠ್ಯಭಾಗ | ಪಠ್ಯಭಾಗದ ಹೆಸರು | ಅಧ್ಯಯನ ಕಾಲಾವಧಿ ಗಂಟೆಗಳು | | ಪ್ರಾಯೋಗಿಕ ಅಧ್ಯಯನ |
|---|---|---|---|---|---|
| | | | ವಿಷಯವಸ್ತು | ಚಟುವಟಿಕೆ | |
| ವಿಭಾಗ–1 ಕಲಿಕಾ ಮತ್ತು ಬೋಧನಾ ಪ್ರಕ್ರಿಯೆಗಳು | ಯು1 | ಶಾಲಾ ಪೂರ್ವ ದಿನಗಳಲ್ಲಿ ಕಲಿಕಾ ಮತ್ತು ಭೋಧನೆ | 6 | 4 | ನಿಮ್ಮ ಸ್ವಂತ ಅನುಭವದಿಂದ ಶಿಕ್ಷಕರು ಅನುಕೂಲಕಾರಕರು ಎಂಬುದನ್ನು ಗುರುತಿಸುವಲ್ಲಿ ಶಿಕ್ಷಕರ ಪಾತ್ರ |
| | ಯು2 | ಕಲಿಕೆ ಮತ್ತು ಭೋಧನೆಗೆ ಮಾರ್ಗೋಪಾಯಗಲು | 8 | 5 | ನಿಮ್ಮ ಸಹೋದ್ಯೋಗಿಗಳ ವರ್ತನೆಯಿಂದ ಕಲಿಕಾರ್ಥಿ ಕೇಂದ್ರಿತ ಮಾರ್ಗೋಪಾಯದ ವಿಶಿಷ್ಟತೆಗಳನ್ನು ಗುರುತಿಸುವಿಕೆ. |
| | ಯು3 | ಕಲಿಕೆ ಮತ್ತು ಭೋಧನೆಯ ವಿಧಾನಗಳು | 7 | 4 | ಕಲಿಕಾ ಮತ್ತು ಭೋಧನಾ (ಕೆಡಿಎಪ್) ಪದ್ಧತಿಗಳಲ್ಲಿನ ವಿವಿಧ ವಿಧಾನಗಳಲ್ಲಿನ ವ್ಯತ್ಯಾಸಗಳನ್ನು ಅರಿಯುವುದು. |
| | ಯು4 | ಕಲಿಕೆ ಮತ್ತು ಕಲಿಕಾರ್ಥಿ ಕೇಂದ್ರಿತ ಮಾಗೋಪಾಯಗಳು ಮತ್ತು ವಿಧಾನಗಳು | 9 | 7 | ಪಠ್ಯಭಾಗವನ್ನು ನಮೂದಿಸಿರುವ ವಿವಿಧ ಮಾರ್ಗೋಪಾಯಗಳನ್ನು ಉಪಯೋಗಿಸುವಾಗ ಬರುವ ತರಗತಿ ಪ್ರಬಂಧನ (ನಿರ್ವಹಣೆ) ಸಮಸ್ಯೆಗಳ ಬಗ್ಗೆ ವಿಚಾರ ಸಂಕಿರಣ |
| ವಿಭಾಗ2 ಕಲಿಕಾ ಹಾಗು ಬೋಧನಾ ಪ್ರಕ್ರಿಯೆಗಳ ಪ್ರಬಂಧನೆ | ಯು5 | ತರಗತಿಯ ಪ್ರಕ್ರಿಯೆಗಳ ನಿರ್ವಹಣೆ (ಪ್ರಬಂಧನೆ) | 6 | 3 | ಶಿಕ್ಷಕ– ಸಹೋದ್ಯೋಗಿಗಳಿಂದ, ತರಗತಿಯಲ್ಲಿ ಅನುತ್ತೇಜಕಾರಿ ಕ್ರಿಯೆಗಳು ಮತ್ತು ಸಾಮಗ್ರಿಗಳು ಗುರುತಿಸುವಿಕೆ. |
| | ಯು6 | ಭೋಧನಾ ಮತ್ತು ಕಲಿಕಾ ಸಾಮಗ್ರಿಗಳು | 7 | 3 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ಕಲಿಕಾ – ಭೋಧನಾ ಸಾಮಗ್ರಿಗಳ ವಿಂಗಡನೆ |
| | ಯು7 | ವಿವಿಧ ವರ್ಗ ಮತ್ತು ವಿವಿಧ ಹಂತಗಳಲ್ಲಿನ ಪರಿಸ್ಥಿತಿಗಳ ನಿರ್ವಹಣೆ | 8 | 5 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ವರ್ಗಗಳಲ್ಲಿ ಚಟುವಟಿಕೆಗಳ ಯೋಜನೆ ಮತ್ತು ಅಭಿವೃದ್ಧಿ. |
| | ಯು8 | ಕಲಿಕಾ ಚಟುವಟಿಕೆಗಳ ಯೋಜನೆ | 5 | 3 | ಶಾಲಾ ಮತ್ತು ಸಹಶಾಲಾ ಚಟುವಟಿಕೆಗಳ ತರಗತಿ ಯೋಜನೆ ಪಾಠಯೋಜನೆಗಳ ವಾರ್ಷಿಕ ಯೋಜನಾಯಾಡಿಯ ಅಭಿವೃದ್ಧಿ. |

| | | | | | |
|---|---|---|---|---|---|
| ವಿಭಾಗ 3<br>ತರಗತಿಯಲ್ಲಿನ ಕಲಿಕೆಯಲ್ಲಿ ಹೊರಹೊಮ್ಮುವ ಸಮಸ್ಯೆಗಳು | ಯು9 | ಸಂಯೋಜಿತ ಕಲಿಕಾ ಭೋಧನಾ ಪ್ರಕ್ರಿಯೆಗಳು | 5 | 2 | ವಿವಿಧ ವಿಷಯ ಕ್ಷೇತ್ರಗಳಲ್ಲಿನ ಪರಿಕಲ್ಪನೆಗಳನ್ನು ಸಂಯೋಜಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಸುವುದು. |
| | ಯು10 | ಕಲಿಕಾ ಸಾಮಗ್ರಿ ಮತ್ತು ಕಲಿಕಾ ಪ್ರಕ್ರಿಯೆಗಳನ್ನು ಸಾಂಧರ್ಬಿಕವಾಗಿ ಸಂಯೋಜಿಸುವುದು | 5 | 2 | ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಉಪಯೋಗಕ್ಕಾಗಿ ಜಾನದಪ ಸಾಮಗ್ರಿಗಳನ್ನು ಸಂಗ್ರಹಿಸುವುದು. |
| | ಯು11 | ಕಂಪ್ಯೂಟರ್ ಸಂಯೋಜಿತ ಬೋಧನೆ ಕಲಿಕೆಯಲ್ಲಿ | 6 | 3 | ಪಾಠ ಪ್ರವಚನಕ್ಕಾಗಿ ಕಂಪ್ಯೂಟರ್ ಸಂಯೋಜಿತ ಬೋಧನಾ ಸಲಕರಣೆ ಅಭಿವೃದ್ಧಿ. |
| | ಯು12 | ಕಂಪ್ಯೂಟರ್ ಸಹಾಯಿತ ಕಲಿಕೆ | 6 | 3 | ವಿವಿಧ ವಿಷಯಗಳಲ್ಲಿ ಕಲಿಕಾರ್ತಿಯ ಸಾಧನೆಗಳನ್ನು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆ |
| ವಿಭಾಗ 4<br>ಕಲಿಕೆಯ ಗುಣಮಾಪನ | ಯು13 | ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು | 7 | 3 | ಯಾವುದಾದರೂ ಒಂದು ವಿಷಯದಲ್ಲಿ ಸಿಸಿಇ ನಿರ್ವಹಣೆ |
| | ಯು14 | ಗುಣಮಾಪನದ ಸಾಧನಗಳು ಮತ್ತು ಕಾರ್ಯತಂತ್ರಗಳು | 8 | 5 | |
| | ಯು15 | ಗುಣಮಾಪನದ ಪರಿಣಾಮಗಳನ್ನು ಕಲಿಕಾಭಿವೃದ್ಧಿಗಾಗಿ ಬಳಸುವುದು | 7 | 3 | ವಿವಿಧ ವಿಷಯ ಕ್ಷೇತ್ರಗಳಲ್ಲಿ ಘಟಕ ಪರೀಕ್ಷೆಯ ಅಭಿವೃದ್ಧಿ |
| | ಯು16 | ಕಲಿಕೆ ಮತ್ತು ಗುಣಮಾಪನ | 7 | 3 | ಬೇರೆಬೇರೆ ವಿಷಯ ಕ್ಷೇತ್ರಗಳಲ್ಲಿನ ಪ್ರಶ್ನೆ ಪ್ರತಿಕೆಯ (ವಿದ್ಯಾರ್ಥಿಯ) ಪರಿಣಾಮ (ರಿಸೆಲಟ್) ಮತ್ತು ಅವನ ಪ್ರದರ್ಶನದ ವಿನಿಯಮ ಮಾಡಿಕೊಳ್ಳುವ ಮಾರ್ಗಗಳ ಅಧ್ಯಯನ |
| | | ಟ್ಯೂಟರಿಂಗ್ | 15 | | |
| | | ಮೊತ್ತ | 122 | 58 | 60 |
| ಒಟ್ಟು ಮೊತ್ತ | | | 122+58+60=240 ಗಂಟೆಗಳು | | |

# ವಿಭಾಗ – 3

# ಕಲಿಕೆಯ ಗುಣಮಾಪನ

**ವಿಭಾಗ ಪಠ್ಯಭಾಗ**

*ಪಠ್ಯಭಾಗ 13 ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು*

*ಪಠ್ಯಭಾಗ 14 ಗುಣಮಾಪನದ ಸಾಧನಗಳು ಮತ್ತು ಕಾರ್ಯತಂತ್ರಗಳು*

*ಪಠ್ಯಭಾಗ 15 ಗುಣಮಾಪನದ ಪರಿಣಾಮಗಳನ್ನು ಕಲಿಕಾಭಿವೃದ್ಧಿಗಾಗಿ ಬಳಸುವುದು*

*ಪಠ್ಯಭಾಗ 16 ಕಲಿಕೆ ಮತ್ತು ಗುಣಮಾಪನ*

# ವಿಭಾಗ ಪರಿಚಯ

**ವಿಭಾಗ ಪ್ರಸ್ತಾವನೆ – 4**

**ಕಲಿಕಾರ್ಥಿಯಾಗಿ ನೀವು ವಿಭಾಗ – 4 ನ್ನು ಅಧ್ಯಯಸುತ್ತೀರಿ. ಕಲಿಕೆಯ ಗುಣಮಾಪನ ವಿಭಾಗದಲ್ಲಿ, 4 ಪತ್ಯ ಭಾಗಗಳಿದ್ದು, ಕಠಿಣ ಗುಣಮಾಪನಕ್ಕೆ ಸಂಬಂಧಿಸಿವೆ. ಪ್ರತಿ ಪತ್ಯಭಾಗವನ್ನೂ, ಭಾಗ ಮತ್ತು ಉಪವಿಭಾಗಗಳನ್ನಾಗಿ ಹಂಚಲಾಗಿದೆ. ಹಿಂದಿನ ವಿಭಾಗದಲ್ಲಿ ಕಲಿಕೆ ಮತ್ತು ಬೋಧನೆಯ ಪ್ರಕ್ರಿಯೆ ಮತ್ತು ಇತರೆ ಅಂಶಗಳು ವಿಭಾಗ 2ರಲ್ಲಿ ಕಲಿಕಾ –ಭೋಧನೆಯ ಪ್ರಕ್ರಿಯೆಗಳ ಪ್ರಬಂಧನೆ, ನಿರ್ವಹಣೆ ಬಗ್ಗೆ ಮತ್ತು ವಿಭಾಗ 3 ರಲ್ಲಿ ತರಗತಿಯ ಕಲಿಕೆಯಲ್ಲಿ ಹೊಸದಾಗಿ ಹಒಇರಹೊಮ್ಮುತ್ತಿರುವ ವಿಷಯಾ ಸಮಸ್ಯೆಗಳಾದ, ಅಡಕಗೊಂಡ (ಸಂಯೋಜಿತ) ಕಲಿಕೆಯ ಪರಿಕಲ್ಪನೆ ಅವಕಾಶ ವಂಚಿತ ಗುಂಪುಗಳ ಶಿಕ್ಷಣ, ಕಂಪ್ಯೂಟರ್ ಅಳವಡಿಸ್ಸುಟ್ಟ ಬೋಧನೆ ಇವುಗಳ ವಿವರವಾದ ಅಧ್ಯಯನ ಇವೆ.**

**ಪತ್ಯಭಾಗ 13 :  ಈ ಪತ್ಯಭಾಗದಲ್ಲಿ ಕಲಿಕೆಯ ಗುಣಮಾಪನ ಪ್ರಕ್ರಿಯೆಯ, ವಿವಿಧ ಪರಿಕಲ್ಪನೆಗಳಿಗೆ ನಿಮ್ಮನ್ನು ಪರಿಚಯಸಲಾಗುತ್ತದೆ. ಗುಣಮಾಪನವು ಹೊಸ ಪರಿಕಲ್ಪನೆಯಾಗಬಹುದು, ಆದರೆ, ಮೌಲ್ಯಮಾಪನ ಅಳೆಯುವುದು, ಪರೀಕ್ಷೆ ಇವುಗಳ ಪರಿಚಯವಿದೆ, ಪತ್ಯಾಂಕ ಪರೀಕ್ಷೆ, ಅರ್ಧ ವಾರ್ಷಿಕ ಪರೀಕ್ಷೆ, ವಾರ್ಷಿಕ ಪರೀಕ್ಷೆಗಳನ್ನು ವಿದ್ಯಾರ್ಥಿಯ ಕಲಿಕೆಯ ಪ್ರದರ್ಶನ ಅಳೆಯಲು ಉಪಯೋಗಿಸಿದರೂ, ಈ ಪ್ರಕ್ರಿಯೆಗಳು ವ್ಯಾಪಕತೆಯನ್ನು ಹೊಂದಿಲ್ಲ ಹೀಗಾಗಿ, ನಿರಂತರ, ಮತ್ತು ವ್ಯಾಪಕವಾದ ಮೌಲ್ಯಮಾಪನದ (ಸಿಸಿಇ) ನ ಅವಶ್ಯಕತೆ ಇದೆ. ಇದರಿಂದ ಮಕ್ಕಳಬಗ್ಗೆ ಪರಿಮಾಣಾತ್ಮಕ ಹಾಗೂ ಗುಣಾತ್ಮಕ ದತ್ತಾಂಶಗಳು ಅಅಇ ಗಾಗಿ ಉಪಯುಕ್ತವಾಗುತ್ತವೆ.**

**ಪತ್ಯಭಾಗ 14 : ಈ ಪತ್ಯಭಾಗವು ನಿಮ್ಮಲ್ಲಿ ಸಾಧನಾ ಪರೀಕ್ಷೆಗಳನ್ನು ರಚಿಸುವ ಕಲೆಯನ್ನು ಕೌಶಲ್ಯವನ್ನು ಪಡೆಯಯವ ಸಾಮರ್ಥ್ಯ ಹೆಚ್ಚಿಸುತ್ತದೆ. ಇಲ್ಲಿ ನೀವು ವಿಸ್ತರಿತ  ಉತ್ತರ ರೀತಿ ನಿರ್ಬಂಧಿತ ಉತ್ತರ ರೀತಿ  ಪರೀಕ್ಷಾಂಶಗಳನ್ನು ರಚಿಸುವ ಕಲೆಯನ್ನು ಕೌಶಲ್ಯವನ್ನೂ ಪಡೆಯುವಿರಿ ವಿವಿಧ ರೀತಿಯ, ಗುಣಾತ್ಮಕ ಉಪಕರಣಗಳು ಮತ್ತು ಕಾರ್ಯತಂತ್ರಗಳನ್ನು ಕಲಿಕಾರ್ಥಿಯಹ ಕಲಿಕೆ ಪ್ರದರ್ಶನವನ್ನು ಗುಣಮಾಪನ ಮಾಡಲು ಉಪಯೋಗಿಸಲಾಗುವುದು ಅವೆಂದರೆ ವೀಕ್ಷಣೆ, ತನಿಖಾಪಟ್ಟಿ, ಶ್ರೀಯಾಂಖಪಟ್ಟಿ, ಸಂದರ್ಶನ, ವಿಶಿಷ್ಠ ಸಾಧನಾಪಟ್ಟಿ ಇತ್ಯಾದಿ.**

**ಪತ್ಯಭಾಗ 15 : ಈ ಪತ್ಯಭಾಗವು, ಗುಣಮಾಪನದ ಫಲಿತಾಂಶಗಳನ್ನು ದಾಖಲಿಸುವ ಮತ್ತು ವರದಿ ಮಾಡುವ ಅವಶ್ಯಕತೆ ಮತ್ತು ಪ್ರಕ್ರಿಯೆಗಳನ್ನು, ನೀವು ಅರಿಯುವಂತೆ ಮಾಡಿ, ನಿಮ್ಮನ್ನು ಸಬಲೀಕರಿಸುತ್ತದೆ, ಗುಣಮಾಪನ ಫಲಿತಾಂಶಗಳ, ವಿಶ್ಲೇಷಣೆಯು ಕಲಿಕಾರ್ಥಿಯ ಬಲ (ಶಕ್ತಿ ಮತ್ತು ಬಲಹೀನತೆಗಳನ್ನು ಗುರುತಿಸಲು ಸಹಾಯಕವಾಗುತ್ತದೆ. ಇದರಿಂದ , ವಿಶ್ಲೇಷಣೆಯ ಫಲಿತಾಂಶ ಆಧಾರವಾಗಿ, ಕಲಿಕಾರ್ಥಯ ಕಲಿಕೆಯನ್ನು ಹೆಚ್ಚಿಸುವುದಕ್ಕಾಗಿ ಮಾಡಬೇಕಥ, ಯೋಜನೆ ರೂಪಿಸಲು ಸಾಮರ್ಥ್ಯ ದೊರಕುವುದು.**

**ಪತ್ಯಭಾಗ 16 : ಈ ಪತ್ಯಭಾಗದಲ್ಲಿ ನೀವು, ಗುಣಮಾಪನ ಮತ್ತು ಕಲಿಕೆಗಳ ನಡುವಿನ ಸಂಬಂಧವನ್ನು8 ಅರಿತು ಮೆಚ್ಚುವಿರಿ ಗುಣಮಾಪನ ಮತ್ತು ಕಲಿಕೆಗಳ ನಡುವಿನ ಮೂರು ಅಂಶಗಳೆಂದರೆ, ಕಲಿಕೆಯ ಗುಣಮಾಪನ, ಕಲಿಕೆಗಾಗಿ ಗುಣಮಾಪನ ಮತ್ತು ಗುಣಮಾಪನವೇ ಒಂದು ಕಲಿಕೆಯಾಗಿ ಇದು ಗುಣಮಾಪನ ಯೋಜನೆ, ವಿನ್ಯಾಸಗೊಳಿಸುವ ಕೌಶಲ್ಯವನ್ನು ವೃದ್ಧಿಸುತ್ತದೆ.**

# ಪರಿವಿಡಿ


| ಕ್ರ.ಸಂ. | ಪಠ್ಯಭಾಗ | ಪುಟಸಂಖ್ಯೆ |
|---|---|---|
| 1 | ಪಠ್ಯಭಾಗ–13: ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು | 01 |
| 2 | ಪಠ್ಯಭಾಗ–14: ಗುಣಮಾಪನದ ಸಾಧನಗಳು ಮತ್ತು ಕಾರ್ಯತಂತ್ರಗಳು | 27 |
| 3 | ಪಠ್ಯಭಾಗ–15: ಗುಣಮಾಪನದ ಪರಿಣಾಮಗಳನ್ನು ಕಲಿಕಾಭಿವೃದ್ಧಿಗಾಗಿ ಬಳಸುವುದು | 46 |
| 4 | ಪಠ್ಯಭಾಗ–16: ಕಲಿಕೆ ಮತ್ತು ಗುಣಮಾಪನ | 80 |

# ಪಠ್ಯಭಾಗ 13 ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು

Notes

## ವಿನ್ಯಾಸ


*13.0 ಪೀಠಿಕೆ*

*13.1 ಕಲಿಕಾ ಉದ್ದೇಶಗಳು*

*13.2 ವಿದ್ಯಾರ್ಥಿ ಪ್ರಗತಿಯ ಮೌಲ್ಯಾಂಕನ*

*13.2.1 ಅಳತೆ, ಮೌಲ್ಯಾಂಕನ ಮತ್ತು ಮೌಲ್ಯಮಾಪನ*

*13.3 ಮೌಲ್ಯಾಂಕನದ ಪ್ರಕ್ರಿಯೆ*

*13.3.1 ಅಪೇಕ್ಷಿತ ಕಲಿಕಾಫಲಗಳು, ತರಗತಿ ಪ್ರಕ್ರಿಯೆಗಳು ಹಾಗೂ ಮೌಲ್ಯಾಂಕನ*

*13.3.2 ರಚನಾತ್ಮಕ/ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನ*

*13.4 ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ( ಅಅಇ )*

*13.4.1 ಪರಿಕಲ್ಪನೆ, ಪ್ರಕ್ರಿಯೆ ಮತ್ತು ಅಗತ್ಯತೆ*

*13.4.2 ಅಅಇಗೆ ಗುಣಾತ್ಮಕಮತ್ತು ಪರಿಮಾಣಾತ್ಮಕ ದತ್ತಾಂಶಗಳ ಬಳಕೆ*

*13.5 ಸಾರಾಂಶಿಸೋಣ*

*13.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸುವ ಮಾದರಿ ಉತ್ತರಗಳು*

*13.7 ಸೂಚಿತ ವಾಚನ ಮತ್ತು ಉಲ್ಲೇಖಗಳು*

*13.8 ಘಟಕಾಂತ್ಯ ಅಭ್ಯಾಸಗಳು*


## 13.0 ಪೀಠಿಕೆ

ಹಿಂದಿನ ಬ್ಲಾಕ್‌ಗಳಲ್ಲಿ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಅನುಕೂಲಿಸಲು ಕಲಿಕಾ ಪ್ರಕ್ರಿಯೆ, ವಿವಿಧ ಬೋಧನಾ ವಿಧಾನಗಳು ಮತ್ತು ಕ್ರಮಗಳನ್ನೊಳಗೊಂಡ ಪಾಠಯೋಜನೆಗಳ ಬಗ್ಗೆ ನಿಮಗೆ ಪರಿಚಯವಾಗಿತ್ತು. ಮಿಸ್ ಶೀಲ ನಿಮ್ಮ ಹಾಗೆಯೇ ಪ್ರಾಮಾಣಿಕ ಶಿಕ್ಷಕಿಯಾಗಿದ್ದು, ಬೋಧಿಸುವಾಗ ತರಗತಿ ವ್ಯವಹಾರಗಳನ್ನು ತುಂಬಾ ಚೆನ್ನಾಗಿ ನಿರ್ವಹಿಸುವ, ಆಕೆಯ ಪಾಠಗಳನ್ನು ಕೂಲಂಕುಷ/ಸೂಕ್ಷ್ಮವಾಗಿ ಯೋಜಿಸುವ ಹಾಗೂ ಸೂಕ್ತ ವಿಧಾನಗಳನ್ನು ಆಯ್ದುಕೊಳ್ಳುತ್ತಿದ್ದುದರಿಂದ ಅವರು ಕೈಗೊಳ್ಳುವ ತರಗತಿಯ ಎಲ್ಲಾ ಚಟುವಟಿಕೆಗಳಲ್ಲೂ ಎಲ್ಲಾ ವಿದ್ಯಾರ್ಥಿಗಳೂ ಭಾಗವಹಿಸುತ್ತಿದ್ದರು.ಒಂದು ಪಾಠ ಬೋಧನೆಯನ್ನು ಸಂಪೂರ್ಣಗೊಳಿಸಿದ ನಂತರ ಮಿಸ್ ಶೀಲ ಏನು ಮಾಡಬೇಕು?ಅವರು ಮುಂದಿನ ಪಾಠಕ್ಕೆ ಹೋಗಬೇಕೇ?ಅಥವಾ ಆಕೆ ಬೋಧಿಸಿದ ಪಾಠವು ಪ್ರತಿ ವಿದ್ಯಾರ್ಥಿಗಳಿಗೆ ಅರ್ಥವಾಗಿದೆಯೇ ಹಾಗೂ ವಿದ್ಯಾರ್ಥಿಗಳು ತಮ್ಮ ನೈಜ ಜೀವನದ ಸನ್ನಿವೇಶಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಪರಿಹರಿಸಲು ಶಕ್ತರಾಗಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳುತ್ತಾರೆಯೇ?ಆಕೆ ಬೋಧಿಸುವಾಗ ತಾನು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೀನೆ ಎಂದು ಹೇಗೆ ಖಚಿತಪಡಿಸಿಕೊಳ್ಳುತ್ತಾರೆ? ವಿದ್ಯಾರ್ಥಿಗಳು ಯಾವುದಾದರೂ ಕಲಿಕಾ ಸಮಸ್ಯೆಗಳನ್ನು ಎದುರಿಸುತ್ತಿರುವರೇ? ಬೋಧನೆ ಮತ್ತು ಕಲಿಕೆಯಗಳಿಕೆಗಳ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಶೀಲ ಮುಂದಿನ ಪಾಠ ಪ್ರಾರಂಭಿಸುವ ಮುನ್ನ ಇಂತಹ ಹಲವು ಪ್ರಶ್ನೆಗಳಿಗೆ ಉತ್ತರ ತಿಳಿಯಬೇಕು ಹಾಗೂ ಇದಕ್ಕೆ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಈ ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಅವರು ದತ್ತಾಂಶವನ್ನು ಹೇಗೆ ಸಂಗ್ರಹಿಸುತ್ತಾರೆ ?ಅವರು ವಿದ್ಯಾರ್ಥಿಗಳಿಗೆ ಗ್ರಹಿಕೆಯನ್ನು ಪರೀಕ್ಷಿಸಲು ಪ್ರಶ್ನಿಸಬಹುದು ಹಾಗೂ ವಿದ್ಯಾರ್ಥಿಗಳು ಗಳಿಸಿರುವ ಜ್ಞಾನವನ್ನು ತಮ್ಮ ನಿಜ ಜೀವನದಲ್ಲಿ ಹೇಗೆ ಬಳಸುತ್ತಾರೆ ಎಂದು ತರಗತಿಯ ಒಳಗೂ ಹಾಗೂ ಹೊರಗೂ ಅವರ ಚಟುವಟಿಕೆಗಳನ್ನು

Notes

ವೀಕ್ಷಿಸುವುದು ಹಾಗೂ ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಬಗ್ಗೆ ಇತರೆ ಶಿಕ್ಷಕರು ಹಾಗೂ ಪೋಷಕರನ್ನು ಕೇಳಬಹುದು.ಅವರು ವಿದ್ಯಾರ್ಥಿಗಳಿಗೆ ಬೋಧಿಸಿದ ಪರಿಕಲ್ಪನೆಗಳ ಕಲಿಕೆಗೆಅನುಗುಣವಾಗಿ ಪ್ರತಿ ವಿದ್ಯಾರ್ಥಿಯ ಸ್ಥಾನಮಾನದ ಸಂಪೂರ್ಣ ಚಿತ್ರಣವನ್ನು ತಿಳಿಯಲು ಇತರೆ ವಿಧಾನಗಳನ್ನು ಕೂಡ ಬಳಸಬಹುದು.

ಮಿಸ್ ಶೀಲಾ ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಿಸಿದಂತೆ ಹೆಚ್ಚಿನ ಕ್ರಮ ಕೈಗೊಳ್ಳಲು ಅವರಿಗೆ ಪ್ರಮುಖ ಎನಿಸಿದ ಒಂದು ಅಥವಾ ಹೆಚ್ಚು ಅಂಶಗಳನ್ನು ಮೌಲ್ಯಾಂಕನ ಮಾಡುತ್ತಾರೆ ಅಥವಾ ಅವರು ವಿದ್ಯಾರ್ಥಿಗಳ ಕಲಿಕೆಯ ಎಲ್ಲಾ ಅಂಶಗಳನ್ನು ಮೌಲ್ಯಾಂಕನ ಮಾಡುಬಹುದು (ವ್ಯಾಪಕ ಮೌಲ್ಯಾಂಕನ/ಮೌಲ್ಯಮಾಪನ) ನಂತರಮೌಲ್ಯಾಂಕನ ಅಭ್ಯಾಸದಿಂದ ಪಡೆದ ಪ್ರತಿ ವಿದ್ಯಾರ್ಥಿಯ ಕಲಿಕೆಯ ಎಲ್ಲಾ ಅಂಶಗಳನ್ನು ಒಳಗೊಂಡ ವರದಿಯನ್ನು ತಯಾರಿಸುವುದು.ಇದರಿಂದ ಪೋಷಕರು, ಮುಖ್ಯ ಶಿಕ್ಷಕ, ಶಾಲಾಸಮಿತಿಯ ಸದಸ್ಯರು ಅಥವಾ ನಿರೀಕ್ಷಕರು ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಬಗ್ಗೆ ಸಂಪೂರ್ಣ ಪರಿಕಲ್ಪನೆ ಹೊಂದಬಹುದು.

ಪ್ರಸ್ತುತವಾಗಿ ವಿವಿಧ ಶಾಲಾ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ತಿಳಿಯಲು/ಮೌಲ್ಯಾಂಕಿಸಲು ಶಾಲಾ ಮಟ್ಟದಲ್ಲಿ ಘಟಕ ಪರೀಕ್ಷೆ ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳನ್ನು ಕೈಗೊಳ್ಳುವುದನ್ನುನೀವು ಗಮನಿಸಿರಬಹುದು ಹಾಗೂ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಅಂಕಗಳು/ಶ್ರೇಣಿಗಳ ಮೂಲಕ ಅಳೆಯಬಹುದು.ಈ ಪ್ರಕ್ರಿಯೆಯುವ್ಯಾಪಕತೆಯನ್ನು ಹೊಂದಿರುವುದಿಲ್ಲ ಏಕೆಂದರೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಮೌಲ್ಯಾಂಕನ ಮಾಡಲುಇದು ಅತ್ಯಲ್ಪ ವ್ಯಾಪ್ತಿಯನ್ನು ಹೊಂದಿದೆ. ಆದಾಗ್ಯೂರಾಷ್ಟ್ರೀಯ ಶಿಕ್ಷಣ ನೀತಿ(ಓಇಇ1986) ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಓಅಈ 2005) ಒತ್ತಿ ಹೇಳಿರುವಂತೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ(ಅಅಇ)ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಈ ಘಟಕದಲ್ಲಿ ನೀವು ಕಲಿಕೆಯ ಮೌಲ್ಯಾಂಕನದ ಪ್ರಕ್ರಿಯೆಗೆ ಸಂಬಂಧಿಸಿದ ವಿವಿಧ ಪರಿಕಲ್ಪನೆಗಳ ಬಗ್ಗೆ ತಿಳಿಯುತ್ತೀರಿ ಹಾಗೂ ಕಲಿಕೆಯನ್ನು ಸುಧಾರಿಸಲು ಮತ್ತು ಶಿಕ್ಷಕರ ತಂತ್ರಗಳನ್ನು ಮಾರ್ಪಾಡಿಸುವ ಮೂಲಕವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸುವುದಕ್ಕಾಗಿ ಇದನ್ನು ನಿರಂತರ ಹಾಗೂ ವ್ಯಾಪಕತೆಯನ್ನಾಗಿ ಹೇಗೆ ಮಾಡುವುದು ಎಂದು ತಿಳಿಯಲಿರುವಿರಿ.ಈ ಘಟಕವನ್ನು ಸಂಪೂರ್ಣಗೊಳಿಸಲು ನಿಮಗೆ ಕನಿಷ್ಠ 10 ಅಧ್ಯಯನ ಅವಧಿಗಳು ಬೇಕಾಗುವುದು.

## 13..1 ಕಲಿಕಾ ಉದ್ದೇಶಗಳು

ಈ ಘಟಕವನ್ನು ಪೂರ್ಣಗೊಳಿಸಿದ ನಂತರ ನೀವು:

- ಅಳತೆ, ಮೌಲ್ಯಾಂಕನ ಮತ್ತು ಮೌಲ್ಯಮಾಪನದ ಪರಿಕಲ್ಪನೆಗಳನ್ನು ವಿವರಿಸಬಲ್ಲಿರಿ.
- ಅಳತೆ ಮೌಲ್ಯಾಂಕನ ಮತ್ತು ಮೌಲ್ಯಮಾಪನದ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳನ್ನು ಗುರುತಿಸುವಿರಿ.
- ಅಪೇಕ್ಷಿತ ಕಲಿಕಾ ಫಲಗಳು ಮತ್ತು ವರ್ಗಕೋಣೆ ವ್ಯವಹಾರ ಪ್ರಕ್ರಿಯೆಗಳ ಜೊತೆಗೆ ಮೌಲ್ಯಾಂಕನವನ್ನು ಸಂಬಂಧೀಕರಿಸುವಿರಿ.
- ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸಲು ಸಂಕಲನಾತ್ಮಕ ಮತ್ತು ರೂಪಣಾತ್ಮಕ ಮೌಲ್ಯಾಂಕನದ ವಿಧಾನಗಳನ್ನು ಉಪಯೋಗಿಸುವಿರಿ.
- ನಿರಂತರ ಮತ್ತು ವ್ಯಾಪಕ ಮೌಲ್ಯಾಂಕನದ(ಅಅಇ) ಅರ್ಥ, ಅಗತ್ಯತೆ ಮತ್ತು ವಿಧಾನಗಳನ್ನು ವಿವರಿಸುವಿರಿ.
- ಅಅಇ ಮೂಲಕ ಸಂಗ್ರಹಿಸಿದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ದತ್ತಾಂಶವನ್ನು ಬಳಸಿಕೊಳ್ಳುವಿರಿ.
- ನೀವು ನಿಮ್ಮ ಬೋಧನಾ ತಂತ್ರಗಳನ್ನು ಸುಧಾರಿಸಲು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ/ಮೌಲ್ಯಾಂಕನದ (ಅಅಇ) ಕಲಿಕಾಫಲಗಳನ್ನು ಬಳಸಿಕೊಳ್ಳುವಿರಿ.

Notes

## 13.2 ವಿದ್ಯಾರ್ಥಿಗಳ ಪ್ರಗತಿಯು ಮೌಲ್ಯಾಂಕನ

ಪ್ರತಿ ವಿದ್ಯಾರ್ಥಿಯಲ್ಲೂ ಕೆಲವು ಪ್ರಚ್ಛನ್ನ ಸಾಮರ್ಥ್ಯಗಳು ಅಥವಾ ಕೌಶಲಗಳಿದ್ದು ,ಅದನ್ನು ಎಚ್ಚರಿಕೆಯಿಂದ ಬೆಳೆಸಬೇಕಿದೆ. ಶಿಕ್ಷಕರಾಗಿ ನಿಮಗೆ ಪ್ರತಿ ವಿದ್ಯಾರ್ಥಿಯೂ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಅತ್ಯುತ್ತಮವಾಗಿ ಸಾಧನೆಮಾಡುವಂತೆ ಸಹಾಯ ಮಾಡುವ ಜವಾಬ್ದಾರಿ ಇರುತ್ತದೆ.ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿಮಕ್ಕಳುಏನನ್ನು ಕಲಿಯಬೇಕಿತ್ತೋ ಅದನ್ನು ಅವರು ಕಲಿತಿದ್ದರೆ, ಹಾಗೂ ಈ ಸಮಯದ ಅವಧಿಯಲ್ಲಿ ಅವರ ಕಲಿಕಾ ಪ್ರಗತಿಯು ತೃಪ್ತಿಕರವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು, ಇದನ್ನು ಮುಖ್ಯವಾಗಿ ತಿಳಿದುಕೊಳ್ಳಬೇಕಿದೆ.ಆದಾಗ್ಯೂ ಇನ್ನೂ ಒಂದು ಕಾರಣವಿದೆ.ಶಿಕ್ಷಕರು ಮಾತ್ರವಲ್ಲದೆ, ಪೋಷಕರು ಹಾಗೂ ಶೈಕ್ಷಣಿಕ ನಿರ್ವಹಣಾಕಾರರೂ ಸಹ ವಿವಿಧ ವಿಷಯಗಳು ಹಾಗೂ ಸಹಪಠ್ಯ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಸಾಧನೆಯನ್ನು ಕಂಡು ಹಿಡಿಯುವ ಆಸಕ್ತಿಯನ್ನು ಹೊಂದಿರುತ್ತಾರೆ.ಇದಕ್ಕೆ ಇರುವ ಒಂದು ಮಾರ್ಗವೆಂದರೆ ವಿದ್ಯಾರ್ಥಿಗಳಿಗೆ ಬೋಧಿಸಿದ ವಿವಿಧ ವಿಷಯಗಳಲ್ಲಿ ಕಿರುಪರೀಕ್ಷೆಗಳು ಮತ್ತು ಪರೀಕ್ಷೆಗಳ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಮೌಲ್ಯಮಾಪನ ಮಾಡುವುದು ಹಾಗೂ ಅವರ ಕಾರ್ಯಕ್ಷಮತೆಯನ್ನು ಅಂಕಗಳು/ ಶ್ರೇಣಿಗಳಲ್ಲಿ ಮಾಪನ ಮಾಡಬಹುದಾಗಿದೆ.ಶಿಕ್ಷಕರಾಗಿ ನೀವು ಇದರ ಬಗ್ಗೆ ಪರಿಚಿತರಾಗಿದ್ದೀರಿ.ಆದಾಗ್ಯೂ, ನೀವು ನಿಜವಾಗಲೂ ವಿದ್ಯಾರ್ಥಿಗಳು ಉತ್ತಮವಾಗಿ ಕಲಿಯಲು ಸಹಾಯಮಾಡಬೇಕೆಂದಿದ್ದರೆ, ಕಿರು ಪರೀಕ್ಷೆಗಳು/ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳು/ಶ್ರೇಣಿಗಳು ನಿಜವಾಗಿ ಅವರ ಕಲಿಕಾ ಪ್ರಗತಿಯ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ನೀವು ಪರಿಗಣಿಸಬೇಕಾಗುತ್ತದೆ.ಅಂಕಗಳು ಮತ್ತು ಶ್ರೇಣಿಗಳ ಬಗ್ಗೆ ಯೋಚಿಸುವಾಗ ನಿಮ್ಮ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳು ಬರಬಹುದು. ಉದಾಹರಣೆಗೆ :

- ವಿವಿಧ ವಿಷಯಗಳಲ್ಲಿ ಪಡೆದ ಅಂಕಗಳು ಅಥವಾ ಶ್ರೇಣಿಗಳು ವಿದ್ಯಾರ್ಥಿಯ ನಿಜವಾದ ಕಾರ್ಯಕ್ಷಮತೆಯನ್ನು ಪ್ರತಿನಿಧಿಸುತ್ತದೆಯೇ?
- ಪ್ರತಿ ವಿದ್ಯಾರ್ಥಿಯ ಕಲಿಕಾ ಶೈಲಿ ಅಥವಾ ಕಲಿಕಾ ವಿಧಾನದ ಬಗ್ಗೆ ಅವು ಏನಾದರೂ ಹೇಳುತ್ತದೆಯೇ?
- ವಿದ್ಯಾರ್ಥಿಯು ಕಲಿಯುವಾಗ ಎದುರಿಸುವ ತೊಂದರೆಗಳ ಬಗ್ಗೆ ಅವು ಏನಾದರೂ ಸೂಚಿಸುತ್ತದೆಯೇ?
- ಕಲಿಕೆಯಲ್ಲಿ ವಿದ್ಯಾರ್ಥಿಯ ಬಲ ಮತ್ತು ದೌರ್ಬಲ್ಯ ಕ್ಷೇತ್ರಗಳ ಬಗ್ಗೆ ಮಾಹಿತಿಯನ್ನು ಅವು ಒದಗಿಸುತ್ತವೆಯೇ?
- ಕಲಿಕೆಯ ವ್ಯಾಪ್ತಿ ಹಾಗೂ ವೇಗದ ಕುರಿತು ಅವು ಏನಾದರೂ ಹೇಳುತ್ತವೆಯೇ?
- ಎಲ್ಲ ವಿಷಯ ವಸ್ತು ಕಲಿಕೆಯ ಎಲ್ಲ ಅಂಶಗಳು ಹಾಗೂ ಸಹಪಠ್ಯ ಸಾಮರ್ಥ್ಯಗಳಿಗೆ ಅಂಕಗಳನ್ನು ನೀಡಬೇಕೆ ಅಥವಾ ಶ್ರೇಣೀಕರಿಸಬೇಕೆ?
- ಕಲಿಕೆಯನ್ನು ಇನ್ನೂ ಉತ್ತಮವಾಗಿ ಮೌಲ್ಯಾಂಕನ ಮಾಡಲು ಯಾವುದಾದರೂ ಪರ್ಯಾಯ ಅಥವಾ ಮತ್ತು ಪೂರಕ ವ್ಯವಸ್ಥೆ ಇದೆಯೇ ?

ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯಲು ನೀವು ಪ್ರಯತ್ನಿಸಿದರೆ ಬಹುಶಃ ನಮಗೆಲ್ಲಾ ಪರಿಚಿತವಿರುವ ಅಂಶಗಳು ಮತ್ತು ಶ್ರೇಣಿಗಳ ಮಿತಿಗಳನ್ನು ನೀವು ಅರ್ಥಮಾಡಿಕೊಳ್ಳುವಿರಿ. ವಿದ್ಯಾರ್ಥಿಯ ಕಲಿಕೆಯ ಸ್ವಭಾವವನ್ನು ಖಚಿತಪಡಿಸಿಕೊಳ್ಳಲು ಇನ್ನೂ ಹಲವಾರು ಮಾರ್ಗಗಳಿವೆ. ಆ ವಿಧಾನಗಳನ್ನು ಅರ್ಥೈಸಿಕೊಳ್ಳಲು ಅಳತೆ, ಮೌಲ್ಯಮಾಪನ ಮತ್ತು ಮೌಲ್ಯಾಂಕನದ ಪರಿಕಲ್ಪನೆಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ನಿಮಗಿರಬೇಕಾಗುತ್ತದೆ.

Notes

### 13.2.1 ಅಳತೆ, ಮೌಲ್ಯಾಂಕನ ಮತ್ತು ಮೌಲ್ಯಮಾಪನ

*ಮಾಪನ/ಅಳತೆ:* ನಿಮ್ಮ ದಿನನಿತ್ಯ ಜೀವನದಲ್ಲಿ ಹಾಗೂ ವರ್ಗಕೋಣೆಯ ಸನ್ನಿವೇಶದಲ್ಲಿ ಅಳತೆಯ ಬಗ್ಗೆ ಸಾಕಷ್ಟು ಪರಿಚಿತರಾಗಿದ್ದೀರಿ. ಸಾಮಾನ್ಯವಾಗಿ ನೀವು ಈ ರೀತಿಯ ಪ್ರಶ್ನೆಗಳನ್ನು ಕೇಳುತ್ತೀರಿ : ಸಂಬಿತ್‌ಗೆಎಷ್ಟು ವರ್ಷ? ಸೀಮಾಳ ಎತ್ತರ ಎಷ್ಟು? ರಹೀಮನ ತೂಕ ಎಷ್ಟು ? ನಿಮ್ಮ ಪೆನ್‌ನ ವೆಚ್ಚ ಎಷ್ಟು? ನಿಮ್ಮ ಪ್ರದೇಶದಲ್ಲಿ ತಾಪಮಾನ ಎಷ್ಟಿದೆ? ಇತ್ಯಾದಿ.ಈ ಮೇಲಿನ ಪ್ರಶ್ನೆಗಳಲ್ಲಿ ನೀವು ತಿಳಿದುಕೊಳ್ಳಲು ಬಯಸಿದ್ದು ಕೆಲವು ಪ್ರಮಾಣದಲ್ಲಿ ವ್ಯಕ್ತಪಡಿಸಬಹುದಾದ ವಯಸ್ಸು, ಎತ್ತರ, ತೂಕ, ಪ್ರದೇಶ, ಬೆಲೆ ಮತ್ತು ಡಿಗ್ರಿ.ಉದಾಹರಣೆಗೆ ಸಂಬಿತ್‌ನ ವಯಸ್ಸು 15 ವರ್ಷಗಳು, ಸೀಮಾಳ ಎತ್ತರ 18 ಮೀಟರ್‌ಗಳು, ರಹೀಮ್‌ನ ತೂಕ 35 ಕಿಲೋಗ್ರಾಂಗಳು.35 ಕಿಲೋಗ್ರಾಂನ ನಿಖರವಾದ ಅರ್ಥವೇನು?

ಯಾವುದೇ ಭೌತಿಕ ವಸ್ತುಗಳನ್ನು ನಾವು ಅಳತೆಮಾಡುವಾಗ ನೆನಪಿಡಬೇಕಾದ ಎರಡು ಅಂಶಗಳಿವೆ (ಉದಾ.ಗೆ ರಹೀಮ್‌ನ ತೂಕ) : ಒಂದು ಸಂಖ್ಯೆ (35) ಮತ್ತು ತೂಕವನ್ನು ಅಳೆಯುವ ಮೂಲಮಾನ (ಕಿಲೋ ಗ್ರಾಂ). ನಾವು ಈ ಯಾವುದಾದರೂ ಒಂದರಲ್ಲಿ ತೂಕವನ್ನು ವ್ಯಕ್ತಪಡಿಸಲು ಸಾಧ್ಯವೇ? ಇಲ್ಲ , ನಮ್ಮಿಂದ ಸಾಧ್ಯವಿಲ್ಲ. ತೂಕ 35 ಅಥವಾ ತೂಕವೇ ಕಿಲೋಗ್ರಾಂ ಎಂಬ ಹೇಳಿಕೆಗಳು ಯಾವುದೇ ಅರ್ಥವನ್ನು ತಿಳಿಸುವುದಿಲ್ಲ. ಸರಳವಾಗಿ ಹೇಳಬೇಕೆಂದರೆ, ಯಾವುದೇ ಅಂಶವನ್ನು ಅಳೆಯುವುದು ಎಂದರೆ ನಿರ್ದಿಷ್ಟ ಗುಣಲಕ್ಷಣ (ವಯಸ್ಸು ತೂಕ, ಎತ್ತರ, ಉದ್ದ, ಸಮಯ)ವನ್ನು ಪರಿಮಾಣದಲ್ಲಿ ಸೂಚಿಸುವುದಾಗಿದೆ. ಹಾಗೂ ಪರಿಮಾಣವನ್ನು ಅಳತೆಯ ಮೂಲಮಾನದ ಸಂಖ್ಯೆಯಲ್ಲಿ ವ್ಯಕ್ತ ಪಡಿಸಲಾಗುತ್ತದೆ (ಉದಾ. ವಯಸ್ಸಿಗೆ ವರ್ಷ, ತೂಕಕ್ಕೆ ಗ್ರಾಂ ಅಥವಾ ಕಿಲೋಗ್ರಾಂ, ಎತ್ತರ ಅಥವಾ ಉದ್ದಕ್ಕೆ ಮೀಟರ್, ಸಮಯಕ್ಕೆ ಗಂಟೆಗಳು/ ನಿಮಿಷಗಳು/ ಸೆಕಂಡುಗಳು ಇತ್ಯಾದಿ).
ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಅಳತೆಯು ಒಂದು ವಸ್ತುವಿನ / ಪ್ರಕ್ರಿಯೆಯು ಯಾವುದೇ ನಿರ್ದಿಷ್ಟ ಅಂಶ ಅಥವಾ ಗುಣಲಕ್ಷಣದ ವಿವರಣೆಗೆ ಸಂಬಂಧಿಸಿದ್ದು, ಪರಿಮಾಣ ಅಥವಾ ನಿರ್ದಿಷ್ಟ ಸಂಖ್ಯೆಯಾಗಿದೆ. ಒಂದು ವಸ್ತು ಅಥವಾ ವಿದ್ಯಮಾನದ ಯಾವುದೇ ಅಂಶದ ಅಳತೆಯು ಅದರ ಪರಿಮಾಣಾತ್ಮಕ ವಿವರಣೆಯಾಗಿದೆ.

**ಚಟುವಟಿಕೆ 1:**

*ನಿಮಗೆ ಸಾಧ್ಯವಾದಷ್ಟು ವಸ್ತುಗಳ ಹೆಸರುಗಳನ್ನು ಪಟ್ಟಿಮಾಡಿ. ಪ್ರತಿ ವಸ್ತುವಿಗೆ ಎದುರಾಗಿ ಸಾಧ್ಯವಿರುವ ಅಳತೆಯ ಸಾಧನ(ಗಳು) ಮತ್ತು ಮೂಲಮಾನ(ಗಳನ್ನು) ನಿರ್ದಿಷ್ಟಪಡಿಸಿ. ನಿಮಗಾಗಿ ಒಂದು ಉದಾಹರಣೆಯನ್ನು ನೀಡಲಾಗಿದೆ.*

| ಕ್ರ.ಸಂ. | ವಸ್ತುವಿನ ಹೆಸರು | ಸಾಧ್ಯವಿರುವ ಮಾಪನ ಸಾಧನ (ಗಳು) | ಅಳತೆಯ ಮೂಲಮಾನ |
|---|---|---|---|
| 1 | ಅಕ್ಕಿಯ ತೂಕ | ತೂಕದ ಯಂತ್ರ | ಕಿಲೋಗ್ರಾಂ |
| | | | |
| | | | |
| | | | |

ಸಾಮಾನ್ಯವಾಗಿ ವಸ್ತುವಿನ ಯಾವುದೇ ಅಂಶವನ್ನು ಅಳತೆ ಮಾಡಲು ಪ್ರಮಾಣೀಕೃತ ಸಾಧನ ಅಥವಾ ಅಳತೆ ಪಟ್ಟಿ (ಖಛಿಚಿಟಜ)ಯನ್ನು ಬಳಸಲಾಗುತ್ತದೆ. ನೀವು ವರ್ಗಕೋಣೆಯ ಉದ್ದವನ್ನು ಅಳೆದರೆ, ನಿಮಗೆ ಮೀಟರ್ ಸ್ಕೇಲು ಅಗತ್ಯವಿರುತ್ತದೆ ಹಾಗೂ ಅದರ ಫಲಿತಾಂಶವನ್ನು 4 ಮೀಟರ್ ಎಂದು ವ್ಯಕ್ತಪಡಿಸಬಹುದಾಗಿದೆ.ಒಂದು ಮೀಟರ್‌ನ ಉದ್ದವು ವಿಶ್ವದಾದ್ಯಂತ ಉದ್ದದ ಸ್ಥಿರ ಪರಿಮಾಣವಾಗಿದೆ. ಇದು ಉದ್ದವನ್ನು ಅಳೆಯುವ ಪ್ರಮಾಣೀಕೃತ ಅಳತೆ (ಮೂಲಮಾನ)ವಾಗಿದೆ. ಈ ಪ್ರಕ್ರಿಯೆಯಲ್ಲಿ ನೀವು ಗುಣಲಕ್ಷಣವನ್ನು (ಉದಾ.ವರ್ಗಕೋಣೆಯ ಉದ್ದ) ಪ್ರಮಾಣೀಕೃತ ಮೀಟರ್ ಸ್ಕೇಲು ದೊಂದಿಗೆ ಹೋಲಿಸುವ ಮೂಲಕ ಮಾಹಿತಿಯನ್ನು ಸಂಗ್ರಹಿಸುತ್ತೀರಿ.

Notes

ಸ್ವಲ್ಪ ಕಾಲದ ಅವಧಿಯಲ್ಲಿ ಆದ ಗಳಿಕೆ (ಅಥವಾ ನಷ್ಟ) ಅಥವಾ ಪ್ರಗತಿಗೆ ಸಂಬಂಧಿಸಿದಂತೆ ಹೋಲಿಕೆಗಳನ್ನು ಮಾಡಬಹುದು.ಎತ್ತರದಲ್ಲಿ ಹೆಚ್ಚಳ, ಅಥವಾ ಎರಡು ವರ್ಷಗಳಲ್ಲಿ ತೂಕದಲ್ಲಾದ ನಷ್ಟ, ಎರಡು ಗಂಟೆಗಳಲ್ಲಿ ಒಂದು ಕಾರಿನ ವೇಗದಲ್ಲಾದ ಹೆಚ್ಚಳ ಇಂತಹ ಹೋಲಿಕೆಗಳಿಗೆ ನಿದರ್ಶನಗಳಾಗಿದ್ದು, ಈ ರೀತಿಯ ಒಂದಾದ ನಂತರದ ಸಂದರ್ಭಗಳಲ್ಲಿ ಅಳತೆಯು ಅಗತ್ಯವಾಗಿರುತ್ತದೆ.ಭೌತಿಕ ಅಂಶಗಳ ಅಳತೆಯಲ್ಲಿ ಹೋಲಿಕೆಯನ್ನು ಎರಡು ಸಂಖ್ಯೆಗಳ ಅನುಪಾತದಲ್ಲಿ ವ್ಯಕ್ತಪಡಿಸಬಹುದು (ಹಲವು ಬಾರಿ ಅಥವಾ ಹಲವು ಭಾಗಗಳು) ಒಂದೇ ರೀತಿಯ ಎರಡು ವಸ್ತುಗಳ ಒಂದೇ ರೀತಿಯ ಅಂಶವನ್ನು ಹೋಲಿಸಲು ಅಳತೆ ಮಾಡಿದಾಗ ಅದೇ ಗುಣಲಕ್ಷಣಗಳ ಅಳತೆಯ ಫಲಿತಾಂಶಗಳನ್ನು ದ್ವಿಗುಣರೂಪದಲ್ಲಿ ಅಥವಾ ಅಂಶಗಳ ರೂಪದಲ್ಲಿ ವ್ಯಕ್ತಪಡಿಸಬಹುದು, ಉದಾಹರಣೆಗೆ 12 ಮೀಟರ್ ಉದ್ದವು 6 ಮೀಟರ್‌ನ ಉದ್ದದ ಎರಡರಷ್ಟಿರುತ್ತದೆ ಅಥವಾ ಹಿಮ್ಮುಖವಾಗಿ 6 ಮೀಟರ್ ಉದ್ದವು 12 ಮೀಟರ್‌ನ ಅರ್ಧದಷ್ಟಿದೆ.

ಮೇಲೆ ವಿವರಿಸಿದ ಎಲ್ಲಾ ಉದಾಹರಣೆಗಳು ನಾವು ನೋಡಬಹುದಾದ ಸ್ಪರ್ಶಿಸಬಹುದಾದ ಅಥವಾ ಅನುಭವಿಸಬಹಾದಾದ ಭೌತಿಕ ವಸ್ತುಗಳ ಅಥವಾ ಪ್ರಕ್ರಿಯೆಗಳ ಅಳತೆಗೆ ಸಂಬಂಧಿಸಿದೆ ಹಾಗೂ ಇದನ್ನು ಸುಲಭವಾಗಿ ಪರಿಮಾಣಿಸಬಹುದು.ಆದರೆ ಮಾನವೀಯ ಗುಣಲಕ್ಷಣಗಳಾದ ಶುದ್ಧತೆ, ಚತುರತೆ, ಅಭಿಕ್ಷಮತೆ, ಪ್ರಾಮಾಣಿಕತೆ ಇತ್ಯಾದಿಗಳನ್ನು ನಾವು ಹೇಗೆ ಪರಿಮಾಣಿಸಲು ಸಾಧ್ಯ?ಕೆಲವು ಮಾನವೀಯ ಗುಣಗಳನ್ನು ಅಳತೆ ಮಾಡಲು ಹಾಗೂ ಪರಿಮಾಣಿಸಲು ಅನೇಕ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಒಬ್ಬ ಶಿಕ್ಷಕನಾಗಿ ಅಥವಾ ಪೋಷಕನಾಗಿ, ಕಳೆದ ಆರುತಿಂಗಳಿನಲ್ಲಿ ನಮ್ಮ ಮಗು ಶಾಲೆಯ ಒಂದು ತರಗತಿಯಲ್ಲಿ ಅಧ್ಯಯನ ಮಾಡುವಾಗ ಗಳಿಸಿದ ಅನುಭವಗಳ (ಜ್ಞಾನ, ತಿಳುವಳಿಕೆ ಇತ್ಯಾದಿ) ವ್ಯಾಪ್ತಿಯನ್ನು ನಾವು ಯಾವಾಗಲೂ ತಿಳಿದುಕೊಳ್ಳಲು ಬಯಸುತ್ತೇವೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಕಲಿಕಾ ಸಾಧನೆ ಅಥವಾ ಸರಳವಾಗಿ ಸಾಧನೆ ಎಂದು ಕರೆಯಲ್ಪಡುವ ಕಲಿಕೆಯಲ್ಲಾದ ಗಳಿಕೆಯನ್ನು ನಾವು ಕಂಡುಹಿಡಿಯಲು ಇಚ್ಛಿಸುತ್ತೇವೆ. ಸ್ವಲ್ಪ ಕಾಲದಲ್ಲಿ ಕಲಿಕೆಯಲ್ಲಾದ ಗಳಿಕೆಯನ್ನು ಹೇಗೆ ಪರಿಮಾಣಿಸಬಹುದು?

ಶಾಲೆಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಅಳೆಯಲು, ನಾವು ಶಿಕ್ಷಕರಾಗಿ ಸಾಮಾನ್ಯವಾಗಿ ಕೇಳಿದ ಪ್ರಶ್ನೆಗಳಿಗೆ ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಉತ್ತರಿಸುವಂತೆ ಮಾಡುತ್ತೇವೆ.ಪ್ರತಿ ತರಗತಿಗೆ ಪರೀಕ್ಷೆಗೆ ಒಳಪಡುವ ವಿಷಯಕ್ಷೇತ್ರದಲ್ಲಿ ಮಾಸಿಕ ಅಥವಾ ಅರ್ಧ ವಾರ್ಷಿಕ ಅಥವಾ ವಾರ್ಷಿಕ ಪರೀಕ್ಷೆಗಾಗಿ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲಾದ ಪ್ರಶ್ನೆಪತ್ರಿಕೆಯೇ ಕಿರುಪರೀಕ್ಷೆ (ಣಝಣ) ಆಗಿದೆ.ಸಾಧನೆಯ ಮಟ್ಟವನ್ನು ಅಳೆಯಲು ಅಭಿವೃದ್ಧಿಪಡಿಸಲಾದ ಪರೀಕ್ಷೆಯನ್ನು ಸಾಧನಾ ಪರೀಕ್ಷೆ ಎಂದು ಕರೆಯಲಾಗುತ್ತದೆ. ವಿದ್ಯಾರ್ಥಿ ನೀಡಿದ ಉತ್ತರಗಳಿಗೆ ಅಂಕಗಳನ್ನು ನೀಡುವುದು ಅಥವಾ ಪ್ರತಿ ಪ್ರಶ್ನೆಗೆ ನೀಡಿದ ಪ್ರತಿಕ್ರಿಯೆಗೆ ಸೂಕ್ತ ಅಂಕಗಳನ್ನು ನೀಡುವುದು.ತದನಂತರ ಈ ಅಂಕಗಳನ್ನು ಒಟ್ಟು ಗೂಡಿಸುವುದು.ಇದರಿಂದ ನಿರ್ದಿಷ್ಟ ವಿಷಯದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಸಿದ ಒಟ್ಟು ಅಂಕಗಳು ನಮಗೆ ಸಿಗುವುದರ ಜೊತೆಗೆ ಇದು ವಿದ್ಯಾರ್ಥಿಯ ಸಾಧನೆಯ ಅಳತೆಯನ್ನು ನೀಡುತ್ತದೆ.

ಉದಾಹರಣೆಗೆ, 7ನೇ ತರಗತಿಯ ವಿದ್ಯಾರ್ಥಿನಿ ಜಾಬಾ ಅರ್ಧ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನ ವಿಷಯದಲ್ಲಿ 100ಕ್ಕೆ 40ಅನ್ನು ಪಡೆದಿದ್ದಾಳೆ ಎಂದುಕೊಳ್ಳೋಣ.ಅವಳ ಸಾಧನೆಯು (ಏನನ್ನು ಕಲಿತಿದ್ದಾರೋ ಅದನ್ನು) 100ರ ಪ್ರಮಾಣದಲ್ಲಿ 40 ಎಂದು ಪರಿಮಾಣಿಸಲಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಆ ವರ್ಷದಲ್ಲಿ ವಿಜ್ಞಾನ ವಿಷಯದಲ್ಲಿ ಬೋಧಿಸಿದ ಎಲ್ಲ ಪರಿಕಲ್ಪನೆಗಳನ್ನು ಅಳೆಯಲು ನಡೆಸಿದ ಪರೀಕ್ಷೆಯಲ್ಲಿ 100 ಕಲಿಕಾಂಶಗಳಿವೆ ಎಂದುಕೊಂಡರೆ, ಜಾಬಾ 40 ಅಂಶಗಳಿಗೆ ಸರಿಯಾಗಿ ಉತ್ತರಿಸಿರುತ್ತಾಳೆ. ವಾರ್ಷಿಕ ಪರೀಕ್ಷೆಯಲ್ಲಿ ಅದೇ ವಿಷಯದಲ್ಲಿ ಅವಳು 80 ಪಡೆದುಕೊಂಡರೆ, ನಾವು ವಿಜ್ಞಾನ ವಿಷಯದಲ್ಲಿ ಅವಳ ಸಾಧನೆಯು ಸುಧಾರಿಸಿದೆ ಎಂದು ಹೇಳಬಹುದು.
ಮುಂದು ವರಿಯುವುದಕ್ಕಿಂತ ಮೊದಲು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

Notes

ಇ1. ಒಂದು ವೇಳೆ ಸುಮನ್ 'ಶೇಕಡಾಪ್ರಮಾಣ'ದ ಬಗ್ಗೆ ಸಾಧನಾ ಪರೀಕ್ಷೆಯನ್ನು ತೆಗೆದುಕೊಂಡು 25 ಅಂಕಕ್ಕೆ 15ಅನ್ನು ಪಡೆದು, ಒಂದು ತಿಂಗಳ ನಂತರ ಅದೇ ಪರೀಕ್ಷೆಯನ್ನು ಪುನರಾವರ್ತಿಸಿದರೆ, ಅವಳು ಹೆಚ್ಚಿನ ಅಂಕವನ್ನು ಪಡೆಯುವಳೇ? ಏಕೆ?

ಆದ್ದರಿಂದ ಭೌತಿಕ ವಸ್ತುಗಳ ಅಳತೆಯಂತೆ ಶಿಕ್ಷಣದಲ್ಲಿ ಅಳತೆಯು ಅಪೇಕ್ಷಿತ ಅಂಶಗಳನ್ನು ಪರಿಮಾಣದ ರೂಪದಲ್ಲಿ ವ್ಯಕ್ತಪಡಿಸುವ ಪ್ರಕ್ರಿಯೆ ಎಂದು ಹೇಳಬಹುದು.ಆದರೆ ಭೌತಿಕ ಅಳತೆಗಳ ಹೋಲಿಕೆಯಂತೆ ಅಂಕಗಳ ಹೋಲಿಕೆಯನ್ನು ಅನುಪಾತದ ರೂಪದಲ್ಲಿ ಮಾಡಲು ಸಾಧ್ಯವಿಲ್ಲ. ಈ ಮೇಲಿನ ಉದಾಹರಣೆಯಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ವಿಜ್ಞಾನದಲ್ಲಿ ಜಾಬಾ'ಳ ಸಾಧನೆಯು ಅರ್ಧವಾರ್ಷಿಕ ಪರೀಕ್ಷೆಯ ಎರಡರಷ್ಟಿದೆ ಎಂದು ನಾವು ಹೇಳಲಾಗದು.ಅದೇ ರೀತಿಯಾಗಿ, ಐದನೇ ತರಗತಿಯ ಜಿಬಾನ್ ಮತ್ತು ಜಿನತ್ ಎಂಬ ಎರಡು ವಿದ್ಯಾರ್ಥಿಗಳು ಒಂದು ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ 50 ಮತ್ತು 75 ಅಂಕಗಳನ್ನು ಅನುಕ್ರಮವಾಗಿ ಪಡೆದಿದ್ದರೆ, ಆ ವಿಷಯದಲ್ಲಿ ಜಿಬಾನ್ ಳ ಸಾಧನೆಯು ಜಿನತ್‌ನ ಸಾಧನೆಯ 2/3 ರಷ್ಟಿದೆ ಎಂದು ಹೇಳುವುದು ತಪ್ಪಾಗುತ್ತದೆ.ಆದರೆ ಗಣಿತದಲ್ಲಿ ಜಿಬಾನ್‌ಗಿಂತ ಜಿನತ್‌ಳ ಕಾರ್ಯಕ್ಷಮತೆ/ಸಾಧನೆಯು ಉತ್ತಮ ಎಂದಷ್ಟೇ ಹೇಳಬಹುದು.

ಮುಂದುವರಿದು, ಒಂದು ವಿಷಯದಲ್ಲಿ ಒಬ್ಬ ವಿದ್ಯಾರ್ಥಿಯು ಕನಿಷ್ಠ ಅಂಕ 0 ಅಥವಾ ಗರಿಷ್ಠ ಅಂಕ 100 ಪಡೆದಿದ್ದರೆ, ಆ ವಿಷಯಕ್ಕೆ ಸಂಬಂಧಿಸಿದಂತೆ ಆ ವಿದ್ಯಾರ್ಥಿಗೆ ಏನೂ ತಿಳಿದಿಲ್ಲ (0 ಅಂಕ ಗಳಿಸಿದ್ದರೆ) ಅಥವಾ ಆ ವಿದ್ಯಾರ್ಥಿಗೆ ಎಲ್ಲವೂ ತಿಳಿದಿದೆ (100 ಅಂಕಗಳಿಸಿದ್ದರೆ) ಎಂದು ನಾವು ಊಹಿಸಲಾಗದು.ಮೊದಲನೇ ಸಂದರ್ಭದಲ್ಲಿ ಕಾರ್‍ಯಕ್ಷಮತೆಯು ಕಳಪೆ ಎಂದೂ ಅಥವಾ ಎರಡನೇ ಸಂದರ್ಭದಲ್ಲಿ ಕಾರ್‍ಯಕ್ಷಮತೆಯು ಅತ್ಯುತ್ತಮ ಎಂದು ಮಾತ್ರ ನಿರ್ಣಯಿಸಬಹುದು. ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಯ ಕಾರ್‍ಯಕ್ಷಮತೆಗೆ ಸಂಬಂಧಿಸಿದಂತೆ ಕಳಪೆ, ಸಾಧಾರಣ, ಉತ್ತಮ ಇತ್ಯಾದಿಯಾಗಿ ಗುಣಾತ್ಮಕಟೀಕೆ/ ಅಭಿಪ್ರಾಯವನ್ನು ನೀಡಬಹುದು, ಆದರೆ ಇದು ಯಾವಾಗಲೂ ಸರಿ ಎನಿಸುವುದಿಲ್ಲ. 7ನೇ ತರಗತಿಯ ಒಂದು ವಿದ್ಯಾರ್ಥಿ ಭಾಷೆಯಲ್ಲಿ 75 ಅಂಕಗಳನ್ನುಗಳಿಸಿದ್ದರೆ, ಆ ವಿದ್ಯಾರ್ಥಿ/ನಿಯು ಪಠ್ಯಪುಸ್ತಕಗಳನ್ನು ಹೊರತುಪಡಿಸಿ. ಬೇರೆ ಪುಸ್ತಕಗಳನ್ನು ಓದುತ್ತಾನೆ/ಳೆಯೇ ಭಾಷಾ ತರಗತಿಗಳಲ್ಲಿ ಉತ್ತಮವಾಗಿ ಪ್ರತಿಕ್ರಿಯಿಸುತ್ತಾನೆ/ಳೆಯೇ, ಭಾಷಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ/ಳೆಯೇ, ಮತ್ತಿತರ ಗುಣಲಕ್ಷಣಗಳ ಬಗ್ಗೆ ಈ ಅಂಶವು ಏನನ್ನು ಹೇಳುವುದಿಲ್ಲ. ಈ ರೀತಿಯ ಗುಣಲಕ್ಷಣಗಳು ಕಲಿಕೆಯ ಸೂಚ್ಯಂಕಗಳಾಗಿದ್ದು, ಇವುಗಳನ್ನು ಹೇಳಿಕೆಗಳ ರೂಪದಲ್ಲಿ ಸೂಚಿಸಬಹುದೇ ವಿನಃ ಸಂಖ್ಯೆಗಳಲ್ಲಲ್ಲ. ವಿಜ್ಞಾನದಲ್ಲಿ ಜಾಬಾಳ ಸಾಧನೆಯ ಉದಾಹರಣೆಯನ್ನು ಗಮನಿಸಿಕೊಂಡು, ಈ ಕೆಳಗೆ ನೀಡಿರುವುದಕ್ಕೆ ಉತ್ತರಿಸಿ.

ಇ2. ವಿಜ್ಞಾನದಲ್ಲಿ ಜಾಬಾಗಳಿಸಿದ ಅಂಕಗಳ ಜೊತೆಗೆ, ವಿಜ್ಞಾನದಲ್ಲಿ ಅವಳ ಪ್ರಗತಿಯನ್ನು ಮೌಲ್ಯಾಂಕನ ಮಾಡಲು ಯಾವುದಾದರೂ ಮೂರು ಕಲಿಕಾ ಸೂಚ್ಯಂಕಗಳನ್ನು ನಿರ್ದಿಷ್ಟಪಡಿಸಿ.

*ಮೌಲ್ಯಾಂಕನ :* ಒಂದು ಉಡುಪನ್ನು ಖರೀದಿಸಲು ನೀವು ಹೋದಾಗ, ಸಾಮಾನ್ಯವಾಗಿ ನೀವು ಏನು ಏನು ಮಾಡುತ್ತೀರಿ? ನೀವು ಹಲವಾರು ಉಡುಪುಗಳನ್ನು ಪರೀಕ್ಷಿಸಿ, ಗಾತ್ರ, ಬಣ್ಣ, ಬ್ರ್ಯಾಂಡ್, ಬೆಲೆ, ಬಾಳಿಕೆ ಮತ್ತು ನಮ್ಮ ಅವಶ್ಯಕತೆಗೆ ಹೊಂದಾಣಿಕೆ – ಹೀಗೆ ವಿವಿಧ ರೀತಿಗಳಲ್ಲಿ ಹೋಲಿಸುತ್ತೀರಿ.ನಿಮ್ಮ ಅವಶ್ಯಕತೆಗಳಿಗೆ ಸೂಕ್ತವಾದ ಒಂದನ್ನು ನೀವು ಆಯ್ಕೆ ಮಾಡುತ್ತೀರಿ. ಹಾಗೆಯೇ, ಒಂದು ನಿರ್ದಿಷ್ಟ ಶಾಲಾ ವಿಷಯದಲ್ಲಿ ಉದಾ.ಗೆ ಪರಿಸರ ಅಧ್ಯಯನದಲ್ಲಿ ಒಂದು ನಿರ್ದಿಷ್ಟ ಘಟಕದ ಅಂತ್ಯದಲ್ಲಿ ಅಥವಾ ಒಂದು ಕೋರ್ಸಿನ ಅಂತ್ಯದಲ್ಲಿ ಒಂದು ಮಗುವಿನ ಕಾರ್‍ಯಕ್ಷಮತೆಯನ್ನು ನೀವು ಅಳೆಯಲು ನಿಜವಾಗಲೂ ಬಯಸಿದರೆ, ನೀವು ಒಂದು ಪರೀಕ್ಷೆಯನ್ನು ನಿರ್ವಹಿಸಬಹುದು ಮತ್ತು ಅಂಕಗಳರೂಪದಲಿ ಕಾರ್‍ಯಕ್ಷಮತೆಯನ್ನು ಅಳೆಯಬಹುದು ಅಥವಾ ಒಂದು ನಿಯೋಜಿತ ಕಾರ‍್ಯ/ಯೋಜನಾ ಕಾರ‍್ಯವನ್ನು ಅವನಿ/ಳಿಗೆ ನೀಡಿ ಪರಿಸರ ಅಧ್ಯಯನದ ಪರಿಕಲ್ಪನೆಗಳ ಬಗ್ಗೆ ಅವನ/ಳ ತಿಳುವಳಿಕೆ ಹಾಗೂ ಅನ್ವಯಕ್ಕೆಸಂಬಂಧಿಸಿದಂತೆ ತರಗತಿಯ ಒಳಗೆ ಮತ್ತು ಹೊರಗೆ ಅವನ/ಳ ಚಟುವಟಿಕೆಗಳನ್ನು ವೀಕ್ಷಿಸಬಹುದು.ಆದ್ದರಿಂದ ಪರಿಸರ ಅಧ್ಯಯನದ ಕಲಿಕೆ ಅಥವಾ ಕಾರ್ಯಕ್ಷಮತೆಯ ಮೌಲ್ಯಾಂಕನವು ಪರಿಸರ ಅಧ್ಯಯನ ಪರಿಕಲ್ಪನೆಗಳ ಕಲಿಕೆಗೆ ಸಂಬಂಧಿಸಿದಂತೆ ಸಾಧ್ಯವಿರುವ ಎಲ್ಲ ದತ್ತಾಂಶಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದನ್ನು ಸೂಚಿಸುತ್ತದೆ.

## ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು

ಈ ದತ್ತಾಂಶಗಳು ಸಂಖ್ಯಾತ್ಮಕ ಅಥವಾ ಪರಿಮಾಣಾತ್ಮಕವಾಗಿ ಅಂಕಗಳು ಅಥವಾ ಸ್ಕೋರ್‌ಗಳಾಗಿರಬಹುದು ಮತ್ತು ಗುಣಾತ್ಮಕ ದತ್ತಾಂಶಗಳಾದ ಪರಿಕಲ್ಪನೆಗಳ ಕಲಿಕೆಯಲ್ಲಿನ ಆಸಕ್ತಿ, ಕಲಿತ ಪರಿಕಲ್ಪನೆಗಳ ಕಲಿಕೆ ಮೇಲೆ ಅಂತರ್ ಕ್ರಿಯಾ ಸಾಮರ್ಥ್ಯ, ವಿಷಯ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಿಕೆ ಮತ್ತು ಪರಿಕಲ್ಪನೆಗಳ ಕಲಿಕೆಯ ಸಂಭವನೀಯ ಫಲಗಳಾದ ವಿದ್ಯಾರ್ಥಿಯ ಹಲವು ಗುಣಲಕ್ಷಣಗಳಾಗಿರಬಹುದು.ಅಳತೆಯು ಸಂಖ್ಯಾತ್ಮಕ ದತ್ತಾಂಶದ ಸಂಗ್ರಹಕ್ಕೆ ಸೀಮಿತವಾಗಿದ್ದರೆ, ಮೌಲ್ಯಾಂಕನವು ಅದನ್ನೂ ಮೀರಿದ್ದು ಎಂಬುದನ್ನು ನೀವು ಚೆನ್ನಾಗಿ ನೋಡಬಹುದು.ಮೌಲ್ಯಾಂಕನವು ಸಂಖ್ಯಾತ್ಮಕ ಅಂಕಗಳನ್ನು ಒಳಗೊಂಡಿರುವುದರ ಜೊತೆಗೆ, ಕಲಿಕೆಯ ಗುಣಾತ್ಮಕ ಅಂಶಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ಆಧರಿಸಿದೆ. ಕಲಿಕೆಯ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಮಾಹಿತಿ ಅಥವಾ ದತ್ತಾಂಶಗಳನ್ನು ಹಲವು ಸಾಧನಗಳು ಮತ್ತು ಕಾರ್ಯವಿಧಾನಗಳನ್ನು ಬಳಸಿ ಹಲವು ಮೂಲಗಳಿಂದ ಸಂಗ್ರಹಿಸಬಹುದಾಗಿದೆ. ಉದಾಹರಣೆಗೆ ಸಾಧನಾ ಪರೀಕ್ಷೆಗಳು, ವರ್ಗಕೋಣೆಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಮತ್ತು ಇತರೆ ಚಟುವಟಿಕೆಗಳು, ಯೋಜನಾಕಾರ್ಯ ಮತ್ತು ಇತರ ನಿಯೋಜಿತ ಕಾರ್ಯಗಳಲ್ಲಿ ಅವನ/ಳ ಕಾರ್ಯಕ್ಷಮತೆ, ಮತ್ತಿತರ ಅನೇಕ ಸನ್ನಿವೇಶಗಳಲ್ಲಿ ವಿದ್ಯಾರ್ಥಿಯು ತನ್ನ ಕಾರ್ಯಕ್ಷಮತೆಯನ್ನು ತೋರಿಸುವುದು.ಒಂದು ಪರೀಕ್ಷೆ ಅಥವಾ ಒಂದೇ ಒಂದು ಮೂಲದಿಂದ ಪಡೆದ ದತ್ತಾಂಶವು ಕಲಿಕೆಯನ್ನು ಸಂಪೂರ್ಣವಾಗಿ ಮೌಲ್ಯಾಂಕನ ಮಾಡಲು ಸಹಾಯ ಮಾಡುವುದಿಲ್ಲ ಮತ್ತು ಇದನ್ನು ಈ ಘಟಕದ 13.5 ವಿಭಾಗದಲ್ಲಿ ಬಹಳ ವಿವರವಾಗಿ ಚರ್ಚಿಸಲಾಗಿದೆ.

ಕಲಿಕೆಯ ಮೌಲ್ಯಾಂಕನವನ್ನುಯಾವಾಗಲೂ ಒಂದು ನಿರ್ದಿಷ್ಟ ಉದ್ದೇಶ ಅಥವಾ ಉದ್ದೇಶಗಳಿಂದ ಮಾಡಲಾಗುತ್ತದೆ.ಶಾಲಾ ಶಿಕ್ಷಣದಲ್ಲಿ,ಎಲ್ಲಾ ಮೌಲ್ಯಾಂಕನವು ಅಂತಿಮವಾಗಿ ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.ಆದರೆ ತರಗತಿಯಲ್ಲಿ ಒಬ್ಬ ಶಿಕ್ಷಕ ಬೋಧಿಸುವಾಗ ಕಲಿಕೆಯ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ಮೌಲ್ಯಾಂಕನವನ್ನು ಮಾಡಲಾಗುತ್ತದೆ. ಉದಾಹರಣೆಗೆ,'ಐದನೇ ತರ ಗತಿ ಮಟ್ಟದಲ್ಲಿ ಮಾತೃಭಾಷೆಯಲ್ಲಿ ಕಾಗುಣಿತ /ಉಚ್ಚಾರ ತಪ್ಪುಗಳ ಮರುಕಳಿಸುವಿಕೆ', 'ಎರಡು ಮೂರು ಅಂಕಿಯ ಸಂಖ್ಯೆಗಳ ಸಂಕಲನದಲ್ಲಿ ದಶಕವನ್ನು ಒಯ್ಯುವಾಗ ಆಗುವ ತಪ್ಪುಗಳು', 'ದೋಷಪೂರಿತ ಓದುವಿಕೆಯ ಶೈಲಿ', 'ವಿವಿಧ ರೀತಿಯ ಹೂವುಗಳ ಭಾಗಗಳ ಬಗ್ಗೆ ತಪ್ಪಾದ ಅವಲೋಕನಗಳು'.ನಿರ್ದಿಷ್ಟ ಕಲಿಕೆಯ ಸಮಸ್ಯೆಯ ನಿಖರವಾದ ಸ್ಥಿತಿಯನ್ನು ತಿಳಿಯಲು, ಶಿಕ್ಷಕರು ವಿದ್ಯಾರ್ಥಿಗಳನ್ನು ನಿರ್ದಿಷ್ಟ ಸಾಧನಗಳೊಂದಿಗೆ ಮೌಲ್ಯಾಂಕನ ಮಾಡಲು ಪ್ರಯತ್ನಿಸುತ್ತಾರೆ.

ಆದ್ದರಿಂದ ಮೌಲ್ಯಾಂಕನವು ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆ ಎಂದು ಹೇಳಬಹುದ್ದಾಗಿದ್ದು, ಇದನ್ನು ಆಧರಿಸಿಯೇ, ಅನುಕೂಲಿಸಲು/ಕಲಿಕೆಯನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳಬಹುದು.

*ಮೌಲ್ಯಮಾಪನ* : ನಾವೆಲ್ಲರೂ ನಮ್ಮ ಜೀವನಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ನಿರ್ಣಯಿಸುತ್ತೇವೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ. ಸ್ನಾನಕ್ಕಾಗಿ ಒಂದು ಸೋಪನ್ನು ಖರೀದಿಸುವ ಒಂದು ಸರಳ ಉದಾಹರಣೆಯನ್ನು ತೆಗೆದುಕೊಳ್ಳೋಣ. ಮಾರುಕಟ್ಟೆಯಲ್ಲಿ ಲಭ್ಯವಿರುವ ಸೋಪಿನ ಹಲವಾರು ಬ್ರಾಂಡ್‌ಗಳಲ್ಲಿ ನಿಮಗೆ ಉತ್ತಮವೆನಿಸುವ ಒಂದನ್ನು ನೀವು ಆಯ್ಕೆ ಮಾಡಬೇಕಾಗುತ್ತದೆ. ಆಗ ನೀವು ಬಹುಶಃ ಹಲವಾರು ಪ್ರಶ್ನೆಗಳನ್ನು ಕೇಳಬಹುದು, 'ಇದು ಬಳಸಲು ತುಂಬಾ ಮೃದುವೇ?', 'ಚರ್ಮದಿಂದ ಕೊಳೆಯನ್ನು ಅಳಿಸಿಹಾಕಲು ಸಾಕಷ್ಟು ಬುರುಗನ್ನು ಇದು ಉತ್ಪತ್ತಿಸುತ್ತದೆಯೇ?', 'ಇದು ಚರ್ಮದ ಮೇಲೆ ಯಾವುದೇ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆಯೇ?', 'ವಾಸನೆ ಹಿತಕರವಾಗಿದೆಯೇ?', ನನಗೆ ಇದು ಕೈಗೆಟುಕುವ ಬೆಲೆಯಾಗಿದೆಯೇ?' ಮತ್ತು ಇತ್ಯಾದಿ ಪ್ರಶ್ನೆಗಳಿಗೆ ಎಲ್ಲಾ ಮಾಹಿತಿಯನ್ನು ಪಡೆದ ನಂತರ, ಅಂತಿಮವಾಗಿ ಅದು ನಿಮಗೆ ಸೂಕ್ತವಾಗಿದೆಯೇ ಎಂಬುದರ ಬಗ್ಗೆ ನಿರ್ಣಯಿಸುತ್ತೀರಿ.ಆಗ ನೀವು ಹೀಗೆ ಹೇಳಬಹುದು, 'ಇದು ನನಗೆ ಎಲ್ಲ ರೀತಿಯಲ್ಲಿ ಸೂಕ್ತವಾಗಿದೆ', 'ಇದು ಸುವಾಸನೆಯಿಂದ ಕೂಡಿದೆ', 'ಇದರ ಬೆಲೆ ನನಗೆ ಕೈಗೆಟುಕುವಂತಿಲ್ಲ' ಮತ್ತು ಈ ರೀತಿಹೇಳಬಹುದು.ನೀವು ಸೋಪಿನ ಬಗ್ಗೆ ಅದರ ಉಪಯುಕ್ತತೆಯ ದೃಷ್ಟಿಯಿಂದ ನಿರ್ಣಯ ಮಾಡುತ್ತೀರಿ.ಈ ಉತ್ಪನ್ನದ ಬಗ್ಗೆ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಈ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ.ಅಂದರೆ ನೀವು ಖರೀದಿಸಲು ಹೊರಟಿರುವ ಸೋಪಿನ ಮೌಲ್ಯಮಾಪನದಲ್ಲಿ ನೀವು ತೊಡಗಿಸಿಕೊಂಡಿದ್ದೀರಿ.

Notes

Notes

ಅಂತೆಯೇ ಮಗುವಿನ ಕಲಿಕೆಯ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಹೋದಾಗ ಮಗುವಿನ ಕಲಿಕೆಗೆ ಸಂಬಂಧಿಸಿದಂತೆ ಎಲ್ಲಾ ಆಯಾಮಗಳನ್ನು ಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಅವನ/ಳ ಕಲಿಕಾ ಸ್ಥಿತಿ/ಪ್ರಗತಿಯ ಬಗ್ಗೆ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವ ಮೊದಲು ಆ ಮಗುವಿನ ಕಲಿಕೆಗೆ ಸಂಬಂಧಿಸಿದ ಪರಿಮಾಣಾತ್ಮಕ ಹಾಗೂ ಗುಣಾತ್ಮಕವಾದ ಎಲ್ಲಾ ಸಂಭಾವ್ಯ ಮಾಹಿತಿಯನ್ನು ಸರಿಯಾಗಿ ಸಂಗ್ರಹಿಸಬೇಕು ಮತ್ತು ಎಚ್ಚರಿಕೆಯಿಂದ ವಿಶ್ಲೇಷಿಸಬೇಕಾಗುತ್ತದೆ.

ಈ ಮೇಲಿನ ಚರ್ಚೆಯಿಂದ ಮೌಲ್ಯಮಾಪನ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ13.1ಬಾಕ್ಸ್‌ನಲ್ಲಿ ತೋರಿಸಿರುವಂತೆ ಪ್ರಸ್ತುತಪಡಿಸಬಹುದಾಗಿದೆ.

---

ಪರಿಮಾಣಾತ್ಮಕ ಮಾಹಿತಿ ಮತ್ತು/ಅಥವಾ ಗುಣಾತ್ಮಕ ಮಾಹಿತಿ+ಮೌಲ್ಯನಿರ್ಣಯ = ಮೌಲ್ಯಮಾಪನ

*(ಪರೀಕ್ಷೆಗಳಿಂದ ಸಂಗ್ರಹಿಸಿರುವುದು)* *(ವೀಕ್ಷಣೆ, ವರ್ತನೆಯ ವಿಶ್ಲೇಷಣೆ, ಕೃತಿಸಂಪುಟ,ಯೋಜನಾ ಕಾರ್ಯ, ಇತ್ಯಾದಿಇಂದ ಸಂಗ್ರಹಿಸಿರುವುದು)*

---

ಬಾಕ್ಸ್ 13.1 ಮೌಲ್ಯಮಾಪನದ ಪರಿಕಲ್ಪನೆ

ಈಗ ವರ್ಗಕೋಣೆ ಕಲಿಕೆಯನ್ನು ಪರಿಗಣಿಸಿ, ಮೌಲ್ಯಾಂಕನ ಮತ್ತು ಮೌಲ್ಯಮಾಪನಗಳ ನಡುವೆ ಯಾವ ರೀತಿಯಲ್ಲಿ ಹೋಲಿಕೆ ಮತ್ತು ವ್ಯತ್ಯಾಸಗಳಿವೆ?

- ಮೌಲ್ಯಾಂಕನವು ವಿವಿಧ ಸಾಧನಗಳಮೂಲಕ, ವಿವಿಧ ಮೂಲಗಳಿಂದ ಸಂಗ್ರಹಿಸಿದ ಸಾಕ್ಷಿಗಳು ಮತ್ತು ದತ್ತಾಂಶಗಳ ಸಂಗ್ರಹವನ್ನು ಸೂಚಿಸುತ್ತದೆ. ಆದರೆ ಮೌಲ್ಯಮಾಪನವು ವ್ಯಾಖ್ಯಾನ, ವಿಶ್ಲೇಷಣೆ ಮತ್ತು ಚಿಂತನಶೀಲತೆ(ಪ್ರತಿಫಲನ)ಯ ಮೂಲಕ ಸಂಗ್ರಹಿಸಿದ ದತ್ತಾಂಶಕ್ಕೆ ಅರ್ಥವನ್ನು ತರುತ್ತದೆ.
- ಮೌಲ್ಯಾಂಕನವು ವಿದ್ಯಾರ್ಥಿಯ ಕಾರ್ಯಕ್ಷಮತೆಯ ಬಗ್ಗೆ ಅವನ/ಳ ಬಲ ಮತ್ತು ಸುಧಾರಿಸಬೇಕಾದ ಕ್ಷೇತ್ರಗಳ ಬಗ್ಗೆ ವಿವರಿಸುತ್ತಾ, ಹಿಮ್ಮಾಹಿತಿಯನ್ನು ಒದಗಿಸುತ್ತದೆ. ಇದು ಕಲಿಕೆಯನ್ನು ಸುಧಾರಿಸಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲು ಒಳನೋಟಗಳನ್ನು ಒದಗಿಸುತ್ತದೆ. ಮೌಲ್ಯಮಾಪನವು ಸಂಗ್ರಹಿಸಿದ ಸಾಕ್ಷ್ಯಗಳ ಆಧಾರದ ಮೇಲೆ, ಸಮೀಪಿಸಿದ ಮಾನದಂಡಗಳನ್ನು ಮತ್ತು ಈ ಮಾನದಂಡಗಳನ್ನು ಸಮೀಪಿಸುವಲ್ಲಿನ ಯಶಸ್ಸು ಅಥವಾ ವಿಫಲತೆಯ ಮಟ್ಟವನ್ನು ನಿರ್ಧರಿಸುತ್ತದೆ.
- ಎರಡೂ ಪ್ರಕ್ರಿಯೆಗಳಲ್ಲಿ ಕಾಲಾನಂತರದಲ್ಲಿ ಕಾರ್ಯಕ್ಷಮತೆ, ಕಲಿಕೆಯ ಕಡೆಗೆ ವರ್ತನೆಗಳು ಮತ್ತು ತಿಳುವಳಿಕೆಯ ಸಾಕ್ಷ್ಯಗಳನ್ನು ಪರಿಶೀಲಿಸುವ ಮೂಲಕ ಎಚ್ಚರಿಕೆಯಿಂದ ಬೋಧನಾ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತದೆ. ಈ ಕಾರಣಕ್ಕಾಗಿ, ಈ ಎರಡೂ ಪದಗಳನ್ನು ಸಮಾನಾರ್ಥಕವಾಗಿ ಬಳಸಲಾಗುತ್ತದೆ. ಈ ಪಠ್ಯದಲ್ಲೂ ಸಹ, ನಾವು ಈ ಎರಡೂ ಪದಗಳನ್ನು ಅದಲು ಬದಲಾಗಿ ಬಳಸಿದ್ದು, ಮಕ್ಕಳ ಕಲಿಕೆಯನ್ನು ಅನುಕೂಲಿಸುವುದು ಮತ್ತು ಮೇಲ್ವಿಚಾರಣೆಯ ಬಗ್ಗೆ ಹೆಚ್ಚಾಗಿ ಕೇಂದ್ರೀಕರಿಸಲಾಗಿದೆ.

ಮೇಲಿನ ಚರ್ಚೆಯ ಮೂಲಕ ಅಳತೆ, ಮೌಲ್ಯಾಂಕನ ಮತ್ತು ಮೌಲ್ಯಮಾಪನ ಪರಿಕಲ್ಪನೆಗಳನ್ನು ಬಾಕ್ಸ್ 13.2ರಲ್ಲಿ ತೋರಿಸಿದಂತೆ ನಾವು ಸಾರಾಂಶಿಸಬಹುದಾಗಿದೆ.

---

ಅಳತೆಯು ಯಾವುದಾದರೂ ವಸ್ತು ಅಥವಾ ವಿದ್ಯಮಾನದ ಲಕ್ಷಣಗಳು ಅಥವಾ ಆಯಾಮಗಳನ್ನು ಪರಿಮಾಣಿಸುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಮೌಲ್ಯಾಂಕನವು ಕೆಲವು ಗೊತ್ತಿರುವ ಉದ್ದೇಶ ಅಥವಾ ಗುರಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆಯುವ ಪ್ರಕ್ರಿಯೆಯಾಗಿದೆ.

ಮೌಲ್ಯಮಾಪನವು ಒಂದು ವಿದ್ಯಮಾನದ ಬಗ್ಗೆ ಒಂದು ನಿರ್ದಿಷ್ಟ ಸಮಯದವರೆಗೆ ಸಂಗ್ರಹಿಸಿದ ಪರಿಮಾಣಾತ್ಮಕ ಮತ್ತು/ ಅಥವಾ ಗುಣಾತ್ಮಕ ಮಾಹಿತಿಯನ್ನು ಪರಿಗಣಿಸಿ, ತೆಗೆದುಕೊಳ್ಳುವ ಮೌಲ್ಯ ನಿರ್ಣಯವನ್ನು ಸೂಚಿಸುತ್ತದೆ.

---

ಬಾಕ್ಸ್ 13.2: ಅಳತೆ, ಮೌಲ್ಯಾಂಕನ ಮತ್ತು ಮೌಲ್ಯಮಾಪನದ ಕಾರ್ಯಕಾರಿ ಅರ್ಥ

ಈ ಪರಿಕಲ್ಪನೆಗಳ ಬಗ್ಗೆ ನಿಮ್ಮ ತಿಳುವಳಿಕೆಯನ್ನು ಬಲಪಡಿಸಲು ಈ ಕೆಳಗಿನ ಚಟುವಟಿಕೆಯನ್ನುಮಾಡಿ.

ಚಟುವಟಿಕೆ 2:

*ಐದನೇ ತರಗತಿಯ ಪರಿಸರ ಅಧ್ಯಯನ ಕಲಿಕೆಯ ಪ್ರಗತಿಯನ್ನು ಮೌಲ್ಯಾಂಕನ ಮಾಡಲು ನೀವು ಸಂಗ್ರಹಿಸಬಹುದಾದ ಮಾಹಿತಿಯ ಪಟ್ಟಿಯನ್ನು ಸಿದ್ಧಪಡಿಸಿ.*

## 13.3 ಮೌಲ್ಯಾಂಕನದ ಪ್ರಕ್ರಿಯೆ

ಕಲಿಕೆಯು ಉದ್ದೇಶಪೂರ್ವ ಚಟುವಟಿಕೆಯಾಗಿದೆ.ಆದ್ದರಿಂದ ಶಾಲಾ ಪಠ್ಯಕ್ರಮದಲ್ಲಿ ಸೇರಿಸಿರುವ ಯಾವುದೇ ವಿಷಯವು ನಿರ್ದಿಷ್ಟ ಕಲಿಕಾಫಲಗಳನ್ನು ಒಳಗೊಂಡಿರುತ್ತದೆ.ಪ್ರತಿ ವಿಷಯವನ್ನು ಅಧ್ಯಯಿಸಿದ ನಂತರ, ವಿದ್ಯಾರ್ಥಿಯು ನಿರ್ದಿಷ್ಟಿತ ಸಾಮರ್ಥ್ಯಗಳನ್ನು/ ವರ್ತನೆಗಳನ್ನು ಪ್ರದರ್ಶಿಸುವುದು ಅಪೇಕ್ಷಿತವಾಗಿರುತ್ತದೆ.ಈ ಸಂದರ್ಭದಲ್ಲಿ ಮೌಲ್ಯಾಂಕನವು ಬೋಧನೆಯ ಒಂದು ಅವಿಭಾಜ್ಯ ಅಂಗವಾಗಿದೆ.ಏಕೆಂದರೆ ಇದು ಶಿಕ್ಷಣದ ಗುರಿಗಳು ಸಾಧಿತವಾಗಿದೆಯೇ ಅಥವಾ ಇಲ್ಲವೇ ಎಂದು ನಿರ್ಧರಿಸುತ್ತದೆ.ಶ್ರೇಣಿಗಳು, ಉದ್ಯೋಗ, ಉನ್ನತಿ/ಪ್ರಗತಿ, ಬೋಧನಾ ಅಗತ್ಯತೆಗಳು ಮತ್ತು ಪಠ್ಯಕ್ರಮ ಇವುಗಳ ತೀರ್ಮಾನವನ್ನು ಮೌಲ್ಯಾಂಕನ ಪ್ರಭಾವಿಸುತ್ತದೆ.ಮೌಲ್ಯಾಂಕನವು ನಮ್ಮನ್ನು ಈ ಕೆಳಗಿನ ಕ್ಲಿಷ್ಟ ಪ್ರಶ್ನೆಗಳನ್ನು ಕೇಳಲು ಉತ್ತೇಜಿಸುತ್ತದೆ.

ನಾವು ಏನನ್ನು ಬೋಧಿಸಲು ಯೋಚಿಸುತ್ತೇವೆಯೋ ಅದನ್ನು ಬೋಧಿಸುತ್ತಿದ್ದೇವೆಯೇ?ವಿದ್ಯಾರ್ಥಿಗಳು ಏನನ್ನು ಕಲಿಯಬೇಕೋ ಅದನ್ನು ಕಲಿಯುತ್ತಿದ್ದಾರೆಯೇ ? ಕಲಿಕೆಯನ್ನು ಉತ್ತಮಗೊಳಿಸಲು, ವಿಷಯವನ್ನು ಇನ್ನೂ ಉತ್ತಮವಾಗಿ ಬೋಧಿಸಲು ಏನಾದರೂ ಮಾರ್ಗಗಳಿವೆಯೇ?
ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವ ಮೂಲಕನೀವು ಕಲಿಕಾ ಉದ್ದೇಶಗಳು, ತರಗತಿ ಪ್ರಕ್ರಿಯೆಗಳು ಮತ್ತು ಮೌಲ್ಯಾಂಕನದ ನಡುವಿನ ಸಂಬಂಧಗಳನ್ನು ನೋಡುತ್ತೀರಾ. ನಾವು ಕಂಡುಹಿಡಿಯೋಣ.

### 13.3.1 ಅಪೇಕ್ಷಿತ ಕಲಿಕಾಫಲಗಳು, ತರಗತಿ ಪ್ರಕ್ರಿಯೆಗಳು ಮತ್ತು ಮೌಲ್ಯಾಂಕನ

ತರಗತಿ ವ್ಯವಹಾರಗಳ ಪ್ರಕ್ರಿಯೆಯು ಸಾಮಾನ್ಯವಾಗಿ ಕೆಲವು ಪಠ್ಯಕ್ರಮಕ್ಷೇತ್ರಗಳ ಮೇಲೆ ಅವಲಂಬಿತವಾಗಿದೆ.ಈ ಪಠ್ಯಕ್ರಮ ಕ್ಷೇತ್ರಗಳಲ್ಲಿ ನಿರ್ದಿಷ್ಟವಾಗಿ ವಿಷಯಗಳು, ಕೆಲವು ವಿಷಯ ವಸ್ತುಗಳನ್ನು ಹೊಂದಿದೆ.ಪ್ರತಿ ಘಟಕವು ಸಾಧಿಸಬೇಕಾದ ಕೆಲವು ಕಲಿಕಾ ಉದ್ದೇಶಗಳನ್ನು ಹೊಂದಿದೆ.ಇದರರ್ಥ, ವಿಷಯವು ಒಳಗೊಂಡಿರುವ ಪರಿಕಲ್ಪನೆಗಳನ್ನು ಕಲಿತ ನಂತರ ವಿದ್ಯಾರ್ಥಿಯು ಉದ್ದೇಶಗಳಲ್ಲಿ ತಿಳಿಸಿರುವಂತೆ ವರ್ತಿಸುವುದು ಅಥವಾ ಪ್ರದಶಿಸಬೇಕಾಗುತ್ತದೆ.ಆದ್ದರಿಂದ ಕಲಿಕಾ ಉದ್ದೇಶಗಳನ್ನು, 'ಅಪೇಕ್ಷಿತ ಕಲಿಕಾ ಫಲಗಳು' ಎಂದು ಕರೆಯಬಹುದು.ಈ ಎಲ್ಲಾ ಕಲಿಕಾ ಉದ್ದೇಶಗಳು ಸಾಧಿಸಲ್ಪಟ್ಟಿವೆ ಎಂದು ಘಟಕಾಂತ್ಯ ಅಥವಾ ವರ್ಷಾಂತ್ಯದಲ್ಲಿ ಸಾಧಿಸ ಹೇಗೆ ಖಾತರಿಪಡಿಸಿಕೊಳ್ಳುವಿರಿ?ಇದಕ್ಕೆ ನೀವು ಅಪೇಕ್ಷಿತ ಕಲಿಕಾ ಫಲಗಳನ್ನು ಸಾಧಿಸಿರುವುದನ್ನು ಮೌಲ್ಯಾಂಕನ ಮಾಡುವುದು ಅಗತ್ಯವಾಗಿದೆ. ಮೌಲ್ಯಾಂಕನ ಕಾರ್ಯವನ್ನು ಇನ್ನಷ್ಟುಸುಲಭ ಹಾಗೂ ನಿಖರವಾಗಿ ಮಾಡಲು, ಅಪೇಕ್ಷಿತ ಕಲಿಕಾಫಲಗಳು ನಿರ್ದಿಷ್ಟ (ಖ), ಅಳೆಯಬಲ್ಲ(ಒ), ಸಾಧಿಸಬಲ್ಲ(ಂ),ಸಮಂಜಸ(ಖ)ಹಾಗೂ ನಿರ್ದಿಷ್ಟ ಕಾಲಾವಧಿ(ಖ),ಯದ್ದಾಗಿರಬೇಕು(ಖಒಂಖಖ). ಉದಾ: ಭೂಗೋಳ ಶಾಸ್ತ್ರದ ಉದ್ದೇಶವೊಂದನ್ನು ನಾವು ಹೀಗೆ ನಿರ್ದಿಷ್ಟವಾಗಿಸಬಹುದು.

Notes

*ತರಗತಿ 5ರ ವಿದ್ಯಾರ್ಥಿಗಳು ಪಾಠ ಮುಗಿದ ನಂತರ ನಕ್ಷೆಯಲ್ಲಿ ಪ್ರಮುಖ ಸ್ಥಳಗಳಾದ ದೆಹಲಿ, ಮುಂಬೈ, ಚೆನ್ನೈ ಮತ್ತು ಕೊಲ್ಕತ್ತಾವನ್ನು ಗುರುತಿಸಲು ಸಮರ್ಥರಾಗುತ್ತಾರೆ.*

ಈ ಉದ್ದೇಶವು ನಿರ್ದಿಷ್ಟವಾಗಿದೆ, ಏಕೆಂದರೆ ಇದು ವಿದ್ಯಾರ್ಥಿಗಳು ಏನನ್ನು ಮಾಡಲಿದ್ದಾರೆ?ಯಾವಾಗ ಮಾಡಲಿದ್ದಾರೆ?ಎಂಬುದನ್ನು ನಿರ್ದಿಷ್ಟಗೊಳಿಸುತ್ತದೆ.ಇದನ್ನು ಕಲಿಕಾ ಕಾರ್ಯದ ಮೂಲಕ ಅಳೆಯಬಹುದಾಗಿದೆ.ಇದು ವಿದ್ಯಾರ್ಥಿಗಳ ಸಾಮರ್ಥ್ಯದ ವ್ಯಾಪ್ತಿಗೆ ಒಳಪಟ್ಟಿರಬೇಕು.ಆಗಮಾತ್ರ ಸಾಧಿಸಲು ಸಾಧ್ಯ.ವಿದ್ಯಾರ್ಥಿಗಳು ನಕ್ಷೆಯಲ್ಲಿ ಸ್ಥಳಗಳನ್ನು ತೋರಿಸುವುದು ನೈಜತೆಯಿಂದ ಕೂಡಿದ್ದು ಹಾಗೂ ಪಾಠ ಮುಗಿದ ಕೂಡಲೆ ಅವರು ಇದನ್ನು ಮಾಡಬೇಕಾಗಿರುವುದರಿಂದ ನಿಗಧಿತಕಾಲಾವಧಿ ಹೊಂದಿರುತ್ತದೆ.


ಈ ರೀತಿಯ ಅಪೇಕ್ಷಿತ ಕಲಿಕಾ ಫಲಗಳಿಗೆ ಉದಾಹರಣೆಗಳು, ವಿವಿಧ ತರಗತಿಗಳಲ್ಲಿ ವಿವಿಧ ಪಠ್ಯಕ್ರಮ ಕ್ಷೇತ್ರಗಳ ಅಡಿಯಲ್ಲಿರುವ ಸಾಧಿಸುವ ಸಾಮರ್ಥ್ಯಗಳಾಗಿವೆ. ತರಗತಿ 5 ವಿದ್ಯಾರ್ಥಿಗಳ ಗಣಿತ ಪಠ್ಯಪುಸ್ತಕವನ್ನು ನಾವು ನೋಡೋಣ ಹಾಗೂ ಪ್ರತಿ ಘಟಕ/ಪಾಠಕ್ಕೂಅಪೇಕ್ಷಿತ ಕಲಿಕಾ ಫಲಗಳನ್ನು ಕಂಡುಕೊಳ್ಳೋಣ. ಕೆಲವು ಉದಾಹರಣೆಗಳನ್ನು ಕೋಷ್ಟಕ 13.1 ರಲ್ಲಿ ನೀಡಲಾಗಿದೆ.

ಕೋಷ್ಟಕ 13.1 ತರಗತಿ 5 ಗಣಿತ ವಿಷಯದಲ್ಲಿ ಅಪೇಕ್ಷಿತ ಕಲಿಕಾ ಫಲಗಳಿಗೆ ಉದಾಹರಣೆಗಳು

| ಪರಿಕಲ್ಪನೆ | ಅಪೇಕ್ಷಿತ ಕಲಿಕಾ ಫಲಗಳು |
|---|---|
| *ಭಿನ್ನರಾಶಿ* | *ಸರಳ ಭಿನ್ನರಾಶಿಗಳನ್ನು ಕನಿಷ್ಠ ಮಟ್ಟಕ್ಕೆ ಇಳಿಸುವುದು* |
| *ಶೇಕಡಾವಾರು* | *ಕೊಟ್ಟಿರುವ ಸಂಖ್ಯೆ ಅಥವಾ ಅಳತೆಗೆ ಬೇಕಾಗಿರುವ ಶೇಕಡಾವಾರುಕಂಡುಹಿಡಿಯುವುದು* |

ಕಲಿಕಾ ಉದ್ದೇಶಗಳ ಆಧಾರಿತವಾಗಿ ಕಲಿಕಾ ಬೋಧನಾ ಸಾಮಗ್ರಿಗಳನ್ನುಮತ್ತು ಚಟುವಟಿಕೆಗಳನ್ನು ರಚಿಸುವುದು ಹಾಗೂ ತರಗತಿ ವ್ಯವಹಾರ ಪ್ರಕ್ರಿಯೆಗಳಿಗನುಗುಣವಾಗಿ ಅವುಗಳನ್ನು ಸಂಘಟಿಸುವುದು.ತರಗತಿ ವ್ಯವಹಾರಗಳು ಮುಗಿದನಂತರ, ವಿದ್ಯಾರ್ಥಿಗಳು ಸಾಧಿಸಿರುವ ಅಪೇಕ್ಷಿತ ಕಲಿಕಾಫಲಗಳ ವಿಸ್ತಾರವನ್ನು ಮೌಲ್ಯಾಂಕಿಸುವುದು.ಇಡೀ ತರಗತಿ ಪ್ರಕ್ರಿಯೆ 3 ಮುಖ್ಯ ಹಂತಗಳನ್ನು ಒಳಗೊಂಡಿದ್ದು, ಅವುಗಳನ್ನು ಈ ಕೆಳಗೆ ಚಿತ್ರ 13.1 ರಲ್ಲಿ ಕೊಟ್ಟಿದೆ:

1. ಅಪೇಕ್ಷಿತ ಕಲಿಕಾಫಲಗಳನ್ನು ತೀರ್ಮಾನಿಸುವುದು
2. ತರಗತಿ ಪ್ರಕ್ರಿಯೆಗಳನ್ನು ಯೋಜಿಸುವುದು ಹಾಗೂ ಕೈಗೊಳ್ಳುವುದು
3. ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಮೌಲ್ಯಾಂಕಿಸುವುದು




ಚಿತ್ರ 13.1 : ತರಗತಿ ಪ್ರಕ್ರಿಯೆ

## ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು

Notes

ತರಗತಿ ಪ್ರಕ್ರಿಯೆಯ ಮೂರು ಘಟಕಾಂಶಗಳು/ಅಂಶಗಳು ನೈಜ ಹಾಗೂ ತಾರ್ಕಿಕವಾಗಿ ಕಂಡರೂ ವಾಸ್ತವವಾಗಿ ತರಗತಿ ಪ್ರಕ್ರಿಯೆಯು ಅಷ್ಟು ಸರಳ ಹಾಗೂ ನೇರ ರೀತಿಯಲ್ಲಿ ನಡೆಯುವುದಿಲ್ಲ. ಕೆಲವು ಸಂಧರ್ಭಗಳಲ್ಲಿ ಕಲಿಕಾ ಉದ್ದೇಶಗಳಿಂದ ಮಾರ್ಗದರ್ಶಿತವಾದ ಬೋಧನೆ ಮತ್ತು ಯೋಜನೆ ಇದ್ದರೂಸಹ, ವಿದ್ಯಾರ್ಥಿಗಳ ಒಂದು ನಿರ್ದಿಷ್ಟ ಗುಂಪಿನ ಕೆಳ/ಕಳಪೆ ಮಟ್ಟದ ಪರಿಗಣನೆಯನ್ನು ಸಾಧಿಸುವಾಗ ಯಾವುದಾದರೊಂದು ಉದ್ದೇಶವನ್ನು ಪೂರ್ಣಗೊಳಿಸುವಲ್ಲಿ ನಿಮಗೆ ತುಂಬಾ ಕ್ಲಿಷ್ಟತೆಯ ಅನುಭವಆಗಬಹುದು.ಇಂತಹ ಸಂಧರ್ಭದಲ್ಲಿ ನೀವು ಕಲಿಕಾ ಉದ್ದೇಶವನ್ನು ಮಾರ್ಪಾಡುಗೊಳಿಸಬೇಕಾಗುತ್ತದೆ. ಅದೇ ರೀತಿ ಒಂದು ಪಾಠಕ್ಕೆ ಸಂಬಂಧಿಸಿದ ತರಗತಿ ವ್ಯವಹಾರ/ಪ್ರಕ್ರಿಯೆಯ ಅಂತ್ಯದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಮೌಲ್ಯಾಂಕಿಸುವಾಗ, ತರಗತಿ ವ್ಯವಹಾರಗಳ ಕೆಲವೊಂದು ಅನಿರೀಕ್ಷಿತ ದೌರ್ಬಲ್ಯಗಳಷ್ಟೇ ಅಲ್ಲದೆನಿರೀಕ್ಷಿತ ಕಲಿಕಾಫಲಗಳು ಬಹಿರಂಗಗೊಳ್ಳುತ್ತವೆ ಹಾಗೂ ಇವುಗಳಿಗೆ ಒಂದಿಷ್ಟು ಮಾರ್ಪಾಡುಗಳು ಬೇಕಾಗುವುದು. ಹೀಗೆ ತರಗತಿ ಪ್ರಕ್ರಿಯೆಯ ಮೂರು ಘಟಕಾಂಶಗಳಲ್ಲಿ ಪ್ರತಿಯೊಂದು ಘಟಕಾಂಶವು ಪ್ರಭಾವಿಸುತ್ತವೆ ಹಾಗೂ ಉಳಿದ ಎರಡು ಘಟಕಾಂಶಗಳಿಂದ ಪ್ರಭಾವಿತವಾಗುತ್ತವೆ.ಆದ್ದರಿಂದ ಚಿತ್ರ 13.1 ರಲ್ಲಿ ಬಾಣದ ಗುರುತುಗಳಿಂದ ಸೂಚಿಸಿರುವ ಪ್ರಭಾವಿಸುವ ದಿಕ್ಕುಗಳು ಏಕಮುಖವಾಗಿರುವುದಿಲ್ಲ.

ಕಲಿಕಾ ಫಲಗಳ ಮೌಲ್ಯಾಂಕನದ ಫಲಿತಾಂಶವು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಪ್ರಮತ್ನಿಸುತ್ತವೆ ಎಂದು ನಾವು ಹೇಳಬಹುದು.

**ಚಟುವಟಿಕೆ : 3**

*ಪ್ರಾಥಮಿಕ ಹಂತದಲ್ಲಿ ನಿಮಗಿಷ್ಟವಾದ ಯಾವುದಾದರೊಂ ವಿಷಯದಿಂದ ಪಾಠವೊಂದನ್ನು ಆಯ್ಕೆಮಾಡಿಕೊಳ್ಳಿ. ಅದನ್ನು ಚೆನ್ನಾಗಿ ಓದಿ. ಆನಂತರ ಈ ಕೆಳಗಿನ ನಮೂನೆಯಲ್ಲಿ ತುಂಬಿರಿ. ಹೀಗೆ ಮಾಡುವಾಗ ನೀವು,*

- *ಘಟಕ / ಪಾಠದ ಅಪೇಕ್ಷಿತ ಕಲಿಕಾಫಲಗಳನ್ನು ರಚಿಸಿ.*
- *ತರಗತಿ ವ್ಯವಹಾರದಲ್ಲಿ ಬಳಸುವ ವಿಧಾನಗಳನ್ನು/ಪ್ರಕ್ರಿಯೆಗಳನ್ನು ಪ್ರಸ್ತಾಪಿಸಿ.*
- *ಯಾವ ಸಮಯದಲ್ಲಿ (ಘಟಕ/ಪಾಠದ ವ್ಯವಹಾರದ ಸಂದರ್ಭದಲ್ಲಿ ಅಥವಾ ಘಟಕ/ಪಾಠದ ಅಂತ್ಯದಲ್ಲಿ ವರ್ಷಾಂತ್ಯದಲ್ಲಿ ಸಂದರ್ಭದಲ್ಲಿ )ಮೌಲ್ಯಾಂಕನವನ್ನು ಕೈಗೊಳ್ಳಬಹುದೆಂಬುದನ್ನು ಸೂಚಿಸಿ ಹಾಗೂ*
- *ಮೌಲ್ಯಾಂಕಿಸಲು (ನಿಮ್ಮ ಬೋಧನಾ ಅನುಭವದಿಂದ)ಸಾಧ್ಯವಾದ ಸಾಧನಗಳು ಮತ್ತು ತಂತ್ರಗಳನ್ನು ಸೂಚಿಸಿ*

ತರಗತಿ: ________________, ವಿಷಯ: ________________________,

ಘಟಕ/ ಪಾಠದ ಹೆಸರು/ ಶೀರ್ಷಿಕೆ : ____________________________________________

| ಅಪೇಕ್ಷಿತ ಕಲಿಕಾಫಲಗಳು | ತರಗತಿ ವ್ಯವಹಾರಕ್ಕೆ ಬಳಸುವ ಪ್ರಕ್ರಿಯೆಗಳು/ ವಿಧಾನಗಳು | ಮೌಲ್ಯಾಂಕನವನ್ನು ಯಾವಾಗ ಕೈಗೊಳ್ಳುವುದು | ಮೌಲ್ಯಾಂಕನಕ್ಕೆ ಸಾಧ್ಯವಿರುವ ಸಾಧನಗಳು/ ತಂತ್ರಗಳು (ಮೌಖಿಕ/ ಲಿಖಿತ/ಪ್ರಾಯೋಗಿಕ/ ವೀಕ್ಷಣೆ) |
|---|---|---|---|
| | | | |
| | | | |
| | | | |

Notes

ವಿದ್ಯಾರ್ಥಿಗಳ ಕಲಿಕೆಯ ವಿಸ್ತಾರ ಮತ್ತು ಗತಿ/ವೇಗ ಯಾವುದು?

- ಕೊಟ್ಟಿರುವ ಎಲ್ಲಾ ಕಲಿಕಾಫಲಗಳು ವಿದ್ಯಾಥಿಗಳಿಗೆ ಸೂಕ್ತವಾಗಿವೆಯೇ?
- ತರಗತಿ ವ್ಯವಹಾರಗಳ ಯಾವ ಅಂಶಗಳಿಗೆ ಹೆಚ್ಚಿನ ಸುಧಾರಣೆಯ ಅಗತ್ಯತೆ ಇದೆ?
- ವಿದ್ಯಾರ್ಥಿಗಳ ಬಲ ಮತ್ತು ದೌರ್ಬಲ್ಯಗಳ ಯಾವ ಅಂಶಗಳಿಗೆಇನ್ನೂ ಹೆಚ್ಚಿನ ನೆರವಿನ ಅಗತ್ಯವಿದೆ?
- ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಾಂಕಿಸಲು ಮತ್ತು ಸುಧಾರಿಸಲು ನಿಮ್ಮ ಪ್ರಯತ್ನಗಳನ್ನು ಪರಿಣಾಮಕತೆಯನ್ನು ಹೇಗೆ ಮೌಲ್ಯಾಮಾಪನ ಮಾಡುವಿರಿ ಮತ್ತು ಸುಧಾರಿಸುವಿರಿ?

ನೀವು ಬಹುಶಃ ಮೌಲ್ಯಾಂಕನವನ್ನು/ ಮೌಲ್ಯಮಾಪನವನ್ನು ಘಟಕ/ಪಾಠದ ಅಂತ್ಯ ಅಥವಾ ಶೈಕ್ಷಣಿಕ ವರ್ಷಾಂತ್ಯದಲ್ಲಿ ನಡೆಸುವುದು ಎಂದು ತಿಳಿದಿರಬಹುದು ಇದಕ್ಕೆ ಪ್ರತಿಕೂಲವಾಗಿ ಎಂಬಂತೆ ವಿದ್ಯಾರ್ಥಿಗಳ ಕಲಿಕೆಯನ್ನುಅನುಕೂಲಿಸುವುದಕ್ಕಾಗಿ ಶಿಕ್ಷಕನು ತನ್ನ ಬೋಧನಾ ಕಲಿಕಾ ಚಟುವಟಿಕೆಗಳು ತರಗತಿಯಲ್ಲಿ ಎಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿವೆ ಎಂದು ಪರೀಕ್ಷಿಸಲು ಶಾಲಾ ಅಧಿವೇಶನದ ಯಾವುದೇ ಸಮಯದಲ್ಲಿ ಬೇಕಾದರೂ ಮೌಲ್ಯಾಂಕನ ಕೈಗೊಳ್ಳಬಹುದು. ಅಪೇಕ್ಷಿತ ಕಲಿಕಾಫಲಗಳು, ತರಗತಿ ಪ್ರಕ್ರಿಯೆಗಳು ಹಾಗೂ ಕಲಿಕಾಫಲಗಳ ಮೌಲ್ಯಾಂಕನ ಪ್ರಕ್ರಿಯೆಗಳ ನಡುವಿನ ಸಂಬಂಧವನ್ನು ತಿಳಿಯಲು ಈ ಕೆಳಗಿನ ಚಟುವಟಿಕೆಯನ್ನು ಕೈಗೊಳ್ಳಿ.

### 13.3.2 ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನ

ಮೌಲ್ಯಾಂಕನದಲ್ಲಿ ಅವುಗಳ ಉದ್ದೇಶಗಳಗೆ ಅವಲಂಬಿಸಿದಂತೆ ವಿವಿಧ ವಿಧಗಳಿವೆ. ಅವುಗಳೆಂದರೆ :

– ಔಪಚಾರಿಕ (ಘಟಕ ಅಥವಾ ವಾರ್ಷಿಕ ಪರೀಕ್ಷೆಗಳು) ಅಥವಾ ಅನೌಪಚಾರಿಕ (ತರಗತಿ ಅಂತರ್ ಕ್ರಿಯೆಯ ಸಂದರ್ಭದಲ್ಲಿ ಶಿಕ್ಷಕರ ಸಹ ಮಾತುಗಳು ಅಥವಾ ವಿದ್ಯಾರ್ಥಿಗಳ ಚಟುವಟಿಕೆಗಳ ಅನೌಪಚಾರಿಕ ವೀಕ್ಷಣೆ)
– ವಸ್ತುನಿಷ್ಠ (ನಿಶ್ಚಿತವಾಗಿ ಕೇಂದ್ರೀಕರಿಸಿರುವ ಪೂರ್ವನಿಗಧಿತ ಕಲಿಕಾಫಲಗಳು) ಅಥವಾ ವ್ಯಕ್ತಿನಿಷ್ಠ(ವ್ಯಕ್ತಿವೈವಿಧ್ಯತೆಗಳು, ಅಗತ್ಯತೆಗಳು ಮತ್ತು ಸಾಧನೆಗಳ ಮೇಲೆ ಹೆಚ್ಚು ಕೇಂದ್ರಿತವಾಗಿದೆ)
– ಸಾಮಾನ್ಯಕ ಆಧಾರಿತ (ಒಬ್ಬ ವಿದ್ಯಾರ್ಥಿಯ ಕಾರ್ಯಕ್ಷಮತೆಯನ್ನು ಒಂದು ಗುಂಪಿನ ಸಾಮಾನ್ಯಕ ಅಥವಾ ಮಾನಕಕ್ಕೆ ಹೋಲಿಕೆಮಾಡುವುದು) ಅಥವಾ ನಿಕಶ ಆಧಾರಿತ (ವಿದ್ಯಾರ್ಥಿಯು ಗಳಿಸಿರುವ ಕಾರ್ಯಕ್ಷಮತೆಯನ್ನು ಅಪೇಕ್ಷಿತ ಕಾರ್ಯಕ್ಷಮತೆಯ ಜೊತೆ ಹೋಲಿಕೆ ಮಾಡುವುದು)

ಮೊದಲೇತಿಳಿಸಿರುವಂತೆ ಕಲಿಕೆಯ ಮೌಲ್ಯಾಂಕನವು ಕಲಿಕಾ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವಾಗಿದೆ.ಇದನ್ನು ರಚನಾತ್ಮಕ ಮತ್ತು ಸಂಕಲನಾತ್ಮಕ ವರ್ಗಗಳಾಗಿ ವಿಂಗಡಿಸಬಹುದು.ನಾವು ಈಗಈ ಎರಡೂ ವರ್ಗಗಳನ್ನು ಅರ್ಥಮಾಡಿಕೊಳ್ಳೋಣ.

- ರಚನಾತ್ಮಕ/ರೂಪಣಾತ್ಮಕ ಮೌಲ್ಯಾಂಕನ

ವಿದ್ಯಾರ್ಥಿಗಳ ಗಳಿಕೆಯನ್ನು ಸುಧಾರಿಸಲು ಕಲಿಕಾ ಪ್ರಕ್ರಿಯೆಯ ಸಂಧರ್ಭದಲ್ಲಿ ಬೋಧನಾ–ಕಲಿಕಾ ಚಟುವಟಿಕೆಗಳನ್ನುಮಾರ್ಪಡಿಸಲು ಶಿಕ್ಷಕರು ಬಳಸುವ ಔಪಚಾರಿಕ–ಅನೌಪಚಾರಿಕ ಮೌಲ್ಯಾಂಕನ ವಿಧಾನಗಳ ವ್ಯಾಪ್ತಿಯೇ ರೂಪಣಾತ್ಮಕ ಮೌಲ್ಯಾಂಕನ.ಇದು ವಿದ್ಯಾರ್ಥಿಗಳ ಪ್ರಗತಿಯನ್ನು ಶಿಕ್ಷಕರು ನಿರ್ಭಯ ಹಾಗೂ ಪೂರಕವಾದ ವಾತಾವರಣದಲ್ಲಿನಿರಂತರವಾಗಿ ಮೇಲ್ವಿಚಾರಣೆ/ನಿಯಂತ್ರಿಸುವ ಸಲುವಾಗಿ ಸಹಜವಾಗಿ ಕೈಗೊಳ್ಳುವ ಪ್ರಕ್ರಿಮೆಯಾಗಿದೆ.ಇದು ವಿಷಯದ ವಿವರಣೆ ಹಾಗೂ ಕಾರ್ಯಕ್ಷಮತೆಯನ್ನು ಕೇಂದ್ರಿತವಾಗಿಟ್ಟುಕೊಂಡು ಶಿಕ್ಷಕ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಗುಣಾತ್ಮಕ ಹಿಮ್ಮಾಹಿತಿಯನ್ನುಒಳಗೊಂಡಿರುವುದಾಗಿದೆ. ಇಂತಹ ಮೌಲ್ಯಾಂಕನವು ಸ್ವತಃ ವಿದ್ಯಾರ್ಥಿ/ನಿ (ಸ್ವಮೌಲ್ಯಮಾಪನ) ಅಥವಾ ಸಮ ವಯಸ್ಕರ ಗುಂಪನ್ನೂ(ಸಮವಯಸ್ಕರ ನಿಷ್ಕರ್ಷೆ/ಅಂದಾಜು) ಒಳಗೊಂಡಿರಬಹುದು.

## ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು

Notes

*ರೂಪಣಾತ್ಮಕ ಮೌಲ್ಯಾಂಕನವು ಶಿಕ್ಷಕರಿಗೆ ಈ ರೀತಿ ಸಹಾಯಕವಾಗಿದೆ :*

- ಕಲಿಕಾ ಪ್ರಕ್ರಿಯೆಯನ್ನು ಅನುಕೂಲಿಸಲು ಅಥವಾ ನೆರವು ನೀಡಲು ಸರಿದಿಕ್ಕಿನಲ್ಲಿ ಉತ್ತೇಜಿಸಲು, ವಿದ್ಯಾರ್ಥಿಗಳಿಗೆ, ಅವರ ಪೋಷಕರಿಗೆ ಹಾಗೂ ಇತರೆ ಶಿಕ್ಷಕರಿಗೆ ಹಿಮ್ಮಾಹಿತಿ ನೀಡುವುದಾಗಿದೆ.

- ಬೋಧನಾ ಕಲಿಕಾ ಚಟುವಟಿಕೆಗಳು ಮತ್ತು ಅನುಭವಗಳನ್ನು ತದನಂತರ ಮಾರ್ಪಡಿಸಲು ಒಂದು ವೇಳೆ ನೀವು ಮೌಲ್ಯಾಂಕನದ ಹಿಮ್ಮಾಹಿತಿಗಳ ಮೂಲಕ ವೀಕ್ಷಿಸಿದಾಗಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಕಾರ್ಯಕ್ಷಮತೆ ಅಪೇಕ್ಷಿತ ಮಟ್ಟಕ್ಕಿಂತ ಕೆಳಮಟ್ಟದಲ್ಲಿ ಇರುವುದು ಕಂಡುಬರುತ್ತದೆ. ನೀವು ವಿದ್ಯಾರ್ಥಿಗಳ ಅಗತ್ಯತೆಗಳಿಗೆ ಹೊಂದಿಕೊಳ್ಳುವಂತೆ ಬೋಧನೆ ಕಲಿಕಾ ತಂತ್ರ ಮತ್ತು ವಿಧಾನಗಳನ್ನು ಪುನರ್ ರಚನೆ ಮಾಡಬಹುದು.

- ವೈಯಕ್ತಿಕ ಅಥವಾ ಗುಂಪಿನ ನ್ಯೂನತೆ/ಕೊರತೆಗಳನ್ನು ಗುರುತಿಸುವುದು ಮತ್ತು ಪರಿಹರಿಸುವುದು. ಉದಾಹರಣೆಗೆ ಒಂದು ವೇಳೆ ನೀವು ಬೋಧಿಸಿದ ಪಾಠವನ್ನು ಕೆಲವು ವಿದ್ಯಾರ್ಥಿಗಳಿಗೆ ಅರ್ಥವಾಗದಿದ್ದರೆ ನೀವು ಅಂತಹ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಮಾರ್ಗದರ್ಶನ ಅಥವಾ ಅವರ ಕಾರ್ಯಕ್ಷಮತೆ ಹೆಚ್ಚಿಸಲು ಇನ್ನಿತರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬಹುದು. ಕೆಲವು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ದುರ್ಬಲ ಕ್ಷೇತ್ರಗಳನ್ನು ಗುರುತಿಸಲಿ. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೀವು ಕೆಲವು ಕಲಿಕಾ ನೆರವು ಸಾಮಗ್ರಿಗಳನ್ನು ರಚಿಸಬಹುದು.

- ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಗುರುತಿಸಲು ಹಾಗೂ ಅವರ ಸಾಮರ್ಥ್ಯಗಳನ್ನು ಹೆಚ್ಚಿಸಲು ಅನುಕೂಲಿಸುವುದು. ರೂಪಣಾತ್ಮಕ ಮೌಲ್ಯಾಂಕನದ ಹಿಮ್ಮಾಹಿತಿಯು ಹಲವು ವಿದ್ಯಾರ್ಥಿಗಳ ಸೃಜನಾತ್ಮಕ ಸಾಮರ್ಥ್ಯಗಳ ಪ್ರಾಬಲ್ಯ ಕ್ಷೇತ್ರಗಳನ್ನು ಪ್ರಕಟಿಸುತ್ತದೆ. ಒಬ್ಬ ಶಿಕ್ಷಕನಾಗಿ ನೀವು ವಿದ್ಯಾರ್ಥಿಗಳ ಗುಣಗಳನ್ನು ಪೋಷಿಸಲು ಕೆಲವು ಸಂಪದ್ಭರಿತ ಅನುಭವಗಳನ್ನು ನೀಡುವ ಅವಕಾಶ ಹೊಂದಿದ್ದೀರಿ.

*ರೂಪಣಾತ್ಮಕ ಮೌಲ್ಯಾಂಕನದ ಹಿಮ್ಮಾಹಿತಿಯು ವಿದ್ಯಾರ್ಥಿಗೆ ಸಹಾಯಕವಾಗಿದೆ :*

- ವಿದ್ಯಾರ್ಥಿ/ನಿಯ ಕಲಿಕಾ ಪ್ರಗತಿಯನ್ನು ಮೇಲುಸ್ತುವಾರಿ ಮಾಡಲು ಮತ್ತು ಸ್ವಕಲಿಕೆಯನ್ನು ಉತ್ತೇಜಿಸಲು ಸಹಾಯಕವಾಗಿದೆ.

- ವಿದ್ಯಾರ್ಥಿ/ನಿಯ ಗಮನವನ್ನು ಶ್ರೇಣಿಗಳನ್ನು/ಅಂಕಗಳನ್ನು ಗಳಿಸುವುದಕ್ಕಿಂತ ಕಲಿಕಾ ಪ್ರಕ್ರಿಯೆಡೆಗೆ ಗಮನ ಹರಿಸಿ ತನ್ನ ಸ್ವ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ.

- ಅವರು ಹೇಗೆ ಕಲಿಯುತ್ತಾರೆ ಎನ್ನುವುದರಬಗ್ಗೆ ಅವರ ಮೆಟಾ ಜ್ಞಾನಾತ್ಮಕ ಜಾಗೃತಿಯನ್ನು ಹೆಚ್ಚಿಸಲು. (http://en.wikipedia.org/wiki/Metacognition) ಹಲವಾರು ಸಂಧರ್ಭಗಳಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿರಂತರ ಮಾರ್ಗದರ್ಶನಕ್ಕೆ ಇತರರ ಅವಲಂಬಿತರಾಗಿರುತ್ತಾರೆ.ಅಪರೂಪಕ್ಕೆ ತಮ್ಮ ಸಾಮರ್ಥ್ಯದ ಅರಿವು ಅವರಿಗಿರುತ್ತದೆ.ಆದರೆ ರೂಪಣಾತ್ಮಕ ಮೌಲ್ಯಾಂಕನದ ನಿಯಮಿತವಾಗಿ ಪಡೆಯುವ ಹಿಮ್ಮಾಹಿತಿಯು ಅವರ ಸ್ವ ಕಲಿಕಾಪ್ರಕ್ರಿಯೆಯ ಬಗ್ಗೆ ಅರಿವು ಹೊಂದುವಂತೆ ಮಾಡುತ್ತದೆ. ಇದು ಅವರ ಕಲಿಕಾ ಕಾರ್ಯಕ್ಷಮತೆಯನ್ನು ಸುಧಾರಿಸಲು ತಮ್ಮ ಕಲಿಕಾ ಪ್ರಕ್ರಿಯೆಯನ್ನು ಮಾರ್ಪಡಿಸಲು ಉತ್ತೇಜಿಸುತ್ತದೆ.

- ಬಾಹ್ಯ ಅಭಿಪ್ರೇರಣೆಯ ಋಣಾತ್ಮಕ ಪರಿಣಾಮವನ್ನು ಕಡಿಮೆಗೊಳಿಸಲು. ವಿದ್ಯಾರ್ಥಿಗಳು ಒಮ್ಮೆ ತಮ್ಮದೇ ಮಾರ್ಗದಲ್ಲಿ ಕಲಿಯುವಿಕೆ ಮತ್ತು ತಮ್ಮ ಕಲಿಕಾ ಪ್ರಕ್ರಿಯೆಯಲ್ಲಿ ತಮ್ಮ ಸಾಮರ್ಥ್ಯಗಳನ್ನು ಮಾರ್ಪಾಡು ಮಾಡಿಕೊಳ್ಳುವ ಅರಿವು ಹೊಂದುವುದರ ಜೊತೆಗೆ ಇನ್ನೂ ಉತ್ತಮವಾಗಿ ಕಲಿಯುವುದು ಕಂಡುಬಂದಿದೆ.ತಮ್ಮ ಸ್ವ–ಕಲಿಕಾ ಪ್ರಕ್ರಿಯೆಯ ಬಗೆಗಿನ ಅರಿವು ವಿದ್ಯಾರ್ಥಿಗಳಲ್ಲಿ ಪರೀಕ್ಷೆಗಾಗಿ ಕಲಿಯುವಿಕೆ ಅಥವಾ ಚಿನ್ನದ ಪದಕಗಳಿಸಲು ಕಲಿಯುವುದು, ಬಾಹ್ಯ ಅಭಿಪ್ರೇರಣೆ ಮೇಲೆ ಆಕಸ್ಮಿಕವಾಗಿ ಸಂಭವಿಸಬಹುದಾದ ಇಂತಹುದನ್ನು ತಪ್ಪಿಸಿ ತಮ್ಮ ಕಲಿಕೆಯ ಮೇಲೆ ಆಂತರಿಕ ಅಭಿಪ್ರೇರಣೆಯನ್ನು ಬೆಳೆಸುವ ಸಾಮರ್ಥ್ಯಗಳನ್ನು ಬೆಳೆಸುತ್ತದೆ.

Notes

- ವಿದ್ಯಾರ್ಥಿಗಳ ಕಲಿಕಾ ಕಾರ್ಯಕ್ಷಮತೆಯನ್ನು ಅರ್ಥಪೂರ್ಣವಾಗಿ ಹೆಚ್ಚಿಸುವುದರ ಮೂಲಕ ಅವರ ಸ್ವ-ಘನತೆ ಹಾಗೂ ಆಂತರಿಕ ಅಭಿಪ್ರೇರಣೆಯ ಮೂಲಕ ಸ್ವ-ಕಲಿಕೆಯನ್ನು ಹೆಚ್ಚಿಸುವುದಾಗಿದೆ. ಇದರಿಂದ ಶಿಕ್ಷಕರ ಕಾರ್ಯಭಾರ ಕಡಿಮೆ ಆಗುತ್ತದೆ.

ಈ ಮೌಲ್ಯಾಂಕನದ ಉದ್ದೇಶವು ಕಲಿಕಾರ್ಥಿಗೆ (ವಿದ್ಯಾರ್ಥಿಯನ್ನು) ಶ್ರೇಣಿಗಳನ್ನು ನೀಡುವುದರ ಮೂಲಕ ಮೌಲ್ಯಮಾಪನ ಮಾಡದೆ ಅವರ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುವುದೇ ಆಗಿದೆ.ಇದು ನಿರ್ದಿಷ್ಟ ಕೋರ್ಸ್‌ಗಳು ವಿದ್ಯಾರ್ಥಿಗಳ ಕಲಿಕಾಫಲಗಳನ್ನು ಸಾಧಿಸಲು ವಿಫಲವಾದಲ್ಲಿ ಪಠ್ಯಕ್ರಮದಲ್ಲಿ ಮಾರ್ಪಾಡುಗಳನ್ನು ಹೊಂದಲು ಸಾಧ್ಯವಾಗುತ್ತದೆ.ಇದು ಶಿಕ್ಷಕನನ್ನು ತೊಡಗಿಸುವುದರ ಮೂಲಕ ಕೋರ್ಸ್ ಗುರಿ ಮತ್ತು ಉದ್ದೇಶಗಳನ್ನು ರಚಿಸಲು, ಅಭ್ಯಾಸಿಸಲು ಹಾಗೂ ಕಾರ್ಯಕ್ರಮದ ಮೇಲೆ ಕೋರ್ಸ್‌ನ ಪರಿಣಾಮವನ್ನು ಹೆಚ್ಚಿಸಲು ಸಹಾಯಕವಾಗಿದೆ.

ರೂಪಣಾತ್ಮಕ ಮೌಲ್ಯಾಂಕನದ ಗುಣಲಕ್ಷಣಗಳು ಹಾಗೂ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಕಾರ್ಯಕ್ಷಮತೆ ಸುಧಾರಿಸುವಲ್ಲಿಇದರ ಪ್ರಮುಖ ಪಾತ್ರದ ಸಂಕ್ಷಿಪ್ತ ಸಾರಾಂಶವನ್ನು ಈಕೆಳಗೆ ಬಾಕ್ಸ್ 13.3 ರಲ್ಲಿ ನೀಡಿದೆ.

*ರೂಪಣಾತ್ಮಕ ಮೌಲ್ಯಾಂಕನ :*

- ವಿದ್ಯಾರ್ಥಿಗಳ ಪೂರ್ವಜ್ಞಾನ ಹಾಗೂ ಏನನ್ನು ಬೋಧಿಸಲಾಗಿದೆ ಎಂಬ ಅನುಭವದ ಮೇಲೆ ರಚಿಸಲಾಗಿದೆ.
- ಇದನ್ನು ನಿಯಮಿತ ಮಧ್ಯಂತರದಲ್ಲಿ ಅನೌಪಚಾರಿಕ ತಳಹದಿಯ ಮೇಲೆ ಕೈಗೊಳ್ಳಲಾಗುವುದು.
- ಇದು ಪರಿಹಾರಾತ್ಮಕ ಹಾಗೂ ನೈದಾನಿಕ.
- ಪರಿಣಾಮಕಾರಿ ಹಿಮ್ಮಾಹಿತಿಗೆ ಅವಕಾಶ ಕಲ್ಪಿಸುತ್ತದೆ.
- ವಿದ್ಯಾರ್ಥಿಗಳು ತಮ್ಮ ಸ್ವ-ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವೇದಿಕೆ ಕಲ್ಪಿಸುವುದು.
- ವಿದ್ಯಾರ್ಥಿಗಳ ಸ್ವ-ಘನತೆ ಹಾಗೂ ಆಂತರಿಕ ಅಭಿಪ್ರೇರಣೆಯನ್ನು ಉತ್ತೇಜಿಸಲು ಹಾಗೂ ಇವೆರಡೂ ಕಲಿಕಾ ಕಾರ್ಯಕ್ಷಮತೆಯ ಮೇಲೆ ಉತ್ತಮ ಪ್ರಭಾವ ಬೀರುವುದು.
- ವಿದ್ಯಾರ್ಥಿಗಳ ಉದಯೋನ್ಮುಖ ಅಗತ್ಯತೆಗಳಿಗೆ .ಸೂಕ್ತ ತರಗತಿ ಅಂತರ್ ಕ್ರಿಯಾ ತಂತ್ರಗಳಿಗೆ ಶಿಕ್ಷಕರು ಹೊಂದಿಕೊಳ್ಳಲು ಹಿಮ್ಮಾಹಿತಿ ನೀಡುವುದು.
- ವಿದ್ಯಾರ್ಥಿಗಳು ತಮ್ಮನ್ನು ತಾವು ಮೌಲ್ಯಾಂಕಿಸುವುದರ ಅಗತ್ಯತೆ ಗುರುತಿಸಲು ಮತ್ತು ಹೇಗೆ ಸುಧಾರಿಸುವುದು ಎಂದು ತಿಳಿಯಲು.
- ಏನನ್ನು ಮತ್ತು ಹೇಗೆ ಬೋಧಿಸಬೇಕು ಎಂದು ನಿರ್ಧರಿಸಲು ವಿವಿಧ ಕಲಿಕಾ ಶೈಲಿಗಳನ್ನು ಸೇರಿಸುವುದು.
- ವಿದ್ಯಾರ್ಥಿಗಳು ತಮ್ಮ ಕಾರ್ಯದ ಬಗ್ಗೆ ತೀರ್ಪುನೀಡಲು ಬಳಸುವ ಮಾನದಂಡ/ಸೂಚಕಗಳನ್ನು ತಿಳಿಯಲು ಉತ್ತೇಜಿಸುವುದು.
- ವಿದ್ಯಾರ್ಥಿಗಳು ಹಿಮ್ಮಾಹಿತಿ ಪಡೆದ ನಂತರ ತಮ್ಮ ಕಾರ್ಯವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ನೀಡುವುದು.
- ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಗೆ/ ಸಮವಯಸ್ಕರಿಗೆ ಪರಸ್ಪರ ನೆರವು ನೀಡಲು ಸಹಾಯಮಾಡುವುದು.

ಬಾಕ್ಸ್ 13.3: ರೂಪಣಾತ್ಮಕ ಮೌಲ್ಯಾಂಕನದ ಗುಣಲಕ್ಷಣಗಳು

- *ಸಂಕಲನಾತ್ಮಕ ಮೌಲ್ಯಾಂಕನ*
  *ಒಂದು ನಿರ್ದಿಷ್ಟ ಸಮಯದಲ್ಲಿ ವಿದ್ಯಾರ್ಥಿಗಳಅಭಿವೃದ್ಧಿಯನ್ನು ಒಟ್ಟುಗೂಡಿಸುವ ಅಥವಾಸಾರಾಂಶಿಸುವ/ಸಂಕ್ಷಿಪ್ತಗೊಳಿಸುವ ಕಲಿಯುವಿಕೆಯ ಮೌಲ್ಯಾಂಕನವನ್ನು ಸಂಕಲನಾತ್ಮಕಮೌಲ್ಯಾಂಕನ ಸೂಚಿಸುತ್ತದೆ. ಒಂದು ಸಮಯದಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಾಂಕಿಸುವ ಪ್ರಕ್ರಿಯೆ (ಮತ್ತು ಶ್ರೇಣೀಕರಿಸುವುದು ಅಥವಾ ರ್‍ಯಾಂಕ್ ನೀಡುವುದು) ಇದಾಗಿರುತ್ತದೆ.*

  ಸಂಕಲನಾತ್ಮಕ ಮೌಲ್ಯಾಂಕನಕ್ಕೆ ಉದಾಹರಣೆಗಳೆಂದರೆ ಪರೀಕ್ಷಿಸುವ ಪ್ರಕ್ರಿಯೆಗಳಾದ ಕೋರ್ಸ್‌ನ ಅಂತ್ಯದಲ್ಲಿ ನಡೆಸುವ ಅಥವಾ ವಾರ್ಷಿಕ ಅಥವಾ ವರ್ಷಾಂತ್ಯದಲ್ಲಿ ಕೈಗೊಳ್ಳುವ ಪರೀಕ್ಷೆಗಳಾಗಿವೆ. ಈ ಮೌಲ್ಯಾಮಾಪನ ಕಾರ್ಯಕ್ರಮದಲ್ಲಿ ಬಳಸುವ ಪರೀಕ್ಷೆಗಳನ್ನು ಸಂಕಲನಾತ್ಮಕ ಪರೀಕ್ಷೆಗಳುಎಂದು ಕರೆಯಲಾಗುತ್ತದೆ.ರೂಪಣಾತ್ಮಕ ಮೌಲ್ಯಾಂಕನವು ಸೀಮಿತವಾದ ವಿಷಯ ಅಥವಾ ಉದ್ದೇಶಗಳನ್ನು ಹೊಂದಿದೆ.ಆದರೆ ಸಂಕಲನಾತ್ಮಕ ಮೌಲ್ಯಂಕನ ಸಂಪೂರ್ಣ ಪಠ್ಯವಿಷಯವನ್ನು ಒಳಗೊಂಡಿರುತ್ತದೆ ಹಾಗೂ ಎಲ್ಲಾ ನಿರೀಕ್ಷಿತ ಕಲಿಕಾಫಲಗಳನ್ನು ಒಳಗೊಂಡಿರುತ್ತದೆ ಹಾಗೂ ಮೌಲ್ಯಾಂಕನದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಾಧನೆಯ ಒಟ್ಟಾರೆ ಚಿತ್ರಣವನ್ನು ನೀಡುತ್ತದೆ.ಕಲಿಕಾ ಬೋಧನಾ ಸನ್ನಿವೇಶದಲ್ಲಿ ಸಂಕಲನಾತ್ಮಕ ಮೌಲ್ಯಾಂಕನವನ್ನು ಇಡೀ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಯು ಎಷ್ಟು ಕಲಿತಿದ್ದಾನೆ ಎಂದು ತಿಳಿಯಲು ಹಾಗೂ ಸೂಚಿತ ಶೈಕ್ಷಣಿಕ ಮಾನದಂಡಗಳನ್ನು ಪೂರೈಸಿದ್ದಾರೆಯೇ ಎಂಬುದನ್ನು ನಿರ್ಧರಿಸಲು, ಕೋರ್ಸ್‌ನ ಅಂತ್ಯದಲ್ಲಿ ನೀಡಲಾಗುತ್ತದೆ.ಇವುಗಳನ್ನು ಔಪಚಾರಿಕವಾಗಿ ಮತ್ತು ರಸಪ್ರಶ್ನೆಗಳು, ಪ್ರಬಂಧಗಳು, ಕಿರುಪರೀಕ್ಷೆಗಳು ಅಥವಾ ಯೋಜನೆಗಳ ರೂಪದಲ್ಲಿ ನಡೆಸಲಾಗುತ್ತದೆ.ಸಂಕಲನಾತ್ಮಕ ಮೌಲ್ಯಾಂಕನದ ಗುಣಲಕ್ಷಣಗಳನ್ನು ಈ ಕೆಳಗೆ ಬಾಕ್ಸ್ 13.4ರಲ್ಲಿ ನೀಡಲಾಗಿದೆ.)

---

ಸಂಕಲನಾತ್ಮಕ ಮೌಲ್ಯಾಂಕನ :

- ಕಲಿಕಾ ಕಾರ್ಯಕ್ಷಮತೆಯ ಮೌಲ್ಯಾಂಕನವು ಕೋರ್ಸ್‌ನ ಅಂತ್ಯದಲ್ಲಿ ಅಥವಾ ಘಟಕದ ಅಂತ್ಯದಲ್ಲಿ ಕೈಗೊಳ್ಳಲಾಗುವುದೇ?
- ಸಾಮಾನ್ಯವಾಗಿ ಕೋರ್ಸ್‌ನ ಅಂತ್ಯದಲ್ಲಿ ಅಥವಾ ವರ್ಷಾಂತ್ಯದಲ್ಲಿ ವಿದ್ಯಾರ್ಥಿಗಳು ಒಟ್ಟಾರೆ ಏನನ್ನು ಕಲಿತಿದ್ದಾರೆ ಎಂದು ಪ್ರದರ್ಶಿಸಲು ಕೈಗೊಳ್ಳಲಾಗುತ್ತದೆ.
- ವಿದ್ಯಾರ್ಥಿಗಳ ಕಾರ್ಯವನ್ನು ಮೌಲ್ಯಮಾಪನ ಮಾಡಲು ಅತಿ ಸಾಂಪ್ರದಾಯಿಕ ಮೌಲ್ಯಾಂಕನ ವಿಧಾನಗಳನ್ನು ಉಪಯೋಗಿಸುವುದು.
- ವಿದ್ಯಾರ್ಥಿಗಳನ್ನು ಶ್ರೇಣೀಕರಿಸಲು ಅಥವಾ ರ್‍ಯಾಂಕ್‌ಗಳನ್ನು ನೀಡಲು ಫಲಿತಾಂಶವನ್ನು ಉಪಯೋಗಿಸಲಾಗುತ್ತದೆ. ಇದು ದೊಡ್ಡಮಟ್ಟದ ಶೈಕ್ಷಣಿಕ ಮಧ್ಯಸ್ಥಿಕೆ, ಅಂತರ್ ಅಥವಾ ಅಂತರ ಶಾಲಾಮಟ್ಟದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಹೋಲಿಕೆ ಮಾಡಲು ಬೇಕಾಗುವುದು.

---

(ಆಧಾರ : ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ:ಶಿಕ್ಷಕರ ಕೈಪಿಡಿ, ಸಿ.ಬಿ.ಎಸ್.ಇ. 2010)

### 13.4 ಸಂಕಲನಾತ್ಮಕ ಮೌಲ್ಯಾಂಕನದ ಗುಣಲಕ್ಷಣಗಳು

ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಾಂಕನದ ನಡುವಿನ ವ್ಯತ್ಯಾಸಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಉದಾಹರಿಸಲಾಗಿದೆ.

Notes

**ಕೋಷ್ಟಕ 13.2: ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಾಂಕನದ ನಡುವಿನ ವ್ಯತ್ಯಾಸಗಳು**

| ರೂಪಣಾತ್ಮಕ ಮೌಲ್ಯಾಂಕನ | ಸಂಕಲನಾತ್ಮಕ ಮೌಲ್ಯಾಂಕನ |
|---|---|
| ವಿದ್ಯಾರ್ಥಿಗಳು ಎಷ್ಟು ಕಲಿತಿದ್ದಾರೆ ಹಾಗೂ ಇನ್ನೂ ಏನನ್ನು ಕಲಿಯಬೇಕು ಎಂಬುದನ್ನು ತಿಳಿಯಲು ಬಳಸಲಾಗುತ್ತದೆ. | ಒಂದು ನಿರ್ದಿಷ್ಟ ಕೋರ್ಸ್ ್ ಅವಧಿಯಲ್ಲಿ ವಿದ್ಯಾರ್ಥಿಯ ಒಟ್ಟಾರೆ ಕಲಿಕಾ ಕಾರ್ಯಕ್ಷಮತೆಯನ್ನು ಕಂಡುಹಿಡಿಯಲು ಬಳಸಲಾಗುತ್ತದೆ. |
| ಶಿಕ್ಷಕರು ತಮ್ಮ ಬೋಧನಾ ವಿಧಾನಗಳನ್ನು ಮೌಲ್ಯಾಂಕಿಸಲು ಹಾಗೂ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳು ಪಾಠವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡಲು ಅವಕಾಶ ನೀಡುತ್ತದೆ. | ಒಂದು ವೇಳೆ ವಿದ್ಯಾರ್ಥಿಗಳು ಸರಿಯಾದ ಕಾರ್ಯಕ್ಷಮತೆ ಪ್ರದರ್ಶಿಸದೆ ಹೋದರೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ತಮ್ಮ ಬೋಧನಾ ವಿಧಾನದಲ್ಲಿ ಅಗತ್ಯ ಬದಲಾವಣೆ ಮಾಡಲು ಅವಕಾಶ ನೀಡುತ್ತದೆ. |
| ಶ್ರೇಣಿಗಳು ಹೆಚ್ಚಿನ ಮೌಲ್ಯ ಹೊಂದಿರುವುದಿಲ್ಲ | ರಾಜ್ಯವ್ಯಾಪ್ತಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ವಿದ್ಯಾರ್ಥಿಯ ಸಿದ್ಧತೆ ಹಾಗೂ ಶೈಕ್ಷಣಿಕ ವರ್ಷದಲ್ಲಿ ಅವನ/ಳ ಒಟ್ಟಾರೆ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಶ್ರೇಣಿಗಳು ಆಧಾರವಾಗಿದೆ. |
| ಬೋಧನಾ– ಕಲಿಕಾ ಪ್ರಕ್ರಿಯೆಯಲ್ಲಿ ಆಗ್ಗಾಗೆ ಬಳಸಲಾಗುವುದು. | ಕೋರ್ಸ್‌ನ ಅಂತಿಮ ಭಾಗದಲ್ಲಿ ನಿರ್ವಹಿಸಲಾಗುವುದು. |
| ಕಡಿಮೆ ಔಪಚಾರಿಕತೆಯಿಂದ ಕೂಡಿದ್ದು, ಶಾಲಾಮಟ್ಟದಲ್ಲಿ ವರ್ಗಕೋಣೆ ಶಿಕ್ಷಕ ಕೈಗೊಳ್ಳುತ್ತಾರೆ. | ಹೆಚ್ಚು ಔಪಚಾರಿಕವಾಗಿದೆ. ಶಾಲಾಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಅಥವಾ ರಾಜ್ಯ ಅಧಿಕಾರಿಗಳ ಸೂಚನೆ ಮೇರೆಗೆ ಕೈಗೊಳ್ಳಬಹುದು. |
| ವಿದ್ಯಾರ್ಥಿಗಳ ಅಗತ್ಯತೆಗಳಿಗನುಗುಣವಾಗಿ ಬದಲಾವಣೆ ಮಾಡಿಕೊಳ್ಳಬಹುದಾಗಿದೆ | ಬದಲಾವಣೆಗೆ ಅವಕಾಶವಿಲ್ಲ. ಎಲ್ಲಾ ವಿದ್ಯಾರ್ಥಿಗಳಿಗೂ ಒಂದೇ ಪರೀಕ್ಷೆ, ಹಾಗೂ ಇದನ್ನು ಕೈಗೊಳ್ಳುವುದರಲ್ಲಿ ಮತ್ತು ಪರೀಕ್ಷೆಯ ಅಂಕಗಳನ್ನು ಅರ್ಥೈಸುವ ವಿಧಾನದಲ್ಲಿ ಏಕರೂಪತೆ. |
| ಪ್ರಕ್ರಿಯಾ ಆಧಾರಿತ | ಕಲಿಕಾಫಲ ಆಧಾರಿತ. |

ಸಂಕಲನಾತ್ಮಕ ಮತ್ತು ರೂಪಣಾತ್ಮಕ ಮೌಲ್ಯಾಂಕನವು ಕಲಿಕಾ ಸಂಧರ್ಭದಲ್ಲಿ ಒಟ್ಟುಗೂಡಿಸಿದಾಗ ಇದನ್ನು ಕ್ರಮವಾಗಿ ಕಲಿಕೆಯಲ್ಲಿ ಮೌಲ್ಯಾಂಕನ ಮತ್ತು ಕಲಿಕೆಗಾಗಿ ಮೌಲ್ಯಾಂಕನ ಎಂದಾಗಿರುತ್ತದೆ.

*ಕಲಿಕೆಯ ಮೌಲ್ಯಾಂಕನವು* ಸಾಮಾನ್ಯವಾಗಿ ಒಂದು ತರಗತಿಯ, ಕೋರ್ಸ್‌ನ, ಸೆಮಿಸ್ಟರ್ ಅಥವಾ ಶೈಕ್ಷಣಿಕ ವರ್ಷದ ಅಂತ್ಯ ಭಾಗದಲ್ಲಿ ನಡೆಸುವ ಸಂಕಲನಾತ್ಮಕ ಮೌಲ್ಯಾಂಕನದ ಸ್ವರೂಪವುಳ್ಳದ್ದಾಗಿದೆ. ಹಾಗೂ ಇದು ವಿದ್ಯಾರ್ಥಿಗಳ ಕಲಿಕಾಫಲಗಳನ್ನು ಮಾಪನ ಮಾಡುವ ಉದ್ದೇಶಹೊಂದಿದೆ ಹಾಗೂ ಈ ಕಲಿಕಾಫಲಗಳನ್ನು ಪೋಷಕರು, ವಿದ್ಯಾರ್ಥಿಗಳು ಹಾಗೂ ಆಡಳಿತಾಧಿಕಾರಿಗಳಿಗೆ ವರದಿ ನೀಡುವುದಾಗಿದೆ.

*ಕಲಿಕೆಗಾಗಿ ಮೌಲ್ಯಾಂಕನ :* ಇದು ಸಾಮಾನ್ಯವಾಗಿ ರೂಪಣಾತ್ಮಕ ಸ್ವರೂಪವುಳ್ಳದಾಗಿದೆ ಮತ್ತು ಇದು ಶಿಕ್ಷಕರಿಗೆ ವಿದ್ಯಾರ್ಥಿಗಳ ಪ್ರಗತಿ ತಿಳಿಯಲು ಹಾಗೂ ಅದಕ್ಕಗನುಣವಾಗಿ ವಿಧಾನಗಳನ್ನು ಮಾರ್ಪಡಿಸಲು ಸಹಾಯಕವಾಗಿದೆ.ವಿದ್ಯಾರ್ಥಿಗಳಿಗೆ ತಮ್ಮ ಸಮವಯಸ್ಕರು/ ಸಹಪಾಠಿಗಳಿಂದ ಮತ್ತು ಶಿಕ್ಷಕರಿಂದ ದೊರೆಯುವ ಹಿಮ್ಮಾಹಿತಿಗನುಗುಣವಾಗಿ ತಮ್ಮ ಕಲಿಕಾ ಪ್ರಗತಿಯನ್ನು ನಿಯಂತ್ರಿಸಲು ಹಾಗೂ ಪುನಾರಾವರ್ತಿಸಲು ಅವಕಾಶ ಕಂಡುಕೊಳ್ಳುವುದು ಮತ್ತು ಅವರ ಆಲೋಚನೆಗಳನ್ನು ಶುದ್ಧೀಕರಣಗೊಳಿಸಲು ಸಹಾಯಕವಾಗಿದೆ.

ಆದಾಗ್ಯೂ ರೂಪಣಾತ್ಮಕ ಮೌಲ್ಯಾಂಕನವು ಸಂಕಲನಾತ್ಮಕ ಮೌಲ್ಯಾಂಕನಕ್ಕೆ ಪೂರಕವಾಗಿದೆ ಹಾಗೂ ಪ್ರತಿ ಮೌಲ್ಯಾಂಕನದ ವಿಧವು ಕಲಿಕಾ ಪ್ರಕ್ರಿಯೆಯಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ.

ಇ.3. ಅಂಕಗಳು ಸಂಕಲನಾತ್ಮಕ ಮೌಲ್ಯಾಂಕನದಲ್ಲಿ ಮುಖ್ಯವಾಗಿರುತ್ತದೆ ಹಾಗೂ ಇದು ರೂಪಣಾತ್ಮಕ ಮೌಲ್ಯಾಂಕನದಲ್ಲಿ ಮುಖ್ಯವಾಗಿರುವುದಿಲ್ಲ. ಏಕೆ? ಕಾರಣ ಕೊಡಿ.

## 13.4. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ (ಅಅಇ)

ಮೌಲ್ಯಮಾಪನವು ಕೇವಲ ವಿದ್ಯಾರ್ಥಿಗಳ ಪ್ರಗತಿ ಹಾಗೂ ಸಾಧನೆಯನ್ನು ಮಾತ್ರ ಮಾಪನ ಮಾಡುವುದಿಲ್ಲ. ಆದರೆ ಬೋಧನಾ ಕಲಿಕಾ ಸಾಮಗ್ರಿಗಳ ಪರಿಣಾಮಕತೆ ಹಾಗೂ ಪಠ್ಯಕ್ರಮ ಸಂವಹನಗಳಿಗೆ ಬಳಸುವ ವಿಧಾನಗಳನ್ನು ಪರಿಣಾಮಕತೆಯನ್ನೂ ಮಾಪನ ಮಾಡುತ್ತದೆ.ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಹೆಚ್ಚು ಸುಧಾರಿಸುವಲ್ಲಿ ಹಾಗೂ ಪರಿಣಾಮಕಾರಿಯಾಗಿ ಪ್ರಸ್ತಾವಿಸುವ ಉದ್ದೇಶಗಳಲ್ಲಿ ಮೌಲ್ಯಮಾಪನ ಪಠ್ಯಕ್ರಮದ ಒಂದು ಅವಿಭಾಜ್ಯ ಅಂಗವಾಗಿದೆ.ಆದ್ದರಿಂದ ಇದು ಕೇವಲ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಶಿಕ್ಷಕರಿಗೂ ಮುಖ್ಯವಾಗಿದೆ.

ನಾವು ಆಗಾಗ್ಗೆ ಗಮನಿಸುವುದೇನೆಂದರೆ ಮೌಲ್ಯಮಾಪನ ಅಥವಾ ಮೌಲ್ಯಾಂಕನವುಶಿಕ್ಷಕರು ನಿರ್ವಹಿಸುವ ಹಾಗೂ ವಿದ್ಯಾರ್ಥಿಗಳುಕಲಿಕೆಯ ಅಂತಿಮ ಘಟ್ಟದಲ್ಲಿ ತೆಗೆದುಕೊಳ್ಳುವ ಪರೀಕ್ಷಣಗಳಾಗಿವೆ. ಮೌಲ್ಯಮಾಪನವನ್ನು ಕಲಿಕಾ ಅಭ್ಯಾಸದ ಕೊನೆ/ಅಂತ್ಯ ಎಂದು ನೋಡುವುದಾದರೆ, ಶಿಕ್ಷಕ ವಿದ್ಯಾರ್ಥಿಗಳಿಬ್ಬರೂ ಇದನ್ನು ಬೋಧನಾ ಕಲಿಕಾ ಪ್ರಕ್ರಿಯೆಯಿಂದ ಹೊರಗಿಡುವ ಸಾಧ್ಯತೆ ಇರುತ್ತದೆ. ಆಗ ಮೌಲ್ಯಾಂಕನವು ವಿಶಾಲವಾಗಿ ಅಸಮರ್ಪಕ ಹಾಗೂ ಪಠ್ಯಕ್ರಮಕ್ಕೆ ಅಪರಿಚಿತವಾಗಿಬಿಡುತ್ತದೆ.ಜೊತೆಗೆ ಈ ರೀತಿಯ ಗ್ರಹಿಕೆ ವಿದ್ಯಾರ್ಥಿಗಳಿಗೆ ಆತಂಕ ಮತ್ತು ಒತ್ತಡ ಆಗಬಹುದು.ಇದಕ್ಕೆ ವಿರುದ್ಧವಾಗಿ ಒಂದು ವೇಳೆ ಮೌಲ್ಯಮಾಪನವನ್ನು ಬೋಧನಾ ಕಲಿಕಾ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗ ಎಂದು ನೋಡಿದರೆ, ಇದು ನಿರಂತರವಾಗಿ ಪರಿಣಮಿಸುತ್ತದೆ.ಕಲಿಕೆಯ ಪ್ರತಿ ಸಂಧರ್ಭವೂ ಮೌಲ್ಯಮಾಪನದ ಸಂದರ್ಭವಾಗಿರುತ್ತದೆ.ಇದನ್ನು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಅಳವಡಿಸಿದಾಗ ವಿದ್ಯಾರ್ಥಿಗಳು ಕಿರುಪರೀಕ್ಷೆ ಮತ್ತು ಪರೀಕ್ಷೆಗಳನ್ನು ಭಯದಿಂದ ನೋಡುವುದಿಲ್ಲ.ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳ ಬಲ ಮತ್ತು ದೌರ್ಬಲ್ಯವನ್ನು ಗುರ್ತಿಸಬಹುದು. ಒಮ್ಮೆ ವಿದ್ಯಾರ್ಥಿಗಳ ಬಲಗಳನ್ನು ಪರಿಶೋಧಿಸಿದಾಗ,ಅವರ ಕಲಿಕಾ ತೊಂದರೆಗಳನ್ನು ನಿವಾರಿಸಲು ಪರಿಹಾರವಾಗಿ ಅಥವಾ ಅವರ ಕಲಿಕಾ ಮಟ್ಟವನ್ನು ವರ್ಧಿಸಲು ಪುಷ್ಟೀಕರಣವಾಗಿ ಅನುಸರಣಾ ಕಾರ್ಯಗಳನ್ನು ತೆಗೆದುಕೊಳ್ಳಲು ಸುಲಭವಾಗುತ್ತದೆ.

ಶಾಲೆಗಳಲ್ಲಿ ಮೌಲ್ಯಮಾಪನದ ವ್ಯಾಪ್ತಿಯು ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯ ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸಿರುತ್ತದೆ.ಇದು ಪಠ್ಯ ಹಾಗೂ ಸಹಪಠ್ಯ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ ಇದನ್ನೇ ವ್ಯಾಪಕತೆ ಎನ್ನಲಾಗುತ್ತದೆ. ಉದಾ : ಗಣಿತದಲ್ಲಿ ಅಂಕಗಳು/ಶ್ರೇಣಿಗಳು ಪಠ್ಯ ಸಾಮರ್ಥ್ಯಗಳನ್ನು ಹಾಗೂ ವಿಷಯದ ಕಡೆಗೆ ವಿದ್ಯಾರ್ಥಿಯ ಮನೋಭಾವನೆಯನ್ನು ಪ್ರತಿನಿಧಿಸುತ್ತದೆ, ವಿಷಯದಲ್ಲಿನ ಆಸಕ್ತಿಯು ಸಹಪಠ್ಯ ಸಾಮರ್ಥ್ಯಗಳನ್ನು ಪ್ರತಿನಿಧಿಸುತ್ತವೆ. ಎರಡೂ ಅಂಶಗಳೂ ಒಂದಕ್ಕೊಂದು ಸಹಸಂಬಂಧ ಹೊಂದಿದೆ ಮತ್ತು ಶಿಕ್ಷಣದಗುರಿಗಳ ಸಹಯೋಗ ಹೊಂದಿರುತ್ತವೆ. ಒಂದು ವೇಳೆ ಮೌಲ್ಯಮಾಪನವು ನಿರಂತರವಾಗಿದ್ದರೆ ವಿದ್ಯಾರ್ಥಿಗಳ ಬಲ ಮತ್ತು ದೌರ್ಬಲ್ಯಗಳು ಹೆಚ್ಚು ಪ್ರಮುಖವಾಗಿದ್ದು ಅವರಿಗೆ ತಮ್ಮನ್ನು ತಾವು ಅರ್ಥೈಸಿಕೊಳ್ಳಲು ಹಾಗೂ ಸುಧಾರಿಸಿಕೊಳ್ಳಲು ಅವಕಾಶ ನೀಡುತ್ತವೆ. ಇದು ಶಿಕ್ಷಕರಿಗೆ ತಮ್ಮ ಬೋಧನಾ ವಿಧಾನ/ತಂತ್ರಗಳಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಲು ಹಿಮ್ಮಾಹಿತಿ ನೀಡುತ್ತದೆ.

### 13.4.1 ಸಿ.ಸಿ.ಇನ ಪರಿಕಲ್ಪನೆ, ಪ್ರಕ್ರಿಯೆ ಮತ್ತು ಅಗತ್ಯತೆಗಳು

ಶಿಕ್ಷಣದ ಪ್ರಮುಖ ಉದ್ದೇಶ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದಾಗಿದೆ.ಆದ್ದರಿಂದ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು (ಅಅಇ) ವಿದ್ಯಾರ್ಥಿಗಳ ಜ್ಞಾನಾತ್ಮಕ, ಭಾವನಾತ್ಮಕ ಹಾಗೂ ಮನಶ್ಚಾಲಿತ ಬೆಳವಣಿಗೆಗೆ ಸಂಬಂಧಿಸಿದಂತೆ ಕೈಗೊಳ್ಳಬೇಕು.ಜ್ಞಾನಾತ್ಮಕ ಬೆಳವಣಿಗೆ ಎಂದರೆ ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಯಾಗಿದೆ (ಅವುಗಳೆಂದರೆ ಜ್ಞಾನ, ಅರ್ಥೈಸುವಿಕೆ/ತಿಳುವಳಿಕೆ,ಅನ್ವಯ, ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಮೌಲ್ಯಮಾಪನ).ಭಾವನಾತ್ಮಕ ಬೆಳವಣಿಗೆ ಎಂದರೆ ವಿದ್ಯಾರ್ಥಿಗಳ ಮನೋಭಾವನೆ, ಆಸಕ್ತಿ ಮತ್ತು ವೈಯಕ್ತಿಕ ಅಭಿವೃದ್ಧಿ. ಮನಶ್ಚಾಲಿತ ಬೆಳವಣಿಗೆಯುವಿದ್ಯಾರ್ಥಿಗಳಲ್ಲಿನಕೆಲವು ಚಟುವಟಿಕೆಗಳನ್ನು ಮಾಡುವ ಸಾಮರ್ಥ್ಯ ಅಥವಾ ಕೆಲವು ಪ್ರಾಯೋಗಿಕಚಟುವಟಿಕೆಗಳನ್ನು ಮಾಡುವುದಕ್ಕೆ ಸಂಬಂಧಿಸಿದೆ.ಆದ್ದರಿಂದ,ಕಲಿಕಾ ಬೋಧನಾ ಪ್ರಕ್ರಿಯೆಯು ಸರ್ವತೋಮುಖ ಅಭಿವೃದ್ಧಿಯನ್ನು ಖಾತ್ರಿಪಡಿಸುವುದಾಗಿದ್ದರೆ, ವಿದ್ಯಾರ್ಥಿಗಳ ಮೌಲ್ಯಮಾಪನವು ನಿರಂತರ ಹಾಗೂ ವ್ಯಾಪಕವಾಗಿರಬೇಕು.

Notes

ಶಿಕ್ಷಣದಲ್ಲಿ ಗುಣಮಟ್ಟವನ್ನು ಸುಧಾರಿಸಲು ಹಾಗೂ ಮಗುವಿನಲ್ಲಿ ಸರ್ವತೋಮುಖ ಅಭಿವೃದ್ಧಿ ತರಲು, ಮೌಲ್ಯಮಾಪನ ಪ್ರಕ್ರಿಯೆಯು ಪಠ್ಯ ಮತ್ತು ಸಹಪಠ್ಯ ಕ್ಷೇತ್ರಗಳ ಅಭಿವೃದ್ಧಿಗೆ ಸಾಕಷ್ಟು ಒತ್ತು ನೀಡಬೇಕಾಗುತ್ತದೆ.ವ್ಯಾಪಕ ಮೌಲ್ಯಾಂಕನವು ಶೈಕ್ಷಣಿಕ ವರ್ಷದುದ್ದಕ್ಕೂ ನಿಯಮಿತವಾದ ಕಾಲಗಳಲ್ಲಿ ನಿರಂತರತೆಯಿಂದ ಸಾಗುವ ಅಗತ್ಯವಿದೆ.

ಈಗ ಪ್ರಾಥಮಿಕ ಶಾಲೆಯಲ್ಲಿ ನಡೆಯುವ ಮೌಲ್ಯಮಾಪನ ಅಭ್ಯಾಸ ಪ್ರಕ್ರಿಯೆಯನ್ನು ವಿಶ್ಲೇಷಿಸೋಣ ಹಾಗೂ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸೋಣ.

- ಮಗು ಏನನ್ನು ತಿಳಿದಿದೆ ಹಾಗೂ ಅವನು/ಳು ಏನನ್ನು ತನ್ನ ನಿಜಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ ಎಂಬುದರ ಸಂಪೂರ್ಣ ಚಿತ್ರಣವನ್ನು ಇದು ನೀಡುತ್ತದೆಯೇ?
- ಇದು ವಿದ್ಯಾರ್ಥಿಗಳ ಸಾಮರ್ಥ್ಯಗಳ ಬಗ್ಗೆ ಏನನ್ನಾದರೂ ಹೇಳವುದೇ?
- ಇದು ಶಿಕ್ಷಕರಾಗಿ ನಮಗೆ ಏನಾದರೂ ಒಳ್ಳೆಯದನ್ನು ಮಾಡಲು ಇದು ಸಹಾಯ ಮಾಡುತ್ತದೆಯೇ?
- ಶಿಕ್ಷಕರು ಮತ್ತು ಯೋಜನೆ ತಯಾರಕರಿಗೆ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮೌಲ್ಯಮಾಪನದ ಫಲಿತಾಂಶವು ಸಹಾಯಕವಾಗುವುದೇ?

ಈ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರ ಸಿಗದಿರುವುದು ನಿಮಗೆ ತಿಳಿಯುತ್ತದೆ.ಅಅಇ ನ ಅಗತ್ಯತೆ ಸಹಜವಾಗಿದ್ದು ಹಾಗೂ ಅಅಇ ಅಗತ್ಯತೆ ಹೀಗೆ ಹೇಳಬಹುದು :

- ಶಿಕ್ಷಣದ ಪಠ್ಯ ಹಾಗೂ ಸಹಪಠ್ಯ ಅಂಶಗಳ ಮೌಲ್ಯಾಂಕನದ ಮೂಲಕ ವಿದ್ಯಾರ್ಥಿಯ ಸರ್ವತೋಮುಖ ಕೃತಿಸಂಪುಟ(ಠಿಡಿಂಜಿಟಚಿ)ವನ್ನು ನೀಡುವುದು.
- ವಿವಿಧ ಸಂಧರ್ಭದಲ್ಲಿ ವಿದ್ಯಾರ್ಥಿಗಳ ಗುಪ್ತ ಪ್ರತಿಭೆಗಳನ್ನು ಗುರುತಿಸುವುದು.
- ವಿದ್ಯಾರ್ಥಿಗಳ ಸಾಧನೆಯನ್ನು ಹೆಚ್ಚಿಸಲು ಸೂಕ್ತ ವಿಧಾನಗಳನ್ನು ಗುರುತಿಸುವುದು.
- ಶಾಲೆಗಳನ್ನು ಸುಧಾರಿಸಲು ವ್ಯಾಪಕ ಮೌಲ್ಯಮಪನ ಕಾರ್ಯಕ್ರಮವನ್ನು ಯೋಚಿಸುವುದು.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಸೂಕ್ತ ಸಾಧನಗಳು ಮತ್ತು ತಂತ್ರಗಳನ್ನು ಸಲಹಿಸುವುದು.
- ಶಾಲೆ ಮತ್ತು ವಿದ್ಯಾರ್ಥಿಗಳನ್ನು ನಿರಂತರವಾಗಿ ಸುಧಾರಿಸಲು ಮೌಲ್ಯಮಾಪನವನ್ನು ಒಂದು ಸಾಧನವನ್ನಾಗಿ ಬಳಸುವುದು.
- ಶಾಲಾ ಆಡಳಿತಗಾರರು, ಪೋಷಕರು ಹಾಗೂ ಸಮುದಾಯವು ಅಅಇ ಬಗ್ಗೆ ಸಂವೇದನೆಗೊಳ್ಳಲು ಮಾರ್ಗಗಳು ಹಾಗೂ ತಂತ್ರಗಳನ್ನು ಸೂಚಿಸುವುದು.

*(ಆಧಾರ : ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ : ಶಿಕ್ಷಕರ ಕೈಪಿಡಿ, ಸಿ.ಬಿ.ಎಸ್.ಇ. 2010)*

'ನಿರಂತರ' ಎಂಬ ಪದವು ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ವಿಕಾಸದ ಗುರುತಿಸಲ್ಪಟ್ಟ ಅಂಶಗಳ ಮೌಲ್ಯಮಾಪನವಾಗಿದ್ದು, ಇದು ನಿರಂತರ ಪ್ರಕ್ರಿಯೆಯಾಗಿದೆ.ಇದು ಒಟ್ಟಾರೆ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ರಚಿಸಲು ಹಾಗೂ ಇಡೀ ಶೈಕ್ಷಣಿಕ ವರ್ಷದುದ್ದಕ್ಕೂ ಹರಡುವಂತೆ ಮಾಡಲು ಸಹಾಯಕ.ಇದರ ಅರ್ಥ ಮೌಲ್ಯಾಂಕನದ ನಿಯಮಿತತೆ,ಘಟಕ ಪರೀಕ್ಷೆಗಳ ಆವರ್ತನೆ,ಕಲಿಕಾ ಅಂತರಗಳನ್ನು ಪತ್ತೆಹಚ್ಚುವಿಕೆ, ತಿದ್ದುವ/ಸರಿಪಡಿಸುವಮಾಪನಗಳ ಬಳಕೆ, ಪುನರ್‌ಪರೀಕ್ಷೆ ಮತ್ತು ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಸ್ವಮೌಲ್ಯಮಾಪನದ ಹಿಮ್ಮಾಹಿತಿಗೆ ಸಾಕ್ಷ್ಯಾಧಾರಗಳು.

Notes

## ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು

'ವ್ಯಾಪಕತೆ'ಎಂಬ ಶಬ್ದದ ಅರ್ಥವೇನೆಂದರೆ ಇದು ಮೌಲ್ಯಮಾಪನ ಪ್ರಕ್ರಿಯೆಯಾಗಿದ್ದು, ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ವಿಕಾಸದ ಪಠ್ಯ ಹಾಗೂ ಸಹಪಠ್ಯ ಅಂಶಗಳೆರಡನ್ನೂ ಒಳಗೊಳ್ಳುವ ಪ್ರಯತ್ನ ಮಾಡುತ್ತದೆ. ಸಾಮರ್ಥ್ಯಗಳು, ಆಸಕ್ತಿ, ಮನೋಭಾವನೆಗಳು, ಹಾಗೂ ಮನೋವೃತ್ತಿಗಳು ವಿವಿಧ ರೂಪ ಹಾಗೂ ಚಟುವಟಿಕೆಗಳಲ್ಲಿ ಪ್ರದರ್ಶಿಸುತ್ತವೆ/ಸ್ಪಷ್ಟವಾಗಿರುತ್ತವೆ. ಈ ಶಬ್ದವು ವೈವಿಧ್ಯ ಸಾಧನಗಳು, ತಂತ್ರಗಳ ಅನ್ವಯ(ಪರೀಕ್ಷೆ ಮತ್ತು ಪರೀಕ್ಷೆಯಲ್ಲದ) ಮತ್ತು ಕಲಿಕಾ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಮೌಲ್ಯಾಂಕಿಸುವಗುರಿಯನ್ನು ಹೊಂದಿದೆ, ಅವುಗಳೆಂದರೆ ತಿಳಿಯುವುದು, ಅರ್ಥೈಸುವುದು, ಅನ್ವಯಿಸುವುದು, ವಿಶ್ಲೇಷಿಸುವುದು, ಮೌಲ್ಯಮಾಪನ ಮಾಡುವದು,ಸೃಷ್ಟಿಸುವುದು ಮತ್ತು ನಾವಿನ್ಯತೆ ಇತ್ಯಾದಿ.

ಆದ್ದರಿಂದ ಸಿಸಿಇ(ಅಅಇ) ಅನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಬಹುದು:

ಸಿ.ಸಿ.ಇ.ಯು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಬೆಳಸಲು, ವಿವಿಧ ಕ್ಷೇತ್ರಗಳಾದ ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಮನಶ್ಚಾಲಿತ ವಲಯಗಳಲ್ಲಿ, ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳೆರಡರ ಮೂಲಕ ವಿದ್ಯಾರ್ಥಿಗಳ ಕಲಿಕಾ ಕಾರ್ಯಕ್ಷಮತೆಯನ್ನು ಖಾತ್ರಿಪಡಿಸುವ ಪ್ರಕ್ರಿಯೆಯಾಗಿದೆ.

ಸಿ.ಸಿ.ಇ.ನ ಗುಣಲಕ್ಷಣಗಳು ಯಾವುವೆಂದರೆ :

- ವಿದ್ಯಾರ್ಥಿಗಳ ವಿಕಾಸದ ಎಲ್ಲಾ ಅಂಶಗಳನ್ನೊಳಗೊಂಡ ಶಾಲಾಆಧರಿತ ಮೌಲ್ಯಮಾಪನವಾಗಿದೆ.
- ಸಿ.ಸಿ.ಇ.ನ ನಿರಂತರತೆ ಅಂಶವು ಮೌಲ್ಯಮಾಪನದ ಆವರ್ತನ ಮತ್ತು ನಿರಂತರ ಅಂಶಗಳ ಬಗ್ಗೆ ಎಚ್ಚರಿಕೆ ವಹಿಸುತ್ತದೆ.
- ನಿರಂತರತೆಯ ಅರ್ಥ, ಬೋಧನೆ ಆರಂಭದಲ್ಲಿ ವಿದ್ಯಾರ್ಥಿಗಳ ಮೌಲ್ಯಾಂಕನ (ಸ್ಥಾನಿಕ ಮೌಲ್ಯಾಂಕನ) ಮತ್ತು ಬೋಧನೆಯ ಪ್ರಕ್ರಿಯೆ ಸಂದರ್ಭದಲ್ಲಿಬಹುವಿಧ ತಂತ್ರಗಳನ್ನು ಅನೌಪಚಾರಿಕವಾಗಿ ಬಳಸಿ ಮಾಡುವ (ರೂಪಣಾತ್ಮಕ ಮೌಲ್ಯಮಾಪನ) ಮೌಲ್ಯಮಾಪನವಾಗಿದೆ.
- ಆವರ್ತನ ಎಂದರೆ ಘಟಕ ಅವಧಿಯ ಅಂತ್ಯದಲ್ಲಿ/ ವರ್ಷಾಂತ್ಯದಲ್ಲಿಕೆಲವು ಮಾನದಂಡಗಳನ್ನು ಬಳಸಿ ಕೈಗೊಳ್ಳುವ ಕಾರ್ಯಕ್ಷಮತೆಯ ಮೌಲ್ಯಾಂಕನ (ಅದೇನೆಂದರೆ ಉದ್ದೇಶಧಾರಿತ ಕಾರ್ಯಕ್ಷತೆಯ ಸ್ವೀಕಾರಾರ್ಹ ಮಟ್ಟ)ವಾಗಿದೆ.
- ಸಿ.ಸಿ.ಇ.ನ 'ವ್ಯಾಪಕತೆ' ಅಂಶವು ಮುಗುವಿನ ವ್ಯ ಕ್ತಿತ್ವದ ಸರ್ವತೋಮುಖ ವಿಕಾಸದ ಮೌಲ್ಯಾಂಕವನ್ನು ಮಾಡುತ್ತದೆ. ಇದು ಮುಗುವಿನ ಬೆಳವಣಿಗೆಯ ಪಠ್ಯ ಹಾಗೂ ಸಹಪಠ್ಯ ಅಂಶಗಳ ಮೌಲ್ಯಾಂಕನವನ್ನು ಒಳಗೊಂಡಿದೆ.
- ಪಠ್ಯ ಅಂಶಗಳು ವಿಷಯದ ನಿರ್ಧಿಷ್ಠ ಕ್ಷೇತ್ರಗಳನ್ನು ಒಳಗೊಂಡಿದ್ದರೆ, ಸಹಪಠ್ಯ ಅಂಶಗಳು ವೈಯಕ್ತಿಕ-ಸಾಮಾಜಿಕ ಗುಣಗಳು, ಪಠ್ಯೇತರ ಚಟುವಟಿಕೆಗಳು, ಮನೋಭಾವನೆಗಳು ಮತ್ತು ಮೌಲ್ಯಗಳನ್ನು ಒಳಗೊಂಡಿದೆ..
- ಪಠ್ಯ ಕ್ಷೇತ್ರಗಳು ಮೌಲ್ಯಾಂಕನವನ್ನು ನಿರಂತರವಾಗಿ ಹಾಗೂ ಆವರ್ತನೀಯವಾಗಿ ಮೌಲ್ಯಮಾಪನದ ಬಹುತಂತ್ರಗಳನ್ನು ಬಳಸಿ ಔಪಚಾರಿಕ ಹಾಗೂ ಅನೌಪಚಾರಿಕವಾಗಿ ಮಾಡಲಾಗುತ್ತದೆ. ನೈದಾನಿಕ ಮೌಲ್ಯಮಾಪನವು ಘಟಕ/ ಅವಧಿಯ ಅಂತ್ಯದಲ್ಲಿ ಪರೀಕ್ಷೆಯಾಗಿ ನಡೆಯುತ್ತದೆ. ಕೆಳಮಟ್ಟದ/ಕಳಪೆ ಕಾರ್ಯಕ್ಷಮತೆಯ ಕ್ಷೇತ್ರಗಳು ಹಾಗೂ ಕೆಳಮಟ್ಟದ ಕಾರ್ಯಕ್ಷಮತೆಗೆ ಕಾರಣಗಳನ್ನು ನೈದಾನಿಕ ಪರೀಕ್ಷೆಗಳಿಂದ ಪತ್ತೆಹಚ್ಚಲಾಗುತ್ತದೆ.ಇವು ಪುನರ್ ಪರೀಕ್ಷೆಯ ನಂತರ ಸಮರ್ಪಕ ಮಧ್ಯಸ್ಥಿಕೆಗಳನ್ನು ಅನುಸರಿಸಲಾಗುತ್ತದೆ.
- ಸಹಪಠ್ಯ ಕ್ಷೇತ್ರಗಳ ಮೌಲ್ಯಾಂಕನವನ್ನು ಗುರ್ತಿಸಲ್ಪಟ್ಟ ಮಾನದಂಡಗಳ ಆಧಾರದ ಮೇಲೆ ಬಹುತಂತ್ರಗಳನ್ನು ಬಳಸಿ ಮಾಡಲಾಗುತ್ತದೆ. ಆದರೆ ವೈಯಕ್ತಿಕ-ಸಾಮಾಜಿಕ ಗುಣಗಳನ್ನು ಮೌಲ್ಯಾಂಕನ ಮತ್ತು ತಾಳೆಪಟ್ಟಿಗಳ ಸೂಚಕಗಳ ಆಧಾರದ ಮೇಲೆ ಮಾಡಲಾಗುತ್ತದೆ.ಸಿ.ಸಿ.ಇ.ನ ಉದ್ದೇಶಗಳನ್ನು ಪರಿಗಣಿಸೋಣ.

(ಆಧಾರ : ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ:ಶಿಕ್ಷಕರ ಕೈಪಿಡಿ, ಸಿ.ಬಿ.ಎಸ್.ಇ. 2010)

Notes

ಸಿ.ಸಿ.ಇ.ನ ಉದ್ದೇಶಗಳು ಯಾವುವೆಂದರೆ :

- ವಿದ್ಯಾರ್ಥಿಗಳ ವ್ಯಕ್ತಿತ್ವದ ಅಂಶಗಳಾದ ಜ್ಞಾನಾತ್ಮಕ, ಭಾವನಾತ್ಮಕ ಹಾಗೂ ಮನಶ್ಚಾಲಿತ ಅಂಶಗಳನ್ನು ಬೆಳಸಲು ಸಹಾಯಮಾಡುವುದು.
- ಯೋಚನಾ/ಚಿಂತನಾ ಪ್ರಕ್ರಿಯೆಯನ್ನು ಉತ್ತೇಜಿಸುವುದು ಹಾಗೂ ಯಾಂತ್ರಿಕ ಸ್ಮೃತಿಯನ್ನು ನಿರುತ್ತೇಜಿಸುವುದು.
- ಮೌಲ್ಯಮಾಪನವನ್ನು ಬೋಧನಾ ಕಲಿಕಾ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡುವುದು.
- ಮೌಲ್ಯಮಾಪನವನ್ನು ವಿದ್ಯಾರ್ಥಿಗಳ ಸಾಧನೆ ಮತ್ತು ಬೋಧನಾ ಕಲಿಕಾ ತಂತ್ರಗಳನ್ನು ಸುಧಾರಿಸಲು ಬಳಸುವುದು. ಇದನ್ನು ನಿಯಮಿತವಾಗಿ ಪತ್ತೆಹಚ್ಚಿ, ಪರಿಹಾರ ಬೋಧನೆಯನ್ನು ಅನುಸರಿಸುವುದು.
- ವಿದ್ಯಾರ್ಥಿಗಳ ನೈಜ ಕಾರ್ಯಕ್ಷಮತೆ ಮತ್ತು ಅಪೇಕ್ಷಿತ ಕಾರ್ಯಕ್ಷಮತೆ ನಡುವಿನ ಅಂತರವನ್ನು ತುಂಬಲು ಮತ್ತು ಅಪೇಕ್ಷಿತ ಕಾರ್ಯಕ್ಷಮತೆಯ ಮಟ್ಟವನ್ನು ನಿರ್ವಹಿಸಲು ಮೌಲ್ಯಮಾಪನವನ್ನು ಗುಣಮಟ್ಟನಿಯಂತ್ರಿತ ಸಾಧನವನ್ನಾಗಿ ಬಳಸುವುದು.
- ವಿದ್ಯಾರ್ಥಿ, ಕಲಿಕಾ ಪ್ರಕ್ರಿಯೆ ಮತ್ತು ಕಲಿಕಾ ಪರಿಸರದ ಬಗ್ಗೆ  ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವುದು.
- ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ಕಲಿಕಾ ಕೇಂದ್ರಿತ ಚಟುವಟಿಕೆಯನ್ನಾಗಿ ಮಾಡುವುದು.

ಬಾಕ್ಸ್ 13.5 ಸಿ.ಸಿ.ಇ.ನ ಉದ್ದೇಶಗಳು

ಆದ್ದರಿಂದ ಸಿ.ಸಿ.ಇ.ನ ಪ್ರಧಾನ ಪ್ರಾಮುಖ್ಯತೆಯು ವಿದ್ಯಾರ್ಥಿಗಳ ಜ್ಞಾನಾತ್ಮಕ, ಭೌತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮೂಲಕ ನಿರಂತರ ಬೆಳವಣಿಗೆ ಸಾಧಿಸುವುದಾಗಿದೆ ಎಂದು ನಾವು ಹೇಳಬಹುದು. ಆದ್ದರಿಂದ ಮೌಲ್ಯಮಾಪನವು ಕೇವಲ ವಿದ್ಯಾರ್ಥಿಗಳ ಪಠ್ಯ ಚಟುವಟಿಕೆಯ ಗಳಿಕೆಗಳನ್ನು ಮಾತ್ರ ಮೌಲ್ಯಾಂಕನ ಮಾಡುವ ಮಿತಿ ಹೊಂದಿರುವುದಿಲ್ಲ. ಸಿ.ಸಿ.ಇ.ಯುಕಲಿಕೆಯನ್ನು ಸುಧಾರಿಸಲು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ತಮ್ಮ ಪ್ರಯತ್ನಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಲು ಹಿಮ್ಮಾಹಿತಿ ನೀಡುವ ಒಂದು ವಿಧಾನವಾಗಿ ಮೌಲ್ಯಾಂಕನವನ್ನು ಬಳಸುತ್ತದೆ. ಇದು ವಿದ್ಯಾರ್ಥಿಗಳನ್ನು ಅಭಿಪ್ರೇರಿಸುವುದರ ಜೊತೆಗೆ,ಅವರ ಕೃತಿಸಂಪುಟ(ಠಿಡಿಂಜಿಟಟಜ)ದ ವ್ಯಾಪಕ ಚಿತ್ರಣವನ್ನು ನೀಡುತ್ತದೆ.

ಇ4. ಒಬ್ಬ ಶಿಕ್ಷಕನಾಗಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಾಂಕಿಸುವಾಗ, ಏನನ್ನು ಮಾಡಬೇಕು ಹಾಗೂ ಏನನ್ನು ಮಾಡಬಾರದೆಂದು ಬಯಸುವಿರಿ?

## 13.4.1 ಸಿ.ಸಿ.ಇ.ಗೆ ಪರಿಮಾಣಾತ್ಮಕಮತ್ತು ಗುಣಾತ್ಮಕ ದತ್ತಾಂಶಗಳ ಬಳಕೆ

ಮೌಲ್ಯಮಾಪನ ವಿಧಾನಗಳ ಮತ್ತು ಅವುಗಳಿಂದ ಉತ್ಪತ್ತಿಯಾಗುವ ದತ್ತಾಂಶವನ್ನು ಎರಡು ಮೂಲ ಗುಂಪುಗಳನ್ನಾಗಿ ಮಾಡಲಾಗಿದೆ, ಪರಿಮಾಣಾತ್ಮಕ ಮತ್ತು ಗುಣಾತ್ಮಕ. ಸಾಮಾನ್ಯವಾಗಿ ಪರಿಮಾಣಾತ್ಮಕ ವಿಧಾನಗಳು ಕೇವಲ ಅಂಕಗಳನ್ನು ನೀಡುತ್ತವೆ ಆ ಹಾಗೆಯೇ ಗುಣಾತ್ಮಕ ವಿಧಾನಗಳು ವರ್ಣನಾತ್ಮಕ ದತ್ತಾಂಶವನ್ನು ನೀಡುತ್ತವೆ.ಆದರೆ ನೀವು ಬಳಸುವ ವಿಧಾನ(ಗಳು) ನಿಮ್ಮ ಮೌಲ್ಯಮಾಪನದ ಉದ್ದೇಶ(ಗಳು) ಹಾಗೂ ನೀವು ತಯಾರಿಸುವ ಸಂಪನ್ಮೂಲಗಳು ಮತ್ತು ಬಳಕೆಯಿಂದ ನಿರ್ಧರಿಸಲ್ಪಡುತ್ತದೆ.
ಶಿಕ್ಷಕರು ಏನು ಮಾಡುತ್ತಾರೆ?ಅವರಿಗೆ ಅಂಕಗಳು ಮತ್ತು ಅಂಕಗಳ ವರ್ಣನಾ ವಿವರಣೆ ಎರಡೂ ಬೇಕಾಗಿದೆ.ಆದ್ದರಿಂದಪರಿಮಾಣಾತ್ಮಕ ಮತ್ತು ಗುಣಾತ್ಮಕ ತಂತ್ರಗಳೆರಡೂ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಉತ್ಕೃಷ್ಟವಾದ ಮತ್ತು ಹೆಚ್ಚು ವ್ಯಾಪಕತೆಯಿಂದ ಕೂಡಿದ ಅರ್ಥೈಸುವಿಕೆಗಳನ್ನು ವಿವಿಧ ವಿಷಯಗಳಲ್ಲಿ ನೀಡುತ್ತದೆ.

## ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು

ತೀರಾ ತಳಮಟ್ಟದಲ್ಲಿ, ದತ್ತಾಂಶವು ಅಂಕಗಳ ರೂಪದಲ್ಲಿದ್ದರೆ ಪರಿಮಾಣಾತ್ಮಕ ಎಂದು ಪರಿಗಣಿಸಲ್ಪಡುತ್ತದೆ.ಒಂದು ವೇಳೆ ದತ್ತಾಂಶವು ವಿವರಣಾ ರೂಪದಲ್ಲಿದ್ದರೆ ಗುಣಾತ್ಮಕ ಎಂದು ಕರೆಯಲ್ಪಡುತ್ತದೆ.ಆದಗ್ಯೂ ಗುಣಾತ್ಮಕ ದತ್ತಾಂಶವು ಭಾವಚಿತ್ರಗಳು, ವಿಡಿಯೋ, ಧ್ವನಿಮುದ್ರಣ ಹಾಗೂ ಇನ್ನಿತರ ಬರಹರೂಪವಲ್ಲದ ದತ್ತಾಂಶವನ್ನೂ ಒಳಗೊಂಡಿರುತ್ತದೆ.ಉದಾ: 'ತರಗತಿ 5 ರಲ್ಲಿ ಸೋಮ ಎಂಬ ವಿದ್ಯಾರ್ಥಿಯು ಗಣಿತ ವಿಷಯದಲ್ಲಿ 100 ಕ್ಕೆ 80 ಅಂಶಗಳನ್ನು ಪಡೆದಿರುತ್ತಾನೆ'.ಇದು ಸೋಮನ ಬಗ್ಗೆ ಗಣಿತದಲ್ಲಿ ಪರಿಮಾಣಾತ್ಮಕ ಚಿತ್ರಣವನ್ನು ಸೂಚಿಸುತ್ತದೆ. ಆದರೆ ನೀವು ಈ ಕೆಳಕಂಡಂತೆ ಹೇಳುವಾಗ 'ಬಾಪು ನೃತ್ಯದಲ್ಲಿ ಚೆನ್ನಾಗಿ ಮಾಡುತ್ತಾನೆ' ,'ಮಹೇಶನಕೈಬರವಣಿಗೆ ಅತ್ಯುತ್ತಮವಾಗಿದೆ' ಅಥವಾ 'ಅಕ್ಷಯ ತಾನು ಹಾಡುವಾಗ ಪ್ರತಿಯೊಬ್ಬರನ್ನು ಆಕರ್ಷಿಸುತ್ತಾಳೆ' ಎಂದಾದರೆ, ಇವುಗಳು ಆ ವಿದ್ಯಾರ್ಥಿ ಗಳ ಗುಣಾತ್ಮಕ ಮಾಹಿತಿಯನ್ನು ನೀಡುತ್ತದೆ.

ದತ್ತಾಂಶವನ್ನು ಸಂಗ್ರಹಿಸುವಲ್ಲಿ ವಿವಿಧ ವಿಧಾನಗಳಿವೆ. ಕೆಲವು ವಿಧಾನಗಳು ಪರಿಮಾಣಾತ್ಮಕ ದತ್ತಾಂಶವನ್ನು ನೀಡಿದರೆ ಇನ್ನೂ ಕೆಲವು ವಿಧಾನಗಳು ಗುಣಾತ್ಮಕ ದತ್ತಾಂಶವನ್ನು ನೀಡುತ್ತವೆ. ಪರಿಮಾಣಾತ್ಮಕ ವಿಧಾನಗಳು (ಉದಾ: ಪ್ರಯೋಗಗಳು, ಪ್ರಶ್ನಾವಳಿಗಳು, ಮನೋವೈಜ್ಞಾನಿಕ ಪರೀಕ್ಷೆಗಳು ಮುಂತಾದವು) ಇದು ಅರ್ಥಮತ್ತು ಅನುಭವದಿಂದ ದೊರೆಯುವ ಮಾಹಿತಿಯನ್ನು ನೀಡುವ ಬದಲು ಅಂಕಗಳು ಮತ್ತು ಆವರ್ತನಗಳನ್ನು ಕೇಂದ್ರೀಕರಿಸುತ್ತದೆ. ಅಂಕಿಗಳನ್ನು ಸುಲಭವಾಗಿ ಚೆನ್ನಾಗಿ ಸಂಖ್ಯಾಶಾಸ್ತ್ರೀಯವಾಗಿ ವಿಶ್ಲೇಷಿಸಲು ಸಾಧ್ಯವಾಗಿದ್ದು, ಅವುಗಳು ಸಮಂಜಸವಾಗಿಯೂ ಇರುತ್ತವೆ. ಆದರೆ ಬಹಳ ಪ್ರಯಾಸದಿಂದ ಆಳವಾಗಿ ವಿವರಿಸುತ್ತವೆ.ಗುಣಾತ್ಮಕ ವಿಧಾನಗಳು(ಉದಾ: ವ್ಯಕ್ತಿ ಅಧ್ಯಯನ ಮತ್ತು ಸಂದರ್ಶನಗಳು ಮುಂತಾದವು) ಇವುಗಳು ಹೆಚ್ಚಿನ ಆಳವಾದ ಮತ್ತು ಸಂಪದ್ಭರಿತವಾದ ಸಂಖ್ಯಾಶಾಸ್ತ್ರಿಯ ತೀರ್ಮಾನಗಳನ್ನು ನೀಡುವುದಕ್ಕಿಂತ ಹೆಚ್ಚು ಆಳವಾದ ಮತ್ತು ಉತ್ಕೃಷ್ಟ ಅರ್ಥವಿವರಣೆಗೆ ಹೆಚ್ಚು ಒತ್ತು ನೀಡುತ್ತವೆ, ಆದರೆ ಇದು ವ್ಯಕ್ತಿನಿಷ್ಠವಾಗಿರುತ್ತದೆ.

ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳನ್ನು ಸಂಗ್ರಹಿಸಲು ಮತ್ತು ವಿಶ್ಲೇಷಿಸಲು ವಿವಿಧ ಸಾಧನಗಳು ಮತ್ತು ತಂತ್ರಗಳನ್ನು ಬಳಸಲಾಗುತ್ತದೆ.ಇದನ್ನು ಕೆಳಗಿನ ಕೋಷ್ಟಕ 13.3 ರಲ್ಲಿ ನೀಡಲಾಗಿದೆ.

ಕೋಷ್ಟಕ 13.3 : ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳನ್ನು ವಿಶ್ಲೇಷಿಸಲು ಸಾಧನಗಳು ಮತ್ತು ತಂತ್ರಗಳು

| ಪರಿಮಾಣಾತ್ಮಕ | ಗುಣಾತ್ಮಕ |
|---|---|
| • ಸಾಧನಾ ಪರೀಕ್ಷೆಗಳು<br>• ಸಮೀಕ್ಷೆಗಳು<br>• ಪ್ರಶ್ನಾವಳಿಗಳು<br>• ಪೂರ್ವ/ಉತ್ತರ ಕಿರುಪರೀಕ್ಷೆಗಳು<br>• ಲಭ್ಯವಿರುವ/ಅಸ್ತಿತ್ವದಲ್ಲಿರುವ ದತ್ತಾಂಶಗಳು | • ವೀಕ್ಷಣೆ, ಸಂದರ್ಶನ, ಕೃತಿಸಂಪುಟ, ವ್ಯಕ್ತಿ ಅಧ್ಯಯನ, ಯೋಜನೆ, ನಿಯೋಜಿತಕಾರ್ಯ<br>• ಕೇಂದ್ರಿತ ಗುಂಪು ಚರ್ಚೆ<br>• ಕ್ಷೇತ್ರ ಟಿಪ್ಪಣಿಗಳು, ದಿನಚರಿಗಳು,<br>• ವಿಡಿಯೋ, ಧ್ವನಿ ಮುದ್ರಣಗಳು, ಭಾವಚಿತ್ರಗಳು<br>• ದಾಖಲೆಗಳು (ವರದಿಗಳು, ಸಭಾ ಚರ್ಚಾ ಸಂಕ್ಷಿಪ್ತ ವರದಿ, ಮುಂತಾದವು) |

**ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳು ಹೇಗೆ ಭಿನ್ನವಾಗಿದೆ ?**

ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳ ನಡುವಿನ ವ್ಯತ್ಯಾಸವನ್ನು ಈ ಕೆಳಗಿನ ಕೋಷ್ಟಕ 13.4 ರಲ್ಲಿ ನೀಡಲಾಗಿದೆ

Notes

Notes

**ಕೋಷ್ಟಕ 13.4 : ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳ ನಡುವಿನ ವ್ಯತ್ಯಾಸಗಳು**

| ಪರಿಮಾಣಾತ್ಮಕ ದತ್ತಾಂಶ | ಗುಣಾತ್ಮಕ ದತ್ತಾಂಶ |
|---|---|
| 'ಯಾರು', 'ಏನು', 'ಯಾವಾಗ'ಎಷ್ಟು ಎಂಬುದನ್ನು ವಿವರಿಸುತ್ತದೆ. | 'ಹೇಗೆ' ಮತ್ತು 'ಏಕೆ' ಎಂದು ವಿವರಿಸುತ್ತದೆ. |
| ಅಂಕಗಳನ್ನು ಒಳಗೊಂಡಿರುತ್ತದೆ | ವರ್ಣಿಸುತ್ತದೆ. |
| ದತ್ತಾಂಶವನ್ನು ಕರಾರುವಕ್ಕಾಗಿ ವೀಕ್ಷಿಸಬಹುದು ಹಾಗೂ ಮಾಪನ ಮಾಡಬಹುದು | ನೇರವಲ್ಲದ ಮಾರ್ಗದಿಂದ ದತ್ತಾಂಶವನ್ನು ಸರಿಸುಮಾರಾಗಿ ವೀಕ್ಷಿಸಬಹುದು ಹಾಗೂ ಮೌಲ್ಯಾಂಕಿಸಬಹುದು |
| ಬಹಳಷ್ಟು ಸಂಖ್ಯೆ ಪ್ರತಿವಾದಿಗಳಿಂದ ಸಮೀಕ್ಷೆಯ ಮೂಲಕ ಸಾಮಾನ್ಯವಾಗಿ ಸಂಗ್ರಹಿಸಲಾಗುತ್ತದೆ | ವೈಯಕ್ತಿಕವಾಗಿ ಅಥವಾ ಪ್ರತಿವಾದಿಗಳ ಗುಂಪಿನಿಂದ ದತ್ತಾಂಶವನ್ನು ಸಂಗ್ರಹಿಸಬಹುದು |
| ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿ ಚೂರು ಚೂರು ಮಾಹಿತಿಗಳನ್ನು ಗಣಿತೀಯವಾಗಿ ಎಣಿಸಿ ಹಾಗೂ ವಿಶ್ಲೇಷಿಸಿದಾಗ ಇದು ಬಹಳ ಪ್ರಯೋಜನಕಾರಿಯಾಗಿದೆ. | ಒಂದು ನಿರ್ದಿಷ್ಟ ಪಾಠಕ್ಕೆ ಕೇವಲ ಪರಿಮಾಣಾತ್ಮಕ ದತ್ತಾಂಶವು ಸಾಕಷ್ಟು ಇಲ್ಲದ ಸಂದರ್ಭದಲ್ಲಿ, ವಿಶಾಲವಾದ ಅರ್ಥೈಸುವಿಕೆ ಮತ್ತು ವಿವರಣೆಯ ಅವಶ್ಯಕತೆ ಇರುವಾಗ ಇದು ಪ್ರಯೋಜನಕಾರಿಯಾಗಿದೆ |
| ಸಂಕ್ಷಿಪ್ತ ಹಾಗೂ ಕರಾರುವಕ್ಕಾದ ಮಾಹಿತಿ ಬೇಕಾದಾಗ ಇದು ಪ್ರಯೋಜನವಾಗುತ್ತದೆ. | ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಏನನ್ನು ಚಿಂತಿಸುತ್ತಾರೆ ಮತ್ತು ಅವರ ಪ್ರಾಧಾನ್ಯತೆಗಳು ಯಾವುವು ಎಂಬುದರ ಬಗ್ಗೆ ಮಾಹಿತಿಯು ಅವಶ್ಯಕವಾಗಿರುವಾಗ ಇದು ಉಪಯುಕ್ತ. ಇದಲ್ಲದೆ ವಿದ್ಯಾರ್ಥಿಗಳು ಏಕೆ ನಿರ್ದಿಷ್ಟ ರೀತಿಯಲ್ಲಿ ವರ್ತಿಸುತ್ತಾರೆ ಎಂದು ತಿಳಿಯಲೂ ಸಹ ಇದು ಸಹಾಯಕ. |
| ವಸ್ತುನಿಷ್ಠತೆ, ಸಮಂಜಸತೆ ಹಾಗೂ ಸಾಮಾನ್ಯೀಕರಿಸುವ ಸಾಮರ್ಥ್ಯ ಬೆಳೆಸುತ್ತದೆ. ಬಹಳ ಪ್ರಯಾಸದಿಂದ ಆಳವಾದ ವಿವರಣೆ ನೀಡುತ್ತದೆ | ಇದನ್ನು ಸಾಮಾನ್ಯೀಕರಿಸಲಾಗುವುದಿಲ್ಲ |
| ದತ್ತಾಂಶವನ್ನು ಬೇರೆ ಬೇರೆ ಸಂದರ್ಭಗಳಲ್ಲೂ ಒಂದೇ ರೀತಿಯ ಸಾಧನದಿಂದ ಅಳೆಯಬಹುದು | ಗುಣಾತ್ಮಕ ದತ್ತಾಂಶವನ್ನು ಸಂಗ್ರಹಿಸುವಲ್ಲಿ ಸಂದರ್ಭ ಬಹಳ ಮುಖ್ಯ |

ವಿವಿಧ ಮೂಲಗಳಿಂದ ಸಂಗ್ರಹಿಸಿದ ದತ್ತಾಂಶವು ಕಲಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳಲು ಶಕ್ತರನ್ನಾಗಿಸುತ್ತದೆ. ಇದು ಪ್ರತಿ ವಿದ್ಯಾರ್ಥಿಯ ಫಲಿತಾಂಶವನ್ನು ಹೆಚ್ಚಿಸಲು ಸಹಾಯಕವಾಗಿದೆ. ವಿವಿಧ ಮೂಲಗಳೆಂದರೆ ಸಾಮಾನ್ಯ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನಗಳು, ವೀಕ್ಷಣೆಗಳು, ಕಾರ್ಯಪ್ರತಿಚಯನಗಳು, ಕೃತಿಸಂಪುಟಗಳು, ನಿಯೋಜಿತ ಕಾರ್ಯಗಳು, ಯೋಜನೆಗಳು ಹಾಗೂ ಸ್ವಯಂ ವರದಿಗಳು ಮುಂತಾದವು. ವಿವಿಧ ಮೂಲಗಳಿಂದ ಸಂಗ್ರಹಿಸದ ಮಾಹಿತಿಯು ಯಾವುದೋ ಒಂದು ಮೂಲದಿಂದ ಸಂಗ್ರಹಿಸಿದ ದತ್ತಾಂಶಕ್ಕಿಂತ ಹೆಚ್ಚು ಸಮತೋಲನ ಹಾಗೂ ವ್ಯಾಪಕ ವಿಶ್ಲೇಷಾತ್ಮಕವಾಗಿರುತ್ತದೆ.ದತ್ತಾಂಶ ಒಂದೇ ಪರಿಣಾಮಕತೆ ಹೆಚ್ಚಿಸುವಲ್ಲಿ ಹಾಗೂ ತೀರ್ಮಾನ ಕೈಗೊಳ್ಳುವಲ್ಲಿ ಸ್ವಲ್ಪಮಟ್ಟಿಗೆ ಮಾತ್ರ ಸಹಕಾರಿಯಾಗಿರುತ್ತದೆ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಕಲಿಕೆಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳುವಲ್ಲಿ ದತ್ತಾಂಶದ ಸಂಪೂರ್ಣ ವಿಶ್ಲೇಷಣೆ ಹಾಗೂ ಅಡ್ಡ ಪರೀಕ್ಷಣೆ ಬಹಳ ಅವಶ್ಯಕವಾಗಿರುತ್ತದೆ.

Notes

## 13.5. ಸಾರಾಂಶಿಸೋಣ:

- ಅಳತೆಯು ಯಾವುದೇ ವಸ್ತು ಅಥವಾ ವಿದ್ಯಮಾನದ ಲಕ್ಷಣಗಳನ್ನು ಅಥವಾ ಆಯಾಮಗಳನ್ನು ಪರಿಮಾಣಿಸುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.
- ಮೌಲ್ಯಾಂಕನವು ಕೆಲವು ಗೊತ್ತಿರುವ ಉದ್ದೇಶ ಅಥವಾ ಗುರಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪಡೆಯುವ ಪ್ರಕ್ರಿಯೆಯಾಗಿದೆ.
- ಮೌಲ್ಯಮಾಪನವು ಒಂದು ವಿದ್ಯಮಾನದ ಬಗ್ಗೆ ಒಂದು ನಿರ್ದಿಷ್ಟ ಸಮಯದವರೆಗೆ ಸಂಗ್ರಹಿಸಿದ ಪರಿಮಾಣಾತ್ಮಕ ಮತ್ತು/ಅಥವಾ ಗುಣಾತ್ಮಕ ಮಾಹಿತಿಯನ್ನು ಪರಿಗಣಿಸಿ, ತೆಗೆದುಕೊಳ್ಳುವ ಮೌಲ್ಯನಿರ್ಣಯವನ್ನು ಸೂಚಿಸುತ್ತದೆ.
- ಇಡೀ ವರ್ಗಕೋಣೆಯ ಪ್ರಕ್ರಿಯೆಯು ಮೂರು ಮುಖ್ಯ ಅಂಶಗಳನ್ನು/ಹಂತಗಳನ್ನು ಒಳಗೊಂಡಿದೆ, ಅವುಗಳೆಂದರೆ ನಿರೀಕ್ಷಿತ ಕಲಿಕಾ ಫಲಗಳನ್ನು ನಿರ್ಧರಿಸುವುದು, ತರಗತಿ ವ್ಯವಹರಿಸುವಿಕೆಯನ್ನು ಯೋಜಿಸುವುದು ಮತ್ತು ನಿರ್ವಹಿಸುವುದು, ಕಲಿಕೆಯಲ್ಲಿ ವಿದ್ಯಾರ್ಥಿಗಳ ಪ್ರಗತಿಯ ಮೌಲ್ಯಾಂಕನ.
- ನಿರೀಕ್ಷಿತ ಕಲಿಕಾ ಫಲಗಳು 'ನಿರ್ದಿಷ್ಟ'(ಖ), 'ಅಳೆಯಬಹುದಾದ'(ಒ), 'ಸಾಧಿಸಬಹುದಾದ'(೦), 'ಸಮಂಜಸ'(ಖ) ಹಾಗೂ 'ಕಾಲಮಿತಿ'(ಖ) ಆಗಿರಬೇಕು.
- ವಾಸ್ತವವಾಗಿ ವಿದ್ಯಾರ್ಥಿಯು ಕಲಿಕೆಯ ಪ್ರಕ್ರಿಯೆಯಲ್ಲಿದ್ದಾಗ ಅಂದರೆ ಕಲಿಕೆಯ ರೂಪಣಾತ್ಮಕ/ರಚನಾತ್ಮಕ ಹಂತದಲ್ಲಿ ನಡೆಸುವ ಮೌಲ್ಯಾಂಕನವುರೂಪಣಾತ್ಮಕ ಮೌಲ್ಯಾಂಕನವಾಗಿದೆ. ಹೆದರಿಕೆ ಇಲ್ಲದ ಮತ್ತು ಬೆಂಬಲಿಸುವ ಪರಿಸರದಲ್ಲಿ ನಿರಂತರವಾಗಿ ವಿದ್ಯಾರ್ಥಿಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ, ಶಿಕ್ಷಕರಿಂದ ನಡೆಸಲ್ಪಡುವ ಒಂದು ನಿರಂತರ ಪ್ರಕ್ರಿಯೆಯಾಗಿದೆ. ಈ ರೀತಿಯ ಮೌಲ್ಯಾಂಕನವು ವಿದ್ಯಾರ್ಥಿಯ ಸ್ವತಃ ತನ್ನ (ಸ್ವ ಮೌಲ್ಯಾಂಕನ) ಅಥವಾ ಸಹಪಾಠಿಗಳ (ಸಹಪಾಠಿ ಮೌಲ್ಯಮಾಪನ) ಗುಂಪನ್ನು ಒಳಗೊಂಡಿದೆ.
- ಸಂಕಲನಾತ್ಮಕ ಮೌಲ್ಯಾಂಕನವು ಒಂದು ನಿರ್ದಿಷ್ಟ ಸಮಯದಲ್ಲಿ ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಒಟ್ಟುಗೂಡಿಸುವ ಅಥವಾ ಸಾರಾಂಶಿಸುವ ಕಲಿಕೆಯ ಮೌಲ್ಯಾಂಕನವನ್ನು ಸೂಚಿಸುತ್ತದೆ. ಇದು ಒಂದು ಕಾಲಾವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಾಂಕನ (ಮತ್ತು ಶ್ರೇಣೀಕರಿಸುವುದು ಅಥವಾ ದರ್ಜೆ ನೀಡುವುದು) ಮಾಡುವ ಪ್ರಕ್ರಿಯೆಯಾಗಿದೆ. ಕಲಿಕೆ ಬೋಧನಾ ಸನ್ನಿವೇಶದಲ್ಲಿ, ಸಂಕಲನಾತ್ಮಕ ಮೌಲ್ಯಾಂಕನವನ್ನು ಒಂದು ಕೋರ್ಸಿನ ಅಥವಾ ಅವಧಿಯ ಕೊನೆಯಲ್ಲಿ ಸಾಮಾನ್ಯವಾಗಿ ನಡೆಸುವುದಾಗಿದ್ದು, ಇಡೀ ಕೋರ್ಸಿನಲ್ಲಿ ವಿದ್ಯಾರ್ಥಿಗಳು ಎಷ್ಟನ್ನು ಕಲಿತಿದ್ದಾರೆ ಎಂಬುದನ್ನು ನಿರ್ಧರಿಸಲು ಮತ್ತು ನಿಗಧಿಪಡಿಸಿದ ಶೈಕ್ಷಣಿಕ ಮಾನದಂಡಗಳನ್ನು ಅವರು ಪೂರೈಸಿದ್ದರೆ, ವಿದ್ಯಾರ್ಥಿಗಳಿಗೆ ಕೋರ್ಸ್ ಶ್ರೇಣಿಗಳನ್ನು ನಿಯೋಜಿಸಲಾಗುತ್ತದೆ. ಸಂಕಲನಾತ್ಮಕ ಮೌಲ್ಯಾಂಕನವನ್ನು ಔಪಚಾರಿಕವಾಗಿ ನಡೆಸುವುದಾಗಿದ್ದು, ಇದು ರಸಪ್ರಶ್ನೆ, ಪ್ರಬಂಧಗಳು, ಪರೀಕ್ಷೆಗಳು ಅಥವಾ ಯೋಜನಾ ಕಾರ್ಯಗಳ ರೂಪದಲ್ಲಿರಬಹುದು.
- ನಿ.ವ್ಯಾ.ಮೌ. (ಅಅಇ)ನಲ್ಲಿ ನಿರಂತರ ಎಂಬುದು ವಿದ್ಯಾರ್ಥಿಯ ವಿಕಾಸ ಮತ್ತು ಅಭಿವೃದ್ಧಿಯ ಗುರ್ತಿಸಲ್ಪಟ್ಟ ಅಂಶಗಳ ಮೌಲ್ಯಮಾಪನವನ್ನು ಒತ್ತಿ ಹೇಳುತ್ತಿದ್ದು, ಇದು ಕೇವಲ ಘಟನೆಯಾಗಿರದೆ, ನಿರಂತರ ಪ್ರಕ್ರಿಯೆಯಾಗಿದ್ದು ಒಟ್ಟು ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಇದನ್ನು ರಚಿಸಿದ್ದು, ಶೈಕ್ಷಣಿಕ ಅವಧಿ/ಅಧಿವೇಶನದ ಇಡೀ ಅವಧಿಯಲ್ಲಿ ಇದನ್ನು ಹರಡಲಾಗಿದೆ. ಇದರರ್ಥ ಮೌಲ್ಯಾಂಕನದ ಕ್ರಮಬದ್ಧತೆ, ಘಟಕ ಪರೀಕ್ಷೆಯ ಅವರ್ತನೆ, ಕಲಿಕೆಯ ಅಂತರಗಳನ್ನು ಪತ್ತೆ ಹಚ್ಚುವುದು, ಸರಿಪಡಿಸುವ ಕ್ರಮಗಳ ಬಳಕೆ, ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಸ್ವ ಮೌಲ್ಯಮಾಪನಕ್ಕಾಗಿ ಮರು ಪರೀಕ್ಷೆ ಮತ್ತು ಪುರಾವೆ/ಸಾಕ್ಷಾಧಾರಗಳ ಹಿಮ್ಮಾಹಿತಿಯಾಗಿದೆ.ವ್ಯಾಪಕ ಈ ಪದದ ಅರ್ಥವೇನೆಂದರೆ ಮೌಲ್ಯಮಾಪನದ ಈ ಪ್ರಕ್ರಿಯೆಯು ವಿದ್ಯಾರ್ಥಿಯ ಬೆಳವಣಿಗೆ ಮತ್ತು ಅಭಿವೃದ್ಧಿಯ ಪಠ್ಯ ಮತ್ತು ಸಹಪಠ್ಯ ಅಂಶಗಳೆರಡನ್ನೂ ಒಳಗೊಳ್ಳಲು ಪ್ರಯತ್ನಿಸುತ್ತದೆ.
- ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಉತ್ತೇಜಿಸಲು ನಿ.ವ್ಯಾ.ಮೌ.(ಅಅಇ)ಯು ವಿವಿಧ ವಲಯಗಳಾದ ಜ್ಞಾನಾತ್ಮಕ,ಭಾವನಾತ್ಮಕ, ಮನಶ್ಚಾಲಿತ ವಲಯಗಳಲ್ಲಿ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನದ ಮೂಲಕ ವಿದ್ಯಾರ್ಥಿಗಳ ಕಲಿಕೆಯ ಕಾರ್ಯಕ್ಷಮತೆಯನ್ನು ಖಾತ್ರಿಪಡಿಸುತ್ತದೆ.

Notes

- ಮೌಲ್ಯಮಾಪನದ ವಿಧಾನಗಳು ಮತ್ತು ಅವು ಉತ್ಪಾದಿಸುವ ದತ್ತಾಂಶಗಳನ್ನು ಎರಡು ಮೂಲ ವರ್ಗಗಳಾಗಿ ಗುಂಪು ಮಾಡಲಾಗಿದೆ, ಪರಿಮಾಣಾತ್ಮಕ ಮತ್ತು ಗುಣಾತ್ಮಕ. ಸಾಮಾನ್ಯವಾಗಿ ಪರಿಮಾಣಾತ್ಮಕ ವಿಧಾನಗಳು ಕೇವಲ ಸಂಖ್ಯೆಗಳನ್ನು ಉತ್ಪಾದಿಸಿದರೆ, ಗುಣಾತ್ಮಕ ವಿಧಾನಗಳು ವಿವರಣಾತ್ಮಕ ದತ್ತಾಂಶಗಳನ್ನು ಸೆರೆಹಿಡಿಯುತ್ತವೆ. ಪರಿಮಾಣಾತ್ಮಕ ಹಾಗೂ ಗುಣಾತ್ಮಕ ತಂತ್ರಗಳು ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಿಸಿದಂತೆ ವಿವಿಧ ಅಂಶಗಳಲ್ಲಿ ಉತ್ಕೃಷ್ಟವಾದ ಹಾಗೂ ಹೆಚ್ಚಿನ ವ್ಯಾಪಕ ತಿಳುವಳಿಕೆಯನ್ನು ಉತ್ಪಾದಿಸುತ್ತವೆ.ಸಾಮಾನ್ಯವಾಗಿ ಬಳಸುವ ವಿಧಾನ(ಗಳನ್ನು)ವನ್ನು ಮೌಲ್ಯಮಾಪನದ ಉದ್ದೇಶ(ಗಳು) ನಿರ್ಧರಿಸುತ್ತದೆ/ವೆ.
- ಪರಿಮಾಣಾತ್ಮಕ ವಿಧಾನಗಳು (ಉದಾಹರಣೆಗೆ ಪ್ರಯೋಗಗಳು, ಪ್ರಶ್ನಾವಳಿಗಳು ಮತ್ತು ಮನೋವೈಜ್ಞಾನಿಕ ಪರೀಕ್ಷೆಗಳು ಇತ್ಯಾದಿ) ಸಂಖ್ಯೆಗಳನ್ನು ಮತ್ತು ಆವೃತ್ತಿಗಳನ್ನು ಕೇಂದ್ರೀಕರಿಸುತ್ತವೆಯೇ ಹೊರತು, ಅದರ ಅರ್ಥ ಮತ್ತು ಅನುಭವದ ಬಗ್ಗೆ ಅಲ್ಲ ಮತ್ತು ಅವು ನೀಡುವ ಮಾಹಿತಿಯನ್ನು ಸಂಖ್ಯಾಶಾಸ್ತ್ರೀಯವಾಗಿ ವಿಶ್ಲೇಷಿಸಬಹುದು ಮತ್ತು ಸಾಕಷ್ಟು ವಿಶ್ವಾಸಾರ್ಹವಾಗಿರುತ್ತದೆ. ಆದರೆ ಅಷ್ಟೇನೂ ಆಳವಾದ ವಿವರಣೆಯನ್ನು ಒದಗಿಸುವುದಿಲ್ಲ. ಗುಣಾತ್ಮಕ ವಿಧಾನಗಳು (ಉದಾಹರಣೆಗೆ ವ್ಯಕ್ತಿ ಅಧ್ಯಯನಗಳು ಮತ್ತು ಸಂದರ್ಶನಗಳು ಇತ್ಯಾದಿ) ದತ್ತಾಂಶಗಳನ್ನು ಸಂಗ್ರಹಿಸುವ ಮಾರ್ಗಗಳಾಗಿದ್ದು ಸಂಖ್ಯಾಶಾಸ್ತ್ರೀಯ ಆಧಾರಕ್ಕೆ ಬರುವುದಕ್ಕಿಂತಅರ್ಥ ವಿವರಣೆಗೆ ಸಂಬಂಧಿಸಿದ್ದು,ವ್ಯಕ್ತಿನಿಷ್ಠ ಸ್ವಭಾವದ; ಹೆಚ್ಚು ಆಳವಾದ ಮತ್ತು ಉತ್ಕೃಷ್ಟವಾದ ವಿವರಣೆಯನ್ನು ಒದಗಿಸುತ್ತದೆ.

## 13.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಮಾದರಿ ಉತ್ತರಗಳು

ಇ1. ಶೇಕಡಾವಾರು ಪ್ರಮಾಣ ಬಗ್ಗೆ ಸುಮನ್ ಒಂದು ಸಾಧನಾ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಾಳೆ ಮತ್ತು 25 ಅಂಕಕ್ಕೆ 15 ಅನ್ನು ಪಡೆಯುತ್ತಾಳೆ. ಒಂದು ತಿಂಗಳ ನಂತರ ಅವಳು ಅದೇ ಪರೀಕ್ಷೆಯನ್ನು ಪುನರಾವರ್ತಿಸಿದರೆ,ಈ ಕೆಳಗಿನ ಸಂಭವನೀಯ ಕಾರಣಗಳಿಂದಾಗಿಅವಳು ಇನ್ನೂ ಹೆಚ್ಚಿನ ಅಂಕಗಳನ್ನು ಗಳಿಸುವ ಸಾಧ್ಯತೆ ಇದೆ :

- ಅವಳು ಉತ್ತರಗಳನ್ನು ಕಂಠಪಾಠ ಮಾಡಿರಬಹುದು
- ಅವಳು ಪರೀಕ್ಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿರಬಹುದು
- ಅವಳು ತನ್ನ ಶಿಕ್ಷಕರು/ಪೋಷಕರು/ಸಹಪಾಠಿಗಳೊಂದಿಗೆಪರಾಮರ್ಶಿಸಿ ತನ್ನ ಗೊಂದಲಗಳನ್ನು ನಿವಾರಿಸಿಕೊಂಡಿರಬಹುದು

ಇ2. ವಿಜ್ಞಾನದಲ್ಲಿ ಜಾಬಾ ಪಡೆದ ಅಂಕಗಳ ಜೊತೆಗೆ ಈ ಕೆಳಗೆ ನೀಡಿರುವ ಅಂಶಗಳಲ್ಲಿ ಯಾವುದಾದರೂ ಮೂರನ್ನು ನೀವು ಆಯ್ಕೆ ಮಾಡಿ, ವಿಜ್ಞಾನ ಕಲಿಕೆಯಲ್ಲಿ ಅವಳ ಪ್ರಗತಿಯನ್ನು ನೀವು ಮೌಲ್ಯಾಂಕನ ಮಾಡಬಹುದು :

- ಪ್ರಕೃತಿ ಮತ್ತು ನೈಸರ್ಗಿಕ ಅಂಶಗಳನ್ನು ವೀಕ್ಷಿಸುವ ಕೌಶಲ್ಯ
- ಪ್ರಯೋಗ ಮಾಡುವ ಕೌಶಲ್ಯ
- ವಸ್ತುಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ, ವರ್ಗೀಕರಿಸುವ ಮತ್ತುಸಂಶ್ಲೇಷಿಸುವ ಕೌಶಲ್ಯ
- ವೈಜ್ಞಾನಿಕ ಸ್ವರೂಪದಲ್ಲಿರುವ ಯೋಜನೆಗಳನ್ನು ನಡೆಸುವುದು
- ಪ್ರಶ್ನೆಗಳನ್ನು ಕೇಳುವ ಕೌಶಲ ಇತ್ಯಾದಿ

ಇ3. ಸಂಕಲನಾತ್ಮಕ ಮೌಲ್ಯಾಂಕನದಲ್ಲಿ ಅಂಕಗಳು ಮುಖ್ಯ, ಆದರೆ ರೂಪಣಾತ್ಮಕ ಮೌಲ್ಯಾಂಕನದಲ್ಲಿ ಅಲ್ಲ ಏಕೆಂದರೆ ಸಂಕಲನಾತ್ಮಕ ಮೌಲ್ಯಾಂಕನವು

- ಇಡೀ ಕೋರ್ಸಿನಿಂದ ವಿದ್ಯಾರ್ಥಿಗಳು ಎಷ್ಟು ಕಲಿತಿದ್ದಾರೆ ಮತ್ತು ನಿಗಧಿತ ಶೈಕ್ಷಣಿಕ ಮಾನದಂಡಗಳನ್ನು ಅವರು ಪೂರೈಸಿದ್ದಾರೆಯೇ ಎಂಬುದನ್ನು ನಿರ್ಧರಿಸುತ್ತದೆ
- ತರಗತಿಯಲ್ಲಿ (ಇತರ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ)ಒಂದು ವಿದ್ಯಾರ್ಥಿಯ ಸ್ಥಾನವನ್ನುಕಾಲವಧಿಯ/ಕೋರ್ಸಿನ ಕೊನೆಯಲ್ಲಿ ನಿರ್ಧರಿಸುತ್ತದೆ
- ವಿದ್ಯಾರ್ಥಿಗಳಿಗೆ ಕೋರ್ಸಿನ ಶ್ರೇಣಿಗಳನ್ನು ನಿಯೋಜಿಸಲು ಸಹಾಯ ಮಾಡುತ್ತದೆ

ಇ4. ಒಬ್ಬ ಶಿಕ್ಷಕರಾಗಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನ ಮಾಡುವಾಗ ಹೀಗೆ ಮಾಡಬೇಕು : ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಯ ಕಲಿಕೆ ಮತ್ತು ಪ್ರಗತಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ವಿವಿಧ ವಿಧಾನಗಳನ್ನು ಬಳಸಬೇಕು.

- ನಿರಂತರವಾಗಿ ಮಾಹಿತಿಯನ್ನು ಸಂಗ್ರಹಿಸಬೇಕು ಮತ್ತು ಅದನ್ನು ದಾಖಲಿಸಬೇಕು
- ಪ್ರತಿ ವಿದ್ಯಾರ್ಥಿಯು ಪ್ರತಿಕ್ರಿಯಿಸುವ ಮತ್ತು ಕಲಿಯುವ ವಿಧಾನಕ್ಕೆ ಮತ್ತು ಅವನು/ಳು ಅಥವಾ ಮಗು ಹೀಗೆ ಮಾಡಲು ತೆಗೆದುಕೊಳ್ಳುವ ಕಾಲಾವಧಿಗೆ ಪ್ರಾಮುಖ್ಯತೆಯನ್ನು ನೀಡಬೇಕು
- ನಿರಂತರ ಆಧಾರದ ಮೇಲೆ ವರದಿ ಮಾಡಬೇಕು ಮತ್ತು ಪ್ರತಿ ವಿದ್ಯಾರ್ಥಿಯ ಪ್ರತಿಕ್ರಿಯೆಗೆ ಸಂವೇದನಾಶೀಲರಾಗಿರಬೇಕು.
- ಧನಾತ್ಮಕ ಕ್ರಿಯೆಯನ್ನುಂಟುಮಾಡುವಂತೆ ಮತ್ತು ವಿದ್ಯಾರ್ಥಿಗೆ ಇನ್ನೂ ಉತ್ತಮವಾಗಿ ಮಾಡಲು ಸಹಾಯ ಮಾಡುವಂತೆ ಹಿಮ್ಮಾಹಿತಿಯನ್ನು ಒದಗಿಸಬೇಕು

ಇ5. ಒಬ್ಬ ಶಿಕ್ಷಕರಾಗಿ ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನ ಮಾಡುವಾಗ ಹೀಗೆ ಮಾಡಬಾರದು :

- ನಿಧಾನ, ಬಡ, ಬುದ್ಧಿವಂತೆ ಎಂದು ವಿದ್ಯಾರ್ಥಿಗಳಿಗೆ ಹಣೆಪಟ್ಟಿ ನೀಡುವುದು
- ಅವರ ನಡುವೆ ಹೋಲಿಕೆ ಮಾಡುವುದು
- ಋಣಾತ್ಮಕ ಹೇಳಿಕೆಗಳನ್ನು ನೀಡುವುದು

## 13.7 ಸೂಚಿತವಾಚನ ಮತ್ತು ಉಲ್ಲೇಖಗಳು

**1.** Bridges, L. (**1995**). ೦ಜಚಿಟಜಚಿಣ: Continuous learning. California: Stenhouse Publishers (**1995**) ಮೌಲ್ಯಾಂಕನ : ನಿರಂತರ ಕಲಿಕೆ ಕ್ಯಾಲಿಫ಼ೋರ್ನಿಯ , ಸ್ಟೆನ್ ಹೌಸ್ ಪ್ರಕಾಶಕರು.

**2**. Central Board of Secondary Education (2010). Continuous and

Comprehensive Evaluation: Manual for Teachers. Shiksha Kendra, Delhi. (2010) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ : ಶಿಕ್ಷಕರಿಗೆ ಕೈಪಿಡಿ, ಶಿಕ್ಷಾ ಕೇಂದ್ರ, ದೆಹಲಿ.

**3**. Gallagher, J.D. (1998). Classroom assessment for teachers. New Jersey: Prentice-Hall Inc. ಜೆ.ಡಿ (**1998**) ಶಿಕ್ಷಕರಿಗಾಗಿ ತರಗತಿ ಮೌಲ್ಯಾಂಕನ, ನ್ಯೂ ಜೆರ್ಸಿ:ಪ್ರೆಂಟಿಸ್ ಹಾಲ್ ಇಂಕ್.

**4**. Grauwe, A.D. &Naidoo, J.P. (2002). School Evaluation for Quality

Improvement: An Asian Network of Training and Research Institutions in Educational Planning (ANTRIEP) Report (Ed.). Kuala Lumpur, Malaysia.ಗ್ರೌವ್ ಎ.ಡಿ ಮತ್ತು ನಾಯ್ಡೂ ಜೆ.ಪಿ (2002). ಗುಣಮಟ್ಟ ಸುಧಾರಣೆಗೆ ಶಾಲಾ ಮೌಲ್ಯಮಾಪನ : ಏಷಿಯಾದ ಶೈಕ್ಷಣಿಕ ಯೋಜನೆಗಾಗಿ ತರಬೇತಿ ಮತ್ತು ಸಂಶೋಧನಾ ಸಂಸ್ಥೆಗಳ ಜಾಲ(೦ಓಖಿಖಋಇಕ) ವರದಿ (ಇಜ)ಕೌಲ ಲುಂಪುರ್ , ಮಲೇಷಿಯ.

Notes


5. Gronlund, N.E. & Linn, R. (1990). Measurement and Evaluation in Teaching (6th Ed.). Macmillan Publishing, New York.ಗ್ರೋನ್‌ಲಂಡ್ ಓ.ಇ ಮತ್ತು ಲಿನ್ನ್.ಖ.(1990) ಬೋಧನೆಯಲ್ಲಿ ಅಳತೆ ಮತ್ತು ಮೌಲ್ಯಮಾಪನ (6ನೇ ಮುದ್ರಣ), ಮ್ಯಾಕ್ ಮಿಲ್ಲಿನ್ ಪ್ರಕಾಶನ, ನ್ಯೂಯಾರ್ಕ್.

6. Hogan, T.P. (2007). Educational Assessment: A practical introduction. Danvers: Wiley ಟಿ.ಪಿ (2007) ಶೈಕ್ಷಣಿಕ ಮೌಲ್ಯಾಂಕನ ಪ್ರಾಯೋಗಿಕ ಪರಿಚಯ.ಡಾನ್ವರ್ಸ್, ವಿಲೇ.


## 13.8 ಘಟಕಾಂತ್ಯ ಅಭ್ಯಾಸ

1. ವಿದ್ಯಾರ್ಥಿಗಳ ಕಲಿಕೆಯ ಪರಿಣಾಮಕಾರಿ ಬಡ್ತಿಯಲ್ಲಿ ಸಂಕಲನಾತ್ಮಕ ಮತ್ತು ರೂಪಣಾತ್ಮಕ ಮೌಲ್ಯಾಂಕನಗಳ ಪಾತ್ರಗಳನ್ನು ವಿವರಿಸಿ.
2. ಶಿಕ್ಷಕರಾಗಿ, ನಿಮ್ಮ ಶಾಲೆಯಲ್ಲಿ ಅಅಇ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಹೇಗೆ ಜಾರಿಗೆ ತರಲು ಬಯಸುತ್ತೀರಿ?

# ಘಟಕ–14 ಕಲಿಕೆ ಮತ್ತು ಮೌಲ್ಯಾಂಕನ ಸಂರಚನೆ

Notes

ಸಂರಚನೆ

*14.0 ಪೀಠಿಕೆ / ಪ್ರಸ್ತಾವನೆ*

*14.1 ಕಲಿಕೆಯ ಉದ್ದೇಶಗಳು*

*14.2 ಕಲಿಕೆ ಮತ್ತು ಮೌಲ್ಯಾಂಕನ*

*14.2.1 ಕಲಿಕೆಯ ಮೌಲ್ಯಾಂಕನ*

*14.2.2 ಕಲಿಕೆಗಾಗಿ ಮೌಲ್ಯಾಂಕನ*

*14.2.3 ಕಲಿಕೆಯಾಗಿ ಮೌಲ್ಯಾಂಕನ*

*14.3 ಮೌಲ್ಯಾಂಕನ ಯೋಜನೆಯನ್ನು ವಿನ್ಯಾಸಗೊಳಿಸುವುದು.*

*14.4 ಸಾರಾಂಶಗೊಳಿಸೋಣ*

*14.5 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಮಾದರಿ ಉತ್ತರಗಳು*

*14.6 ಸೂಚಿತ ಪರಾಮರ್ಶನ ಸಾಮಗ್ರಿ*

*14.7 ಘಟಕಾಂತ್ಯದ ಅಭ್ಯಾಸ ಪ್ರಶ್ನೆಗಳು*

## 14.0. ಪ್ರಸ್ತಾವನೆ

ಈ ಕೋರ್ಸ್‌ನ ಎಲ್ಲಾ ವಿಭಾಗಗಳಲ್ಲಿಯೂ ಕಲಿಕೆ ಹಾಗೂ ಕಲಿಕಾ–ಕೇಂದ್ರಿತ ಶಿಕ್ಷಣ ಕುರಿತೇ ಗಮನ ಕೇಂದ್ರೀಕೃತವಾಗಿರುವುದನ್ನು ನೀವು ಗಮನಿಸಿರಬಹುದು. ತರಗತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವಿವಿಧ ವಿಚಾರಗಳ ಚರ್ಚೆಗಳಲ್ಲಿ 'ಮಕ್ಕಳು ಹೇಗೆ ಕಲಿಯುತ್ತಾರೆ?' 'ಗರಿಷ್ಠ ಕಲಿಕೆ ಉಂಟುಮಾಡಲು ಇರುವ ಮಾರ್ಗಗಳಾವುವು?' ಎಂಬ ಅಂಶಗಳೇ ಪ್ರಧಾನವಾಗಿವೆ. (ಕಲಿಕಾರ್ಥಿಗಳು ಕಲಿಯಲು ಅನುಕೂಲಕರ ಸನ್ನಿವೇಶಗಳ ಅಂಶಗಳಾಗಿ) ತರಗತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವಿಚಾರಗಳಾದ ಬೋಧನೆ, ಬೋಧನಾ–ಕಲಿಕಾ ಸಾಮಗ್ರಿಗಳು, ತರಗತಿ ನಿರ್ವಹಣೆ, ಮೈಲ್ಯಾಂಕನ ಮತ್ತು ಮೌಲ್ಯಮಾಪನಗಳನ್ನೇ ಕಲಿಕಾರ್ಥಿಗಳು ಕಲಿಯಲು ಅನುಕೂಲಕರ ಸನ್ನಿವೇಶಗಳ ಅಂಶಗಳಾಗಿ) ತರಗತಿ ಪ್ರಕ್ರಿಯಗಳಿಗೆ ಸಂಬಂಧಿಸಿದ ವಿಚಾರಗಳಾದ ಬೋಧನೆ, ಬೋಧನಾ–ಕಲಿಕಾಸಾಮಗ್ರಿಗಳು, ತರಗತಿ ನಿರ್ವಹಣೆ, ಮೌಲ್ಯಂಕನ ಮತ್ತು ಮೌಲ್ಯಮಾಪನಗಳನ್ನೇ ಕಲಿಕಾರ್ಥಿಗಳು ಕಲಿಯಲು ಅನುಕೂಲಕರ ಸನ್ನಿವೇಶಗಳ ಅಂಶಗಳನ್ನಾಗಿ ಪ್ರಸ್ತುತ ಪಡಿಸಲಾಗಿದೆ.

ಸಾಂಪ್ರಕಾಯಿಕವಾಗಿ, ನಮ್ಮ ಶಾಲೆಗಳಲ್ಲಿ ಕಲಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯಗಳು ತರಗತಿಯೊಳಗೆ ವಿದ್ಯಾರ್ಥಿಗಳ ನಡುವೆ ಸ್ಪರ್ಧೆಗಳನ್ನೇ ಉತ್ತೇಜಿಸುತ್ತದೆ. ಯಾವುದೇ ಒಂದು ತರಗತಿ ಪರೀಕ್ಷೆಯ ಕೊನೆಯಲ್ಲಿ ನಾವು "ಪ್ರಥಮ, ದ್ವಿತೀಯ, ತೃತೀಯ ಸ್ಥಾನಗಳಿಸಿರುವವರು ಯಾರು?" ಅಥವಾ "ಎಷ್ಟು ವಿಷಯದಲ್ಲಿ ಕನಷ್ಠ ಶೇ 30 ಅಂಕಗಳನ್ನುಗಳಿಸುವಲ್ಲಿ ಎಷ್ಟು ಜನ ವಿಫಲರಾಗಿದ್ದಾರೆ?" ಮುಂತಾದ ಹಲವು ಪ್ರಶ್ನೆಗಳಿಗೆ ಉತ್ತರ ತಿಳಿದು ನಮ್ಮನ್ನು ತೃಪ್ತಿ ಪಡಿಸಿಕೊಳ್ಳಲು ಫಲಿತಾಂಶವನ್ನು ವಿಶ್ಲೇಷಿಸುತ್ತೇವೆ.

ಫಲಿತಾಂಶಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಸಾಧನೆಯನ್ನು ಉತ್ತಮಪಡಿಸಲು/ಸುಧಾರಿಸಲು ಪ್ರತ್ಯೇಕ ಭೋಧನೆ ಒದಗಿಸುವುದಕ್ಕಾಗಿ ಅವರನ್ನು ಗುಂಪುಗಳಾಗಿ ವಿಂಗಡಿಸುತ್ತೇವೆ. ಉದಾಹರಣೆಗೆ, 5ನೇಯ ತರುಗತಿಯಲ್ಲಿ ಗಣಿತದಲ್ಲಿಗಳಿಸಿದ ಅಂಕಗಳ ಆಧಾರದ ಮೇಲೆ ಮೂರು ಗುಂಪುಗಳನ್ನು ರಚಿಸಬಹುದು –

Notes

ಶೇ 60ಕ್ಕಿಂತ ಹೆಚ್ಚು ಅಂಗಳನ್ನು ಗಳಿಸಿದ ವಿದ್ಯಾರ್ಥಿಗಳ ಒಂದು ಗುಂಪು (ಉತ್ತಮವಾಗಿ ಸಾಧಿಸುವ ಗುಂಪು) ಶೇ 30 ರಿಂದ ಶೇ 59 ರಷ್ಟು ಶೇ 30ಕ್ಕಿಂತ ಕಡಿಮೆ ಅಂಕಗಳಿಸಿದವರ ಮೂರನೆಯ ಗುಂಪು (ಕೆಳಮಟ್ಟದ ಸಾಧನೆಯ ಗುಂಪು) ಉತ್ತಮ ಮಟ್ಟದ ಸಾಧಕರಿಗೆ ವಿದ್ಯಾರ್ಥಿವೇತನ ಮತ್ತು ಗಣಿತ ಸ್ಪರ್ಧೆಗಳಲ್ಲಿ ಪ್ರಶಸ್ತಿಗಳನ್ನು ಗೆಲ್ಲಲು ಹೆಚ್ಚಿನ ತರಬೇತಿ ಒದಗಿಸಲಾಗುತ್ತದೆ. ಹಾಗೆಯೇ ಕೆಳಮಟ್ಟದ ಸಾಧಕರಿಗೆ ಅವರು "ವಿಫಲರು" ಎಂಬುದಾಗಿ ಗುರುತಿಸಲ್ಪಡಬಾರದೆಂಬ ಕಾರಣಕ್ಕಾಗಿ ಶೇ 30ಕ್ಕಿಂತ ಹೆಚ್ಚು ಅಂಕಗಳಿಸುವಂತೆ ಹೆಚ್ಚಿನ ಕಾಳಿಜಿವಹಿಸಲಾಗುತ್ತದೆ. ಈ ವಿಧದ ಮೌಲ್ಯಮಾಪನವು ಒಂದು ತರಗತಿ ಅಥವಾ ವಿದ್ಯಾರ್ಥಿ ಸಮುಹದಲ್ಲಿ ಸ್ಪರ್ಧೆಯನ್ನು ಉತ್ತೇಜಿಸುವುದಾದರೂ ಇದು ವಿದ್ಯಾರ್ಥಿಗಳ ನಡುವೆ ಬೇಧಭಾವವನ್ನು ಶಾಶ್ವತಗೊಳಿಸುತ್ತದೆ.

ಶಾಲಾ ಶಿಕ್ಷಣ ವ್ಯವಸ್ಥೆಯು ಮಹತ್ವದ ಬದಲಾವಣೆಯ ಹಾದಿಯಲ್ಲಿ ಸಾಗುತ್ತಿದೆ. ಬೋಧನೆಯು ಕೇಂದ್ರ ಬಿಂದುವಾಗಿರದೆ ಕಲಿಕೆಗೆ ವರ್ಗಾವಣೆಗೊಂಡಿದೆ. ಕಲಿಕಾ–ಕೇಂದ್ರಿತ ವ್ಯವಸ್ಥೆಯಲ್ಲಿ ಕಲಿಕೆಗೆ ಅನುಕೂಲಿಸುವ ಸನ್ನಿವೇಶಗಳನ್ನು ಒದಗಿಸಿದರೆ ಯಾವುದೇ ಸಾಧಾರಣ ಮಟ್ಟದ ಮಗುವೂ ಸಾಧನೆಯ ಉನ್ನತ ಮಟ್ಟವನ್ನು ತಲುಪಬಹುದು ಎಂದು ನಂಬಲಾಗುತ್ತದೆ. ಈ ಉದ್ದೇಶವನ್ನು ಈಡೇರಿಸಿಕೊಳ್ಳಲು ಸ್ಪರ್ಧೆ ಆಧಾರಿತ ಸಾಂಪ್ರದಾಯಿಕ ಸಹಾಯಕವಾಗುವುದಿಲ್ಲ. ಬದಲಾಗಿ, ಸಫಲತೆಗೆ ಮನಕಗಳನ್ನು ಸ್ಪಷ್ಟವಾಗಿ ತಿಳಿಸುವ ಮತ್ತು ಆ ಮಾನಕಗಳನ್ನು ಎಲ್ಲ ವಿದ್ಯಾರ್ಥಿಗಳೂ ತಲುಪಬೇಕಂದು ಅಪೇಕ್ಷಿಸುವಂತಹ ಮೌಲ್ಯಮಾಪನ/ಮೌಲ್ಯಾಂಕನ ರೂಢಿಗಳನ್ನು ಅಳವಡಿಸಿಕೊಳ್ಳಬೇಕು. ಇಂತಹ ಮೌಲ್ಯಮಾಪನದಲ್ಲಿ ಶ್ರೇಣೀಕರಿಸುವ ವ್ಯವಸ್ಥೆಯು ವಿದ್ಯಾರ್ಥಿಗಳನ್ನು 'ಎ' (ದರ್ಜೆಯ)ಶ್ರೇಣಿಯ ವಿದ್ಯಾರ್ಥಿಗಳಿರುವುದಿಲ್ಲ. ಆದರೆ 'ಎ' ದರ್ಜೆ.ಶ್ರೇಣಿಯ ಸಾಧನೆ.ಕಾರ್ಯನಿರ್ವಹಣೆ ಇರುತ್ತದೆ ಹಾಗೂ ಎಲ್ಲ ವಿದ್ಯಾರ್ಥಿಗಳು ಸಫಲರಾಗುವಂತೆ ಪ್ರೇರಣೆ ಉಂಟು ಮಾಡುವ ರೀತಿಗಳಲ್ಲಿ ಶಿಕ್ಷಕರು ಬೋಧಿಸಬೇಕು ಮತ್ತು ಮೌಲ್ಯಂಕನ ಮಾಡಬೇಕು. ಕಲಿಕೆಯ ಮೌಲ್ಯಂಕನ ಬದಲಾಗುತ್ತಿರುವ ನಂಬಿಕೆಗಳು ಮತ್ತು ಪ್ರಕ್ರಿಯಗಳು ಯಾವುವು?

ಈ ಘಟಕದಲ್ಲಿ ಈಗ ತರಗತಿಗಳಲ್ಲಿ ಬಳಲಾಗುತ್ತಿರುವ ಕೇವಲ ವಿದ್ಯಾರ್ಥಿಗಳೂ ಏನನ್ನು ಗಳಿಸಿದ್ದಾರೆ ಎಂಬುದನ್ನು ಮೌಲ್ಯಂಕನ ಮಾಡುವುದು ಮಾತ್ರವಲ್ಲದೆ ಕಲಿಕೆಯನ್ನು ಪ್ರೋತ್ಸಾಹಿಸುವಂತಹ ಹಲವಾರು ಮೌಲಕನ ಸಾಧನೆಗಳನ್ನು ಮತ್ತು ವಿಧಾನಗಳನ್ನು ಪರಿಚಯಿಸಲಾಗುತ್ತದೆ.

## 14.1 ಕಲಿಕೆಯ ಉದ್ದೇಶಗಳು

ಘಟಕವನ್ನು ಪೂರ್ಣಗೊಳಿಸಿದ ನಂತರ ನೀವು

- ಮೌಲ್ಯಂಕನ ಪ್ರಕ್ರಿಯೆಯನ್ನು ತರಗತಿಯಲ್ಲಿ ಕಲಿಕೆಯ ವಿವಿಧ ಹಂಗಳೊಂದಿಗೆ ಸಂಬಂಧ ಕಲ್ಪಿಸಲು.
- ತರಗತಿಯ ಕಲಿಕೆಯನ್ನು ಅನುಕೂಲಿಸಲು ಮೌಲ್ಯಂಕನ ಸಾಧನೆಗಳನ್ನು, ವಿಧಾನಗಳನ್ನು ಬಳಸಲು
- ಮೌಲ್ಯಂಕನ ಘಟನೆಗಳನ್ನು ಕಲಿಕೆಯ ಮುಲಾಧಾರಗಳಾಗಿ ಬಳಸಿಕೊಳ್ಳಲು
- ನಿಮ್ಮ ಶಾಲೆಯಲ್ಲಿ ಮೌಲ್ಯಂಕನ ಕಾರ್ಯಕ್ರಮಗಳನ್ನು ಯೋಜಿಸಲು ಸಮರ್ಥರಾಗುವಿರಿ.

## 14.2 ಕಲಿಕೆ ಮತ್ತು ಮೌಲ್ಯಂಕನ

ಕಲಿಕೆ ಮತ್ತು ಮೌಲ್ಯಂಕನಗಳು ಜೊತೆ ಜೊತೆಗೆ ನಡೆದರೂ ಸಹ ಅದು ಎರಡು ವಿಶಿಷ್ಟ ಪ್ರಕ್ರಿಯಗಳಾಗಿವೆ ಎಂಬುದನ್ನು ಹಿಂದಿನ ಘಟಕಗಳಲ್ಲಿ ತಿಳಿದಿದ್ದೇವೆ. (ಈ ಹಿನ್ನೇಲೆಯಲ್ಲಿ) ಇದಕ್ಕೆ ಸಂಬಂಧಿಸಿದಂತೆ ಕೆಳಗೆ ಕೊಟ್ಟಿರುವ ಮೂರು ಸನ್ನಿವೇಶಗಳನ್ನು ಗಮನಿಸೋಣ.

Notes

*ಸನ್ನಿವೇಶ 1: ತನ್ನ ಶಾಲೆಯ 5ನೇ ತರಗತಿಯ ವಿದ್ಯಾರ್ಥಿಗಳಿಗೆ "ನಮ್ಮ ಸ್ವಾತಂತ್ರ್ಯ ಹೋರಾಟ" ಎಂಬ ಪಾಠ ಬೋಧಿಸಲು ಶ್ರೀಮತಿ ಸೊಹಾನಾರವರು ಆರು ಅವಧಿಗಳನ್ನು ಬಳಸಿದರು. ಪಾಠ ಮುಗಿಸಿದ ನಂತರ ಆ ಪಠ್ಯ ಭಾಗದ ಬಗ್ಗೆ ಪ್ರತಿ ವಿದ್ಯಾರ್ಥಿಗಳಿಸಿರುವ ಜ್ಞಾನ ಮತ್ತು ಗ್ರಹಿಕೆಯ ವಿಸ್ತಾರವನ್ನು ದೃಢಪಡಿಸಿಕೊಳ್ಳಲು ಒಂದು ಪರೀಕ್ಷೆ ನಿರ್ವಹಿಸಿದರು.*

*ಸನ್ನಿವೇಶ 2: ಶ್ರೀ ರೋಹನ್‌ರವರು 6ನೇ ತರಗತಿಯ ವಿದ್ಯಾರ್ಥಿಗಳಿಗೆ ಭಿನ್ನರಾಶಿ ಸಂಕಲನ ಮತ್ತು ___ ಮಾಡಲು ಸಹಾಯ ಮಾಡುವಾಗ ಅನೇಕ ವಿದ್ಯಾರ್ಥಿಗಳು ಎರಡು ವಿಷಮ ಭಿನ್ನರಾಶಿಗಳನ್ನು ಕೊಡುವುದನ್ನು ಪೂರೈಸಲು ಸಮರ್ಥರಾಗಿರಲಿಲ್ಲವೆಂಬುದನ್ನು ಗಮನಿಸಿದರು. ಶಿಕ್ಷಕರು ಸಮಭಿನ್ನರಾಶಿ ಸಂಕಲನವನ್ನು ಒಳಗೊಂಡ (ಎರಡು ಸಮಾನ ಭಿನ್ನರಾಶಿಗಳ ಸಂಕಲನದ ಒಂದು ಪ್ರಶ್ನೆ, ಸಮ ಹಾಗೂ ವಿಷಮ ಭಿನ್ನರಾಶಿಗಳನ್ನು ಕೊಡುವ ಮೂರು ಪ್ರಶ್ನೆಗಳು ಮತ್ತು ವಿಷಮ ಭಿನ್ನರಾಶಿಗಲ ಸಂಕಲನದ ನಾಲ್ಕು ಪ್ರಶ್ನೆಗಳು). ಶಿಕ್ಷಕರು ಪ್ರತಿ ವಿದ್ಯಾರ್ಥಿಯ ಉತ್ತರಗಳನ್ನು ವಿಶ್ಲೇಷಿಸಿ ಶೇ 45ರಷ್ಟು ವಿದ್ಯಾರ್ಥಿಗಳು ಸಮ ಭಿನ್ನರಾಶಿಯೊಂದಿಗೆ ವಿಷಮ ಭಿನ್ನರಾಶಿಯನ್ನು ಕೊಡುವುದರಲ್ಲಿ ಸಮಸ್ಯೆ ಹೊಂದಿದ್ದರು ಹಾಗೂ ಇದು ಎರಡು ವಿಷಮ ಭಿನ್ನರಾಶಿಗಳ ಸಂಕಲನದ ಸಾಧನೆಯ ಮೇಲೆ ಪರಿಣಾಮ ಉಂಟು ಮಾಡುತ್ತಿತ್ತು ಎಂಬುದನ್ನು ಕಂಡುಕೊಂಡರು. ಆದ್ದರಿಂದ ಶಿಕ್ಷಕರು ವಿಷಮ ಭಿನ್ನರಾಶಿಯನ್ನು ಮತ್ತು ಅದರೊಂದಿಗೆ ಸಮಭಿನ್ನರಾಶಿಯನ್ನು ಕೊಡುವುದರ ಗ್ರಹಿಕೆಯನ್ನು ಬೆಳೆಸುವುದರ ಮೇಲೆ ಗಮನ ಕೇಂದ್ರೀಕರಿಸಿ ಆನಂತರ ಎರಡು ವಿಷಮ ಭಿನ್ನರಾಶಿಗಳ ಸಂಕಲನಕ್ಕೆ ಮುಂದುವರೆದರು.*

*ಸನ್ನಿವೇಶ 3: ಶ್ರೀಮತಿ ಸೋಹಾರವರು ಭಾಷೆಯನ್ನು ಕಲಿಸುವಾಗ 7ನೇ ತರಗತಿಯ ತಮ್ಮ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಮತ್ತು ಅವರು ವಾಸಿಸುವ ಪ್ರದೇಶಗಳಲ್ಲಿ ಸ್ವಾತಂತ್ರ್ಯ ದಿನದ ಆಚರಣೆ ಕುರಿತು ಚಿಕ್ಕದಾದ ವಿವರಣೆಯನ್ನು ಬರೆಯುವಂತೆ ತಿಳಿಸಿದರು. ಪ್ಯಾರಾಗ್ರಾಫ್‌ಗಳನ್ನು ರಚಿಸುವ ಸಾಮರ್ಥ್ಯವನ್ನು ಮೌಲ್ಯಾಂಕನ ಮಾಡುವುದು ಇದರ ಉದ್ದೇಶವಾಗಿತ್ತು. ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಿಸಲು ಹೋಗುವ ಮೊದಲು ಮಾಹಿತಿ ಸಂಗ್ರಹಿಸಲು ಮಾನದಂಡಗಳನ್ನು ಪ್ರಕ್ರಿಯೆಯನ್ನು ಚರ್ಚಿಸಿದರು. ಈ ಮಾನದಂಡಗಳೇ ಪ್ಯಾರಾಗ್ರಾಫ್‌ನ ಮೌಲ್ಯಂಕನದ ಮಾನದಂಡವಾಗಿರುತ್ತದೆ ಎಂದು ತೀರ್ಮಾನಿಸಿದರು. ಶ್ರೀಮತಿ ಸೋಹಾರವರು ವಿದ್ಯಾರ್ಥಿಗಳಿಗೆ ತಮ್ಮ ವಿವರಣೆಗಳನ್ನು ಅವರಿಷ್ಟದಂತೇ ವಿನ್ಯಾಸಗೊಳಿಸಲು ಪೂರ್ಣ ಸ್ವಾತಂತ್ರ್ಯ ನೀಡಿ ಮೌಲ್ಯಾಂಕನ ಮಾನದಂಡಗಳಿಗೆ ಒಪ್ಪಿಗೆ ನೀಡುವಂತೆ ಮಾಡಿದರು. ವಿವಿಧ ಸ್ಥಳಗಳಲ್ಲಿ ಆಚರಣೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವಾಗ ಅವರು ಸಮಾನ ಅಂಶಗಳನ್ನು ಭಿನ್ನತೆಗಳನ್ನು (ವ್ಯತ್ಯಾಸ) ಗಮನಿಸಬಹುದಾಗಿತ್ತು. ಮಾಹಿತಿ ಸಂಗ್ರಹ ಮತ್ತು ಸಂಘಟನೆಯ ಪ್ರತಿ ಹೆಜ್ಜೆಯಲ್ಲೂ ಪ್ರತಿ ವಿದ್ಯಾರ್ಥಿಯೂ ವೈಯಕ್ತಿಕವಾಗಿ ಮಾನದಂಡಗಳನ್ನು ಮತ್ತು ಮಾರ್ಪಡಿಸಲು ಯತ್ನಿಸುತ್ತಿದ್ದರು. ವಿವಿಧ ಸಂಘಟನೆಗಳ ಆ ದಿನಕ್ಕಾಗಿ ರೂಪಿಸಿದ ಕರಪತ್ರಗಳನ್ನು ಮಾತ್ರವಲ್ಲದೆ ಆ ಪ್ರದೇಶದ ಮಕ್ಕಳೂ ಸೇರಿದಂತೆ ಕೆಲವು ಸದಸ್ಯರ ಭಾವನೆಗಳನ್ನೂ ಸಂಗ್ರಹಿಸಿದರು. ವಿವರಣೆಯ ಮಧ್ಯದಲ್ಲಿ ಅಥವಾ ವಿವರಣೆಯ ಕೊನೆಯಲ್ಲಿ ಅವರು ಆ ದಿನದ ಬಗ್ಗೆ ತಮ್ಮ ವಿಚಾರ ಅನಿಸಿಕೆಗಳನ್ನು ಮತ್ತು ಜನರ ಉತ್ಸಾಹವನ್ನು ಅಳವಡಿಸಿದರು. ಅವರು ಯೋಜನಾಕಾರ್ಯ ಪೂರ್ಣಗೊಳಿಸಿದ ನಂತರ ಶ್ರೀಮತಿ ಸೋಹಾರೊಂದಿಗೆ ಒಟ್ಟಿಗೆ ತರಗತಿಯಲ್ಲಿ ಕುಳಿತು ಪ್ರತಿ ವರದಿಯನ್ನು ಬಾಯ್ದೆರೆದು ಓದಿರು. ಮೌಲ್ಯಾಂಕನಕ್ಕಾಗಿ ನಿರ್ಧರಿಸಿದ ಮಾನದಂಡಗಳನ್ನು ಅನುಸರಿಸಿ ಪ್ರತಿ ವಿವರಣೆಗೆ ಶ್ರೇಣಿಗಳನ್ನು ನೀಡಲು ಪ್ರಯತ್ನಿಸಿದರು. ಮೌಲ್ಯಾಂಕನದ ನಂತರ ಮೌಲ್ಯಾಂಕನದ ವೀಕ್ಷಣಾಂಶಗಳ ಆಧಾರದ ಮೇಲೆ ಅವರ ವಿವರಣೆಗಳನ್ನು ಸುಧಾರಿಸುವಂತೆ ತಿಳಿಸಲಾಯಿತು.*

Notes

**ಚಟುವಟಿಕೆ–1**

***ಒಂದು ಕ್ಷಣ ಯೋಚಿಸಿ ಮತ್ತು ಮೇಲೆ ಕೊಟ್ಟಿರುವ ಮೂರು ಸನ್ನಿವೇಶಗಳಲ್ಲಿ ಮೌಲ್ಯಾಂಕನ ಪ್ರಕ್ರಿಯೇ ಹಾಗೂ ಉದ್ದೇಶಗಳ ನಡುವಿನ ಸಮಾನಾಂಶಗಳು ಮತ್ತು ವ್ಯತ್ಯಾಸಗಳನ್ನು ಪಟ್ಟಿಮಾಡಿ.***

ಮೇಲಿನ ಮೂರು ಸನ್ನಿವೇಶಗಳಲಿ ಪ್ರಕ್ರಿಯೆ ಮತ್ತು ಉದ್ದೇಶಗಳ ನಡುವೆ ಏನಾದರೂ ವ್ಯತ್ಯಾಸವಿದೆಯೆ?

ನಾವು ಮೊದಲ ಸನ್ನಿವೇಶದೊಂದಿಗೆ ಚಿರಪರಿಚಿತರಾಗಿದ್ದೇವೆ. ಒಂದು ಘಟಕ ಅಥವಾ ಪಠ್ಯಭಾಗದ ಬೋಧನೆ ಪೂರ್ಣಗೊಳಿಸಿದ ನಂತರ ಆ ಪಠ್ಯ ಭಾಗದ ಜ್ಞಾನ ಮತ್ತು ಗ್ರಹಿಕೆ ಎಷ್ಟರ ಮಟ್ಟಿಗೆ ಆಗಿದೆ ಎಂದು ತಿಳಿಯಲು ಇಚ್ಚಿಸುತ್ತೇವೆ ಮತ್ತು ಅಪೇಕ್ಷಿತ ಸಾಧನೆಯ ಮಟ್ಟದೊಂದಿಗೆ ಪ್ರತಿ ವಿದ್ಯಾರ್ಥಿಯ ಸಾಧನೆಯನ್ನು ಹೋಲಿಸುತ್ತೇವೆ. ಈ ಪ್ರಕ್ರಿಯೆಯನ್ನು "ಕಲಿಕೆಯ ಮೌಲ್ಯಾಂಕನ" (______) ಎನ್ನುತ್ತೇವೆ ಹಾಗೂ ಇದನ್ನು ಸಾಮಾನ್ಯವಾಗಿ ಪಾಠ/ಘಟಕ ಅಥವಾ ಪಠ್ಯಭಾಗ ಪೂರ್ಣವಾದ ನಂತರ ಮಾಡಲಾಗುತ್ತದೆ.

ಎರಡನೇಯ ಸನ್ನಿವೇಶದಲ್ಲಿ ಶ್ರೀರೋಹನ್ ರವರು ಭೋಧನೆ ಕಲಿಕೆ ಪ್ರಕ್ರಿಯೆ ಸಾಗುತ್ತಿರುವಾಗಲೇ ವಿದ್ಯಾರ್ಥಿಗಳ ಕಾರ್ಯಸಾಧನೆಯ ಮೌಲ್ಯಾಂಕನ ಮಾಡುತ್ತಿದ್ದರು. ಮೌಲ್ಯಾಂಕನದ ಫಲಿತಾಂಶಗಳನ್ನು ಅವರು ಕಲಿಕೆಯ ಸುಧಾರಣೆ ಮತ್ತು ತಮ್ಮದೇ ಭೋಧನಾ ಪ್ರಕ್ರಿಯೆಯ ಸುಧಾರಣೆಗೆ ಬಳಸಿಕೊಂಡರು. ಇದು ಇಂದಿನ ಘಟಕಗಳಲ್ಲಿ ಚರ್ಚಿಸಲಾಗಿರುವ ಒಂದು ರೀತಿಯ ರೂಪಣಾತ್ಮಕ ಮೌಲ್ಯಾಂಕನವಾಗಿದ್ದು ಇದನ್ನು "ಕಲಿಕೆಗಾಗಿ ಮೌಲ್ಯಾಂಕೆನ" (______) ಎನ್ನುತ್ತೇವೆ.

ಶ್ರೀಮತಿ ಸೋಹಾರ ವಿದ್ಯಾರ್ಥಿಗಳು ಮೌಲ್ಯಾಂಕನದ ಮಾನದಂಡಗಳನ್ನು ನಿರ್ಧರಿಸಿದರು ಹಾಗೂ ಕಲಿಕೆಯ ಪ್ರಕ್ರಿಯೆಯಲ್ಲಿ ಅವುಗಳನ್ನು ಪರಾಮರ್ಶಿಸುತ್ತಿದ್ದರು, ಇದು ಅವರಿಗೆ ತಮ್ಮ ಕಲಿಕಾ ಪ್ರಕ್ರಿಯೆಯನ್ನು ಸರಿಯಾದ ದಿಕ್ಕಿನಲ್ಲಿ ಊಳಿಸಿಕೊಳ್ಳಲು ಮತ್ತು ತಮ್ಮ ಕಲಿಕಾಪ್ರಕ್ರಿಯೇಯನ್ನು ಮಾರ್ಪಡಿಸಿಕೊಳಳಲು ಸಹಾಯಕವಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ, ವಿದ್ಯಾರ್ಥಿಗಳು ಮೌಲ್ಯಾಂಕನ ಮಾನದಂಡಗಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ಬಳಸುತ್ತಿದ್ದರು. ಆದ್ದರಿಂದಲೇ ಇದನ್ನು "ಕಲಿಕೆಯಾಗಿ ಮೌಲ್ಯಾಂಕನ" ಎನ್ನುತ್ತೇವೆ.

ನಾವು ಬಹುತೇಕ ಕಲಿಕೆಯ ಮೌಲ್ಯಾಂಕನ ಕುರಿತು ಪರಿಚಿತರಾಗಿದ್ದೇವೆ, ಈಗ ಕಲಿಕಾ–ಕೇಂದ್ರಿತ ಕಲ್ಪನೆಯನ್ನು ಕೇಂದ್ರವಾಗಿ ಹೊಂದಿರುವ ಉಳಿದೆರಡು ಪ್ರಕ್ರಿಯಗಳನ್ನು ಅರ್ಥ ಮಾಡಿಕೊಳ್ಳೋಣ.

## 14.2.1 ಕಲಿಕೆಯ ಮೌಲ್ಯಾಂಕನ

ಕಲಿಕೆಯ ಮೌಲ್ಯಾಂಕೆನ ಎನ್ನುವುದು ಮೌಖಿಕ, ಕಾರ್ಯಪ್ರದ ಮತ್ತು ಲಿಖಿತ ಅಥವಾ ಇವುಗಳಲ್ಲಿ ಎರಡು ಅಥವಾ ಹೆಚ್ಚು ವಿಧಗಳ ಸಂಯೋಜನೆಯ ಮೂಲಕ ನಡೆಯುವ ಒಂದು ಬೋಧನಾ ಘಟಕ ಅಥವಾ ಶೈಕ್ಷಣಿಕ ಅವಧಿಯ ಅಂತ್ಯದಲ್ಲಿ ನಡೆಸುವ ಮೌಲ್ಯಾಂಕನವಾಗಿದೆ. 'ಈ ವಿಧದ ಮೌಲಾ ್ಯಂಕನವನ್ನು ಬಳಸಿ ನೀವು ನಿಮ್ಮ ವಿದ್ಯಾರ್ಥಿಗಳ ಬೋಧನೆಯ ನಿರ್ದಿಷ್ಟ ಅವಧಿಯಲ್ಲಿಗಳಿಸಿದ ಪರಿಕಲ್ಪನೆಗಳು ಅಥವಾ ಅನುಭವಗಳನ್ನು ಸಂಶ್ಲೇಷಿಸಿ, ಪ್ರದರ್ಶಿಸುವ ಸಾಮರ್ಥ್ಯವನ್ನು ತೀರ್ಮಾನಿಸಬಹುದು' ಕಲಿಕೆಯ ಮೌಲ್ಯಾಂಕನದ ಫಲಿತಾಂಶಗಳು ಸಾರ್ವತ್ರಿಕವಾಗಿ ವಿದ್ಯಾರ್ಥಿಗಳ ಕಲಿಕೆಯ ಬೆಳವಣಿಗೆಯ ಮೇಲುಸ್ತುವಾರಿಗೆ ಮುಖ್ಯ ಸೂಚಕಗಳೆಂದು ಪರಿಗಣಿಸಲ್ಪಟ್ಟಿವೆ. ಇವುಗಳನ್ನು ಒಬ್ಬ ವಿದ್ಯಾರ್ಥಿಯು ವಿವಿಧ ವಿಷಯಗಳಲ್ಲಿಗಳಿಸಿದ ಸಾಧನೆಯನ್ನು ಒಂದು ತರಗತಿಯಲ್ಲಿ ವಿವಿಧ ವಿದ್ಯಾರ್ಥಿಗಳ ಸಾಧನೆಯನ್ನು ಅಂತರ ಶಾಲಾ ಮಟ್ಟದಲ್ಲಿ ಇತ್ಯಾದಿ ಬೇರೆ ಬೇರೆ ರೀತಿ ಹೋಲಿಕೆ ಮಾಡಲೂ ಸಹ ಬಳಸಲಾಗುತ್ತದೆ. ಈ ಫಲಿತಾಂಶಗಳನ್ನು ಮುಂದಿನ ವಾರ್ಷಿಕ ಅವಧಿಗಳಿಗೆ ಪಠ್ಯ ಚಟುವಟಿಕೆಗಳನ್ನು ಯೋಜಿಸಲು ಸಹ ಬಳಸಲಾಗುತ್ತದೆ. ಅಲ್ಲದೆ, ಅಂಕಗಳು ಅಥವಾ ಶ್ರೇಣಿಗಳ ರೂಪದಲ್ಲಿ ವ್ಯಕ್ತವಾಗಿರುವ ಕಲಿಕೆಯ ಮೌಲ್ಯಾಂಕನದ ಫಲಿತಾಂಶಗಳು ನೀವು ಹಿಂದಿನ ಘಟಗಳಲ್ಲಿ ಈಗಾಗಲೇ ತಿಳಿದಿರುವಂತೆ ಶಾಲಾ ಕಲಿಕೆಯ ಎಲ್ಲ ಭಾಗೀದಾರರಿಗೂ ಪರಿಚಿತವಾಗಿದೆ.

**ಕಲಿಕೆ ಮತ್ತು ಮೌಲ್ಯಾಂಕನ ಸಂರಚನೆ**

Notes

*ಸಾಧನಗಳು ಮತ್ತು ತಂತ್ರಗಳು:* ಕಲಿಕೆಯ ಮೌಲ್ಯಾಂಕನದಲ್ಲಿ ಮೌಲ್ಯಾಂಕನ ಮಾಡಬೇಕಾದ ಕಾರ್ಯದ ಸ್ವರೂಪದ ಆಧಾರದ ಮೇಲೆ ನೀವು ವೈವಿಧ್ಯಮಯ ಸಾಧನಗಳನ್ನು, ತಂತ್ರಗಳನ್ನು ಬಳಸಬೇಕಾಗುತ್ತದೆ. ಹಿಂದಿನ ಘಟಕಗಳಲ್ಲಿ ಹೇಳಿರುವಂತೆ ನೀವು ಅಗತ್ಯವಾದ ಮಾಹಿತಿಯ ವಿಧವನ್ನು ಆಧರಿಸಿ ಉದ್ದೇಶಪೂರ್ವಕವಾಗಿ ಸಾಧನ ಮತ್ತು ತಂತ್ರಗಳನ್ನು ಆಯ್ಕೆ ಮಾಡಬೇಕು. ಕಲಿಕೆಯ ಮೌಲ್ಯಾಂಕನದಲ್ಲಿ ಬಳಸುವ ಕೆಲವು ಸಾಧನೆಗಳಿಗೆ ಉದಾಹರಣೆಗಳೆಂದರೆ, ವಿವಿಧ ರೀತಿಯ ಪ್ರಶ್ನೆಗಳನ್ನು ಬಳಸುವ ಪರೀಕ್ಷೆಗಳು. ವ್ಯಕ್ತಿ ಕಥಾನಕ ದಾಖಲೆಗಳು (ಮೌಲ್ಯಾಂಕನ ಮಾಡಲಾಗುತ್ತಿರುವ ಕಾರ್ಯ ಅಥವ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಯ ಜೀವನದಲ್ಲಿ ನಡೆದ ಪ್ರಮುಖ ಘಟನೆಗಳ ವಿವರಣೆ) ದರ್ಜಾಮಾಪನಿಗಳು, ತಪಶೀಲು ಪಟ್ಟಿಗಳು ಇತ್ಯಾದಿ.

*ಅಪೇಕ್ಷಿತ ಜವಾಬ್ದಾರಿಗಳು:* ಶಿಕ್ಷಕರಾಗಿ ಕಲಿಕೆಯ ಮೌಲ್ಯಾಂಕನ ಮತ್ತು ಅದರ ಅನುಸುಣಾಕ್ರಮದ ಸಂಪೂರ್ಣ ಜವಾಬ್ದಾರಿ ಮೇಲಿದೆ ಎಂಬುದನ್ನು ನೀವು ಮನಗಾಣಬೇಕು. ನೀವು ಗಮನಹರಿಸಬೇಕಾದ ಕೆಲವು ಅಂಶಗಳು ಹೀಗಿವೆ.

- ಮೌಲ್ಯಾಂಕನ ಕಾರ್ಯ ಅಥವಾ ನಿಯೋಜಿತ ಕಾರ್ಯ ಉದ್ದೇಶಗಳು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಅರ್ಥವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಕಾರ್ಯಗಳನ್ನು / ನಿಯೋಜಿತ ಕಾರ್ಯಗಳನ್ನು ಪೂರೈಸಲು ಸಮಂಜಸವಾದ ಕಾಲಮಿತಿಯನ್ನು ಸಿದ್ಧಪಡಿಸಬೇಕು.
- ಕಾರ್ಯ / ನಿಯೋಜಿತ ಕಾರ್ಯ ಪೂರೈಕೆಯಲ್ಲಿ ಕೆಲವು ವಿದ್ಯಾರ್ಥಿಗಳು ಎದುರಿಸುವ ಸವಾಲುಗಳನ್ನು ಕುರುತು ಸೂಕ್ಷ್ಮತೆ ಇರಬೇಕು
- ನಿಮ್ಮ ನಿರ್ಧಾರಗಳನ್ನು ಯಾವ ಆಧಾರದ ಮೇಲೆ ಕೈಗೊಳ್ಳಲಾಗಿದೆ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಧಾರಗಳನ್ನು ಸಂಗ್ರಹಿಸಬೇಕು.

---

**ಚಟುವಟಿಕೆ – 2**

ನಿಮ್ಮ ಶಾಲೆಯಲ್ಲಿ "ಕಲಿಕೆಯ ಮೌಲ್ಯಾಂಕನದ" ಪ್ರಕ್ರಿಯೆಗಳ ಬಗ್ಗೆ ನಿಮಗೆ ಪರಿಚಯವಿದೆ. ವಿದ್ಯಾರ್ಥಿಗಳ ಕಲಿಕೆ ಮತ್ತು ಸಾಧನೆಯ ಗುಣಮಟ್ಟ ಪ್ರೋತ್ಸಾಹಿಸಲು ಹೆಚ್ಚು ಪರಿಣಾಮಕಾರಿಯಾಗುವಂತೆ ಮಡಲು ಕೈಗೊಳ್ಳಬೇಕಾದ ಕ್ರಮಗಳ ಪಟ್ಟಿ ತಯಾರಿಸಿ.

---

ನೀವು ವಿದ್ಯಾರ್ಥಿಗಳಿಗೆ ನೀಡುವ ಅಂಕಗಳು / ಶ್ರೇಣಿಗಳಿಗೆ ಬಲವಾದ ಸಮರ್ಥನೆಗಳಿರಬೇಕು.

*ಕಲಿಕೆ ಮೌಲ್ಯಾಕೆನವನ್ನು ಪರಿಣಾಮಕಾರಿಯನ್ನಾಗಿ ಮಾಡುವುದು:* ಕಲಿಕೆಯ ಮೌಲ್ಯಾಂಕನವು ಸಮಂಜಸವೂ, ನ್ಯಾಯಯುತವೂ ಆಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ನೀವು ಗಮನದಲ್ಲಿಡಬೇಕಾದ ಕೆಲವು ಅಂಶಗಳನ್ನು ಕೆಳಗೆ ಕೊಡಲಾಗಿದೆ.

- ವಿದ್ಯಾರ್ಥಿಯ ಸಾಧನೆಯ ಸರಿಯಾದ ಚಿತ್ರಣ ಒದಗಿಸಲು ನಿಮಗೆ ಸಾಧ್ಯವಾಗುವಂತೆ ನೀವು ಸಾಕಷ್ಟು ಸಾಕ್ಷ್ಯಧಾರಗಳನ್ನು ಸಂಗ್ರಹಿಸಬೇಕು. ಕೇವಲ ಲಿಖಿತ ಪರೀಕ್ಷೆಫಲ ಫಲಿತಾಂಶಗಳನ್ನು ಅವಲಂಬಿಸುವುದು ಉದ್ದೇಶ ಸಾಧನೆಗೆ ಸಹಾಯಕವಲ್ಲ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನುಯ ಪ್ರದರ್ಶಿಸಲು ಸಾಧ್ಯವಾಗುವಂತೆ ಸಾಕ್ಷ್ಯಧಾರ ಸಂಗ್ರಹಿಸಲು ನೀವು ವೈವಿಧ್ಯಮಯ ಮೌಲ್ಯಾಂಕನ ತಂತ್ರಗಳನ್ನು ಬಳಸಬೇಕು.

Notes

- ನೀವು ಕೇವಲ ಒಂದು ಲಿಖಿತ ಪರೀಕ್ಷೆಯನ್ನು ನಿರ್ವಹಿಸಿ ಅದನ್ನು ಕಲಿಕೆಯ ಮೌಲ್ಯಾಂಕನದ ಸಾಕ್ಷ್ಯಾಧಾರವನ್ನಾಗಿ ಬಳಸಿದರೆ, ಹಲವಾರು ವಿದ್ಯಾರ್ಥಿಗಳು ಕೆಲವು ಪ್ರಶ್ನೆಗಳನ್ನು ಉತ್ತರಿಸುವಲ್ಲಿ ಅನಾನುಕೂಲತೆ ಅನುಭವಿಸಿರುವ ಸಾಧ್ಯತೆ ಇರುತ್ತದೆ. ಹೀಗೆ ಇಂತಹ ಮಕ್ಕಳಿಗೆ ಬೇರೊಂದು ಕಾರ್ಯದಲ್ಲಿ ಇನ್ನು ಉತ್ತಮವಾಗಿ ಸಾಧನೆ ಮಾಡುವ ಸಾಧ್ಯತೆ ಇರುವುದಾದರೂ, ಅವರಿಗೆ ಕಡಿಮೆ ಅಂಕ/ಶ್ರೇಣಿ ನೀಡಲಾಗಿರುತ್ತದೆ.
- ಒಂದು ನಿರ್ದಿಷ್ಟ ಮೌಲ್ಯಂಕನ ಕಾರ್ಯ ಸಾಧನದೊಳಗೆ ತಮ್ಮ ವೈಯಕ್ತಿಕ ಅವಶ್ಯಕತೆಗಳಿಗೆ ಸಾಕಷ್ಟು ಪರ್ಯಾಯ ಆಯ್ಕೆಗಳು ಇರಬೇಕು.
- ನಿಮ್ಮ ವಿದ್ಯಾರ್ಥಿಗಳು ನಿರ್ದಿಷ್ಟ ವಿಷಯ ವಸ್ತು ಘಟಕದ ಕಲಿಕೆಯನ್ನು ಕುರಿತು ನೀವು ಹಲವಾರು ದತ್ತಾಂಶಗಳನ್ನು ಸಂಗ್ರಹಿಸಿದ್ದರೂ ಸಹ ಕಲಿಕೆಯ ಮೌಲ್ಯಾಂಕನವನ್ನು ನೀವು ಅತ್ಯಂತ ಸ್ಥಿರತೆಯುಳ್ಳ ಮತ್ತು ಇತ್ತೀಚಿನ ದತ್ತಾಂಶದ ಆಧಾರದ ಮೇಲೆಯೇ ಮಾಡಬೇಕು.
- ಒಂದು ಪಾಠ್ಯ/ಕ್ಷೇತ್ರ ಕುರಿತು ಕಲಿಕೆಯ ಮೌಲ್ಯಾಂಕನ ವನ್ನು ಪ್ರಾರಂಭಿಸುವ ಮೊದಲು ಅವಕಾಶಗಳನ್ನು ಒದಗಿಸಲಾಗಿದೆ ಹಾಗೂ ಅಭ್ಯಾಸದ ವೇಳೆಸುಧಾರಣೆ ಮಾಡಿಕೊಳ್ಳಲು ಸೂಕ್ತ ಹಿಮ್ಮಾಹಿತಿ ಒದಗಿಸಲಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಿ
- ವಿದ್ಯಾರ್ಥಿಗಳ ಉತ್ತರಗಳು ಮತ್ತು ಕಾರ್ಯಗಳಿಗೆ ಅಂಕ / ಶ್ರೇಣಿ ನೀಡುವಾಗ ಯಾವುದೇ ಪಕ್ಷಪಾತ ಇಲ್ಲದಂತೆ ಎಚ್ಚರಿಕೆ ವಹಿಸುವುದು ಅವಶ್ಯ. ಈ ಹಿಂದೆಯೇ ಹೇಳಿರುವಂತೆ ಅಂಕ ಅಥವಾ ಶ್ರೇಣಿಗಳನ್ನು ನಿಮ್ಮ ವೃತ್ತಿಪರ ತೀರ್ಮಾನಗಳನ್ನು ಬಳಸಿ ನೀಡಬೇಕು. ಇದರಿಂದ ಅಗತ್ಯವಿದ್ದಾಗ ನೀವು ನೀಡಿದ ಅಂಕ/ಶ್ರೇಣಿಗಳನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗುವುದು.
- ಕೆಲವು ವಿದ್ಯಾರ್ಥಿಗಳ ಫಲಿತಾಂಶಗಳು ಇತ್ತೀಚಿನ ಮೌಲ್ಯಾಂಕನ ಕಾರ್ಯಗಳಲ್ಲಿ ಸ್ಥಿರತೆಯ ಕೊರತೆ ಅಥವಾ ಏರಿಳಿತ ಉಂಟಾಗಿದೆ ಎಂದು ನಿಮಗೆ ಕಂಡುಬಂದರೆ ಅವುಗಳನ್ನು ಎಚ್ಚರಿಕೆಯಿಂದ ಪರಿಶೀಲಿದಿ ಹಾಗೂ ಅಗತ್ಯವಿದ್ದರೆ ಈ ಮನೆಗಳಲ್ಲಿ ಮತ್ತು ಶಾಲೆಯಲ್ಲಿ ಈ ವಿದ್ಯಾರ್ಥಿಗಳ ಕಲಿಕಾ ಸನ್ನಿವೇಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಸ್ಥಿರತೆ ಇಲ್ಲದ ಫಲಿತಾಂಶಗಳಿಗೆ ನಿಜವಾದ ಕಾರಣಗಳನ್ನು ತಿಳಿಯಿರಿ.

ಇ1. ಈ ಕೆಳಗಿನ ಯಾವುದು ಕಲಿಕೆಯ ಮೌಲ್ಯಾಂಕನಕ್ಕೆ ಉದಾಹರಣೆ ಅಲ್ಲ>

ಎ. ವಾರ್ಷಿಕ ಪರೀಕ್ಷೆ
ಬಿ. ಗೃಹ ಪಾಠ ಕಾರ್ಯದ ಮೌಲ್ಯಾಂಕನ
ಸಿ. ವಿದ್ಯಾರ್ಥಿವೇತನ ಪರೀಕ್ಷೆ

ಇ2. ಪ್ರಾಥಮಿಕ ಶಾಲೆಗಳಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಉತ್ತೀರ್ಣಗೊಳಿಸಲು ವಾರ್ಷಿಕ ಪರೀಕ್ಷೆಯಲ್ಲಿ ನೀಡಲಾದ ಆಂಕ ಶ್ರೇಣಿಗಳನ್ನು ಬಳಸಬಹುದೆ?

### 14.2.2 ಕಲಿಕೆಗಾಗಿ ಮೌಲ್ಯಾಂಕನ

ಒಂದು ಘಟಕ/ಪಾಠ ಅಥವಾಶ ಶೈಕ್ಷಣಿಕ ಅವಧಿಯ ಕೊನೆಯಲ್ಲಿ ಲಭ್ಯವಿರುವ ಮತ್ತು ಹಂಚಿಕೊಳ್ಳಹುದಾದ ಮೌಲ್ಯಾಂಕನ ಫಲಿತಾಂಶಗಳನ್ನು ಹೊಂದಿರುವ 'ಕಲಿಕೆಯ ಮೌಲ್ಯಮಾಪನ' ಕುರಿತು ಆಲೋಚಿಸಿ. ಘಟಕದ ಅಥವಾ ಶೈಕ್ಷಣಿಕ ಅವಧಿಯ ಕೊನೆಯಲ್ಲಿ ಪಡೆದ ಹಿಮ್ಮಾಹಿತಿಯನ್ನು ಆಧರಿಸಿ ಸೂಕ್ತ ಕ್ರಮ ಕೈಗೊಳ್ಳುವುದು ತುಂಬಾ ತಡವಾದುದು ಎನಿಸುವುದಲ್ಲವೇ?

ಒಬ್ಬ ವಿದ್ಯಾರ್ಥಿಯು ಘಟಕದ / ಟರ್ಮ್‌ನ ಕೊನೆಯಲ್ಲದೆ ಸರಿಯಾದ ಸಮಯಕ್ಕೆ ತನ್ನ ಕಲಿಕೆ ಕಾರ್ಯ ಸಾಧನೆಯ ಬಗ್ಗೆ ಹಿಮ್ಮಾಹಿತಿ ಪಡೆದರೆ ಬಹುಶಃ ಅವಳು/ಆವನು ತಾನು ಪ್ರದರ್ಶಿಸಬಹುದು. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಸುಧಾರಿಸಿಕೊಳ್ಳಲು ಸಹಾಯಕವಾಗವಂತರೆ ವಿಶಿಷ್ಟವಾಗಿ ವಿನ್ಯಾಸಗೊಳಿಸಿದ ಮೌಲ್ಯಾಂಕನವು ಪರಿಣಾಮಕಾರಿ ಎನಿಸುತ್ತದೆ ಹಾಗೂ ಇದಕ್ಕಾಗಿ ಮೌಲ್ಯಾಂಕನವು ಆಗಾಗ್ಗೆ ನಡೆಯಬೇಕಲ್ಲದೆ —ಪಚಾರಿಕವಾಗಿದ್ದು ಸರಿಯಾದ ಸಮಯಕ್ಕೆ ಒದುಗುವ ಹಿಮ್ಮಾಹಿತಿ ವ್ಯವಸ್ಥೆಯನ್ನು ಹೊಂದಿರಬೇಕು. ಈ ವಿಧದ ಮೌಲ್ಯಾಂಕನವು 'ಕಲಿಕೆಗಾಗಿ ಮೌಲ್ಯಾಂಕನ" ಎನಿಸಿದೆ.

Notes

*ಕಲಿಕೆಗಾಗಿ ಮೌಲ್ಯಂಕನದ ಪ್ರಮುಖ ಉದ್ದೇಶಗಳು ಹೀಗಿವೆ:*

- ಪ್ರತಿ ಮಗುವೂ ತಾನು ಹೇಗೆ ಮಾಡುತ್ತಿದ್ದೇನೆಂದು ತಿಳಿಯುವಂತೆ ಮಾಡುವುದು, ಸುಧಾರಿಸಿಕೊಳ್ಳಲು ತಾನೇನು ಮಾಡಬೇಕು ಮತ್ತು ಅಲ್ಲಿಗೆ ತಲುಪುವುದು ಹೇಗೆಂಬುದನ್ನು ಗ್ರಹಿಸುವುದು. ಮಗುವಿಗೆ ತನ್ನ ಕಲಿಕೆಯನ್ನು ನಿರಂತರವಾಗಿ ಸುಧಾರಿಸಿಕೊಳ್ಳುವುದಕ್ಕಾಗಿ ಸಕ್ರಿಯ ಕಲಿಕಾರ್ಥಿ ಆಗಲು ಪ್ರೇರಣೆ ಉಂಟಾಗುವುದಕ್ಕಾಗಿ ಅಗತ್ಯವಾಗಿರುವ ಬೆಂಬಲ ಒಚಗಿಸಲಾಗುತ್ತದೆ;
- ಪ್ರತಿ ಶಿಕ್ಷಕರು ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಸಮರ್ಪಕವಾದ ತೀರ್ಮಾನಗಳನ್ನು ಕೈಗೊಳ್ಳುವುದು. ಪ್ರಗಿಯ ಸಂಕಲ್ಪನೆಗಳೂ ಮತ್ತು ತತ್ವಗಳನ್ನು ಗ್ರಹಿಸುವುದು ಹಾಗೂ ಪ್ರತಿ ವಿದ್ಯಾರ್ಥಿಯ ಅದರಲ್ಲಿಯೂ ತಮ್ಮ ಅಂತಸ್ಥ ಸಾಮರ್ಥ್ಯಗಳನ್ನು ಪೂರ್ಣವಾಗಿ ವಿಕಾಸಗೊಳಿಸಿದವರ ಕಲಿಕೆಯನ್ನೇ ಸುಧಾರಿಸಲು ಯೋಜನೆ ರೂಪಿಸಲು ಅವರ ಮೌಲ್ಯಾಂಕನ ಫಲಿತಾಂಶಗಳನ್ನು ಬಳಸುವ ಕ್ರಮದಲ್ಲಿ ಅವರನ್ನು ಸಜ್ಜುಗೊಳಿಸುವುದು;
- ಪ್ರತಿ ಶಾಲೆಯೂ ವಿದ್ಯಾಥಿಗಳನ್ನು ನಯಮಿತವಾದ, ಉಪಯುಕ್ತವಾದ, ನಿರ್ವಹಿಸಬಹುದಾದ ಹಾಗೂ ನಿಖರವಾದ ಮೌಲ್ಯಾಂಕನ ಮಾಡಲು ಮತ್ತು ಮೌಲ್ಯಾಂಕನದ ಫಲಿತಾಂಶಗಳನ್ನು ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ಜಾಡು ಹಿಡಿಯಲು ಬಳಸುವಂತೆ ಅಗತ್ಯವಾದ ಒಂದು ಸಂರಚಿತ ಮತ್ತು ವ್ಯವಸ್ಥಿತ ಮೌಲ್ಯಾಂಕನ ವ್ಯವಸ್ಥೆಯನ್ನು ರೂಪಿಸುವುದು;
- ಪ್ರತಿ ಪೋಷಕರು ಅಥವಾ ರಕ್ಷಕರು ತಮ್ಮ ಮಗು ಹೇಗೆ ಕಲಿಯುತ್ತಿದೆ, ಸುಧಾರಣೆ ಮಾಡಲು ತಾವೇನು ಮಾಡಬೇಕು ಮತ್ತು ಅವರು ಯಾವ ರೀತಿ ಮಗುವಿಗೆ ಮತ್ತು ಅವರ ಶಿಕ್ಷಕರಿಗೆ ಬೆಂಬಲ ನೀಡಬಹುದು ಎಂಬುದನ್ನು ತಿಳಿಸಲು ಸಹಾಯ ಮಾಡುವುದು.

ಕಲಿಕೆಗಾಗಿ ಮೌಲ್ಯಾಂಕನವು ಎರಡು ಘಟ್ಟಗಳಿಂದ ಕೂಡಿದೆ – *ಆರಂಭಿಕ ಅಥವಾ ನೈದಾನಿಕ ಮೌಲ್ಯಾಂಕನ ಮತ್ತು ರೂಪಣಾತ್ಮಕ ಮೌಲ್ಯಾಂಕನ:*

- *ನೈದಾನಿಕ ಮೌಲ್ಯಾಂಕನವು* ಒಂದು ಘಟಕದ ಕಲಿಕೆ ಪ್ರಾರಂಭವಾಗುವ ಮೊದಲು ನಡೆಸಲಾಗುವ ಮೌಲ್ಯಾಂಕನವಾಗಿದ್ದು ಇದು ಒಬ್ಬ ವಿದ್ಯಾರ್ಥಿಯು ಆ ಪಾಠ ಭಾಗದ ಬಗ್ಗೆ ಏನನ್ನು ತಿಳಿದಿದ್ದಾಬೆ ಅಥವಾ ತಿಳಿದಿಲ್ಲ ಎಂಬುದನ್ನು ನಿರ್ಧರಿಸಲು ಬಳಸಲಾಗುತ್ತದೆ. ಈ ನಮೂನೆಯ ಮೌಲ್ಯಾಂಕನವು ನಿಮ್ಮ ವಿದ್ಯಾರ್ಥಿಗಳು ಕಲಿಕೆಯಲ್ಲಿ ಯಾವ ಹಂತದಲ್ಲಿದ್ದಾನೆ ಮತ್ತು ಅವರ ಕಲಿಕೆಯನ್ನು ಮುಂದುವರೆಸಲು ಅಥವಾ ಸುಧಾರಿಸಲು ವಿದ್ಯಾರ್ಥಿಗಳ ಕಲಿಕೆ ಮಟ್ಟಕ್ಕೆ ಸೂಕ್ತವಾದ ಯಾವ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯವದೆ ಎಂಬುದನ್ನು ಗುರುತಿಸಿಕೊಳ್ಳಲು ಸಹಾಯಕವಾಗಿದೆ. ಉದಾಹರಣೆಗೆ, ನೀವು 6ನೇಯ ತರಗತಿಗೆ ಭಾರತದ ವಿವಿಧ ರಾಜ್ಯಗಳನ್ನು ಕುರಿತು ಬೋಧಿಸಲು ಯೋಚಿಸಿತ್ತಿದ್ದರೆ, ವಿದ್ಯಾರ್ಥಿಗಳಿಗೆ ಅಟ್ಲಾಸ್ ಚೆನ್ನಾಗಿ ಬಳಸಲು ಗೊತ್ತಿದೆಯೆ ಎಂಬುದನ್ನು ಮೊದಲು ತಿಳಿಯಬೇಕು. ತರಗತಿಯಲ್ಲಿ ಬಹುತೇಕ ಮಕ್ಕಳಿಗೆ ಅಟ್ಲಾಸ್ ಬಳಸುವುದು ಗೊತಿದೆ ಎಂದು ತಿಳಿದರೆ, ಅಂತಹ ಮಕ್ಕಳೆಲ್ಲರೂ ಅಟ್ಲಾಸ್ ಬಳಕೆಯನ್ನು ಅನ್ವಯಿಸುವ ಕಾರ್ಯದಲ್ಲಿ ತೊಡಗಿಸಿ, ಗೊತ್ತಿರದ ಮಕ್ಕಳ ಗುಂಪಿಗೆ ಅಟ್ಲಾಸ್ ಬಳಕೆ ಕುರಿತು ನೀವು ಪ್ರತ್ಯೇಕವಾಗಿ ಕಲಿಸಬಹುದು.

- *ರೂಪಣಾತ್ಮ ಮೌಲ್ಯಾಂಕನ* ಎಂದರೆ ತರಗತಿಯಲ್ಲಿ ಒಂದು ಅಭ್ಯಯನ ಘಟಕದ ಕಲಿಕೆಯ ಮೂಲಕ ಸಾಗುತ್ತರುವಾಗ ವಿದ್ಯಾರ್ಥಿಯ ಜ್ಞಾನ ಮತ್ತು ಕೌಶಲಗಳು, ಕಲಿಕೆಯಲ್ಲಿರುವ ಕೊರತೆಗಳನ್ನು ನಿರ್ಧರಿಸಲು ಅಗತ್ಯ ದತ್ತಾಂಶಗಳನ್ನೇ ಸಂಗ್ರಹಿಸುವ ಪ್ರಕ್ರಿಯೆಯಾಗಿದೆ. ನಿಮ್ಮ ವಿದ್ಯಾಥಿಗಳ ಅಗತ್ಯಗಳಿಗೆ ಹೊಂದುವಂತೆ ನಿಮ್ಮ ಬೋಧನಾ ತಂತ್ರಗಳನ್ನು ಸೂಕ್ತವಾಗಿ ಬದಲಾಯಿಸಿ, ಕಲಿಕೆಗೆ ಮಾರ್ಗದರ್ಶನ ನೀಡಲು ರೂಪಣಾತ್ಮಕ ಮೌಲ್ಯಾಂಕನದ ಫಲಿತಾಂಶಗಳನ್ನು ಬಳಸಬಹುದು. ಅಟ್ಲಾಸ್ ಬಳಕೆಯ ಉದಾಹರಣೆಯನ್ನು ಗಮನಿಸಿದಾಗ, ವಿದ್ಯಾಥಗಳ ಅಟ್ಲಾಸ್ ಬಳಸಿ ಮಾಡಿರುವ ಕಾರ್ಯದ ಬಗ್ಗೆ ಹಿಮ್ಮಾಹಿತಿ ನೀಡಿ ಹೊಂದಾಣಿಕೆ ಮಾಡಲು, ಮರುಚಿಂತನೆ ಮಾಡಲು, ಅವರ ಕಲಿಕೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಸಲಹೆಗಳನ್ನು ಒದಗಿಸಬಹುದು.

Notes

- ರೂಪಣಾತ್ಮಕ ಮೌಲ್ಯಾಂಕನದ ಮೂಲಕ ಈಗಾಗಲೇ ಬೋಧಿಸಲಾಗಿರುವ ಅಂಶಗಳ ಬಹುತೇಕ ಮಕ್ಕಳಿಗೆ ಗ್ರಹಿಕೆಯಾಗಿಲ್ಲ ಎಂದು ಕಂಡು ಬಂದರೆ, ನೀವು ಮುಂದಿನ ಪಾಠಕ್ಕೆ ಸಾಗುವ ಮೊದಲು ಆ ಪರಿಕಲ್ಪನೆಗಳು ಮತ್ತು ಅಥವಾ ಕೌಶಲಗಳನ್ನು ಕಲಿಸಲು ಭಿನ್ನವಾದ ಪರ್ಯಾಯ ವಿಧಾನಗಳನ್ನು ಬಳಸಬೇಕಾದ ಅಗತ್ಯವಿದೆ.

*ಕಲಿಕೆಗಾಗಿ ಮೌಲ್ಯಾಂಕನ (೦ ಈ ಐ)ದ ಲಕ್ಷಣಗಳು ಈ ಕೆಳಕಂಡಂತಿವೆ:*

- ಪ್ರತಿಯೊಬ್ಬ ವಿದ್ಯಾರ್ಥಿಯ ಸಾಮರ್ಥ್ಯದ ಕ್ಷೇತ್ರಗಳನ್ನು ಮತ್ತು ಅಗತ್ಯವನ್ನು ಗುರುತಿಸುವ ಮೂಲಕ ಎಲ್ಲ ವಿದ್ಯಾರ್ಥಿಗಳಿಗೂ ಪ್ರತಿಕ್ರಿಯಾಶೀಲವಾಗಿರುತ್ತದೆ;
- ಅದು ವಿವರಣಾತ್ಮಕ ಸ್ವರೂಪದ್ದಾಗಿದ್ದು ತೀರ್ಮಾನಾತ್ಮಕವಾಗಿಲ್ಲದುದರಿಂದ ಮೌಲ್ಯಮಾಪನಾತ್ಮಕವಲ್ಲ;
- ಉತ್ತಮ ಗುಣಮಟ್ಟದ ಹಿಮ್ಮಾಹಿತಿ ಬಳಕೆಯ ಮೂಲಕ, ಅದು ವಿದ್ಯಾರ್ಥಿಗಳಿಗೆ ಅವರು ಯಾವುದನ್ನು ಉತ್ತಮವಾಗಿ ಮಾಡಿದ್ದಾರೆ, ಎಲ್ಲಿ ಕಠಿಣತೆ ಎದುರಿಸಿದ್ದಾರೆ ಮತ್ತು ತಮ್ಮ ಕಾರ್ಯವನ್ನು ಸುಧಾರಿಸಿಕೊಳ್ಳಲು ಯಾವುದನ್ನು ಭಿನವಾಗಿ ಮಾಡಬೇಕಾಗಿದೆ ಎಂಬ ಮಾಹಿತಿ ನೀಡುತ್ತದೆ;
- ವಿದ್ಯಾರ್ಥಿಗೆ ಈಗ ಸಾಗುತ್ತಿರುವ ಕಲಿಕಾ ಪ್ರಕ್ರಿಯೆಯನ್ನು ಸುಧಾರಣೆ ಮಾಡಿಕೊಳ್ಳಲು ಹಿಮ್ಮಾಹಿತಿ ನೀಡಬೇಕಾಗಿರುವುದರಿಂದ ಮೌಲ್ಯಾಂಕನವು ಆಗಾಗ್ಗೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ನಿರಂತರವಾಗಿ ನಡೆಯುತ್ತದೆ;
- ಅದು ವಿದ್ಯಾರ್ಥಿಗಳು ತಮ್ಮ ಕಾರ್ಯ ಮತ್ತು ಕಲಿಕೆ ಕುರಿತು ಚಿಂತನೆ ನಡೆಸಲು ಮತ್ತು ಅವುಗಳನ್ನು ಸುಧಾರಿಸಿಕೊಳ್ಳಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವಂತೆ ಮಾಡುತ್ತದೆ;
- ಅದು ವಿದ್ಯಾರ್ಥಿಗಳು ತಪ್ಪು ಮಾಡುವಂತೆ ಅಪೇಕ್ಷಿಸುತ್ತದೆ ಮತ್ತು ಈ ತಮ್ಮ ಕಲಿಕೆಯನ್ನು ಸುಧಾರಿಸಿಕೊಳ್ಳೂವುದಕ್ಕಾಗಿ ಈ ತಪ್ಪುಗಳನ್ನು ಪರಿಶೀಲಿಸುವಂತೆ ನಿರ್ದೇಶಿಸುತ್ತದೆ;
- ಅದು ವಿದ್ಯಾರ್ಥಿಗಳು ತಮ್ಮ ಕಾರ್ಯವನ್ನು ಸ್ವಯಂ ಹಾಗೂ ಸಹಪಾಠಿಗಳ ಸಂರಚಿತ ಪರಿಶೀಲನೆಯಲ್ಲಿ ತೊಡಗಿಸುತ್ತದೆ;
- ಮುಂದಿನ ದಿನಗಳಲ್ಲಿ ಅಂತಿಮವಾಗಿ ಶ್ರೇಣೀಕರಿಸುವ ಮತ್ತು ವರದಿ ಮಾಡುವ ಉದ್ದೇಶಕ್ಕಾಗಿ ಬಳಸಲಾಗುವ 'ಕಲಿಕೆಯ ಮೌಲ್ಯಾಂಕನ' ದಲ್ಲಿ ಸುಧಾರಿತ ಕಾರ್ಯ ನಿರ್ವಹಣೆಯನ ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ವಿದ್ಯಾರ್ಥಿಗಳ ಕಲಿಕೆಯನ್ನು ಸುಸ್ಥಿರಗೊಳಿಸಲು ಬೆಂಬಲ ಒದಗಿಸುವ ರೀತಿಯಲ್ಲಿ ಯೋಚಿಸಿ ಬಳಸಲಾಗುತ್ತದೆ.

The UK Assessment Reform Groupನ ಮೌಲ್ಯಾಂಕನ ಸುಧಾರಣಾ ಸಮೂಹ (1999) ಗುರುತಿಸಿರುವ ಕಲಿಕೆಗಾಗಿ ಮೌಲ್ಯಾಂಕನದ "ದೊಡ್ಡ ಐದು ತತ್ವಗ 'ಳು" ಕೆಳಗಿನಂತಿವೆ.

- ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಹಿಮ್ಮಾಹಿತಿಯ ಪ್ರಾವಧಾನ.
- ವಿದ್ಯಾರ್ಥಿಗಳಿಗೆ ತಮ್ಮದೇ ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು
- ಮೌಲ್ಯಾಂಕನವನ್ನು ಪರಿಗಣನೆಗೆ ತೆಗೆದುಕೊಳ್ಳಲು ಭೋದನೆಯನ್ನು ಹೊಂದಾಣಿಕೆ ಮಾಡುವುದು. ಕಲಿಕೆಯ ಮೇಲೆ ನಿರ್ಣಾಯಕ ಪ್ರಭಾವ ಬೀರುವ ಅಂಶಗಳಾದ
- ವಿದ್ಯಾರ್ಥಿಗಳ ಪ್ರೇರಣೆ ಮತ್ತು ಆತ್ಮಗೌರವಗಳ ಮೇಲೆ ಮೌಲ್ಯಾಂಕನ ಹೊಂದಿರುವ ಮಹತ್ವದ ಪ್ರಭಾವವನ್ನು ಗುರುತಿಸುವುದು.
- ವಿದ್ಯಾರ್ಥಿಗಳು ತಮ್ಮನ್ನು ಸ್ವತಃ ಮೌಲ್ಯಾಂಕನ ಮಾಡಿಕೊಂಡು ಸುಧಾರಣೇ ಮಾಡಿಕೊಳ್ಳುವುದ ಹೇಗೆಂಬುದನ್ನು ಗ್ರಹಿಸಬೇಕಾದ ಅಗತ್ಯ

'ಕಲಿಕೆಗಾಗಿ ಮೌಲ್ಯಾಂಕನ' ದ ಕ್ರಮಗಳು ಮತ್ತು ವಿಧಾನಗಳೂ:

ಒಂದು ತರಗತಿ ಸನ್ನಿವೇಶದಲ್ಲಿ ಎಲ್ಲ ವಿದ್ಯಾರ್ಥಿಗಳ ಕಲಿಕೆಯ ಮೌಲ್ಯಾಂಕನಕ್ಕಾಗಿ ತಂತ್ರಗಳನ್ನು ನಿರ್ಧರಿಸುವಾಗ ನೀವು ಅಳವಡಿಸಿಕೊಂಡ ವಿಧಾನಗಳು ಎಷ್ಟರ ಮಟ್ಟಿಗೆ ಎಲ್ಲ ವಿದ್ಯಾರ್ಥಿಗಳು

ರಚನಾತ್ಮಕ ಹಿಮ್ಮಾಹಿತಿ ಪಡೆಯುವುದನ್ನು ಖಾತ್ರಿ ಪಡಿಸುತ್ತದೆ ಮತ್ತು ನಿಮ್ಮ ಬೋಧನೆ ಕುರಿತು ಹಿಮ್ಮಾಹಿತಿ ಪಡೆಯಲು ಸಹಾಯಕವಾಗಿದೆ ಎಂಬುದನ್ನು ಆಲೋಚಿಸಿ.

ಇದನ್ನು ನಿರ್ವಹಿಸಲು ಮುಖ್ಯವಾಗಿ ನಾಲ್ಕು ಕ್ರಮಗಳಿವೆ.

- ಶಿಕ್ಷಕ – ನೇತೃತ್ವದ ಮೌಲ್ಯಾಂಕನ (ಲಿಖಿತ ಅಥವಾ ಮೌಖಿಕ ಪರೀಕ್ಷೆ ವಿದ್ಯಾರ್ಥಿಗಳೊಂದಿಗೆ ಅಂತರ್ ಕ್ರಿಯೇ ನಿಯೋಜಿತ ಕಾರ್ಯಗಳು, ವಿದ್ಯಾರ್ಥಿಗಖ ಚಟುವಟಿಕೆಗಳ ವೀಕ್ಷಣೆ ಮುಂತಾದ ಹಲವು ವಿಧಾನಗಳ ಬಳಕೆ).
- ವಿದ್ಯಾರ್ಥಿಯ ಸ್ವ–ಮೌಲ್ಯಾಂಕನ (ತನ್ನದೇ ಪ್ರತಿಕ್ರಿಯೆಗಳು ಮತ್ತು ಇತರರ ನಿರ್ಣಯ/ತೀರ್ಮಾನಗಳನ್ನು ಕುರಿತು ಸ್ವಯಂ–ಚಿಂತನೆ)
- ಸಹಾಪಾಠಿಗಳಿಂದ ಮೌಲ್ಯಾಂಕನ (ವಿದ್ಯಾರ್ಥಿಯ ಪ್ರತಿಕ್ರಿಯಗಳು ಮತ್ತು ಕಾರ್ಯನಿರ್ವಹಣೆಯನ್ನು ಸಹಪಾಠಿಗಳು ಮೌಲ್ಯಾಂಕನ ಮಾಡುವುದು).
- ಗಣಕ ಯಂತ್ರ ಆಧಾರಿತ ಮೌಲ್ಯಾಂಕನ (ವಿಶೇಷವಾಗಿ ವಿನ್ಯಾಸಗೊಳಿಸಿದ ತಂತ್ರಾಂಶ ಬಳಸಿ)

*ಕಲಿಕೆಗಾಗಿ ಮೌಲ್ಯಾಂಕನವನ್ನು ಯೋಜಿಸುವುದು:* ಕಲಿಕೆಗಾಗಿ ಯೋಜನೆಯು ತರಗತಿ ಭೋಧನೆ–ಕಲಿಕೆಯ ಯೋಜನೆಯ ಒಂದು ಭಾಗವಾಗಿರಬೇಕು ಏಕೆಂದರೆ ಇಂತಹ ಮೌಲ್ಯಾಂಕನವು ತರಗತಿ ಭೋದನೆ ಕಲಿಕೆ ಪ್ರಕ್ರಿಯೆಯ ಜೊತೆಗೆ ಏಕಕಾಲದಲ್ಲಿ ನಡೆಯುವ ಭಾಗವಾಗಿದೆ. ಕಲಿಕೆಗಾಗಿ ಪರಿಣಾಮಕಾರಿ ಮೌಲ್ಯಾಂಕನವಾಗಲು ನೀವು ತರಗತಿ ಭೋಧನೆ–ಕಲಿಕೆಗಾಗಿ ಸಿದ್ಧತೆ ನಡೆಸುವಾಗ ಈ ಕೆಳಗಿನ ಅಂಶಗಳ ಬಗ್ಗೆ ಎಚ್ಚರವಹಿಸಬೇಕು.

- ತರಗತಿಯಲ್ಲಿ ಸಂವಹನ ಮಾಡಬೇಕಾದ ಸಂಕಲ್ಪನೆಗಳು/ಘಟಕ/ಪಾಠದ ಕಲಿಕಾ ಫಲಗಳಿಗೆ ಸೂಕ್ತವಾಗುವಂತೆ ಮೌಲ್ಯಾಂಕನದ ಉದ್ದೇಶವನ್ನು ನಿರ್ದಿಷ್ಟಪಡಿಸಿ.

- ಕಲಿಕೆಗಾಗಿ ಮೌಲ್ಯಾಂಕನ ಪರಿಣಾಮಕಾರಿಯಾಗಿ ನಡೆಯುತ್ತಿರುವಾಗ ತರಗತಿಯ ಸ್ಪಷ್ಟ ಚಿತ್ರಣ ಇರಲಿ – ಕೆಳಕಂಡ ಅಂಶಗಳನ್ನು ಗಮನಿಸಿ
  - ತರಗತಿಯ ಎಲ್ಲೆಡೆ ಪದಗಳು, ಚಿತ್ರಗಳು, ನಿದರ್ಶನಗಳು ಮತ್ತು ಅಥವಾ ವಿದ್ಯಾರ್ಥಿಗಳ ಕಾರ್ಯದ ಉದಾಹರಣೆಗಳು ಪ್ರದರ್ಶಿಸಲ್ಪಟ್ಟಿರುವುದು.
  - ಸಹಪಾಠಿಗಳು ಮತ್ತು/ಅಥವಾ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳು ಸಹಯೋಗಾತ್ಮಕ ಮೌಲ್ಯಾಂಕನದಲ್ಲಿ ತೊಡಗಿರುವುದು;
  - ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ನಿರಂತರವಾದ ಹಿಮ್ಮಾಹಿತಿ ಒದಗುತ್ತಿರುವುದು;
  - ಕಾರ್ಯಗಳನ್ನು ಮೌಲ್ಯಾಂಕನ ಮಾಡುವಾಗ ವಿದ್ಯಾರ್ಥಿಗಳು ಶಿಕ್ಷಕರು ವಿದ್ಯಾರ್ಥಿ–ಸ್ನೇಹಿ ಭಾಷೆ ಬಳಸುತ್ತಿರುವುದು

- ಮೌಲ್ಯಾಂಕನ ಕ್ರಮದಲ್ಲಿ ಸಾಕಷ್ಟು ನಮ್ಯತೆ ಇರಲಿ. ನೈಜ ಸನ್ನಿವೇಶದಲ್ಲಿ ನಿಮ್ಮ ಪೂರ್ವ ಯೋಜಿತ ವಿಧಾನ ಉಪಯುಕ್ತವಾಗದಿದ್ದರೆ ಬಲಸಲು ಪರ್ಯಾಯ ವಿಧಾನಗಳನ್ನು ಯಾವಾಗಲು ಸಿದ್ಧವಾಗಿಟ್ಟುಕೊಂಡಿರಿ.


- ಏ ಘ ಐ (Know-Want-Learn) ಚಾರ್ಟನ್ನು ತಯಾರಿಸುವ ಮೂಲಕ __ಪಚಾರಿಕವಾಗಿಯಾದರೂ ನೈದಾನಿಕ ಮೌಲ್ಯಾಂಕನದೊಂದಿಗೇ ಆರಂಭಿಸಿ. ಈ ಚಿತ್ರಪಟವನ್ನೇ ಸಾಮಾನ್ಯವಾಗಿ ಮೂರು ಶೀರ್ಷಿಕೆಗಳಡಿಯಲ್ಲಿ ಸಂಘಟಿಸಲಾಗುತ್ತದೆ. ನಮಗೆ ಮೊದಲೇ ತಿಳಿದಿರುವುದು; ನಾವು ಏನನ್ನು ಕಲಿಯಬಯಸುತ್ತೇವೆ; ಮತ್ತು ನಾವು ಏನನ್ನು ಕಲಿತೆವು.

Notes

- ಹಿಮ್ಮಾಹಿತಿಗಳಡಿಯಲ್ಲಿ ಸೂಚಿತವಾಗಿರುವ ರೀತಿಯಲ್ಲಿ ವಿದ್ಯಾರ್ಥಿಗಳಲ್ಲಿ ಕಲಿಕಾ ಸುಧಾರಣೆಯನ್ನು ಖಾತ್ರಿಪಡಿಸಿಕೊಳ್ಳಲು ತರಗತಿಯಲ್ಲಿ ನೀವು ಮತ್ತು ಇತರ ವಿದ್ಯಾರ್ಥಿಗಳು ಸೂಕ್ತ ಸಮಯದಲ್ಲಿ ಹಿಮ್ಮಾಹಿತಿ ನೀಡಲು ಅವಕಾಶ ಮಾಡಿಕೊಂಡಿರಿ. ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡುವುದು ಹೇಗೆ, ಸ್ವೀಕರಿಸುವುದು ಹೇಗೆ ಎಂಬುದಕ್ಕೆ ಸುಳಿವುಗಳನ್ನು ಒದಗಿಸಿ.
- ನಿಮಗೆ ಸೂಕ್ತವಾಗುವಂತೆ, ಮೌಲ್ಯಾಂಕನದ ನಿರಂತತೆ ಕಾಪಾಡಲು ಮತ್ತು ಕಲಿಕೆಯ ಪ್ರಗತಿಯ ಉಸ್ತುವಾರಿಗಾಗಿ ಒಂದು ಜಾಡು ಹಿಡಿಯುವ ವ್ಯವಸ್ಥೆಯನ್ನು ರೂಪಿಸಿಕೊಳ್ಳಿ.

### ಕಲಿಕೆಗಾಗಿ ಮೌಲ್ಯಾಂಕನದಲ್ಲಿ ಹಿಮ್ಮಾಹಿತಿ

ಕಲಿಕೆಗಾಗಿ ಮೌಲ್ಯಾಂಕನದ ಮುಖ್ಯ ಉದ್ದೇಶ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಕಲಿಕಾ ಉದ್ದೇಶಗಳ ಸಾಧನೆಯ ಕಡೆಗೆ ವಿದ್ಯಾರ್ಥಿಯ ಪ್ರಗತಿಯ ಬಗ್ಗೆ ಹಿಮ್ಮಾಹಿತಿ ನೀಡುವುದಾಗಿದೆ. ಈ ಹಿಮ್ಮಾಹಿತಿಯನ್ನು ಶಿಕ್ಷಕರು ಪರಿಷ್ಕರಣೆ ಹಾಗೂ ಮುಂದಿನ ಬೋಧನೆಯನ್ನು ರೂಪಿಸಲು ಬಳಸಬೇಕು. ಈ ಕೆಳಗಿನ ಚಿತ್ರದ ಮೂಲಕ ನೀವು ಕಲಿಕೆಗಾಗಿ ಮೌಲ್ಯಾಂಕನದಲ್ಲಿ ಹಿಮ್ಮಾಹಿತಿಯ ಪಾತ್ರವನ್ನು ಕಾಣಬಹುದು.




ರಚನಾತ್ಮಕ ಹಿಮ್ಮಾಹಿತಿ ನೀಡುವುದು ಶಾಬ್ದಿಕವಾಗಿ ಮತ್ತು ಲಿಖಿತವಾಗಿ ಕಲಿಕೆಗಾಗಿ ಮೌಲ್ಯಾಂಕನದ ಪ್ರಮುಖ ಅಂಸವಾಗಿದೆ. ನೀವು ವ್ಯಾಪಕ ಸನ್ನಿವೇಶಗಳಲ್ಲಿ ಹಿಮ್ಮಾಹಿತಿ ನೀಡಬಹುದು: ತಕ್ಷಣದಲ್ಲಿ ಅಥವಾ ಅಸೌಪಚಾರಿಕ ಉತ್ತರದ ಮೂಲಕ ಅಲ್ಲದೆ ಔಪಚಾರಿಕವಾಗಿ ಯೋಜಿಸಿದ ಪರೀಕ್ಷೆಗಳು ಮತ್ತು ನಿಯೋಜಿತ ಕಾರ್ಯಗಳ ಮೂಲಕ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡುವಾಗ ಈ ಕೆಳಗಿನ ಅಂಶಗಳ ಕಡೆ ಗಮನ ನೀಡಬೇಕು.

ಲಿಖಿತ ಹಿಮ್ಮಾಹಿತಿ ನೀಡುವಾಗ:

– ವಸ್ತು ವಿಷಯ ಮತ್ತು ಲಿಖಿತರೂಪದ ಸಂದೇಶಕ್ಕೆ ಮೊದಲು ಪ್ರತಿಕ್ರಿಯೆ ನೀಡಿ ಕೇವಲ ಕಾಗುಣಿತ, ಲೇಖನ ಚಿಹ್ನೆಗಳಂತಹ ಮೇಲ್ನೋಟದ ತಪ್ಪುಗಳನ್ನು ಮಾತ್ರ ಗಮನಿಸಬೇಡಿ.
– ನೇರವಾಗಿ ತಪ್ಪುಗಳನ್ನೇ ಗುರುತಿಸಬೇಡಿ. ಮೊದಲು ಪ್ರಶಂಸೆ ನೀಡಿ

Notes

- ಬರವಣಿಗೆ ದುರ್ಬಲವಾಗಿದ್ದರೆ, ಗಮನ ಸೆಳೆಯಲ ಒಂದು ಅಥವಾ ಎರಡು ನಿರ್ದಿಷ್ಟ ಕ್ಷೇತ್ರಗಳನ್ನು ಆಯ್ಕೆ ಮಾಡಿ ಮಕ್ಕಳ ಕಾರ್ಯವನ್ನು ಕೆಂಪು ಶಾಯಿ ಬಳಸಿ ಸರಿ ತಪ್ಪುಗಳಿಂದ ತುಂಬಬೇಡಿ.

- ನಿರ್ದಿಷ್ಟವಾಗಿರಿ ಗುರುತು ಮಾಡಲಾಗಿರುವ ಲೋಪಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಏನು ಮಾಡಬೇಕೆಂದು ಸೂಚಿಸಿ.

- ವಿದ್ಯಾರ್ಥಿಯು ತಿದ್ದುಪಡಿ ಮಾಡುವಂತೆ ಉತ್ತೇಜಿಸಿ ಸುಮ್ಮನೆ ಸರಿಯಾದ ಉತ್ತರಗಳನ್ನು, ಕಾಗುಣಿತಗಳನ್ನು ಬರೆಯಬೇಡಿ.

ಮೌಖಿಕ ಹಿಮ್ಮಾಹಿತಿ ನೀಡುವಾಗ:

- ಧನಾತ್ಮಕ ಅಂಶಕ್ಕೆ ಒತ್ತು ನೀಡಿ ವಿದ್ಯಾರ್ಥಿಯು ಉತ್ತಮವಾಗಿ ಮಾಡಿರುವ ಅಂಶದ ಬಗ್ಗೆ ನಿರ್ದಿಷ್ಟ ಹಿಮ್ಮಾಹಿತಿ ನೀಡಿ
- ಮಾಡಿರುವ ಸಾಧನೆಯನ್ನು ಕೊಂಡಾಡಿ ಮತ್ತು ಮುಂದಿನ ಬಾರಿ ಏನನ್ನು ಸುಧಾರಿಸಿಕೊಳ್ಳಬೇಕು, ಹೇಗೆ ಎಂದು ಸ್ಪಷ್ಟವಾಗಿ ತಿಳಿಸಿ
- ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಕೇಳಿ ಮತ್ತು ಅವರ ಕೊಡುಗೆಗೆ ಬೆಲೆ ಕೊಡಿ. ಇದು ಅವರು ಸ್ವತಂತ್ರ ವಿದ್ಯಾರ್ಥಿಗಳಾಗಲು ಮುಖ್ಯವಾಗಿದ್ದು, ತಮ್ಮದೇ ಕಾರ್ಯವನ್ನು ಮೌಲ್ಯಾಂಕನ ಮಾಡುವುದರಲ್ಲಿ ಉತ್ತಮಗೊಳ್ಳುವರು.
- ಪ್ರಶ್ನೆಗಳನ್ನೇ ಎಚ್ಚರಿಕೆಯಿಂದ ರಚಿಸಿ. ಮುಕ್ತಾಂತ ಪ್ರಶ್ನೆಗಳನ್ನು ಬಳಸಿ ಮತ್ತು ಒಮ್ಮೆಗೆ ಒಂದಕ್ಕಿಂತ ಹೆಚಚು ಪ್ರಶ್ನೆ ಕೇಳಬೇಡಿ
- "ನೀನು ಆ ಬಗ್ಗೆ ಇನ್ನೂ ಏನಾದರೂ ಹೇಳ ಬಯಸುತ್ತೇಯಾ' ಎಂಬಂತಹ ಸುಳುಹುಗಳನ್ನು ಬಳಸಿ
- ಒಂದು ಪ್ರಶ್ನೆ ಕೇಳಿದ ನಂತರ ಅಥವಾ ಒಂದು ಉತ್ತರ ಪಡೆದ ನಂತರ ಕೆಲವು ಕ್ಷಣ ವಿರಾಮ ಕೊಡಿ; ಇದರಿಂದ ವಿದ್ಯಾರ್ಥಿಗಳು ತಾವು ಹೇಳಿದುದನ್ನು ಎಚ್ಚರಿಕೆಯಿಂದ ಗಮನಿಸಿ, ವಿಸ್ತರಿಸಲು ಸಹಾಯವಾಗುತ್ತದೆ
- "ಹಲವಾರು ಲೋಪದೋಷಗಳಿವೆ" ಎಂಬಂತಹ ಸಾಮಾನ್ಯೀಕರಣಗಳನ್ನು ಬಳಸಬೇಡಿ ಬದಲಾಗಿ ನೀವು ವಿದ್ಯಾರ್ಥಿಯೊಂದಿಗೆ ಚರ್ಚಿಸಬಹುದಾದ ವಿಕಾಸದ ನಿರ್ದಿಷ್ಟ ಕ್ಷೇತ್ರಗಳಿಗೆ ಗಮನ ನೀಡಿ.
- ಪ್ರತಿ ವಿದ್ಯಾರ್ಥಿಯೂ ಬದಲಾಯಿಸಿಕೊಳ್ಳ ಬಹುದಾದ ಅಂಶಗಳ ಕಡೇ ಗಮನ ನೀಡಿ, ಒಂದೇ ಬಾರಿಗೆ ಅತಿ ಹೆಚ್ಚು ಹಿಮ್ಮಾಹಿತಿಯನ್ನು ಹೊರಿಸಬೇಡಿ.
- ಒಂದು ಗುಂಪಿನಲ್ಲಿ ಒಬ್ಬರಿಗೆ ಹಿಮ್ಮಾಹಿತಿ ನೀಡಬೇಕಾದಾಗ ಸೂಕ್ಷ್ಮತೆ ಇರಲಿ. ಇತರರು ಕೇಳಿಸಿಕೊಂಡರೆ ಅವಮಾನಿಸಿದಂತೆ ಆಗುವುದೇ?
- ಎಲ್ಲರೂ ಒಟ್ಟಾಗಿ ಮುಂದೆ ಸಾಗುವ ಮಾರ್ಗ ಹುಡುಕಿ. ಯಾವಾಗಲೂ ನಿಮ್ಮದೇ ಸಲಹೆಗಳನ್ನು ಮುಂದಿಡುವ ಬದಲು ವಿಚಾರಗಳನ್ನು ಹಂಚಿಕೊಂಡು ಪರಿಹಾರಗಳನ್ನು ಅನ್ವೇಷಿಸಿ.
- ಪರಿಣಾಮವಾಗಿ ನೀವಿಬ್ಬರು ಏನು ಮಾಡುತ್ತೇರೆಂಬ ಬಗ್ಗೆ ಒಮ್ಮತವಿರಲಿ. ಇದು ಹೊಸ ಗುರಿಗಳನ್ನು ಒಪ್ಪುವುದಾಗಿರಬಹುದು.
- ವೈಯಕ್ತಿಕ ಅಥವಾ ಗುಂಪು ಸನ್ನಿವೇಶಗಳಿಗೆ ನಿಮ್ಮ ಕ್ರಮ ವಿಧಾನಗಳನ್ನು ಹೊಂದಿಸಿ.

ಕೆಲವು ವೇಳೆ ತರಗತಿ ಸಂವಹನದ ವೇಳೆ ಅಥವಾ ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ತೊಡಗಿಸಿರುವಾಗ ನಾವು ಅಲಿಖಿತ ಮತ್ತು ಅಶಾಬ್ದಿಕ ಹಿಮ್ಮಾಹಿತಿಯನ್ನು ಬಳಸುತ್ತೇವೆ. ಇವು ನಿರ್ದಿಷ್ಟ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ನೇರವಾಗಿ ದೃಷ್ಟಿಸುವುದು, ಬೆರಳು ತೋರಿಸಿ ಅಥವಾ ತಲೆ ಆಡಿಸುವ ರೂಪದಲ್ಲಿ ಒಪ್ಪಿಗೆ ಅಥವಾ ಅಸಮ್ಮತಿ ಸೂಚನೆ, ಸಮ್ಮತಿ ಸೂಚಕ ಮಂದಹಾಸ ಇತ್ಯಾದಿ ಶಾರೀರಿಕ ಸಂಜ್ಞೆಗಳ ರೂಪದಲ್ಲಿರುತ್ತವೆ.

Notes

ವಿದ್ಯಾರ್ಥಿಗ ಕಾರ್ಯಗಳ ಬಗ್ಗೆ ಶಾಬ್ದಿಕವಾಗೆ ಅಥವಾ ಲಿಖಿತ ರೂಪದಲ್ಲಾಗಲಿ, ಪರಿಣಾಮಕಾರಿ ಹಿಮ್ಮಾಹಿತಿ ನೀಡುವಾಗ ಈ ಕೆಳಕಂಡ ಅಂಶಗಳ ಬಗ್ಗೆ ಎಚ್ಚರವಹಿಸಬೇಕು.

- ತಡಮಾಡದೆ ಹಿಮ್ಮಾಹಿತಿ ನೀಡಿ; ಇಲ್ಲದಿದ್ದರೆ ಹಿಮ್ಮಾಹಿತಿ ತನ್ನ ಸೂಕ್ತತೆಯನ್ನು ಕಳೆದುಕೊಳ್ಳಬಹುದು.
- ವಿದ್ಯಾರ್ಥಿಗಳು ಸ್ವತಂತ್ರ ಕಲಿಕೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುವ ಇಚ್ಛೆಯಿಂದ ಅಂಕಗಳಿಗೆ ಬದಲಾಗಿ ನಿಖರವಾದ ವಿವರಣಾತ್ಮಕ ಹೇಳಿಕೆಗಳನ್ನು ಬಳಸಿ.
- ವಿದ್ಯಾರ್ಥಿಯ ಬಲ ಹಾಗೂ ದೌರ್ಬಲ್ಯಗಳನ್ನು ತಿಳಿಸುವ ಹೇಳಿಕೆಗಳನ್ನೇ ಸೇರಿಸಿ, ಹೇಗೆ ಸುಧಾರಣೆ ಮಾಡಿಕೊಳ್ಳಬೇಕೆಂದು ಮಾರ್ಗದರ್ಶಿಸಿ.
- ವಿದ್ಯಾರ್ಥಿಗಳು ಮುಂದಿನ ಹೆಜ್ಜೆಯಾಗಿ ಸಾಧನೆ ಮಾಡುವಂತಹ ಒಂದು ಅಥವಾ ಎರಡು ಕಲಿಕಾ ಗುರಿಗಳನ್ನು ಸೂಚಿಸಿ.

ಕಲಿಕೆಗಾಗಿ ಮೌಲ್ಯಾಂಕನವನ್ನು ಆಧರಿಸಿದ ಸಮಯೋಚಿತ ಹಿಮ್ಮಾಹಿತಿಯ ಧನಾತ್ಮಕ ಪರಿಣಾಮಗಳನ್ನು ಹಲವಾರು ಸಂಶೋಧಕರು ದೃಢಪಡಿಸಿದ್ದಾರೆ. ಕಲಿಕೆಯ ದೋಷಗಳ ಬಗ್ಗೆ ಹಿಮ್ಮಾಹಿತಿ ನೀಡುವುದು ಮತ್ತು ವಿದ್ಯಾರ್ಥಿಯ ಅವುಗಳನ್ನು ತಿದ್ದಿಕೊಳ್ಳುವಂತೆ ಹಾಗೂ ಮುಂದಿನ ಕಾರ್ಯಕ್ಕೆ ತಂತ್ರಗಳನ್ನು ಗುರುತಿಸಿಕೊಳ್ಳುವಂತೆ ಮಾಡುವುದು ನೇರವಾಗಿ ಸಾಧನೆಯ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ನೇರವಾಗಿ ಸಂಬಂಧಿಸಿದೆ ಎಂದು ಹಾಟ್ಟಿ (2002) ಗಮನಿಸಿದ್ದಾರೆ.

ಎಲ್ಲ ವಿದ್ಯಾರ್ಥಿಗಳೂ ತಾವು ಸಾಧಿಸಬಲ್ಲರೆಂದು ನಂಬುವಂತಹ ಸಫಲತೆಯ ಒಂದು ಸಂಸ್ಕೃತಿಯನ್ನು ಸೃಷ್ಟಿಸಲು, ಶಿಕ್ಷಕರಾಗಿ ನೀವು ನಿಮ್ಮ ವಿದ್ಯಾರ್ಥಿಗಳು ಈ ಕೆಳಗಿನ ಅಂಶಗಳ ಬಗ್ಗೆ ಸ್ಪಷ್ಟತೆ ಹೊಂದಿದ್ದಾರೆಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

- ಅವರು ಏನನ್ನು ಮಾಡಬೇಕಾಗಿದೆ
- ಅದನ್ನು ಹೇಗೆ ಮೌಲ್ಯಾಂಕನ ಮಾಡಲಾಗುತ್ತದೆ.
- ಅವರು ಏನನ್ನು ಉತ್ತಮವಾಗಿ ಮಾಡುತ್ತಿದ್ದಾರೆ
- ಯಾವುದು ತಪ್ಪು ಮತ್ತು ಅದನ್ನು ಸರಿಪಡಿಸಲು ಏನು ಮಾಡಬೇಕು

ಬ್ಲ್ಯಾಕ್ ಮತ್ತು ವಿಲಿಯಂ (1999) ಹೇಳಿರುವಂತೆ ಸಾಮಾರ್ಥ್ಯ ಮತ್ತು ಸ್ಪರ್ಧೆ ಹಾಗೂ ಇತರರೊಂದಿಗೆ ಹೋಲಿಕೆಯ ಉಲ್ಲೇಖವನ್ನು ತಪ್ಪಿಸಿ. ಬಟ್ಲರ್ (1988) ರವರು ರಚನಾತ್ಮಕ ವ್ಯಾಖ್ಯಾನಗಳುಳ್ಳ ಹಿಮ್ಮಾಹಿತಿಯು ಶೇ33 ರಷ್ಟು ಸುಧಾರಣೆಯನ್ನು ಉಂಟು ಮಾಡುತ್ತದೆ ಎಂದಿದ್ದಾರೆ. ಶ್ರೇಣಿಗಳನ್ನು ಬಳಸಿ ಗುರುತಿಸುವುದು ವಿದ್ಯಾರ್ಥಿಗಳ ಮೇಲೆ ಅದರಲ್ಲಿಯೂ ಕಡಿಮೆ ಸಾಧನೆಯ ಮಟ್ಟದ ವಿದ್ಯಾರ್ಥಿಗಳ ಮೇಲೆ ಋಣಾತ್ಮಕ ಪರಿಣಾಮ ಬೀರಬಲ್ಲದು.

---

ಇ3. ಕಲಿಕೆಗಾಗಿ ಮೌಲ್ಯಾಂಕನದ ಯಾವುದಾದರೂ ಎರಡು ಲಾಭ (ಅನುಕೂಲತೆ)ಗಳನ್ನು ತಿಳಿಸಿ.

ಇ4. ನಿಯೋಜಿತ ಕಾರ್ಯವನ್ನು ಮೌಲ್ಯಾಂಕನ ಮಾಡುವಾಗ ಅತ್ಯಂತ ಸೂಕ್ತವಾದ ರೀತಿಯ ಹಿಮ್ಮಾಹಿತಿ ಯಾವುದು?

ಎ. ಕೆಂಪು ಶಾಯಿಯಲ್ಲಿ ತಪ್ಪುಗಳನ್ನು ಹೊಡೆದು ಹಾಕುವುದು

ಬಿ. ಲಿಖಿತ ರೂಪದಲ್ಲಿ ಕೊಡಲಾಗಿರುವ ನಿರ್ದಿಷ್ಟ ಟಿಪ್ಪಣಿ

ಸಿ. ಕೇವಲ ಶಾಬ್ದಿಕ ಚರ್ಚೆಯ ಮೂಲಕ

ಇ5. ಕಲಿಕೆಗಾಗಿ ಮೌಲ್ಯಾಂಕನವು ರೂಪಣಾತ್ಮಕ ಮೌಲ್ಯಾಂಕನದ ಒಂದು ರೂಪವೇ? ನಿಮ್ಮ ಉತ್ತರಕ್ಕೆ ಕಾರಣ ಕೊಡಿರಿ.

---

Notes

### 14.2.3 ಕಲಿಕೆಯಾಗಿ ಮೌಲ್ಯಾಂಕನ

ನಮ್ಮದೇ ಕಾರ್ಯಸಾಧನೆಯನ್ನು ಅಥವಾ ಇತರರ ಕಾರ್ಯಸಾಧನೆಯನ್ನೇ ಮೌಲ್ಯಾಂಕನ ಮಾಡುತ್ತಿರುವಾಗ ನಾವು ಹೊಸ ಅನುಭವಗಳನ್ನು ಪಡೆದುಕೊಂಡರೆ ಕಲಿಕೆ ಮತ್ತು ಮೌಲ್ಯಾಂಕನಗಳು ತಮ್ಮ ನಡುವೆ ಸೀಮಾರೇಖೆಯನ್ನು ಕಳೆದುಕೊಳ್ಳುತ್ತವೆ. ಇಂತಹ ಸನ್ನಿವೇಶದಲ್ಲಿ ಮೌಲ್ಯಾಂಕನವು ಒಂದು ಕಲಿಕೆಯ ಪ್ರಕ್ರಿಯೆ ಆಗುತ್ತದೆ.

*ಸನ್ನಿವೇಶ 4: 6ನೇ ತರಗತಿಯ ಅನಂತನು ಶಿಕ್ಷಕರು ಮತ್ತು ಸಹಪಾಠಿಗಳು ಮೌಲ್ಯಾಂಕನ ಮಾಡಲು ಪ್ರಸ್ತುತ ಪಡಿಸುವುದಕ್ಕೆ ತನ್ನ ಕಾರ್ಯಗಳನ್ನು ಒಂದು ಕೃತಿ ಸಂಪುಟದಲ್ಲಿ ಸಂಗ್ರಹಿಸಿದ್ದಾನೆ. ಕಾರ್ಯಗಳನ್ನು ಒಟ್ಟುಗೂಡಿಸಿ ಸರಿಯಾದ ಕ್ರಮದಲ್ಲಿ ಜೋಡಿಸುವಾಗ, ಅವನು ಕೃತಿ ಸಂಪುಟದ ಮೌಲ್ಯಾಂಕನಕ್ಕೆ ಸೂಚಕಗಳನ್ನು ಪಟ್ಟಿ ಮಾಡಲು ಯತ್ನಿಸಿದನು. ಅವನು ತನ್ನ ಹಿಂದಿನ ಅನುಭವಗಳನ್ನು ಸ್ಮರಿಸಿಕೊಂಡಾಗ ತನ್ನ ಸಂಗ್ರಹದಲ್ಲಿ ಮಾದರಿ ಅಥವಾ ಭೂಪಟವನ್ನು ಸೇರಿಸಿಲ್ಲ ಎಂಬುದನ್ನು ಕಂಡುಕೊಂಡನು ಮತ್ತು ಈ ಸಾಮಾಗ್ರಿಗಳಿಲ್ಲದೆ ಸಂಗ್ರಹವು ಅಪೂರ್ಣವಾಗುವುದೆಂದು ಆಲೋಚಿಸಿದನು, ತನ್ನ ಜಿಲ್ಲೆಯ ಒಂದು ಭೂಪಟ (ನಕ್ಷೆ) ಮತ್ತು ಕೆಲವು ಮಾದರಿಗಳನ್ನು ತಯಾರಿಸಿ ತನ್ನ ಸಾಮಾಗ್ರಿಗಳನ್ನು ಮತ್ತೊಮ್ಮೆ ಕ್ರಮವಾಗಿ ಜೋಡಿಸಲು ಯತ್ನಿಸಿದನು. ಅಲ್ಲಿ ಹಲವಾರು ಸಾಮಗ್ರಗಳಿದ್ದವು  ಎರಡು ಪ್ರಬಂಧಗಳು, ಶಾಲಾಮ್ಯಾಗಜೀನ್‌ನಲ್ಲಿ ಪ್ರಕಟವಾಗಿದ್ದ ಒಂದು ಕಥೆ, ವಿವಿಧ ಮೂಲಗಳಿಂದ ಸಂಗ್ರಹಿಸಿದ್ದ 5 ಗಣಿತದ ಪಜ಼್ಲ್ () ಗಳು "ಎಲ್ಲರಿಗೂ ಶಿಕ್ಷಣ" ದ ಮೆರವಣಿಗೆಗಾಗಿ ರೂಪಿಸಿದ್ದ ನಾಲ್ಕು ಘೋಷಣೆಗಳು, ವಿವಿಧ –ನವಸ್ತುಗಳ ಕಾಗದದ ಮಾದರಿಗಳು ತನ್ನ ಜಿಲ್ಲೆಯ ನಕ್ಷೆ, ಬಣ್ಣದ ಗುಂಡುಕಲ್ಲುಗಳ ಸಂಗ್ರಹ ಅವನೇ ಈ ಕೃತಿ ಸಂಪುಟವನ್ನು ಮೌಲ್ಯಾಂಕನ ಮಾಡುವ ಶಿಕ್ಷಕರು ಮತ್ತು ಸಹಪಾಠಿಗಳ ಗಮನ ಸೆಳೆಯುವಂತೆ ಸಾಮಾಗ್ರಿಗಳನ್ನು ಹೇಗೆ ಜೋಡಿಸುವುದೆಂದು ಆಲೋಚಿಸಿದನು. ಆತನಿಗೆ ಒಂದು ಯೋಜನೆ ಹೊಳೆಯಿತು, ಅವನು ಒಂದು ಕಥಾಹಂದರವನ್ನು ಹೆಣೆದು ಆ ಕಥಾಹಂದರವನ್ನೇ ಚಿತ್ರಿಸುವ ಕೆಲವು ಹೆಚ್ಚುವರಿ ಭಿತ್ತಿ ಚಿತ್ರಗಳನ್ನು ತಯಾರಿಸಿದನು ಮತ್ತು ಅದರ ಜಾಡಿನಲ್ಲಿ ತನ್ನ ಸಾಮಾಗ್ರಿಗಳನ್ನು ವೀಕ್ಷಿಸುವವರು, ಈ ಕಥಾಹಂದರವನ್ನು ಅನುಸರಿಸುತ್ತ ಹೋದಲ್ಲಿ ಅನಂತನ ಯಾವುದೇ ಕಾರ್ಯವನ್ನು ಬಿಟ್ಟು ಬಿಡಲೂ ಸಾಧ್ಯವಿಲ್ಲ ಮತ್ತು ಒಟ್ಟು ಸಂಗ್ರಹದಲ್ಲಿ ಯಾವುದೋ ಅಪ್ರಸ್ತುತ ಎಂದು ತಿಳಿಯದ ರೀತಿಯಲ್ಲಿ ಜೋಡಿಸಿದನು.*

ಕೆಳಗಿನ ಸನ್ನಿವೇಶವನ್ನು ಗಮನಿಸಿ

ಅನಂತನು ಏನು ಮಾಡುತ್ತಿದ್ದನೆಂಬುದನ್ನು ಕುರಿತು ಚಿಂತನೆ ಮಾಡೋಣ

- ಅವನು ತನ್ನ ಕಾರ್ಯ ಸಾಮಾಗ್ರಿಗಳನ್ನು ಸಂಗ್ರಹವನ್ನು ಮೌಲ್ಯಾಂಕನಕ್ಕಾಗಿ ಜೊಡಿಸಲು ಯತ್ನಿಸುತ್ತಿದ್ದನು;
- ಅವನು ಮೌಲ್ಯಾಂಕನದ ಸೂಚಕಗಳನ್ನು ಪಟ್ಟಿ ಮಾಡಿದನು (ಕಲಿಕೆಯ ಫಲಗಳೂ)
- ಮೌಲ್ಯಾಂಖನಕ್ಕೆ ಅವಶ್ಯವೆಂದು ತಾನು ಭಾವಿಸಿದ ಕೆಲವು ಹೊಸ ಸಾಮಾಗ್ರಿಗಳನ್ನು ತಯಾರಿಸಿದನು
- ಅವುಗಳನ್ನು ಮರುಜೋಡಣೆ ಮಾಡಲು ಯತ್ನಿಸಿದನು ಆದರೆ ಅವುಗಳು ಬಹಳ ಅಸಮಂಜಸವಾಗವೆ ಎನಿಸಿತು.
- ಅವನು ಅರ್ಥಪೂರ್ಣ ಜೋಡಣೆಗಾಗಿ ಒಂದು ಮಾರ್ಗ ಹುಡುಕಲು ಚಿಂತಿಸಿದನು
- ಒಂದು ಕಥಾಹಂದರವನ್ನು ಆಲೋಚಿಸಿ, ಜೋಡಣೆಯನ್ನು ಪೂರೈಸಿದನು

ಈ ಎಲ್ಲ ಸಮಯದಲ್ಲೂ ಅನಂತನು ಮೌಲ್ಯಾಂಕನ ಕಾರ್ಯಕ್ಕೆ ಸಿದ್ಧನಾಗುತ್ತಿದ್ದನು, ಜೊತೆ ಜೊತೆಗೇ ಅವನು ತನ್ನನ್ನು ತಾನ ಸಂಗ್ರಹಿಸಿದ್ದ ಸಾಮಾಗ್ರಿಗಳನ್ನು ಕಲಿಕೆಯ ಫಲಗಳ ದೃಷ್ಟಿಯಿಂದ (ಮೌಲ್ಯಾಂಕನದ ಸೂಚಕಗಳು) ಅವುಗಳ ಸಮರ್ಪಕತೆ, ಸುಕ್ತತೆ ಮತ್ತು ಅರ್ಥಪೂರ್ಣತೆಗಳ ದೃಷ್ಟಿಯಿಂದ ಮೌಲ್ಯಾಂಕನ ಮಾಡುತ್ತಿದ್ದನು. ಅವನು ಮೌಲ್ಯಾಂಕನ ಮಾಡುತ್ತಿರುವಾಗಲೇ ಕಲಿಯುತ್ತಿದ್ದನು ಮತ್ತು ಮೌಲ್ಯಾಂಕನವೇ ಒಂದು ಕಲಕೆಯ ಸಂದರ್ಭವಾಗಿತ್ತು ಎಂದು ನಿಮಗೆ ಅನಿಸುತ್ತಿದೆಯೇ?

Notes

ಕಲಿಕೆಯಾಗಿ ಮೌಲ್ಯಾಂಕನವು ಮೌಲ್ಯಾಂಕನದ ಮೂರು ವರ್ಗಗಳಲ್ಲಿ ಅತ್ಯಂತ ಕಠಿಣವಾದುದು. ಆದರೂ, ಇದು ವಿದ್ಯಾರ್ಥಿಯು ಗ್ರಹಿಸಬೇಕಾದ ಅತಿ ಮುಖ್ಯ ಕೌಶಲ ಹಾಗೂ ಕಲಿಕೆಯಲ್ಲಿ ಸ್ವತಂತ್ರ ಪ್ರಗತಿಗೆ ನಿರ್ಣಾಯಕವಾಗಿರುತ್ತದೆ. ಕಲಿಕೆಯ ಮೌಲ್ಯಾಂಖನದ ಇತರ ವಿಧಾನಗಳಿಗೆ ವಿರುದ್ಧವಾಗಿ ಕಲಿಕೆಯಾಗಿ ಮೌಲ್ಯಾಂಕನವೂ ಸಂಪೂರ್ಣವಾಗಿ ವಿದ್ಯಾರ್ಥಿ ನಿಯಂತ್ರಿತವಾಗಿದೆ. ಅದು ಮಾಲ್ಯಾಂಕನ ಮತ್ತು ಕಲಿಕೆಯ ನಡುವೆ ವಿದ್ಯಾರ್ಥಿಯ ಪಾತ್ರವು ನಿರ್ಣಾಯಕ ಸಂಯೋಜಕರದ್ದಾಗಿದೆ ಎಂಬುದಕ್ಕೆ ಒತ್ತು ನೀಡಿದೆ.

ವಿದ್ಯಾರ್ಥಿಗಳು ಬೋಧನೆಯ ಗುರಿಗಳನ್ನು ಮತ್ತು ಕಾರ್ಯ ಸಾಧನೆಯ ಮಾನ ದಂಡಗಳನ್ನು ಅರಿತು ಗುರಿಗಳನ್ನು ಸಾಧಿಸಲು ಶ್ರಮಿಸಿದಾಗ ಮಾತ್ರ ಕಲಿಕೆಯಾಗಿ ಮೌಲ್ಯಾಂಕನ ಆರಂಭವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಅವರು ಗುರಿ ನಿರ್ಣಯ, ತಮ್ಮದೇ ಪ್ರಗತಿಯ ಉಸ್ತುವಾರಿ ಮತ್ತು ಫಲಿತಾಂಶಗಳನ್ನು ಕುರಿತು ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವುದು ಎಂದರೆ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿರುವಾಗಲೇ ಈ ಮೌಲ್ಯಾಂಕನವನ್ನೂ ಮುಂದುವರೆಸಲು ಎಲ್ಲ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾರೆ ಎಂಬುದನ್ನು ಸೂಚಿಸುತ್ತದೆ. ತಮ್ಮ ಆಲೋಚನಾ ಪ್ರಕ್ರಿಯೆಯನ್ನು ವಿಶ್ಲೇಷಿಸುವ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು (ಎಂದರೆ ಅವರ ತಿಳಿಯುವ ಪ್ರಕ್ರಿಯೆ ಬಗ್ಗೆ ತಿಳಿಯುವುದು () ಕಲಿಕೆ ಪ್ರಕ್ರಿಯೆಯ ಆದ್ಯಾಂತ ನಡೆಯುವ ಕಲಿಕೆಯಾಗಿ ಮೌಲ್ಯಾಂಕನವನ್ನು ಪರಿಣಾಮಕಾರಿಯಾಗಿ ಬಳಸಬಲ್ಲರು.

ಲೋರ್ನಾ ಎಂ. ಅರ್ಲ್ (2006) ರವರ ಪ್ರಕಾರ ಕಲಿಕೆಯಾಗಿ ಮೌಲ್ಯಾಂಕನವು ವಿದ್ಯಾರ್ಥಿಗಳು ತಮ್ಮ ಕಲಿಕೆ ಮತ್ತು ತೀರ್ಮಾನ ಕೈಗೊಳ್ಳುವ ಕಾರ್ಯದಲ್ಲಿ ಹೊಂದಿಕೊಳ್ಳ ಬಲ್ಲ, ನಮ್ಮ ಮತ್ತು ಸ್ವತಂತ್ರರಾಗ ಬಲ್ಲ ಸಾಮರ್ಥ್ಯ ಉಳ್ಳವರು ಎಂಬ ದೃಢನಂಬಿಕೆಯನ್ನು ಆಧರಿಸಿದೆ.

ಕಲಿಕೆಯಾಗಿ ಮೌಲ್ಯಾಂಕನವು ವಿದ್ಯಾರ್ಥಿಗಳಿಗೆ ಮೆಟಾ–ಕಾಗ್ನಿಷನ್ ಪ್ರಕ್ರಿಯೆಗಳ ಮೂಲಕ ತನ್ನ ಕಲಿಕೆ ಕುರಿತು ಚಿಂತನೆ ನಡೆಸಲು ವೈವಿಧ್ಯಮಯ ಅವಕಾಶಗಳನ್ನು ಒದಗಿಸುತ್ತದೆ. ಇದನ್ನು (ಮೆದುಳುದಾಳಿ) ಮಸ್ತಿಷ್ಕಮಥನ, ಗುಂಪು ಚರ್ಚೆ ಸಹಯೋಗಾತ್ಮಕ ಕಲಿಕಾ ಸನ್ನಿವೇಶಗಳು ಮತ್ತು ಸಹಪಾಠಿ ಹಾಗೂ ಸ್ವಮೌಲ್ಯಾಂಕನಗಳ ಮೂಲಕ ಅನುಕೂಲಿಸಬಹುದು. ಶಿಕ್ಷಕರಾಗಿ ನೀವು ಮಾಡಬಹುದಾದ ಅತ್ಯುತ್ತಮ ಕಾರ್ಯವೆಂದರೆ ಕಲಿಕೆಯಾಗಿ ಮೌಲ್ಯಾಂಕನವನ್ನು ಬಳಸಲು ಸಹಾಯಕವಾಗುವಂತಹ ಸ್ವಮೌಲ್ಯಾಂಕನ ಮತ್ತು ಸಹಪಾಠಿ ಮೌಲ್ಯಾಂಕನಗಳಿಗೆ ನಿಮ್ಮ ವಿದ್ಯಾರ್ಥಿಗಳನ್ನು ಒಪ್ಪಿಸುವುದೇ ಆಗಿದೆ.

ಸ್ವ–ಮೌಲ್ಯಾಂಕನದಿಂದ ವಿದ್ಯಾರ್ಥಿಗಳಿಗಾಗುವ ಪ್ರಯೋಜನಗಳೆಂದರೆ:

- ತಮ್ಮದೇ ಕಲಿಕೆ ಕುರಿತು ಚಿಂತನೆ;
- ಅಪೇಕ್ಷೆಗಳು ಮತ್ತು ಸಾಧನೆಯ ಮಟ್ಟಗಳಿಗೆ ಸಂಬಂಧಿಸಿದ ಸ್ಪಷ್ಟ ಮಾನದಂಡಗಳನ್ನು ಬಳಸಿ ತಮ್ಮ ಸಾಮಾರ್ಥ್ಯಗಳನ್ನು ಮತ್ತು ಸುಧಾರಣೆಯ ಅಗತ್ಯವಿರುವ ಕ್ಷೇತ್ರಗಳನ್ನು ಗುರುತುಸುವುದು;
- ಗುರುಗಳನ್ನು ನಿರ್ಧರಿಸಿ, ಕಲಿಕೆಗೆ ಮುಂದಿನ ಹೆಜ್ಜೆಗಳನ್ನು ಗುರುತಿಸುವುದು;
- ಮೆಟಾ–ಕಾಗ್ನಿಷನ್ ಕೌಶಲಗಳನ್ನು ಬೆಳೆಸಿಕೊಳ್ಳುವುದು;
- ಸ್ವತಂತ್ರ, ಸ್ವಯಂನಿರ್ದೇಶಿತ ವಿದ್ಯಾರ್ಥಿಗಳಾಗುವುದು;
- ಕಾಲಕ್ರಮದಲ್ಲಿ ತಮ್ಮ ಪ್ರಗತಿ ಮತ್ತು ಅತ್ಯುತ್ತಮ ಪ್ರಯತ್ನಗಳನ್ನು ಪ್ರತಿನಿಧಿಸುವ ಕಾರ್ಯಗಳನ್ನು ಕೃತಿಸಂಪುಟಕ್ಕಾಗಿ ಆಯ್ಕೆ ಮಾಡುವುದು;

ಸಹಪಾಠಿಗಳಿಂದ ಮೌಲ್ಯಾಂಕನವು ಕೆಳಕಂಡ ಅನುಕೂಲತೆಗಳನ್ನು ಹೊಂದಿದೆ:
- ಸಹಪಾಠಿಗಳೊಂದಿಗೆ ಸಂಭಾಷಣೆ ಮತ್ತು ಅಂತರ್ ಕ್ರಿಯೆಗಳ ಮೂಲಕ ತಮ್ಮ ಕಲಿಕೆಯ ಕ್ರೋಢೀಕರಣ;
- ಸ್ಪಷ್ಟ ಮಾನದಂಡಗಳನ್ನು ಆಧರಿಸಿದ ರಚನಾತ್ಮಕ, ಸ್ಪಷ್ಟ ಹಿಮ್ಮಹಿತಿ ನೀಡಲು ಮತ್ತು ಸ್ವೀಕರಿಸಲು ಕಲಿಯುವುದು;
- ಚಟುವಟಿಕೆಗಳ/ಕಾರ್ಯಗಳ ಮೂಲಕ ಸ್ಪಷ್ಟವಾಗಿ ಮಾದರೀಕರಿಸಿ ಕಲಿಸಿದ ಪರಿಕಲ್ಪನೆಗಳನ್ನು ಮತ್ತು ಕೌಶಲಗಳನ್ನ ಅಭ್ಯಾಸ ಮಾಡುವುದು;

ಇ6. ಈ ಕೆಳಗಿನ ಯಾವ ಸನ್ನಿವೇಶದಲ್ಲಿ ಕಲಿಕೆಯಾಗಿ ಮೌಲ್ಯಾಂಕನ ಸಾಧ್ಯ?

ಎ. ಘಟಕ ಪರೀಕ್ಷೆ

ಬಿ. ಸಾಮೂಹಿಕ ಪರೀಕ್ಷೆ

ಸಿ. ಸಾಮೂಹಿಕ ಕಲಿಕೆ

ಡಿ. ಸಹಯೋಗಾತ್ಮಕ ಕಲಿಕೆ

ಇ7. ಕಲಿಕೆಗಾಗಿ ಮೌಲ್ಯಾಂಕನ ಮತ್ತು ಕಲಿಕೆಯಾಗಿ ಮೌಲ್ಯಾಂಕನಗಳ ನಡುವಿನ ಒಂದು ವ್ಯತ್ಯಾಸ ತಿಳಿಸಿ

## 14.3 ಮೌಲ್ಯಾಂಕನ ಯೋಜನೆಯನ್ನು ವಿನ್ಯಾಸಗೊಳಿಸುವುದು

ನೀವು ವಿದ್ಯಾರ್ಥಿಯ ಕಲಿಕಾ ಪ್ರಗತಿಯ ಉತ್ತಮ ಮೌಲ್ಯಾಂಕನದ ಗುರಿ ಇಟ್ಟುಕೊಂಡಿದ್ದರೆ, ಆಗ ಪ್ರತಿ ವಿದ್ಯಾರ್ಥಿಯ ಕಲಿಕಾ ಶೈಲಿ, ಬಲ ಮತ್ತು ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಮೌಲ್ಯಾಂಕನವು ಬೋಧನೆ-ಕಲಿಕೆ ಪ್ರಕ್ರಿಯೆಗೆ ಹೆಚ್ಚುವರಿಯಾಗಿ ಸೇರಿದ ಭಾಗ ಎಂದಾಗಲಿ, ಶಿಕ್ಷಕ-ಕೇಂದ್ರಿತ ಚಟುವಟಿಕೆ ಎಂದಾಗಲಿ ಭಾವಿಸದೆ ಅದು ಕಲಿಕೆಯ ಅವಿಭಾಜ್ಯ ಅಂಗವೆಂದು ನೆನಪಿಡಬೇಕು. ಅದು ____ ವಾಗಿದ್ದು ಕಲಿಕೆಯ ಫಲಗಳಿಂದ ಚಾಲಿತವಾಗಿ, ಕಲಿಕೆಯಿಂದ ಪ್ರತ್ಯೇಕಿಸಲಾಗದ ಭಾಗವಾಗಿ ಕಲಿಕೆಯಂತೆಯೇ ನಿರಂತರ ಪ್ರಕ್ರಿಯೆಯಾಗಿದೆ. ಆದ್ದರಿಂದ ಮೌಲ್ಯಾಂಕನಕ್ಕಾಗಿ ಯೋಜನೆಯೂ ತರಗತಿ ಬೋಧನೆ ಕಲಿಕೆ ಚಟುವಟಿಕೆಗಳ ಯೋಜನೆಯ ಒಂದು ಭಾಗವಾಗಬೇಕು.

ತರಗರಿಯಲ್ಲಿ ಮೌಲ್ಯಾಂಕನಕ್ಕಾಗಿ ಯೋಜನೆ ರೂಪಿಸುವಾಗ ನೀವು ಈ ಕೆಳಗಿನ ಮೂಲಭೂತ ಅಂಶಗಳನ್ನು ಗಮನದಲ್ಲಿಡಬೇಕು

- *ಮೌಲ್ಯಾಕನಕ್ಕೆ ಕ್ರಮಗಳು:* ಈ ಘಟಕದಲ್ಲಿ ಚರ್ಚಿಸಲಾದ ಎಲ್ಲ ಮೂರು ಕ್ರಮಗಳನ್ನು ಅಳವಡಿಸುವುದು ಒಳ್ಳೆಯದಾದರೂ ನೀವು ಅದನ್ನು ಯಾವ ರೀತಿ ಅಳವಡಿಸಬೇಕು ನೀವು ಅತಿ ಹೆಚ್ಚಾಗಿ ಇಚ್ಛಿಸುವ ಕ್ರಮ ಯಾವುದು ಎಂಬುದನ್ನು ನಿರ್ಧರಿಸಬೇಕು. ಕಲಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕಲಿಕೆಯಾಗಿ ಮೌಲ್ಯಾಂಕನವೇ ಅಚಿತಿಮ ಕ್ರಮವಾದರೂ ವಿಭಿನ್ನ ಸಾಮರ್ಥ್ಯಗಳುಳ್ಳ ಮಕ್ಕಳ ಗುಂಪುಗಳಿರುವ ನಮ್ಮ ತರಗತಿಗಳಲ್ಲಿ ಇದನ್ನು ಅಳವಡಿಸುವುದು ಸುಲಭವಲ್ಲ. ಕಲಿಕೆಯ ಮೌಲ್ಯಾಂಕನವು ಅತ್ಯಂತ ಪರಿಚಿತ ಕ್ರಮವಾಗಿದ್ದು ಪಠ್ಯಕ್ರಮ ಹಾಗೂ ಶಾಲಾ ನಿರ್ವಹಣೆಯ ದೃಷ್ಟಿಯಿಂದ ಪ್ರಾಮುಖ್ಯತೆ ಹೊಂದಿದೆ. ಆದರೆ, ದೈನಂದಿನ ತರಗತಿ ಸಂವಹನದಲ್ಲಿ, ಕಲಿಕೆಗಾಗಿ ಮೌಲ್ಯಾಂಕನವನ್ನು ತರಗತಿ ಕಲಿಕೆಯ ಪ್ರಕ್ರಿಯೆಯ ನಿರಾಕರಿಸಲಾಗದ ಭಾಗವಾಗಿದೆ.

- *ಮೌಲ್ಯಾಂಕನದ ಉದ್ದೇಶ:* ನೀವು ನಿರ್ವಹಿಸುತ್ತಿರುವ ಮೌಲ್ಯಾಂಕನ ವಿಧದ ನಿರ್ದಿಷ್ಟ ಉದ್ದೇಶಗಳನ್ನು ಸ್ಪಷ್ಟವಾಗಿ ಸೂಚಿಸುವುದು ಅಗತ್ಯ. ಇದು ಬಳಸಲಾಗುತ್ತಿರುವ ಮೌಲ್ಯಾಂಕನ ವಿಧಕ್ಕೆ ಸೂಕ್ತವಾದ ಅಪೇಕ್ಷಿತ ದಿಕ್ಕಿನಲ್ಲಿ ಕಾರ್ಯ ನಿರ್ವಹಿಸಲು ನಿಮಗೂ ನಿಮ್ಮ ವಿದ್ಯಾರ್ಥಿಗಳಿಗೂ ಸಹಾಯಕವಾಗುತ್ತದೆ. ಮೌಲ್ಯಾಂಕನ ವಿಧದ ನಿರ್ದಿಷ್ಟ ಉದ್ದೇಶಗಳನ್ನು ಸ್ಪಷ್ಟವಾಗಿ ಸೂಚಿಸುವುದು ಅಗತ್ಯ. ಇದು ಬಳಸಲಾಗುತ್ತಿರುವ ಮೌಲ್ಯಾಂಕನ ವಿಧಕ್ಕೆ ಸೂಕ್ತವಾದ ಅಪೇಕ್ಷಿತ ದಿಕ್ಕಿನಲ್ಲಿ ಕಾರ್ಯ ನಿರ್ವಹಿಸಲು ನಿಮಗೂ ನಿಮ್ಮ ವಿದ್ಯಾರ್ಥಿಗಳಿಗೂ ಸಹಾಯಕವಾಗುತ್ತದೆ. ಮೌಲ್ಯಾಂಕನದ ವಿಧವನ್ನು ನಿರ್ದಿಷ್ಟಗೊಳಿಸಿವುದರಿಂದ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿ ಸಾಧನಗಳನ್ನು ಮತ್ತು ತಂತ್ರಗಳನ್ನು ತಯಾರಿಸಲು ಅಥವಾ ಆಯ್ಕೆ ಮಾಡಲು ಸಹಾಯಕವಾಗುವುದು.

- *ಕಲಿಕೆಯ ಫಲಗಳಲ್ಲಿ ಸ್ಪಷ್ಟತೆ:* ಮೌಲ್ಯಾಂಕನದ ಉದ್ದೇಶ ಮತ್ತು ಕ್ರಮಗಳು ಕಲಿಸಿದ ಪಾಠ/ಘಟಕದ ಅಪೇಕ್ಷಿತ ಕಲಿಕಾ ಫಲಗಳ ಸ್ವರೂಪದಿಂದ ನಿರ್ಧಾರಿತವಾಗುತ್ತದೆ. ಒಂದು ಪಾಠವನ್ನು ಬೋಧಿಸುವ ಉದ್ದೇಶ ಕೇವಲ ಜ್ಞಾನವನ್ನು ಗಳಿಸುವುದಾದರೆ ಆಗ ಕಲಿಕೆಯ ಮೌಲ್ಯಾಂಕನಕ್ಕಾಗಿ ಒಂದು ಲಿಖಿತ ಪರೀಕ್ಷೆ ಸಾಕಾಗುತ್ತದೆ.

Notes

ಆದರೆ ಉದ್ದೇಶಗಳು ಗ್ರಹಿಕೆ, ಅನ್ವಯ, ವಿಶ್ಲೇಷಣೆ ಅಥವಾ ಸೃಜನಶೀಲತೆಯನ್ನು ಬೆಳೆಸುವುದಾಗಿದ್ದರೆ, ಮೌಲ್ಯಾಂಕನದ ಉದ್ದೇಶವು ವಿದ್ಯಾರ್ಥಿಯ ಕಲಿಕೆಯನು ನಿರಂತರವಾಗಿ ಸಮಗ್ರವಾಗಿ ವಿವರಿಸಲು ಸಾಧ್ಯವಾಗುವಂತೆ ವಿವಿಧ ವಿಧಾನಗಳನ್ನು ಜೋಡಿಸುವ ಮೂಲಕ ವಿದ್ಯಾರ್ಥಿಯ ಕಲಿಕೆಯ ಬೆಳವಣಿಗೆಯನ್ನು ಗಮನಿಸುವುದಾಗಿರುತ್ತದೆ. ಆಗ ಕಲಿಕೆಗಾಗಿ ಮೌಲ್ಯಾಂಶನ ಮತ್ತು / ಅಥವಾ ಕಲಿಕೆಯಾಗಿ ಮೌಲ್ಯಾಂಶನವು ಹೆಚ್ಚು ಆದ್ಯತೆಯುಳ್ಳ ಕ್ರಮಗಳಾಗುತ್ತದೆ.

- *ಪರಿಣಾಮಕಾರಿ ಮೌಲ್ಯಾಂಶನದ ಕಾಣ್ಕೆ / ನೋಟ* : ಒಂದು ಮೌಲ್ಯಾಂಶನ ಕಾರ್ಯಕ್ರಮವನ್ನು ಯೋಜಿಸುವಾಗ ಕಾರ್ಯಕ್ರಮ ಮುಂದುವರೆಯುತ್ತಿರುವಾಗ ಏನಾಗಬಹುದು ಎಂಬ ಸ್ಪಷ್ಟ ಕಾಣ್ಕೆ ನಿಮಗೆ ಇರಬೇಕು. ನೀವು ಕಲಿಕೆಯಲ್ಲಿ ಮೌಲ್ಯಮಾಪನ ಮಾಡಲು ಇಚ್ಛಿಸಿದರೆ ಆಗ ತರಗತಿ ಅಥವಾ ಪರೀಕ್ಷೆಯ ಕೊಠಡಿಯಲ್ಲಿ ಆಸನ ವ್ಯವಸ್ಥೆ, ತರಗತಿ ಕೊಠಡಿಯ ಶುಚಿತ್ವ, ವಿದ್ಯಾರ್ಥಿಗಳಲ್ಲಿ ಶಿಸ್ತು, ಉತ್ತಮವಾಗಿ ರಚಿಸುವ ಪ್ರಶ್ನೆ ಪತ್ರಿಕೆ, ಬರೆಯುವ ಸಾಮಾಗ್ರಿಗಳ ಲಭ್ಯತೆ, ಕೊಠಡಿಯಲ್ಲಿ ಪುಸ್ತಕ ಮತ್ತಿತರ ಯಾವುದೇ ಸಹಾಯಕ ಸಾಮಾಗ್ರಿ ಇಲ್ಲದಿರುವುದು ಮುಂತಾದ ಆದರ್ಶ ಅಥವಾ ಅನುಕೂಲಕರ ಸನ್ನಿವೇಶಗಳನ್ನು ಚಿತ್ರಿಸಿಕೊಳ್ಳಬೇಕು. ಹಾಗೆಯೇ ಕಲಿಕೆಗಾಗಿ ಅಥವಾ ಕಲಿಕೆಯಾಗಿ ಮೌಲ್ಯಾಂಶನವು ಉತ್ತೇಜಿಸಲ್ಪಡುತ್ತಿರುವ ನಿಮ್ಮ ತರಗತಿಯ ದೃಶ್ಯವನ್ನು ಚಿತ್ರಿಸಿಕೊಳ್ಳಬೇಕು. ಇಂತಹ ಕಾಣ್ಕೆಯನ್ನು ರೂಪಿಸಿಕೊಳ್ಳುವುದು ನಿಮಗೆ ಪರಿಣಾಮಕಾರಿ ಮೌಲ್ಯಾಂಶನ ಕಾರ್ಯಕ್ರಮ ಯೋಜಿಸಲು ಸಹಾಯಕವಾಗುತ್ತದೆ.

- *ಸಮಯದ ಪ್ರಾವಿಧಾನ :* ಕಲಿಕೆಯ ಮೌಲ್ಯಾಂಶನ ನಡೆಸಲು ನಿಮಗೆ ಪಾಠ / ಘಟಕದ ಕೊನೆಯಲ್ಲಿ, ಒಂದು ಶೈಕ್ಷಣಿಕ ಅವಧಿಯ ಕೊನೆಯಲ್ಲಿ ಮತ್ತು / ಅಥವಾ ಶೈಕ್ಷಣಿಕ ಚಟುವಟಿಕೆಯ ಶಾಲದ (ಸೆಶನ್) ಕೊನೆಯಲ್ಲಿ ನಿರ್ದಿಷ್ಟ ಸಮಯ ಬೇಕಾಗುತ್ತದೆ. ನೀವು ಪ್ರಶ್ನೆ ಪತ್ರಿಕೆ ತಯಾರಿಕೆ, ಆಸನ ವ್ಯವಸ್ಥೆ, ಉತ್ತರ ಪತ್ರಿಕೆಗಳ ಪರಿಶೀಲನೆ, ಫಲಿತಾಂಶಗಳ ದಾಖಲೆ ಮತ್ತು ಹಂಚಿಕೊಳ್ಳುವಿಕೆ ಮುಂತಾಗಿ ವಿವರವಾದ ಸಿದ್ಧತೆ ಮಾಡಬೇಕಾಗಿರುವುದರಿಂದ ಇಂತಹ ಮೌಲ್ಯಾಂಶನ ಕಾರ್ಯಕ್ರಮಗಳನ್ನು ಸಾಕಷ್ಟು ಮುಂಚಿತವಾಗಿ ಯೋಜಿಸಿಕೊಳ್ಳಬೇಕು. ಘಟಕ ಪರೀಕ್ಷೆಗಳಿಗೆ (ಘಟಕದ ಕೊನೆಗೆ) ಕಡಿಮೆ ಸಮಯ ಬೇಕಾಗುತ್ತದೆ. ಬಹುಶಃ ವಾರದ ಯಾವುದೇ ದಿನದ ಒಂದು ತರಗತಿ ಅವಧಿ (ಸುಮಾರು 45 ನಿಮಿಷಗಳು) ಸಾಕಾಗುವುದು. ನೀವು ಗಮನದಲ್ಲಿಡಬೇಕಾದ ಅಂಶವೆಂದರೆ ಕಲಿಕೆಯ ಮೌಲ್ಯಾಂಶನಕ್ಕೆ ಬಳಸುವ ಕಾಲವು ಶಾಲೆಯಲ್ಲಿ ಲಭ್ಯವಿರುವ ಕಲಿಕೆಯ ಕಾಲವನ್ನು ಕಳೆದುಕೊಂಡಂತಾಗುತ್ತದೆ. ಇಂತಹ ಮೌಲ್ಯಾಂಶನಕ್ಕೆ ನೀವು ಹೆಚ್ಚು ಸಮಯ ನೀಡಿದರೆ, ಶಾಲೆಯಲ್ಲಿ ಕಲಿಕೆಯ ಸಮಯ ಅಷ್ಟೇ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಆದರೆ ಕಲಿಕೆಗಗಿ ಮೌಲ್ಯಾಂಶನ ಮತ್ತು ಕಲಿಕೆಯಾಗಿ ಮೌಲ್ಯಾಂಶನಗಳು ತರಗತಿ ಕಲಿಕೆ ಪ್ರಕ್ರಿಯೆಯ ಅವಿಭಾಜ್ಯ ಭಾಗಗಳಾಗಿರುವುದರಿಂದ ಅವುಗಳ ನಿರ್ವಹಣೆಗೆ ನಿರ್ದಿಷ್ಟ ಸಮಯ ಬೇಕಾಗುವುದಿಲ್ಲ. ನೀವು ಮಾಡಬೇಕಾಗಿರುವುದೇನೆಂದರೆ ಬೋಧನೆಯ ಅವಧಿಯಲ್ಲಿ ನೀವು ಮಾಡಬಯಸುವ ಮೌಲ್ಯಾಂಶನ ಚಟುವಟಿಕೆಗಳನ್ನು ನಿಮ್ಮ ಪಾಠ ಯೋಜನೆ / ಟಿಪ್ಪಣಿಯಲ್ಲಿ ನಮೂದಿಸಬೇಕು.

- *ವಿದ್ಯಾರ್ಥಿಗಳು ತೊಡಗಿಕೊಳ್ಳುವಿಕೆ* : ಕಲಿಕೆಯ ಮೌಲ್ಯಾಂಶನದಲ್ಲಿ ವಿದ್ಯಾರ್ಥಿಗಳ ಪಾತ್ರ ಕೇವಲ ಪರೀಕ್ಷೆಗಳಿಗೆ ಉತ್ತರಿಸುವುದಕ್ಕೆ ಸೀಮಿತವಾಗಿದ್ದು, ಕಲಿಕೆಗಾಗಿ ಮೌಲ್ಯಾಂಶನದಲ್ಲಿ ವಿವಿಧ ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ, ಶಿಕ್ಷಕರು ಮತ್ತು ಸಹಪಾಠಿ ಗುಂಪಿನ ಸದಸ್ಯರಿಗೆ ಪ್ರತಿಕ್ರಿಯೆ ತೋರುವ ಮೂಲಕ, ಅನುಮಾನಗಳನ್ನು ಪರಿಹರಿಸಿಕೊಳ್ಳಲು ಪ್ರಶ್ನೆ ಕೇಳುವ ಮೂಲಕ ಸಹಪಾಠಿಗಳಿಗೆ ಸಹಾಯಮಾಡುವುದೇ ಮುಂತಾದ ಹಲವು ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಕೊಂಡಿರುತ್ತಾರೆ. ಕಲಿಕೆಯಾಗಿ ಮೌಲ್ಯಾಂಶನವು ಸಂಪೂರ್ಣವಾಗಿ ವಿದ್ಯಾರ್ಥಿ ಪಾಲಿತವಾಗಿದೆ. ನೀವು ಅದಕ್ಕೆ ಕೇವಲ ಅನೂಕೂಲಿಸುವ ಸನ್ನಿವೇಶಗಳನ್ನು ಒದಗಿಸುವುದು.

Notes

- *ತರಗತಿ ಪರಿಸರ :* ತರಗತಿಯಲ್ಲಿ ಕಲಿಕೆಯ ಮೌಲ್ಯಾಂಶನ ನಿರ್ವಹಿಸುವಾಗ ನಾವು ಸಾಮಾನ್ಯವಾಗಿ ಪ್ರಶ್ನೆಗಳಿಗೆ ಉತ್ತರಿಸಲು ಯಾವುದೇ ಸುಳಿವು ಒದಗಿಸುವ ಸಾಧ್ಯತೆ ಇರುವ ಯಾವ ಅಂಶವೂ ತರಗತಿಯಲ್ಲಿ ಅಥವಾ ಅದರ ಪರಿಸರದಲ್ಲಿ ಇಲ್ಲದಿರುವಂತೆ ಖಚಿತ ಖಚಿತಪಡಿಸಿಕೊಳ್ಳುತ್ತೇನೆ. ಆದರೆ ಉಳಿದ ಎರಡು ವಿಧಧ ಮೌಲ್ಯಾಂಕನಗಳಿಗೆ ತರಗತಿ ಪರಿಸರವು ಕಲಿಕಾ ಸಾಮಗ್ರಿಗಳಿಮದ ಸಂಪದೀಕೃತವಾಗಿರಬೇಕು. ಇದು ಕಲಿಕೆಗಾಗಿ ಮೌಲ್ಯಾಂಕನ ಮತ್ತು ಕಲಿಕೆಯಾಗಿ ಮೌಲ್ಯಾಂಕನಗಳಿಗೆ ಅತ್ಯವಶ್ಯ. ಇದಕ್ಕಾಗಿ ತರಗತಿಯ ಗೋಡೆಗಳು, ನೆಲ ಮತ್ತು ಕೊಠಡಿಯ ಪ್ರತಿಯೊಂದು ಸ್ಥಳವನ್ನೂ ಬಳಸಿ ವಿದ್ಯಾರ್ಥಿಗಳು ಆಲೋಚಿಸಲು ಚಿಂತನೆ ಮಾಡಲು ಮತ್ತು ವಿಚಾರಗಳನ್ನು ಸೃಷ್ಟಿಸಲು ಉತ್ತೇಜಿಸುವ ವಿದ್ಯಾರ್ಥಿ ಸ್ನೇಹಿ ಸನ್ನಿವೇಶಗಳನ್ನು ಒದಗಿಸಿರಬೇಕು.
- *ಹಿಮ್ಮಹಿತಿಗೆ ಅವಕಾಶ:* ಮೌಲ್ಯಾಂಕನ ಕಾರ್ಯಕ್ರಮಗಳಲ್ಲಿ ಹಿಮ್ಮಾಹಿತಿಯ ಪ್ರಾಮುಖ್ಯತೆಯನ್ನು ಈಗಾಗಲೇ ಚರ್ಚಿಸಿದ್ದೇವೆ. ಕಲಿಕೆಯ ಮೌಲ್ಯಾಂಕನದ ಹಿಮ್ಮಾಹಿತಿಯನ್ನು ವಿದ್ಯಾರ್ಥಿಯ ಕಾರ್ಯ ನಿರ್ವಹಣೆಯ ಮಟ್ಟ ಸೂಚಿಸುವ ಅಂಕಗಳು ಅಥವಾ ಶ್ರೇಣಿಗಳನ್ನೇ (೦ : ಆ ------) ಬಳಸಿ ಉತ್ತಮವಾಗಿ ವಿನ್ಯಾಸಗೊಳಿಸಿದ ವರದಿಯಲ್ಲಿ ನೀಡಲಾಗುವುದು. ವಿದ್ಯಾರ್ಥಿಗಳೊಂದಿಗೆ ಮಾತ್ರವಲ್ಲದೆ, ಅವರ ಕಲಿಕೆಯಲ್ಲಿ ಪಾಲುದಾರಿಕೆ ಇರುವ ಪೋಷಕರು ಮತ್ತಿತರರೊಂದಿಗೂ ವರದಿಯನ್ನು ಹಂಚಿಕೊಳ್ಳಲಾಗುವುದು. ಆದರೆ, ಕಲಿಕೆಗಾಗಿ ಮೌಲ್ಯಾಂಕನದಲ್ಲಿ ಹಿಮ್ಮಾಹಿತಿಯು ತಕ್ಷಣದ್ದಾಗಿದ್ದು, ಬಹುಮಟ್ಟಿಗೆ ವಿಸ್ತೃತವಾದ ಯೋಜನೆಯ ಅಗತ್ಯ ಇಲ್ಲದಂತಹ ಶಾಬ್ದಿಕ ಮತ್ತು ಅಥವಾ ವಿದ್ಯಾರ್ಥಿಯ ವರ್ತನೆ ಅಥವಾ ಕಾರ್ಯಗಳ ವಿವರಣೆಯ ರೂಪದಲ್ಲಿರುತ್ತದೆ. ಆದರೆ, ಈ ವಿವರಣೆಗಳನ್ನು ವಿದ್ಯಾರ್ಥಿಯ ಉತ್ತರ ಪತ್ರಿಕೆಗಳು ಅಥವಾ ದಿನಚರಿ ಪುಸ್ತಕದಲ್ಲಿ ದಾಖಲು ಮಾಡಿ ಪೋಷಕರೊಂದಿಗೆ ಹಂದಿಕೊಳ್ಳಬಹುದು. ಕಲಿಕೆಯಾಗಿ ಮೌಲ್ಯಾಂಕನದಲ್ಲಿ ವಿದ್ಯಾರ್ಥಿಯು ತನ್ನದೇ ಚಿಂತನೆಗಳಿಂದ ಮತ್ತು/ಅಥವಾ ಸಹಪಠಿಗಳಿಂದ ಹಿಮ್ಮಹಿತಿ ಪಡೆಯುವುದರಿಮದ ನೀವು ಯಾವುದೇ ಅವಕಾಶ ನೋಡಿಕೊಳ್ಳಬೇಕಾಗಿಲ್ಲ.
- *ಬದಲಾವಣೆಯನ್ನು ಅಳವಡಿಸುವುದು:* ಮೌಲ್ಯಾಂಕನದ ಪೂರ್ಣ ಕಸರತ್ತು ವಿದ್ಯಾರ್ಥಿಯ ಕಲಿಕೆಯಲ್ಲಿ ಹೆಚ್ಚಿನ ಸುಧಾರಣೆಯನ್ನು ಉಂಟು ಮಾಡುವುದಕ್ಕಾಗಿದೆ. ಮೌಲ್ಯಾಂಕನ ಫಲಿತಾಂಶಗಳನ್ನು ಆಧರಿಸಿ ನೀವು ತಪ್ಪುಗಳನ್ನು ಸರಿಪಡಿಸಲು, ಕಲಿಕೆಯನ್ನು ಸುಧಾರಿಸಿ ಸಂಪದೀಕರಿಸಲು ಪ್ರತಿ ವಿದ್ಯಾರ್ಥಿಯೊಂದಿಗೆ ಸಮಾಲೋಚಿಸಿ ಕ್ರಿಯಾ ಅಂಶಗಳನ್ನು ರೂಪಿಸಬೇಕು. ಕಲಿಕೆಯಲ್ಲಿನ ಬಲ, ದೌರ್ಬಲ್ಯಗಳನ್ನು ಪತ್ತೆ ಮಾಡುವುದು, ಸುಧಾರಣೆ ಮತ್ತು ಸಂಪದೀಕರಣಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಎಂಬ ಮೌಲ್ಯಾಂಕನದ ಚಕ್ರವು ಶಾಲಾ ವರ್ಷಗಳಲ್ಲಿ ವಿದ್ಯಾರ್ಥಿಗಳು ಸಾಗಬಹುದಾದ ಶ್ರೇಣಿಗಳ ಜೊತೆ ಜೊತೆಗೇ ನಿರಂತರವಾಗಿ ಸುರುಳಿ ರೂಪದಲಲಿ ಮೇಲು ಮೇಲಕ್ಕೆ ಸಾಗುತ್ತದೆ.
- *ನಿರಂತರ ಉಸ್ತುವಾರಿಯ ವ್ಯವಸ್ಥೆ:* ಶಾಲೆಯಲ್ಲಿ ಮೌಲ್ಯಾಂಕನ ಕಾರ್ಯಕ್ರಮಗಳ ನಿರಂತರತೆ ಮತ್ತು ಗುಣಮಟ್ಟವನ್ನು ಸುಸ್ಥಿರವಾಗಿಡಲು ಶಿಕ್ಷಕರ ಒಂದು ಗುಂಪಿಗ ಯೋಜನೆ ನಿರ್ವಹಣೆ ದಾಖಲಿಸುವಿಕೆ ಫಲಿತಾಂಶಗಳನ್ನು ಹಂಚಿಕೊಳ್ಳುವುದು ಮತ್ತು ಸಮಯೋಚಿತ ಸೂಕ್ತ ಅನುಸರಣಾ ಕ್ರಮಗಳನ್ನು ಕೈಗೊಳ್ಳುವುದನ್ನು ಉಸ್ತುವಾರಿ ಮಾಡುವ ಜವಾಬ್ದಾರಿ ನೀಡಬಹುದು. ಎಲ್ಲ ಉಸ್ತುವಾರಿ ಕಾರ್ಯಗಳನ್ನು ಅಪೇಕ್ಷಿತ ಕಲಿಕೆಯ ಫಲಗಳಿಗೆ ಸಂಬಂಧಿಸಿದಂತೆಯೇ ನಿರ್ವಹಿಸಬೇಕು.

## 14.4 ಸಾರಾಂಶಗೊಳಿಸೋಣ

- ತರಗತಿಯಲ್ಲಿ ಪ್ರತಿ ವಿದ್ಯಾರ್ಥಿಯ ಕಲಿಕೆಯ ಮೌಲ್ಯಾಂಕನವನ್ನು ಅಪೇಕ್ಷಿತ ಕಲಿಕಾ ಫಲಗಳಿಗೆ ಸಂಬಂಧಿಸಿದಂತೆ ಮಾಡಲಾಗುತ್ತದೆ. ಮೌಲ್ಯಾಂಕನಗಳನ್ನು ಕಲಿಕೆಯ ಅನುಕ್ರಮದಲ್ಲಿ ಉದ್ದೇಶ ಮತ್ತು ಸಮಯಕ್ಕೆ ಸಂಬಂಧಿಸಿದಂತೆ ವರ್ಣಿಕರಿಸಬಹುದು.
- ಕಲಿಕೆಯ ಮೌಲ್ಯಾಂಕನ ಎಂದರೆ ಘಟಕ ಬೋಧನೆ ಅಥವಾ ಶೈಕ್ಷಣಿಕ ಅವಧಿಯ ಅಂತ್ಯದ ವೇಳೆಗೆ ನಡೆಯುವ ಮೌಖಿಕ ಕಾರ್ಯಪ್ರದ ಅಥವಾ ಲಿಖಿತ ಹಾಗೂ ಎರಡು ಅಥವಾ ಹೆಚ್ಚು ಪ್ರಕಾರಗಳ ಸಂಯೋಜನೆಯಿಂದ ನಡೆಯುವ ಮೌಲ್ಯಾಂಕನವಾಗಿದೆ. ಕಲಿಕೆಯ ಮೌಲ್ಯಾಂಕನದ ಫಲಿತಾಂಶಗಳನ್ನು ಅಂಕಗಳು ಅಥವಾ ಶ್ರೇಣಿಗಳ ರೂಪದಲ್ಲಿ ದಾಖಲಿಸಿ, ಮುಂಬರುವ ಘಟಕಗಳಲ್ಲಿ ವಿದ್ಯಾರ್ಥಿಗಳ ಕಾರ್ಯಸಾಧನೆಯನ್ನು ಉತ್ತಮಪಡಿಸಲು ಬಳಸಲಾಗುತ್ತದೆ.

Notes

- ಕಲಿಕೆಗಾಗಿ ಮೌಲ್ಯಾಂಕನವು ಮೂಲತಃ ಶಿಕ್ಷಕರು ಮತ್ತು ಸಹಪಾಠಿಗಳಿಂದ ನಿರಂತರ ಹಿಮ್ಮಾಹಿತಿಯ ಮೂಲಕ ವಿದ್ಯಾರ್ಥಿ ಕಲಿಕೆಯನ್ನು ಪ್ರೋತ್ಸಾಹಿಸಲು ಮತ್ತು ಬೋಧನೆಯನ್ನು ಮಾರ್ಗದರ್ಶಿಸಲು ವಿನ್ಯಾಸಗೊಳಿಸಲಾಗಿದೆ. ಕಲಿಕೆಗಾಗಿ ಮೌಲ್ಯಾಂಕನವನಗನು ಪರಿಣಾಮಕಾರಿಯಾಗಿ ಮಾಡಲು ಬಳಸುವ ಅಭ್ಯಾಸ ನಿಯೋಜಿತ ಕಾರ್ಯಗಳು, ತರಗತಿ ಚಟುವಟಿಕೆಗಳ ವೀಕ್ಷಣೆ, ಯೋಜನಾ ಕಾರ್ಯದಲ್ಲಿ ತೊಡಗಿಕೊಳ್ಳುವಿಕೆ ಮತ್ತು ಕೃತಿ ಸಂಪುಟಗಳನ್ನು ರೂಪಿಸುವುದು ಇತ್ಯಾದಿ ಸನ್ನಿವೇಶಗಳು ಉದಾಹರಣೆಗಳಾಗಿವೆ.
- ಕಲಿಕೆಯಾಗಿ ಮೌಲ್ಯಾಂಕನದ ಮುಖ್ಯ ಉದ್ದೇಶವೆಂದರೆ ವಿದ್ಯಾರ್ಥಿಗಳಿಗೆ ತಮ್ಮದೆ ಕಲಿಕೆ ಕುರಿತು ಚಿಂತನೆ ನಡೆಸಲು ಅವಕಾಶ ಒದಗಿಸುವುದೇ ಆಗಿದೆ. ಸ್ವ–ಮೌಲ್ಯಾಂಕನ, ಸಹಪಾಠಿಗಳಿಂದ ಮೌಲ್ಯಂಕನ ಮತ್ತು ಗುರು ನಿರ್ಧರಿಸುವ ಚಟುವಟಿಕೆಗಳೆಲ್ಲವೂ ಕಲಿಕೆಯಾಗಿ ಮೌಲ್ಯಾಂಕನದ ಉದಾಹರಣೆಗಳಾಗಿವೆ.
- ಮೌಲ್ಯಾಂಕನ ಕಾರ್ಯಕ್ರಮವನ್ನು ಯೋಜಿಸುವಾಗ ನೀವು ಅಪೇಕ್ಷಿತ ಕಲಿಕಾ ಫಲಗಳು, ಪರಿಣಾಮಕಾರಿ ಮೌಲ್ಯಾಂಕನದ ಸ್ಪಷ್ಟ ಕಾಣ್ಕೆ, ಸಮಯಾವಕಾಶ, ವಿದ್ಯಾರ್ಥಿಗಳು ತೊಡಗಿಕೊಳ್ಳುವಿಕೆ, ಹಿತಕರವಾದ ತರಗತಿ ವಾತಾವರಣ, ಹಿಮ್ಮಾಹಿತಿಗೆ ಅವಕಾಶ, ಮೌಲ್ಯಾಂಕನದ ಉಸ್ತುವಾರಿಗೆ ವ್ಯವಸ್ಥೆ ಮುಂತಾದ ಹಲವು ಅಂಶಗಳನ್ನು ಪರಿಗಣಿಸಬೇಕು.

## 14.5 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಮಾದರಿ ಉತ್ತರಗಳು.

ಇ1. ಬಿ

ಇ2. ಇಲ್ಲ, ಏಕೆಂದರೆ RTE ಕಾಯಿದೆ, 2009ರ ನುಗುಣ ದೇಶದಾದ್ಯಂತ ಪ್ರಾಥಮಿಕ ತರಗತಿಗಳಲ್ಲಿ ಅನುತ್ತೀರ್ಣಗೊಳಿಸಬಾರದೆಂಬ ನೀತಿ ಜಾರಿಯಲ್ಲಿದೆ.

ಇ4. ಬಿ

ಇ5. ಖ

## 14.6 ಸೂಚಿತವಾಚನ ಮತ್ತು ಉಲ್ಲೇಖಗಳು

1. Black, P & William, D (1999) Assessment for learning: Beyond the black box. London: Kings College London.

2. Butler, R (1988). Enhancing and undermining intrinsic motivation: effects of tasks-involving evaluation on interest and performance. British Journal of Educational Psychology, 56 (51-63)

3. Cooper, Damian (2007). Talking about assessment, strategies, and tools to improve learning, Toronto, Ontario: Thomson Nelson.

4. Earl, Lorna M. (2006). Assesement as learning: Using classroom assessment to maximize student leanring. Thousand Oaks, California: Corwin Press.

Notes

## 14.7 ಘಟಕಾಂತ್ಯದ ಅಭ್ಯಾಸಗಳು

1. ಕಲಿಕೆಯ ಮೌಲ್ಯಾಂಕನ ಮತ್ತು ಕಲಿಕೆಗಾಗಿ ಮೌಲ್ಯಾಂಕನಗಳ ನಡುವೆ ವ್ಯತ್ಯಾಸ ತಿಳಿಸಿ.
2. ಕಲಿಕೆಗಾಗಿ ಮೌಲ್ಯಾಂಕನದಲ್ಲಿ ಹಿಮ್ಮಾಹಿತಿಯ ಪಾತ್ರವನ್ನು ವಿಷದೀಕರಿಸಿ

# ಪಠ್ಯ ಭಾಗ 15 ಗುಣ ಮಾಪನದ ಸಾಧನೋಪಕರಣಗಳು ಮತ್ತು ಕಾರ್ಯತಂತ್ರಗಳು

**Notes**

## ವಿನ್ಯಾಸ


*15.0 ಪ್ರಸ್ತಾವನೆ ಪರಿಚಯ*

*15.1 ಕಲಿಕಾ ಉದ್ದೇಶಗಳು*

*15.2 ಗುಣ ಮಾಪನ ಪರೀಕ್ಷೆಯ ರಚನೆ ಹಾಗೂ ಉಪಯೋಗ*

- *15.2.1 ಶಿಕ್ಷಕ ನಿರ್ಮಿತ ಪರೀಕ್ಷೆ*
- *15.2.2 ಪಠ್ಯಾಂತ ಪರೀಕ್ಷೆ*

*15.3 ವಿವಿಧ ರೀತಿಯ, ಪರೀಕ್ಷಾ ಪ್ರಶ್ನೆಗಳ ರಚನೆ*

- *15.3.1 ವಿಸ್ತರಿತ ಉತ್ತರದ ರೀತಿ ಪ್ರಶ್ನೆಗಳು*
- *15.3.2 ನಿರ್ಬಂಧಿತ ಉತ್ತರದ ರೀತಿ ಪ್ರಶ್ನೆಗಳು*
- *15.3.3 ಉದ್ದೇಶಿತ ಉತ್ತರದ ರೀತಿ ಪ್ರಶ್ನೆಗಳು*
- *15.3.4 ಮುಕ್ತಾಂತ ಪ್ರಶ್ನೆಗಳು*

*15.4 ರಚನೆ ಮತ್ತು ಗುಣಾತ್ಮಕ ಉಪಕರಣ ಹಾಗೂ ತಂತ್ರಗಳ ಉಪಯೋಗ*

- *15.4.1 ವೀಕ್ಷಣೆ*
- *15.4.2 ತನಿಖಾಪಟ್ಟಿ*
- *14.4.3 ಹಂತ ನಿರ್ಣಯ ತಾಲಿಕೆ*
- *15.4.4 ಪ್ರಶ್ನಾವಳಿ*
- *15.4.5 ಸಂದರ್ಶನ*
- *15.4.6 ಪ್ರತ್ಯೇಕ ಮಾಹಿತಿ ದಾಖಲೆಗಳು*
- *15.4.7 ಯೋಜನಾಕಾರ್ಯ*
- *15.4.8 ವ್ಯಕ್ತಿ ವಿಶೇಷ ಅಧ್ಯಯನ*

*15.5 ಕ್ರೂಢೀಕರಿಸೋಣ.*

*15.6 ಹೆಚ್ಚಿನ ವಾಚನಕ್ಕೆ ಸಲಹೆಗಳು*

*15.7 ನಿಮ್ಮ ಪ್ರಗತಿ ಪರೀಕ್ಷೆಗೆ ಮಾದರಿ ಉತ್ತರಗಳು*

*15.8 ಪಠ್ಯಾಂತ ಅಭ್ಯಾಸಗಳು*


## 15.0 ಪ್ರಸ್ತಾವನೆ – ಪರಿಚಯ

ಈ ಹಿಂದಿನ ಪಠ್ಯ ಭಾಗದಲ್ಲಿ, ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ, ಗುಣ ಮಾಪನದ ಮಹತ್ವವನ್ನು ತಿಳಿದೆವು. ತರಗತಿಯಲ್ಲಿನ ಪ್ರಕ್ರಿಯೆ ಹಾಗೂ ನಿರೀಕ್ಷಿತ ಕಲಿಕಾ ಫಲ ಮತ್ತು ಗುಣ ಮಾಪನದ ನಡುವಿನ ಸಂಬಂಧದ ಬಗ್ಗೆ ತಿಳಿದಿದ್ದೇವೆ.

ಶಾಲಾಧಾರಿತ ಗುಣಮಾಪನ ವ್ಯವಸ್ಥೆಯು (ಸಿ.ಸಿ.ಇ.) ಮಕ್ಕಳ ಅಭಿವೃದ್ಧಿಯ ಎಲ್ಲಾ ಅಂಶಗಳನ್ನು ಒಳಗೊಂಡಿದೆ. ಸಿ.ಸಿ.ಇ. ಅಡಿಯಲ್ಲಿನ ಗುಣಮಾಪನ ಕ್ರಿಯೆಯೆ ಒಂದು ಸಮದ ಕಾರ್ಯವಾಗದೆ ; ಶೈಕ್ಷಣಿಕ ______ ಪೂರ್ಣ ಕಾಲದುದ್ದಕ್ಕೂ ಹರಡಿರುತ್ತದೆ. ಸಿ.ಸಿ.ಇ. ಯ ನಿರಂತರತೆಯು, ಕಡಿಮೆ ಸಮಯದಲ್ಲಿ, ರೂಪತ್ವ ಪರೀಕ್ಷೆ (Formative Test) ಫಾರ್ಮೇಟೀವ್ ಟೆಸ್ಟ್‌ಗಳು, ಸತತವಾಗಿ ನಡೆಯುತ್ತಿರುವಂತೆ ಒತ್ತಾಯಿಸುತ್ತವೆ ಹಾಗೂ ಮಕ್ಕಳ ಕಲಿಕಾ ಕಠಿಣತೆಗಳನ್ನು ತಪಾಸಿಸುವ, ಸರಿಪಡಿಸುವ ಕಾರ್ಯ ಮತ್ತು ಕಾಲ ಕಾಲಕ್ಕೆ ಮಕ್ಕಳಿಗೆ ಮಾಹಿತಿ (ಹಿಂಮಾಹಿತಿ) ಕೊಡುವುದು ಸಿ.ಸಿ.ಇ.ಯಲ್ಲಿ ಅಂತರ್ಗತವಾಗಿದೆ. ಈ ರೀತಿ, ಮಕ್ಕಳ ಶಾಲಾ ಪಠ್ಯ ಹಾಗೂ ಸಹಪಠ್ಯ ಅಂಶಗಳನ್ನು ಗುಣಮಾಪನ ಮಾಡುವಾಗ, ಕೇವಲ ಒಂದೇ ರೀತಿಯಾದ ಗುಣಮಾಪನ ಉಪಕರಣ ಅಥವಾ ತಂತ್ರದಿಂದ (ಉದಾ: ತರಗತಿಯ ಪರೀಕ್ಷೆ) ಯಿಂದ ಗುಣ ಮಾಪನದ ಉದ್ದೇಶವನ್ನು ಪೂರೈಸಲು, ಸಾಕಾಗುತ್ತದೆಯೇ ? ವ್ಯಾಪಕ ರೀತಿಯಲ್ಲಿ ಗುಣ ಮಾಪನ ರೀತಿಯಲ್ಲಿ ಮಾಡಲು ವಿವಿಧ ರೀತಿಯ ಗುಣ ಮಾಪನ ಉಪಕರಣಗಳು ಮತ್ತು ತಂತ್ರಗಳ ಮೇಲೆ ಅವಲಂಬಿಸಬೇಕಾಗುವುದು.

ಈ ಪಠ್ಯ ಭಾಗದಲ್ಲಿ ಗುಣಮಾಪನದ ಉಪಕರಣಗಳ ಮತ್ತು ತಂತ್ರಗಳ ಮೂಲ ಪರಿಕಲ್ಪನೆಗಳ ಬಗ್ಗೆ ತಿಳಿಯುತ್ತೇವೆ ಇದರಿಂದ ಮಕ್ಕಳ ಶಾಲಾ, ಸಹ ಶಾಲಾ ಸಾಧನೆ ಪರೀಕ್ಷಿಸಲು ಬೇರೆ ಬೇರೆ ವಿವಿಧ ಉಪಕರಣಗಳನ್ನು, ರಚಿಸುವ ಕುಶಲತೆಗಳನ್ನು ಕಲಿಯೋಣ.

## 15.1 ಕಲಿಕಾ ಉದ್ದೇಶಗಳು

ಈ ಪಠ್ಯಭಾಗವನ್ನು ಪೂರ್ಣಗೊಳಿಸಿದ ನಂತರ ನೀವು.

- ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಯ, ಗುಣ ಮಾಪನಕ್ಕಾಗಿ ಗುಣಮಾಪನ ಉಪಕರಣಗಳನ್ನು ಗುರುತಿಸಬಲ್ಲಿರಿ.
- ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸುವ ಉಪಕರಣಗಳು ಮತ್ತು ಮಕ್ಕಳ ಸಾಧನೆಯನ್ನು ಅರಿಯುವ ಪರೀಕ್ಷೆಗಳನ್ನು ವೃದ್ಧಿಪಡಿಸುವ ಮತ್ತು ಉಪಯೋಗಿಸುವದನ್ನು ಅರಿಯುವಿರಿ.
- ಶಾಲಾ ವಿಷಯಗಳಲ್ಲಿ ವಿವಿಧ ರೀತಿಯ ಪ್ರಶ್ನೆಗಳನ್ನು (ಪರೀಕ್ಷಾಂಶಗಳು) ರಚಿಸುವ, ಕೌಶಲ್ಯವನ್ನು ವೃದ್ಧಿಸಿಕೊಳ್ಳುವಿರಿ.
- ಸಂಧಾನಾ ಪರೀಕ್ಷೆಯನ್ನು ರಚಿಸುವುದು ಮತ್ತು ಅದರ ಉಪಯೋಗ.

## 15.2 ಗುಣ ಮಾಪನ ಪರೀಕ್ಷೆಯ ರಚನೆ ಹಾಗೂ ಉಪಯೋಗ

"ಸಾಧನೆ" ಯ ಪರಿಕಲ್ಪನೆಯ ಬಗ್ಗೆ ನೀವೂ ಕೂಡ ಅರಿತಿದ್ದೀರಿ?

ನಿಘಂಟಿನ ಪ್ರಕಾರ "ಸಾಧನೆ" ಪದದ ಅರ್ಥ "ಒಬ್ಬ ವ್ಯಕ್ತಿಯ ಯಾವುದೇ ಕಾರ್ಯವನ್ನು ಯಶಸ್ವಿಯಾಗಿ ತನ್ನ ಸ್ವಂತ ಪರಿಶ್ರಮ ಮತ್ತು ಕುಶಲತೆಯಿಂದಲೇ ಮಾಡಿ ಮುಗಿಸುವುದು" ಎಂದು (ಆಕ್ಸ್‌ಫರ್ಡ್ ಅದ್ವಾನ್ಸ್‌ಡ್ ಸ್ಟೂಡೆಂಟ್ ಡಿಕ್ಷನರಿ ಆಫ್ ಕರೆಂಟ್ ಇಂಗ್ಲೀಷ್ 2005) ಉದಾಹರಣೆಗೆ "ಸರಳ ಬಡ್ಡಿ" ಮತ್ತು "ಚಕ್ರಬಡ್ಡಿ" ಸಮಸ್ಯೆಗಳಲ್ಲಿ, "ವಿಜಯ" (ವಿದ್ಯಾರ್ಥಿ)ನು 10 ರೀತಿಯ ಸಮಸ್ಯೆಗಳನ್ನು ಬಿಡಿಸಬಲ್ಲನು. ಆದರೆ "ಸಾಜನ್"ನು ಕೇವಲ 4 ಸಮಸ್ಯೆಗಳನ್ನು ಮಾತ್ರ ಬಿಡಿಸಬಲ್ಲನು. ಆದ, ವಿಜಯನು "ಸಾಜನ್" ಗಿಂತಲೂ ಉತ್ತವ ು ಸಾಧನೆ ಮಾಡಿದ್ದಾನೆ ಎಂದು ಹೇಳಬಹುದು. ಏಕೆಂದರೆ, 'ವಿಜಯ' ನು ಹೆಚ್ಚಿನ ಜ್ಞಾನ, ಅರಿವು ಮತ್ತು ಕೌಶಲ್ಯ ಪಡೆದಿದ್ದಾನೆ. ಅವನು "ಸರಳ ಬಡ್ಡಿ", "ಚಕ್ರಬಡ್ಡಿ" ಪರಿಕಲ್ಪನೆ ವಿವಿಧ ಸಂದರ್ಭಗಳಲ್ಲಿನ ಲೆಕ್ಕಾಚಾರ ಕೌಶಲ್ಯ ಪಡೆದಿದ್ದಾರೆ ಇಲ್ಲಿ "ಸಾಧನೆ" ಎಂದರೆ, "ಸಮಸ್ಯಾ ಪರಿಹಾರ ಮಾಡುವ ಅ ನುಭವಗಳಿಕೆ" ಯಾಗಿದೆ. ಸಾಮಾನ್ಯವಾಗಿ, ಶಾಲೆಗಳಲ್ಲಿ ಕಲಿಕಾ ಸಾಧನೆಯ ಗುಣ ಮಾಪನಕ್ಕಾಗಿ ಪರೀಕ್ಷೆ (ಟೆಸ್ಟ್)ಗಳನ್ನು ಬಳಸುತ್ತೇವೆ.

Notes

ಈ ರೀತಿಯ ಪರೀಕ್ಷೆ (ಟೆಸ್ಟ್) ಗಳನ್ನು ಶಿಕ್ಷಕರಿಂದ ತಯಾರಿಸಲ್ಪಟ್ಟಿರಬಹುದು ಅಥವಾ ಮೇಲ್ಪಟ್ಟ ಅಧಿಕಾರದಿಂದ ತಯಾರಿಸಿಕೊಡಬಹುದು ಅಥವಾ ಮಾರುಕಟ್ಟೆಯಿಂದ ಖರೀದಿಸಿರಬಹುದು. ಶಿಕ್ಷಕರು ತಯಾರಿಸಿದ ಪರೀಕ್ಷೆಯು, ಬೇರೆಯವರು ತಯಾರಿಸಿದ ಪರೀಕ್ಷೆಗಳಿಗಿಂತ ಹೇಗೆ ಭಿನ್ನವಾಗಿರುತ್ತದೆ ? ಮಾರುಕಟ್ಟೆಯಿಂದ ಖರೀದಿಸಿರಬಹುದು. ಸಿಕ್ಷಕರು ತಯಾರಿಸಿದ ಪರೀಕ್ಷೆಯು, ಬೇರೆಯವರು ತಯಾರಿಸಿದ ಪರೀಕ್ಷೆಗಳಿಗಿಂತ ಹೇಗೆ ಭಿನ್ನವಾಗಿರುತ್ತದೆ ? ಮಾರುಕಟ್ಟೆಯಿಂದ ಖರೀದಿಸಿದ ಪರೀಕ್ಷಾ ಸಾಮಗ್ರಿಯು, ನಿಮ್ಮ ಉದ್ದೇಶವನ್ನು ಪೂರೈಸುವುದೇ ? ಈ ವಿಷಯದ ಬಗ್ಗೆ ವಿಮರ್ಶಾತ್ಮಕವಾಗಿ ಚಿಂತನೆಮಾಡಿ. ಬಹುತೇಕ ಶಿಕ್ಷಕರು, ತಮ್ಮ ವಿದ್ಯಾರ್ಥಿಗಳು, ಕಲಿಕಾ ಭೋಧನಾ ಪ್ರಕ್ರಿಯೆಯಲ್ಲಿ, ಎಷ್ಟರಮಟ್ಟಿಗೆ ಯಶಸ್ವಿಯಾಗಿ ಕಲಿತಿದ್ದಾರೆ ಮತ್ತು ಕಲಿಕಾ ಉದ್ದೇಶಗಳು, ಎಷ್ಟರಮಟ್ಟಿಗೆ ಸಾಧಿತವಾಗಿದೆ ಎಂದು ಅರಿಯಲು, ಪರೀಕ್ಷಾ ಫಲಿತಾಂಶದ ಮೇಲೆ ಆಧಾರಿತರಾಗಿರುತ್ತಾರೆ. ಫಲಿತಾಂಶವೆಂದರೆ, ವಿದ್ಯಾರ್ಥಿಗಳು ಗಳಿಸಿದ ಅಂಕಗಳು ಅಥವಾ ಸ್ಥರ (ಗ್ರೇಡ್)ಗಳು. ಒಂದು ಉದಾಹರಣೆಯನ್ನು ಪರಿಗಣಿಸೋಣ.

ನೀವು ಪ್ರಾಥಮಿಕ ಎರಡನೇ ತರಗತಿಯಲ್ಲಿ ಗಣಿತ ವಿಷಯದಲ್ಲಿ, ಎರಡು ಅಥವಾ ಹೆಚ್ಚು ಸಂಖ್ಯೆಗಳ ಸಂಕಲನವನ್ನು ಬೋಧಿಸುತ್ತಿದ್ದೀರಿ ಎಂದುಕೊಳ್ಳೋಣ. ಈ ಸಂದರ್ಭದಲ್ಲಿ ಕೆಳಗಿನ ಪರಿಕಲ್ಪನೆಗಳನ್ನು ಪರಿಗಣಿಸಿದೆ.

– ಎರಡು ಅಂಕೆಗಳ ಸಂಖ್ಯೆಗಳ ಸಂಕಲನ – ದಶಕ ತೆಗೆದುಕೊಳ್ಳದೆ.
– ಎರಡು ಅಂಕೆಗಳ ಸಂಖ್ಯೆಗಳ ಸಂಕಲನ – ದಶಕ ತೆಗೆದುಕೊಂಡು.
– ಎರಡು ಅಂಕೆಗಳ ಸಂಖೆಯಗಳ ಸಂಕಲನ – ಸಾಲಿನ ರೀತ್ಯಾ
– ಎರಡು ಅಂಕೆಯ ಸಂಖ್ಯೆಗಳ ಮೇಲಿನ, ಪದ ಸಮಸ್ಯೆಗಳು.

ಪರಿಕಲ್ಪನೆಗಳ ಬೋಧನೆಯ ನಂತರ ಸಂಕಲನ (ಕೊಡುವುದು)ದಲ್ಲಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಪಡೆದಿರುವ ಅನುಭವವನ್ನು ತಿಳಿಯಲು ನೀವು ಬಯಸುವಿರಿ ಎನ್ನೋಣ. ಆ ಸನ್ನಿವೇಶದಲ್ಲಿ, ವಿದ್ಯಾರ್ಥಿಗಳು, ಕಲಿಕಾ ಫಲ ಸಂಬಂಧದಲ್ಲಿ, ಜ್ಞಾನ, ಅರಿವು, ಅನ್ವಯ, ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಮೌಲ್ಯ ಮಾಪನ(ಕೌಶಲ್ಯ)ಗಳಲ್ಲಿ, ಎಷ್ಟರಮಟ್ಟಿಗೆ ಸಾಧಿಸಿದ್ದಾರೆ ಎಂಬುದನ್ನು ತಿಳಿಯಲು, ಸಾಧನಾ ಪರೀಕ್ಷೆಯನ್ನು ಕೈಗೊಳ್ಳಲಾಗುವುದು. ಈ ರೀತಿಯ ಪರೀಕ್ಷೆಗಳು, ಮಕ್ಕಳ ಸಾಧನೆಯನ್ನು ಒಬ್ಬರೊಂದಿಗೆ ಇನ್ನೊಬ್ಬರದನ್ನು, ಹೋಲಿಸಿ ನೋಡಲು ಶಿಕ್ಷಕರಿಗೆ ಸಹಾಯವಾಗುತ್ತವೆ.

---

ಇ1. ಪ್ರಾಥಮಿಕ ಹಂತದಲ್ಲಿ, ತರಗತಿಯ ಸನ್ನಿವೇಶದಲ್ಲಿ ಸಾಧನಾ ಪರೀಕ್ಷೆಗಳು ಯಾವುದಾದರೂ, ಮೂರು ಉಪಯೋಗ ತಿಳಿಸಿರಿ.

---

ನೀವು ನಿಮ್ಮ ಶಾಲೆಯ 5ನೇ ತರಗತಿಯ ಮಕ್ಕಳಿಗಾಗಿ ಗಣಿತ ವಿಷಯದಲ್ಲಿ ಒಂದು ಉತ್ತಮ ಪರೀಕ್ಷೆಯನ್ನು ರಚಿಸಿದ್ದೀರಿ ಎಂದುಕೊಳ್ಳೋಣ. ನೀವು ನಿಮ್ಮ ವಿದ್ಯಾರ್ಥಿಗಳನ್ನು ಚೆನ್ನಾಗಿ ಬಲ್ಲಿರಿ ಮತ್ತು ನೀವು ರಚಿಸಿರುವ ಪರೀಕ್ಷೆಯು, ನೀವು ಬಯಸಿದ ಮಾಹಿತಿಯನ್ನು, ಅಂದರೆ ಗಣಿತದಲ್ಲಿ ಸಾಧನೆಯ ಬಗ್ಗೆ, ನೀಡುತ್ತದೆ. ಪರೀಕ್ಷೆಯ ಬಗ್ಗೆ ನಿಮಗೆ ಬಹಳ ತೃಪ್ತಿಯಿದೆ. ಹಾಗಾದರೆ, ಈ ಪರೀಕ್ಷೆಯನ್ನು ದೂರದಲ್ಲಿರುವ ಜನಜಾತಿ ಪ್ರದೇಶದಲ್ಲಿರುವ, ನಿಮ್ಮ ರಾಜ್ಯದ ಒಂದು ಶಾಲೆಯಲ್ಲಿ ಅಥವಾ ನಗರ ಪ್ರದೇಶದಲ್ಲಿರುವ ಒಂದು ಸಾಲೆಯಲ್ಲಿ, ಉಪಯೋಗಿಸಬಹುದೇ ? ಖಚಿತವಾಗಿ ಹೇಳಲಾಗುವುದಿಲ್ಲ. ನಿಮ್ಮ ಶಾಲೆಯಲ್ಲಿನ ಸನ್ನವೇಶ, ಪರಿಸರದಂತೆಯೇ ಇದ್ದು, ಅಲ್ಲಿನ ವಿದ್ಯಾರ್ಥಿಗಳೂ, ನಿಮ್ಮ ಶಾಲೆಯ ವಿದ್ಯಾರ್ಥಿಗಳಂತೆಯೇ ಇದ್ದರೆ, ಉಪಯೋಗಿಸಬಹುದೆಂದು ಹೇಳಬಹುದು. ಆದರೆ, ಸಾಮಾನ್ಯ ಪರೀಕ್ಷೆ (ಕಾಮನ್ ಟೆಸ್ಟ್) ಯಲ್ಲಿ, ಒಂದೇ ಪ್ರಶ್ನೆ ಪತ್ರಿಕೆಯನ್ನು ರಚಿಸಿ, ಅದನ್ನು ರಾಜ್ಯಾದ್ಯಂತ ಉಪಯೋಗಿಸಲಾಗುವುದು. ಈ ರೀತಿಯ ಪರೀಕ್ಷೆಗಳನ್ನು, ಬಹು ಎಚ್ಚರಿಕೆಯಿಂದ ಕಟ್ಟುನಿಟ್ಟಾದ ಪ್ರಕ್ರಿಯೆ, ಅಂದರೆ, ಮಾನವರೀತ್ಯಾ ರಚಿಸಲಾಗಿದ್ದು, ರಾಜ್ಯಾದ್ಯಂತ ಇರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳೆಲ್ಲರಿಗೂ, ನ್ಯಾಯ ಒದಗಿಸುವವಂತೆ ರಚಿಸಲಾಗಿರುತ್ತದೆ. ಈ ರೀತಿ, ಪರೀಕ್ಷೆಗಳಲ್ಲಿ 2 ಪ್ರಭೇದಗಳು: ಶಿಕ್ಷಕ ನಿರ್ಮಿತ ಪರೀಕ್ಷೆಗಳು ಮತ್ತು ಮಾನಕರೀತ್ಯಾ ತಯಾರಾದ ಪರೀಕ್ಷೆಗಳು. "ಮಾಧ್ಯಮಿಕ ಶಾಲಾ ಪ್ರಮಾಣ ಪತ್ರದ ವ ಾರ್ಷಿಕ ಪರೀಕ್ಷೆಗಳಲ್ಲಿ, ಮಾರ್ಗ ರೀತ್ಯ ತಯಾರಾದ ಸಾಧನಾ ಪರೀಕ್ಷೆಯನ್ನು ಬಳಸಲಾಗುವುದು. ಮಾನಕ ಪ್ರಕ್ರಿಯೆಯ ಮೂಲಕ, ಪರೀಕ್ಷೆಯಲ್ಲಿನ, ಈ ಕೆಳಕಂಡ ಗುಣಗಳನ್ನು ಖಚಿತಪಡಿಸಲಾಗುವುದು.

## ಗುಣ ಮಾಪನದ ಸಾಧನೋಪಕರಣಗಳು ಮತ್ತು ಕಾರ್ಯತಂತ್ರಗಳು

Notes

- ಪರೀಕ್ಷೆಯ ಪರೀಕ್ಷಾಂಶಗಳು ಉದ್ದೇಶಪೂರಿತವಾಗಿ ವಿನ್ಯಾಸಗೊಂಡಿದ್ದು, ಅಳೆಯುವುದು.
- ಪರೀಕ್ಷಾಂಶಗಳು, ಮಾನಕರೀತ್ಯಾ, ವಿಷಯವಸ್ತು ಆಧಾರಿತವಾಗಿದ್ದು, ತದ್ರೂಪದ ಪರೀಕ್ಷೆಯನ್ನು, ಬೇರೆ ಬೇರೆ ವ್ಯಕ್ತಿಗಳಿಗೆ, ಬೇರೆ ಬೇರೆ ಸ್ಥಳಗಳಲ್ಲಿ ಮತ್ತು ಬೇರೆ ಕಾಲದಲ್ಲಿ ಉಪಯೋಗಿಸಬಹುದಾದ, ಪ್ರಾವಧಾನವನ್ನು ಹೊಂದಿರುತ್ತವೆ.
- ಪರೀಕ್ಷೆಯನ್ನು ಖಚಿತವಾದ, ಸಮಾನವಾದ ಪರಿಸರ, ಸನ್ನಿವೇಶದಲ್ಲಿ ನಡೆಸಬಹುದು.
- ಮಾನಕರೀತ್ಯಾ, ಪ್ರಕ್ರಿಯೆಗಳನ್ನು ಸರಿಸಿ ಪರೀಕ್ಷಾ ನಿರ್ವಹಣೆ, ಅಂಕಣಿಕೆ ಮತ್ತು ಫಲಿತಾಂಶದ ವ್ಯಾಖ್ಯಾನ ಮಾಡಲಾಗುತ್ತದೆ.

ಒಂದು ಮಾನಕ ಸಾಧನಾ ಪರೀಕ್ಷೆಯು, ಉಚ್ಛ ಗುಣಮಟ್ಟದ ಪರೀಕ್ಷಾಂಶ ಪ್ರಶ್ನೆಗಳನ್ನು ಅಂದರೆ ತಜ್ಞರಿಂದ ತಯಾರಾಗಿ, ಪ್ರಯೋಗಿಸಲ್ಪಟ್ಟು, ಕಠಿಣತೆ ಆಧಾರದ ಮೇಲೆ ಆಯ್ಕೆಯಾದ ಪರೀಕ್ಷಾಂಶಗಳನ್ನು ಒಳಗೊಂಡಿರುತ್ತವೆ. ಈ ಮಾನಕ ಸಾಧನಾ ಪರೀಕ್ಷೆಗಳು, ವಿದ್ಯಾರ್ತಿಗಳ ಕಲಿಕೆಯ ಪ್ರಕ್ರಿಯೆ, ವೀಕ್ಷಿಸಿ ನಿಗಾವಹಿಸುವ ಮತ್ತು ಮಕ್ಕಳ ಕಲಿಕೆಯನ್ನು ಹೆಚ್ಚಿಸುವುದಕ್ಕಾಗಿ, ಉಪಯೋಗಿಸುವ, ಸೀಮಿತ ಉದ್ದೇಶ ಹೊಂದಿರುತ್ತವೆ. ಶಿಕ್ಷಕ ನಿರ್ಮಿತ ಸಾಧನಾ ಪರೀಕ್ಷೆಗಳು ಹೆಚ್ಚಿನ ಉಪಯುಕ್ತತೆಗಳನ್ನು ಹೊಂದಿದ್ದು, ರೂಪತ್ವ ಗುಣಮಾಪನದಲ್ಲಿ (ಫಾರ್‌ಮೆಟಿವ್ ಅಸೆಸ್‌ಮೆಂಟ್), ಹೆಚ್ಚು ಉಪಯುಕ್ತವಾಗುತ್ತವೆ. ಈಗ, ಶಿಕ್ಷಕ ನಿರ್ಮಿತ ಪರೀಕ್ಷೆಗಳ ವಿವಿಧ ಅಂಶಗಳನ್ನು ಕುರಿತು ಅರಿಯೋಣ.

### 15.2.1 ಶಿಕ್ಷಕ ನಿರ್ಮಿತ ಪರೀಕ್ಷೆ

ಬೋಧನೆಯ ಸಮಯದಲ್ಲಿ ಹಲವುಬಾರಿ, ಪರೀಕ್ಷೆಗಳನ್ನು ಮಾಡುತ್ತಾ, ಪ್ರತಿ ವಿದ್ಯಾರ್ಥಿಯ, ಕಲಿಕೆಯ ಸಾಧನಾ ಮಟ್ಟವನ್ನು ಗುಣ ಮಾಪನ ಮಾಡುತ್ತಿರಬೇಕಾಗುವುದು. ಈ ರೀತಿಯ ಪರೀಕ್ಷೆಗಳು, ಗುಣ ಮಾಪನವನ್ನು, ಹೆಚ್ಚು ನಿರಂತರವೂ ವ್ಯಾಪಕವಾದದ್ದನ್ನಾಗಿಸಲು, ಅತಿ ಅವಶ್ಯಕವಾಗಿವೆ. ನೀವೂ ಸಹ ತರಗತಿಯಲ್ಲಿ ಮಕ್ಕಳ ಪ್ರಗತಿ ಪರೀಕ್ಷಿಸಲು, ಅನೇಕ ಸಂದರ್ಭಗಳಲ್ಲಿ, ಅನೇಕ ಪರೀಕ್ಷೆಗಳನ್ನು ರೂಪಿಸಿರಬಹುದು. ಶಿಕ್ಷಕ ನಿರ್ಮಿತ ಪರೀಕ್ಷೆಗಳ ಕೆಲವು ಮುಖ್ಯ ಕಾರ್ಯಗಳೆಂದರೆ :

- ದಿನ ದಿನದ ಕಲಿಕಾ ಬೋಧನಾ ಚಟುವಟಿಕೆಗಳ ಕುರಿತು ಪ್ರತಿಬಿಂಬಿಸುವುದು.
- ಹೆಚ್ಚು ಫಲಕಾರಿ ಕಲಿಕಾ – ಬೋಧನ ತಂತ್ರಗಳನ್ನು ರೂಪಿಸುವುದು.
- ಪ್ರತಿಯೊಬ್ಬ ವಿದ್ಯಾರ್ಥಿಯ ಸಮರ್ಥತೆಯನ್ನು ತಿಳಿಯುವುದು. ವಿದ್ಯಾರ್ಥಿಯ ಸಮರ್ಥತೆಯನ್ನು ಕಂಡುಕೊಳ್ಳುವುದರಿಂದ, ವಿವಿಧ ಸಾಮರ್ಥ್ಯಗುಂಪುಗಳನ್ನು, ರೂಪಿಸುವುದರಲ್ಲಿ, ಶಿಕ್ಷಕರಿಗೆ ನೆರವು ಸಿಗುತ್ತದೆ. (ಈ ಪಠ್ಯ ವಿಷಯದ 2ನೇ ವಿಭಾಗದ 5ನೇ ಪಠ್ಯ ಭಾಗವನ್ನು ನೀವು ನೋಡಬಹುದು)
- ವಿದ್ಯಾರ್ಥಿಗಳ ಬಲ ಮತ್ತು ಅಬಲತೆಯನ್ನು ಅರಿತು ಪರಿಹಾರ ಕಾರ್ಯ ಮತ್ತು ಬಲವರ್ಧನೆ ಕಾರ್ಯಕ್ರಮಗಳನ್ನು ರೂಪಿಸುವುದಲ್ಲಿ ಶಿಕ್ಷಕರಿಗೆ ನೆರವುಸಿಗುತ್ತದೆ.

---

ಇ2. ಕೆಳಗೆ ಕೊಟ್ಟಿರುವ ಉದಾಹರಣೆಯನ್ನು ವಿಶ್ಲೇಷಿಸಿ ಶ್ರೀಮತಿ ಪಾಂಡೆ ತನ್ನ ತರಗತಿಯಲ್ಲಿ ಕಲಿಕಾ ಬೋಧನ ಪ್ರಕ್ರಿಯೆಯ ಯೋಜನೆಯನ್ನು ಬಹಳ ಎಚ್ಚರಿಕೆಯಿಂದ ತಯಾರಿಸುತ್ತಾರೆ. ಒಂದು ದಿನ, ಅವರು ತರಗತಿಯಲ್ಲಿ ಮಹತ್ತಮ ಸಾಮಾನ್ಯ ಅಪವರ್ತ್ಯ (ಹೆಚ್.ಸಿ.ಎಫ್) ಪರಿಕಲ್ಪನೆಯನ್ನು ಬೋಧಿಸಲು ಯೋಚಿಸಿದರು. ಮ.ಸಾ.ಅ. ದ ಪರಿಕಲ್ಪನೆಯನ್ನು ಬೋಧಿಸುವ ಮೊದಲು, ಮಕ್ಕಳು ಅಪವರ್ತನ ಮತ್ತು ಅಪವರ್ತ್ಯಗಳ ಬಗ್ಗೆ ಎಷ್ಟರಮಟ್ಟಿಗೆ ತಿಳಿದಿದ್ದಾರೆ. ಎಂಬುದನ್ನು ತಿಳಿಯುವುದು ಅಗತ್ಯ ಎಂದುಕೊಂಡರು. ಇದಕ್ಕಾಗಿ ಅವರು ಒಂದು ಪರೀಕ್ಷೆಯನ್ನು ರೂಪಿಸಿ ಮಕ್ಕಳಿಗೆ ಕೊಟ್ಟರು. ಅದರ ಫಲಿತಾಂಶ ಆಧಾರಿತವಾಗಿ ತಮ್ಮ ಬೋಧನಾ ಕಾರ್ಯದಲ್ಲಿ ಮುಂದುವರೆದರು.

1) ಶ್ರೀಮತಿ ಪಾಂಡೆಯವರು ರೂಪಿಸಿದ ಪರೀಕ್ಷೆಯು ಅವರು ಅಂದುಕೊಂಡಿದ್ದ ಉದ್ದೇಶದ ಪೂರೈಕೆಗೆ ಸಹಾಯಕ ಎಂದು ನೀವು ತಿಳಿಯುವಿರಾ ?
2) ಈ ಪರೀಕ್ಷೆಯು, ಶ್ರೀಮತಿ ಪಾಂಡೆಯವರಿಗೆ ಹೇಗೆ ಉಪಯುಕ್ತವಾಯ್ತು.
3) ನೀವು ಪ್ರಸ್ತುತ ಬೋಧಿಸುತ್ತಿರುವ ತರಗತಿಯ ಬಗ್ಗೆ ಚಿಂತನೆಮಾಡಿ, ಒಂದು ಉದಾಹರಣೆ ಬರೆಯಿರಿ.

ಶಿಕ್ಷಕ ನಿಮಿತ ಪರೀಕ್ಷೆಯ ಗುಣಲಕ್ಷಣಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

---

Notes

ಕೋಷ್ಟಕ 15.1 ಶಿಕ್ಷಕ ರೂಪಿತ ಪರೀಕ್ಷೆಗಳ ಗುಣಲಕ್ಷಣಗಳು

| ಗುಣಲಕ್ಷಣಗಳು | ಶಿಕ್ಷಕ ರೂಪಿತ ಸಾಧನಾ ಪರೀಕ್ಷೆಗಳು |
|---|---|
| ನಿರ್ವಹಣೆಯ ದಿಕ್ಸೂಚಿಗಳು | ಯಾವುದೇ ನಿರ್ದಿಷ್ಟ ಸೂಚಿ ಇಲ್ಲ. ಉಪಯೋಗಿಸುವ ಶಿಕ್ಷಕರನ್ನು ಅವಲಂಬಿಸಿದೆ |
| ಕಲಿತಾ ಫಲಗಳು ಮತ್ತು ವಿಷಯಗಳ ಆಯ್ಕೆ | ಸ್ಥಳೀಯ ಪಠ್ಯಕ್ರಮಕ್ಕೆಕ್ಕಾಗಿ ಕಲಿಕಾ ಫಲ/ ವಿಷಯವಸ್ತು ಹೊಂದಿಕೊಂಡಿರುವುದು. ನಿರ್ದಿಷ್ಠ ಪರೀಕ್ಷೆಯಲ್ಲಿ ತೆಗೆದುಕೊಳ್ಳಬೇಕಾದ ವಿಷಯ ವಸ್ತುವಿನ ಪ್ರಮಾಣವನ್ನು ತರಗತಿಯ ಶಿಕ್ಷಕರು ನಿರ್ಧರಿಸುತ್ತಾರೆ. |
| ರಚನೆ | ತರಗತಿಯ ಶಿಕ್ಷಕರ ದಕ್ಷತೆ/ ಸಾಮರ್ಥ್ಯದ ಮೇಲೆ ನಿರ್ಧಾರವಾಗಿದ್ದು, ಸಾಮಾನ್ಯವಾಗಿ, ಒಂದು ನೀಲಿನಕ್ಷೆ ತಯಾರಿಸಿ, ಅದರ ರೀತಿ ರೂಪಗೊಳ್ಳುತ್ತದೆ. ಪ್ರತಿಯೊಂದು ಪರೀಕ್ಷಾಂಶದ ವಿಶ್ಲೇಷಣೆ ಮತ್ತು ಪ್ರಯೋಗಕ್ಕೆ ಕಡಿಮೆ ಅವಕಾಶವಿರುತ್ತದೆ. |
| ಉಪಯೋಗಿಸುವ ಆವರ್ತ | ಪರೀಕ್ಷೆಯು ಯಾವ ಉದ್ದೇಶಕ್ಕೆ ಉಪಯೋಗಿಸಲ್ಪಡುವುದೊ ಅದರ ಮೇಲೆ ಆಧಾರಿತ |
| ಉದ್ದೇಶ | ಮಾಹಿತಿಯನ್ನು ಮರು ನೀಡುತ್ತದೆ. ಕಲಿಕಾ ಅಭ್ಯಾಸದಂತೆ ಕಾರ್ಯನಿರ್ವಹಣೆ, ಮಕ್ಕಳಲ್ಲಿ ಉತ್ತಮ ಅಧ್ಯಯನದ ಅಭ್ಯಾಸಕ್ಕೆ ಉತ್ತೇಜನ ನೀಡುತ್ತದೆ. |
| ಉಪಯೋಗ | ಪಡೆದ (ಅಂಕಗಳು) ಫಲಿತಾಂಶದ ಹೋಲಿಕೆ ಮತ್ತು ವ್ಯಾಖ್ಯಾನ, ಆ ಶಾಲೆಗೆ (ತರಗತಿಗೆ) ಸೀಮಿತ, ಇತರ ಶಾಲೆಗಳಿಗೆ ಹೋಲಿಸಲಾಗದು. ನಿರ್ದಿಷ್ಠ ಉದ್ದೇಶಗಳನ್ನು ಮಾಪನ ಮಾಡಲು, ಅತಿಸೂಕ್ತವಾದದ್ದು |

ಶಿಕ್ಷಕರು, ತಮ್ಮ ತರಗತಿಯ ವಿದ್ಯಾರ್ಥಿಗಳ, ನಿಜವಾದ ಕಲಿಕಾ ಫಲಿತಗಳ, ನಿಖರವಾಗಿ ಮಾಹಿತಿ ಪಡೆಯುವಂತೆ ಆಗಲು, ಸಾಧನಾ ಪರೀಕ್ಷೆಗಳನ್ನು , ರಚಿಸುವ, ಉಪಯೋಗಿಸುವ ಮತ್ತು ಯೋಜಿಸುವ ವಿಧಾನವನ್ನು ಚೆನ್ನಾಗಿ ಅರಿತಿರಬೇಕು. ಇಲ್ಲವಾದರೆ, ಅಸಡ್ಡೆಯಿಂದ, ರಚಿತವಾದ ಪರೀಕ್ಷೆಯ ಫಲಿತಾಂಶವು ಅನುಪಯುಕ್ತವೂ ಕೆಲವೊಮ್ಮೆ ಮಕ್ಕಳ ಕಲಿಕೆಗೆ ಹಾನಿಕಾರಕವಾಗಬಹುದು.

ಪರೀಕ್ಷೆಯಲ್ಲಿನ ವಿಷಯ ವಸ್ತುವೇನು ? ಒಂದು ಪರೀಕ್ಷೆಯು ಯಾವ ಮಾಹಿತಿಗಳನ್ನು ಒಳಗೊಂಡಿರುತ್ತದೆ ಎಂದರೆ.

- ಪರೀಕ್ಷೆಯ ಕಾಲ ಘಟನೆ. (ವಾರ್ಷಿಕ, ಅರ್ಧವಾರ್ಷಿಕ, ಸತ್ರಾಂಶ, ಮಾಸಿಕ, ಶಿರ್ಷಿಕೆ ಇಲ್ಲದ).
- ಯಾವ ತರಗತಿಗಾಗಿ
- ಪರೀಕ್ಷೆಯನ್ನು ಪೂರ್ಣಗೊಳಿಸಲು, ಇರುವ ಸಂಪೂರ್ಣ ಕಾಲಾವಕಾಶ (ಗಂಟೆಗಳಲ್ಲಿ – ಸಾಮಾನ್ಯವಾಗಿ)
- ಪರೀಕ್ಷೆಯಲ್ಲಿನ ಗರಿಷ್ಠ / ಪೂರ್ಣ ಅಂಗಳು.
- ಪರೀಕ್ಷಾಂಶಗಳು (ಪ್ರಶ್ನೆಗಳು), ಪರೀಕ್ಷೆಯ ಮುಖ್ಯಭಾಗ.

Notes

ಪ್ರಶ್ನೆಗಳನ್ನು, ಪರೀಕ್ಷಾಂಶಗಳೆಂದು ಹೇಳುವುದು. ಏಕೆ ಎಂದು ತಿಳಿದಿದೆಯೆ ?

ಕೆಲವು ಪರೀಕ್ಷಾಂಶಗಳನ್ನು ಪರಿಶೀಲಿಸೋಣ.

1. ಬಾಂಗ್ಲಾದೇಶದ ರಾಜಧಾನಿಯ ಹೆಸರೇನು ?
2. ಕಾಲರಾ ಖಾಯಿಲೆಯು ಉಂಟಾಗಲು ಮೂರು ಕಾರಣಗಳನ್ನು ತಿಳಿಸಿರಿ.
3. ಹೆಚ್ಚಿದ ಅನಕ್ಷರಸ್ಥೆಯ ದರಕ್ಕೆ, ಬಡತನ ಒಂದೇ ಕಾರಣವಲ್ಲ – ಸಮರ್ಥಿಸಿರಿ.
4. ಭಾರತದಲ್ಲಿ ಹರಿಯುವ ಅತ್ಯಂತ ಉದ್ದದ ನದಿ ____________ಯಾಗಿದೆ.

ನೀವು ಗಮನಿಸಿದಂತೆ, ಮೊದಲನೆ ಹೇಳಿಕೆ (1) ಪ್ರಶ್ನೆ ರೂಪದಲ್ಲಿದೆ, ಎರಡನೆಯದು (2) ನಿರ್ದಿಷ್ಟ ವಾಕ್ಯ ರೂಪದಲ್ಲಿದೆ. ಮೂರನೆಯದು (3) ನಕಾರಾತ್ಮಕ ಹೇಳಿಕೆ ಮತ್ತು ನಾಲ್ಕನೆಯದು (4) ಅಪೂರ್ಣ ವಾಕ್ಯವಾಗಿದೆ. ಆದ್ದರಿಂದ ಪ್ರತಿಯೊಂದು ಪರೀಕ್ಷಾಂಶವಾಗಿದೆ

ಪರೀಕ್ಷಾಂಶ ರೀತಿಯನ್ನು ಆಧರಿಸಿ, ಬೇರೆ ಬೇರೆ ವರ್ಗದ ಪರೀಕ್ಷೆಗಳು, ಈ ಕೆಳಕಂಡತೆ ಇದೆ.

- ಉದ್ದೇಶಿತ ಪೂರ್ವ ಪರೀಕ್ಷೆ – ಇಲ್ಲಿನ ಪ್ರತಿ ಪರೀಕ್ಷಾಂಶವೂ, ನಿರ್ದಿಷ್ಟ ಉದ್ದೇಶಿತ (ಈ ಪಠ್ಯ ಭಾಗದ 15.3 ಯಲ್ಲಿ ವಿವರಿಸಲಾಗಿದೆ).

- ಪ್ರಬಂಧ ರೀತಿ ಪರೀಕ್ಷೆ – ಇಲ್ಲಿನ ಪ್ರತಿ ಪರೀಕ್ಷಾಂಶವು, ವಿಸ್ತರಿತ ಉತ್ತರ ರೀತಿ ಅಥವಾ ನಿರ್ಬಂಧಿತ ಉತ್ತರ ರೀತಿ (ವಿಭಾಗ 15.3 ರಲ್ಲಿ ವಿವರಿಸಲಾಗಿದೆ).

- ಉತ್ತರಿಸುವ ಮಾಧ್ಯಮವನ್ನಾಧರಿಸಿ, ಪರೀಕ್ಷೆಗಳು ಮೂರು ವಿಧ.
- ಮೌಖಿಕ ಪರೀಕ್ಷೆ: ಇಲ್ಲಿ ಪ್ರತಿ ಪರೀಕ್ಷಾಂಶವನು ಹೇಳುವುದರ ಮೂಲಕ, (ಮೌಖಿಕವಾಗಿ) ಉತ್ತರಿಸಲಾಗುವುದು. ಬಹುತೇಕ ಈ ವಿಧವನ್ನು ಪ್ರಾಥಮಿಕ (ಪ್ರಾರಂಭಿಕ) ಹಂತಗಳಲ್ಲಿ ಮತ್ತು ಮಕ್ಕಳ ಅರಿವನ್ನು ತಿಳಿದುಕೊಳ್ಳುವ ಶೀಘ್ರ ವಿಧಾನ.

- ಲಿಖಿತ ಪರೀಕ್ಷೆ : ಇಲ್ಲಿನ ಪ್ರತಿ ಪರೀಕ್ಷಾಂಶವೂ, ಲಿಖಿತ ಮೂಲಕ ಉತ್ತರಿಸಲ್ಪಡುತ್ತದೆ. ಇದನ್ನು ಕಾಗದ ಲೇಖನಿ ಪರೀಕ್ಷೆ ಎಂದೂ ಕರೆಯುವರು. ಈ ರೀತಿಯ ಪರೀಕ್ಷೆಯು ಎಲ್ಲರಿಗೂ ಪರಿಚಿತವಿದ್ದು, ಯಾವ ಸಂದರ್ಭದಲ್ಲಾದರೂ ಬಳಸಬಹುದಾಗಿದೆ.

- ಪ್ರದರ್ಶನ ಪರೀಕ್ಷೆ : ಇಲ್ಲಿ ಪ್ರತಿ ಪರೀಕ್ಷಾಂಶದ ಉತ್ತರವು ವಿದ್ಯಾರ್ಥಿಯ ಚಟುವಟಿಕೆ (ಮಾಡಿ ಪ್ರದರ್ಶಿಸುವುದು) ಮೂಲಕವಾಗಿರುತ್ತದೆ. ಉದ್ದ ಅಳೆಯುವುದು, ತೂಕ, ಗಾತ್ರ ಅಳೆಯುವುದು, ಚಿತ್ರ ಬಿಡಿಸುವುದು, ಬಣ್ಣ ಹಚ್ಚುವುದು. ಜೋಡಿಸುವುದು. ಮಾದರಿ ತಯಾರಿಸುವುದು ಇತ್ಯಾದಿ, ಈ ಪರೀಕ್ಷೆಗಳಿಂದ ಅರಿವು, ಕೌಶಲ್ಯ ಮತ್ತು ಸೃಜನಶೀಲತೆಗಳನ್ನು ಗುಣ ಮಾಪನ ಮಾಡಬಹುದು.

ಕೆಲವುವೇಳೆ ಒಂದೇ ಸಾಧನಾ ಪರೀಕ್ಷೆಯಲ್ಲಿ ಬೇರೆ ಬೇರೆ ರೀತಿಯ ಪರೀಕ್ಷಾಂಶಗಳನ್ನು ಉಪಯೋಗಿಸಲಾಗುವುದು. ಆ ರೀತಿಯ ಪರೀಕ್ಷೆಯಲ್ಲಿ ಒಂದೇ ರೀತಿಯ ಪರೀಕ್ಷಾಂಶಗಳನ್ನು ಒಂದೆಡೆ ಸೇರಿ, ಒಂದು ವಿಭಾಗ ಮಾಡಲಾಗುವುದು. ಪರೀಕ್ಷೆಯನ್ನು ರಚಿಸುವಾಗ, ಬೇರೆ ಬೇರೆ ಪರೀಕ್ಷಾಂಶಗಳನ್ನು, ಸೇರಿಸುವುದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು. ಒಂದು ಉತ್ತಮ ಪರೀಕ್ಷೆಯನ್ನು ರಚಿಸುವ ಮಾರ್ಗಗಳ ಬಗ್ಗೆ ಚಿಂತನೆ ಮಾಡೋಣ.

Notes

ಇ3. ಶ್ರೀಮತಿ ಅದಿತಿ ಯವರು, ತಮ್ಮ ತರಗತಿಯಲ್ಲಿ "ಶಕ್ತಿಯ ಸಂರಕ್ಷಣೆ"ಯ ಪರಿಕಲ್ಪನೆಯನ್ನು ಬೋಧಿಸುತ್ತಿದ್ದರು. ಬೋಧನೆಯ ಸಮಯದಲ್ಲಿ ಕೆಲವು ಮಕ್ಕಳು ಸಂಶಯಗ್ರಸ್ತರಾಗಿರುವಂತೆ ತೋರಿತು. ತಕ್ಷಣವೇ ಅವರು ಮಕ್ಕಳ ಅರಿವನ್ನು ಕೂಡಲೇ ಪರೀಕ್ಷಿಸಲು ಬಯಸಿದರು. ಅವರು ಯಾವ ರೀತಿಯ ಪರೀಕ್ಷೆ ಈ ಸಲುವಾಗಿ ಉಪಯೋಗಿಸಬೇಕು ?

ಒಂದು ಉತ್ತಮ ಪರೀಕ್ಷೆಯನ್ನು ರಚಿಸುವುದು : ನೀವು ಒಂದು ಉತ್ತಮ ಪರೀಕ್ಷೆಯನ್ನು ಉಪಯೋಗಿಸುತ್ತಿದ್ದೀರೆಂದು ಪರಿಗಣಿಸುತ್ತೀರಿ? ಶ್ರೀಮತಿ ನಂದಿತಾ ರವರು ಉಚ್ಚ ಪ್ರಾಥಮಿಕ ತರಗತಿಗಳಲ್ಲಿ ಬೋಧಿಸುತ್ತಾರೆ. ಅವರ ಚಿಂತನೆ ಎಂದರೆ, ಒಂದು ಉತ್ತಮ ಪರೀಕ್ಷೆ ಎಂದರೆ, ವಿಷಯಗಳನ್ನು ಕಲಿಯುವ ಉದ್ದೇಶಗಳನ್ನು ತಿಳಿಯುವ ಉದ್ದೇಶಗಳನ್ನು ಪೂರೈಸುವಂತಿರಬೇಕು. ಅವರ ಸಹೊದ್ಯೋಗಿ, ಶ್ರೀ ಪ್ರಕಾಶ್ ರವರ ಪ್ರಕಾರ ಉತ್ತಮ ಪರೀಕ್ಷೆ ಎಂದರೆ, ಅದರಲ್ಲಿನ ಪರೀಕ್ಷಾಂಶಗಳು ಬಹು ಅರ್ಥವಿಲ್ಲದ, ಮಕ್ಕಳಿಗೆ ವಿಶದವಾಗಿರುವಂತೆ ಇರಬೇಕು. ಮೊತ್ತಬ್ಬ ಶಿಕ್ಷಕ ಅಮೀಸ್ ರವರ ಪ್ರಕಾರ, ಉತ್ತಮ ಪರೀಕ್ಷೆಯು, ಯಾವುದೇ ರೀತಿಯ ಪಕ್ಷಪಾತವಿಲ್ಲದೆ, ಅಂಕಿಕರಿಸುವ ರೀತಿಯಿದ್ದು, ಫಲಿತಾಂಶವನ್ನು ಸುಲಭವಾಗಿ, ಅರ್ಥವತ್ತಾಗಿ, ಮಕ್ಕಳಿಗೆ ಹಾಗೂ ಪೋಷಕರಿಗೆ ವಿವರಿಸುವಂತಿರಬೇಕು. ಈ ಎಲ್ಲಾ ಶಿಕ್ಷಕರ ಅಭಿಪ್ರಾಯಗಳು, ಉತ್ತಮ ಪರೀಕ್ಷೆಯ ಗುಣಲಕ್ಷಣಗಳು, ಹೀಗಾಗಿ ಪರೀಕ್ಷೆಯನ್ನು ರಚಿಸುವಾಗ ಬಹಳ ಎಚ್ಚರಿಕೆವಹಿಸಿದಾಗ, ಎಲ್ಲಾ ಗುಣಲಕ್ಷಣಗಳುಳ್ಳ ಉತ್ತಮ ಪರೀಕ್ಷೆ ತಯಾರಾಗುವುದು.

ಇ4. ಉತ್ತಮವಾದ ಶಿಕ್ಷಕ ರೂಪಿತ ಪರೀಕ್ಷೆಯ ನಾಲ್ಕು ಗುಣಲಕ್ಷಣಗಳನ್ನು ಬರೆಯಿರಿ.

ಉತ್ತಮ ಸಾಧನಾ ಪರೀಕ್ಷೆಯನ್ನು ರಚಿಸುವಲ್ಲಿ ಈ ಕೆಳಗಿನ ಹಂತಗಳು ಬೇಕಾಗುತ್ತವೆ.

ಯೋಜನೆ, ಪರೀಕ್ಷಾಂಶಗಳನ್ನು ಬರೆಯುವುದು, ಪರೀಕ್ಷಾಂಶಗಳ ಸಂಗ್ರಹ ಮತ್ತು ಪರಿಶೋಧನೆ, ಅಂಕೀಕರಣದ ಪ್ರಕ್ರಿಯೆ ಕಾರ್ಯ.
ಒಂದು ಉತ್ತಮ ಪರೀಕ್ಷೆ ರಚನೆಗೆ, ವಿಸ್ತೃತ ಮತ್ತು ಪರ್ಯಾಪ್ತ ಯೋಜನೆ ಅವಸ್ಯಕವಾಗಿ ಬೇಕಾಗುವುದು. ಯೋಜನಾ ಪ್ರಕ್ರಿಯೆಯು, ಈ ಕೆಳಗಿನ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರಗಳನ್ನು ನೀಡುವುದು.

- ಶಿಕ್ಷಕರು ಏನನ್ನು ಮಾಡಲು ಬಯಸುವರು ? (ಅಂದರೆ ಶಿಕ್ಷಕರು ಈ ಪರೀಕ್ಷೆಯನ್ನು ಏಕೆ ಉಪಯೋಗಿಸಲು ಬಯಸುತ್ತಾರೆ?)

- ಈ ಪರೀಕ್ಷೆಯನ್ನು ಏಕೆ ನಿರ್ವಹಿಸಲು ಬಯಸುತ್ತಾರೆ (ಅಂದರೆ, ಪರೀಕ್ಷೆಯ ಉದ್ದೇಶವನ್ನು – ಮಕ್ಕಳಲ್ಲಿನ ಕೆಲವು ಕೌಶಲ್ಯಗಳ ಮೇಲಿನ, ಪೂರ್ಣ ಪ್ರಭುತ್ವವನ್ನು ಮತ್ತು ಜ್ಞಾನದ ಮಟ್ಟವನ್ನು ತೀರ್ಮಾನಿಸಲು, ಮಕ್ಕಳನ್ನು ಅವರ ಸಾಧನೆಗೆ ಅನುಗುಣವಾಗಿ ಪಟ್ಟಿ ಮಾಡಲು, ಮಕ್ಕಳ ಕಠಿಣತೆಯನ್ನು ತಪಾಸಿಸಲು)

- ಏನನ್ನು ಪರೀಕ್ಷಿಸಬೇಕು (ಅಂದರೆ, ವಿಷಯವಸ್ತು, ಪಠ್ಯಭಾಗದ ಉದ್ದೇಶ, ಉದ್ದೇಶ ನಿರ್ವಚನೆ)?

  ಪರೀಕ್ಷಾಂಶಗಳನ್ನು ಬರೆಯಲು ಶಿಕ್ಷಕರು ವಿವರಗಳನ್ನೊಳಗೊಂಡಂತೆ, ಕೋಷ್ಟಕ (ನೀಲನಕ್ಷೆ) ತಯಾರಿಸಬೇಕು. ಉದಾಹರಣೆಗಾಗಿ, "ಆಮ್ಲಜನಕ" ಪಠ್ಯಭಾಗ (ಘಟಕ) 7ನೇ ತರಗತಿ ವಿಜ್ಞಾನ, ಪಾಠದ, ಒಂದು ನೀಲನಕ್ಷೆಯನ್ನು ಕೊಟ್ಟಿದೆ.

*7ನೇ ತರಗತಿ, ವಿಜ್ಞಾನ ವಿಷಯದಲ್ಲಿ ಆಮ್ಲಜನಕ ಪಠ್ಯಭಾಗದಲ್ಲಿನ ಖಚಿತ ಮಾಹಿತಿಯನ್ನೊಳ ಗೊಂಡ ಕೋಷ್ಟಕ.*

ಉದ್ದೇಶಗಳು

| ವಿಷಯ ವಸ್ತು | ಜ್ಞಾನ | ಅರಿವು | ಅನ್ವಯ | ಕೌಶಲ್ಯ | ಮೊತ್ತ |
|---|---|---|---|---|---|
| ಭೌತಿಕ ಗುಣಗಳು | 8 | 6 | 6 | 0 | 20 |
| ರಾಸಾಯನಿಕ ಗುಣಗಳು | 12 | 9 | 9 | 0 | 30 |
| ತಯಾರಿಕೆ | 0 | 4 | 0 | 6 | 10 |
| ಉಪಯೋಗ | 16 | 11 | 9 | 4 | 40 |
| ಮೊತ್ತ | 36 | 30 | 24 | 10 | 100 |

ಉತ್ತಮ ಪರೀಕ್ಷಾಂಶಗಳನ್ನು ತಯಾರಿಸಲು, ಶಿಕ್ಷಕರು ತಮ್ಮ ವಿಷಯದಲ್ಲಿ ಪ್ರವೀಣರಾಗಿರಬೇಕು ಮತ್ತು ತಾವು ಪರೀಕ್ಷಿಸಬೇಕಾದ ಮಕ್ಕಳನ್ನು ಚೆನ್ನಾಗಿ ಅರಿತಿರಬೇಕು. ವಿವಿಧ ರೀತಿಯ ಪರೀಕ್ಷಾಂಶಗಳ ಪರಿಚಯ ಹೊಂದಿದ್ದು, ಖಚಿತ ಮಾಹಿತಿಯ ಕೋಷ್ಟಕವನ್ನು ಅನುಸರಿಸಬೇಕು.

ಪರೀಕ್ಷಾಂಶಗಳನ್ನು ತಯಾರಿಸಿದ ಮೇಲೆ ಪ್ರತಿ ಪರೀಕ್ಷಾಂಶವನ್ನೂ ಪರಿಶೀಲಿಸಿ, ಪರಿಷ್ಕರಿಸಬೇಕು. ಪರಿಷ್ಕಾರಕ್ಕೆ, ಸೂಕ್ತತೆ ಉಪಯೋಗತ್ವ ಕಾರ್ಯದ ವಿಶದೀಕರಣ, ಭಾಷೆ ಮುಂತಾದವುಗಳನ್ನು, ಆಧಾರವಾಗಿಸಿಕೊಳ್ಳಬೇಕು.

ಅಂಕೀಕರಣ (ಸ್ಕೋರಿಂಗ್) ಪ್ರಕ್ರಿಯೆಯ ತಯಾರಿಕೆಯನ್ನು ಪರೀಕ್ಷಾಂಶಗಳ ಜೊತೆ ಜೊತೆಯಲ್ಲಿ ಮಾಡಿದಾಗ, ಉತ್ತಮ ಪರೀಕ್ಷೆ ತಯಾರಾಗಲು ಅನುವಾಗುತ್ತದೆ. ಅಂಕೀಕರಣ ಮಾರ್ಗದರ್ಶಿಯನ್ನು ತಯಾರಿಸಿ, ಅಂಕೀಕರಣಕ್ಕಾಗಿ, ಶಿಕ್ಷಕರಿಗೆ ಒದಗಿಸಬೇಕು.

## 15.2.2 ಪಠ್ಯಾಂತರ ಪರೀಕ್ಷೆ (ಘಟಕ ಪರೀಕ್ಷೆ)

ಕಲಿಕಾ ಬೋಧನಾ ಪ್ರಕ್ರಿಯೆಯನ್ನು ಸುಲಭೀಕರಿಸಲು, ಪ್ರತಿ ವಿಷಯದಲ್ಲೂ ತರಗತಿಗೂ ಕೆಲವು ಪಠ್ಯಭಾಗ (ಪಠ್ಯ ಘಟಕ)ಗಳನ್ನಾಗಿಯೂ ಅಧ್ಯಾಯಗಳನ್ನಾಗಿಯೂ ವಿಭಜಿಸಲಾಗಿರುತ್ತದೆ. ಪ್ರತಿ ಪಠ್ಯ ಭಾಗದಲ್ಲೂ (ಘಟಕದಲ್ಲೂ) ಅಂತರ್ ಸಂಬಂಧಿತ ಪರಿಕಲ್ಪನೆಗಳಿರುತ್ತವೆ. ವಿವಿಧ ಘಟಕಗಳಲ್ಲಿನ, ಪರಿಕಲ್ಪನೆಗಳೂ ಸಂಬಂಧಿಸಿದ್ದರೂ, ಅನುಕೂಲಕ್ಕಾಗಿ, ಸ್ವತಂತ್ರ ಪಠ್ಯ ಭಾಗಗಳನ್ನಾಗಿ ಪರಿಗಣಿಸುತ್ತೇವೆ. ಒಂದು ಪಠ್ಯಭಾಗದ ಕಲಿಕಾ ಬೋಧನೆಯ ನಂತರ ಪ್ರತಿಯೊಬ್ಬ ವಿದ್ಯಾರ್ಥಿಯ ಸಾಧನೆಯ ಪರಿಮಾಣ (ಎಷ್ಟರಮಟ್ಟಿಗೆ ಸಾಧನೆಯಾಗಿದೆ)ವನ್ನು (ಪರಿಕಲ್ಪನೆಗಳ ಬಗ್ಗೆ) ನೀವು ತಿಳಿಯಬೇಕು. ಇದಕ್ಕಾಗಿ ವಿವರವಾದ ಮತ್ತು ಉದ್ದದ ಪರೀಕ್ಷೆಯು ಬೇಕಾಗದಿರಬಹುದು. ನೀವು ಮಾಡಬೇಕಾದ್ದೇನೆಂದರೆ ಘಟಕ ಪರೀಕ್ಷೆ ಎಂಬ ಪರೀಕ್ಷೆಯನ್ನು, ನಿಮ್ಮ ತಕ್ಷಣದ ಉದ್ದೇಶಕ್ಕಾಗಿ ನಡೆಸಬೇಕು.

ಈ ಉದ್ದೇಶಕ್ಕಾಗಿ, ಘಟಕ ಪರೀಕ್ಷೆಯನ್ನು, ಅಳವಡಿಸಬೇಕಾದ ವಿಷಯದ ಪರಿಮಾಣ, ನಿರೀಕ್ಷಿಸುವ ಕಲಿಕಾ ಫಲ ಮತ್ತು ಲಭ್ಯವಿರುವ ಕಾಲ (ಸುಮಾರು 30 ನಿಮಿಷಗಳು ಎಲ್ಲವನ್ನೂ ಪರಿಗಣಿಸಿ ಯೋಜಿಸಬೇಕು. ಅಧ್ಯಯನದ ಘಟಕಗಳು ತೀರಾ ಸಣ್ಣವಾಗಿದ್ದರೆ, 2 ಅಥವಾ 3 ಘಟಕಗಳು ಪೂರ್ಣವಾದ ನಂತರ, ಆ ಘಟಕಗಳನ್ನು ಒಳಗೊಂಡಿರುವ ಪರೀಕ್ಷೆ ನಡೆಸಬಹುದು. ಅದರಂತೆಯೇ, ದೊಡ್ಡ ಘಟಕಗಳಿಗೆ ಒಂದಕ್ಕಿಂತ ಹೆಚ್ಚು ಘಟಕ ಪರೀಕ್ಷೆಯನ್ನು ಯೋಜಿಸಬಹುದು.

ಘಟಕ ಪರೀಕ್ಷೆಯ ಉದ್ದೇಶಗಳು:

- ವಾರ್ಷಿಕ ಮತ್ತು ಅರ್ಧ ವಾರ್ಷಿಕ ಪರೀಕ್ಷೆಗಳು, ಸತ್ರಾಂತ, ಸಂಕಲನ ಗುಣಮಾಪಕಗಳಾಗಿದ್ದು, ಮಕ್ಕಳು ಮುಂದಿನ ತರಗತಿಗೆ ತೇರ್ಗಡೆ ಹೊಂದಲು, ಅರ್ಹರೇ? ಎಂಬುದನ್ನು ನಿರ್ಧರಿಸಲು ಉಪಯೋಗವಾಗುತ್ತವೆ. ಈ ಪರೀಕ್ಷೆಗಳಲ್ಲಿ, ಪೂರ್ಣ ಪ್ರಮಾಣದಲ್ಲಿ ಪಠ್ಯಪುಸ್ತಕವನ್ನು ಅಳವಡಿಸಿಕೊಂಡಿರುವುದರಿಂದ ಮತ್ತು ಹಲವು ಬಾರಿ ಎಲ್ಲ ದಕ್ಷತೆಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದು. ಹೆಚ್ಚಿನ ಆವರ್ತನದಲ್ಲಿ ಘಟಕ ಪರೀಕ್ಷೆಗಳನ್ನು ನಡೆಸುವುದರಿಂದ ಹೆಚ್ಚು ದಕ್ಷತೆಗಳನ್ನು ಗುಣಮಾಪನ ಮಾಡಲು ಸಾಧ್ಯವಾಗುತ್ತದೆ. ಘಟಕ ಪರೀಕ್ಷೆಯು ರೂಪತ್ವ (ರೂಪಗೊಳ್ಳುವ) ರೀತಿಯ

Notes

ಗುಣಮಾಪನ ವಾಗಿದೆ. ಇದು, ಮಕ್ಕಳು ತಮ್ಮ ಕಲಿಕಾ ಕಠಿಣತೆಯನ್ನು ಗುರ್ತಿಸಿಕೊಳ್ಳುವ, ಮಾಹಿತಿ ಪಡೆಯುವ, ಅವಕಾಸ ಕಲ್ಪಿಸುತ್ತದೆ ಇದರಿಂದ ಶಿಕ್ಷಕರೂ ಸಹ, ತಮ್ಮ ಬೋಧನಾ ವಿಧಾನವನ್ನು ಮಾರ್ಪಾಡುಪಡಿಸಿಕೊಳ್ಳುವ ಅವಕಾಶವನ್ನು ಮತ್ತು ಪರ್ಯಾಯ ಕಲಿಕಾಭವಗಳನ್ನು ಕಲಿಕಾ ಕಠಿಣತೆ ಹೊಂದಿರುವ ವಿದ್ಯಾರ್ಥಿಗಳಿಗೆ ಒದಗಿಸಲು, ಯೋಜಿಸುವಂತೆ ಸಹಾಯ ಮಾಡುತ್ತದೆ.

– ಘಟಕ ಪರೀಕ್ಷೆಯು, ಕೆಲವು ಮಾತ್ರವೇ ದಕ್ಷತೆಯನ್ನು (ಸೀಮಿತವಾಗಿ) ಒಳಗೊಂಡಿದ್ದು, ಇತರೇ ಸಂಕಲನ ಪರೀಕ್ಷೆಗಳಿಗಿಂತ, ಕಡಿಮೆ ಸಮಯದಲ್ಲಿ ನಡೆಸಬಹುದಾಗಿದೆ ಸಾಮಾನ್ಯವಾಗಿ, ಘಟಕ ಪರೀಕ್ಷೆಗಳನ್ನು ಸುಮಾರು 30–40 ನಿಮಿಷಗಳ ಕಾಲಾವಕಾಶದಲ್ಲಿ ನಡೆಸಬಹುದು. ಈ ಪರೀಕ್ಷೆಗಳು, ತರಗತಿ ಮತ್ತು ಶಾಲೆಯ ಇತರೆ ಕಾರ್ಯಕ್ರಮಗಳಿಗೆ ಅಡ್ಡಿಪಡಿಸುವುದಿಲ್ಲ.

– ಘಟಕ ಪರೀಕ್ಷೆಗಳ ಇತರೆ ಉದ್ದೇಶಗಳ ಬಗ್ಗೆ ಚಿಂತನೆ ನಡೆಸಿರಿ. ನಿಮ್ಮ ಗೆಳೆಯರೊಂದಿಗೆ, ಸಹೋದ್ಯೋಗಿಗಳೊಂದಿಗೆ, ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಿರಿ ಮತ್ತು ಅದರ ಅನಿಸಿಕೆಗಳನ್ನು ಟಿಪ್ಪಣಿ ಮಾಡಿರಿ ಘಟಕ ಪರೀಕ್ಷೆಗಳು, ಇತರೇ ಪರೀಕ್ಷೆಗಳಿಗಿಂತ ಭಿನ್ನವೆಂದು ಕೆಳಗೆ ತೋರಿಸಲಾಗಿದೆ (ಪೆಟ್ಟಿಗೆಯಲ್ಲಿ)

ಪೆಟ್ಟಿಗೆ : ಘಟಕ ಪರೀಕ್ಷೆಯ ಮುಖ್ಯ ಸೂಚಕ ಅಕ್ಷರಗಳು.

- ಇವು ಸೀಮಿತ ದಕ್ಷತೆಗಳು / ನಿರ್ದಿಷ್ಟ ಉದ್ದೇಶಗಳ ಮೇಲೆ ಆಧಾರಿತವಾಗಿದೆ.
- ಮಕ್ಕಳನ್ನು ಈ ಪರೀಕ್ಷೆಗಳಿಂದ ಮಾಡುವ ಗುಣಮಾಪನವು, ಅನೌಪಚಾರಿಕವಾಗಿರುತ್ತದೆ. ಘಟಕ ಪರೀಕ್ಷೆಯನ್ನು ಸಾಮಾನ್ಯವಾದ ತರಗತಿಯ ಸಮಯದಲ್ಲಿ ನಡೆಸಲಾಗುವುದು. ಇದರಿಂದ ಶಾಲೆಯ ಇತರೆ ಚಟುವಟಿಕೆ) ಕಾರ್ಯಕ್ರಮಗಳು ಭಾದಿತವಾಗುವುದಿಲ್ಲ.
- ಘಟಕ ಪರೀಕ್ಷೆಯ ಗರಿಷ್ಠ ಹಂತಗಳನ್ನು ಶಿಕ್ಷಕರೇ ನಿರ್ಧರಿಸುತ್ತಾರೆ. ಈ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗಿಂತ, ಮಕ್ಕ "ಬಲ" ಮತ್ತು "ನ್ಯೂನತೆ"ಯನ್ನು ಅರಿತುಕೊಳ್ಳುವುದು ಬಹಳ ಮುಖ್ಯ.
- ಘಟಕ ಪರೀಕ್ಷೆಯಲ್ಲಿ, ಕಾಲಾವಕಾಶದ ಮಿತಿ, ಪರೀಕ್ಷಾಂಶಗಳ ಸಂಖ್ಯೆ ಎಲ್ಲವೂ ಶಿಕ್ಷಕರಿದ ನಿರ್ಧಾರವಾಗುವುದು. ಹೀಗಾಗಿ ಘಟಕ ಪರೀಕ್ಷೆಯು ಅಪ್ಪಟ ಶಿಕ್ಷಕ ನಿಮಿತ ಪರೀಕ್ಷೆಯಾಗಿದೆ.
- ಘಟಕ ಪರೀಕ್ಷೆಯಲ್ಲಿ ಪರೀಕ್ಷಾಂಶಗಳು, ಮೌಖಿಕ, ಲಿಖಿತ ಅಥವಾ ಪ್ರದರ್ಶಿತ, ರೀತಿಯದ್ದಾಗಿರುಬಹುದು. ಆದರೆ ಒಂದೇ ಘಟಕದಲ್ಲಿಲ ಪರೀಕ್ಷಾಂಶಗಳ ರೀತಿ ಮಿತವಾಗಿರುತ್ತದೆ.
- ಇದು ಮಕ್ಕಳನ್ನು ಅವರ ಪ್ರದರ್ಶನ (ಅಂಕಗಳು)ದ ಆಧಾರದ ಮೇಲೆ ಪಟ್ಟಿ ಮಾಡಲಾಗುವುದು, ಆದರೆ ಇದು ಮುಂದಿನ ಕಲಿಕೆಗೆ ಸಾಧನವಾಗುವುದು.

ಇ4. ಘಟಕ ಪರೀಕ್ಷೆಯೊಡನೆ ಹೊಂದಿಕೊಂಡಿರುವ ವಿಷಯಗಳಾವುವು.

1) ಸಂಕಲಿನ ಗುಣಮಾಪನ

2) ರೂಪತ್ವ (ರೂಪಗೊಳ್ಳುವ)ಗುಣ ಸ್ವಭಾವ.

3) ಮಿತವಾದ ದಕ್ಷತೆಗಳಿಗೆ ಸೀಮಿತವಾಗಿದೆ.

4) ಶಿಕ್ಷಕರಿಂದ ಪೂರ್ಣ ನಿಯಂತ್ರಿತ.

5) ಮಾನ ಕರೀತ್ಯಾ ತಯಾರಾದ ಗುಣಮಾಪನ (ಸಾಧನಾ) ಪರೀಕ್ಷೆ

6) ಮುಂದಿನ ತರಗತಿಗೆ ತೇರ್ಗಡೆಯನ್ನು ತೀಮಾನಿಸುತ್ತದೆ.

7) ಪರಿಹಾರ ಬೋಧನೆಗಾಗಿ ಉಪಯುಕ್ತ

8) ಫಲಿತಾಂಶವನ್ನು ಪೋಷಕರೊಂದಿಗೆ ಹಂಚಿಕೊಳ್ಳಲಾಗುವುದು.

ಘಟಕ ಪರೀಕ್ಷೆಗಳ ರಚನೆ ಮತ್ತು ಪೂರ್ಣ ಪ್ರಮಾಣದ ಪರೀಕ್ಷೆಯ ರಚನೆಗಳಿಗೆ ಇರುವ ತತ್ವಗಳು, ಒಂದೇ ಆದರೂ, ಕೆಲವು ಅಂಶಗಳನ್ನು ಗಮನಿಸಬೆಕಾಗಿದೆ.

- ಘಟಕ ಪರೀಕ್ಷೆಯ ಸೀಮಿತ ಪಠ್ಯವಸ್ತುವನ್ನು ಒಳಗೊಂಡಿರುತ್ತವೆ.
- ಪರೀಕ್ಷೆಯನ್ನು (ಪರಿಕ್ಷಾಂಶಗಳನ್ನು), ರಚಿಸುವ ಮೊದಲು, ಅನುಸರಿಸಬೇಕಾದ, ನಿರ್ದಿಷ್ಟ ______________ ನೀಲಿನಕ್ಷೆ (ಬ್ಲೂಪ್ರಿಂಟ್) ಯಲ್ಲಿ, ವಿಷಯವಸ್ತುವನ್ನು ಒಂದು ಅಕ್ಷ (ಆಕ್ಸಿಸ್ )ನಲ್ಲೂ, ಪರೀಕ್ಷಾಂಶಗಳ ರೀತಿಯನ್ನು ಮತ್ತೊಂದು ಅಕ್ಷರದಲ್ಲೂ ಕೊಡಲಾಗಿದ್ದು, ಈ ಪರೀಕ್ಷಾಂಶ ರೀತಿಯು, ಜ್ಞಾನ, ಅರಿವು, ಅನ್ವಯ ಮತ್ತು ಕೌಶಲ್ಯಗಳಿಗೆ ಸಂಬಂಧಿಸಿರುತ್ತವೆ.
- ಲಭ್ಯವಾಗಿರುವ ಕಾಆವಕಾಶದಲ್ಲಿ ಉತ್ತರಿಸಬಹುದಾದ ನಿಯಮಿತ ಸಂಖ್ಯೆಯ ಪ್ರಶ್ನೆಗಳನ್ನು (ಪರೀಕ್ಷಾಂಶಗಳು) ಶಿಕ್ಷಕರು ತಯಾರಿಸಬೇಕು.
- ಪ್ರತಿ ವಿಷಯ ಕ್ಷೇತ್ರದ ಪರೀಕ್ಷಾಂಶಗಳು ರಚನೆಯ ನಂತರ ಶಿಕ್ಷಕರು, ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಜೋಡಿಸಿ, ಮಕ್ಕಳಿಗೆ ಅನೌಪಚಾರಿಕ ರೀತಿಯಲ್ಲಿ ಪರೀಕ್ಷೆ ನೀಡಬೇಕು.
- ಪರೀಕ್ಷೆಯ ನಂತರ ಅಂಕಿಕರಣವನ್ನು (ಸ್ಕೋರಿಂಗ್) ಮಕ್ಕಳೊಂದಿಗೆ ಚರ್ಚಿಸಿ ನಿರ್ಧರಿಸಬಹುದು.

ಈ ಕೆಳಗಿನ ನೀಲ ನಕ್ಷೆಯನ್ನು ವೀಕ್ಷಿಸಿ, ವಿಶ್ಲೇಷರಿ

| ವಿಷಯವಸ್ತು / ಬಾಷಾ ಕೌಶಲ್ಯಗಳು | ಮೌಖಿಕ | ಲಿಖಿತ | ಪ್ರದರ್ಶಿತ | ಮೊತ್ತ |
|---|---|---|---|---|
| ಅರಿತುವಾಚಿಸುವುದು | | 1(3) | | 3 |
| ಸಲಿಕೆಯಿಂದ ಪಠ್ಯದ ಬಗ್ಗೆ ಮಾತನಾಡುವುದು | 1(3) | | | 3 |
| ಗ್ರಹಿಕೆ (ಪಾಂಪ್ರಹೆನ್ಷನ್) | | 3(2) | | 6 |
| ಪ್ರಾಯೋಗಿಕ ವ್ಯಾಕರಣ | 1(5) | | | 5 |
| ಬೇರೆ ಸಂದರ್ಭದಲ್ಲಿ ಭಾಷೆಯ ಉಪಯೋಗ | | 2(2) | | 4 |
| ಅಧ್ಯಯದ ಮೇಲಿನ ಯೋಜನಾ ಕಾರ್ಯ | | | 1(4) | 4 |
| ಒಟ್ಟು ಅಂಕಗಳು | 8 | 13 | 4 | 25 |

ಬ್ರಾಕೆಟ್ ಒಳಗಿರುವ ಸಂಖ್ಯೆಗಳು ಪರೀಕ್ಷಾಂಶಗಳ ತಲಾ ಅಂಕಗಳು ಹಾಗೂ ಹೊರಗಿರುವ ಸಂಖ್ಯೆಗಳು ಪರೀಕಾಂಶಗಳ ಸಂಖ್ಯೆಗಳು (ಇಲ್ಲಿ 9 ಪರೀಕ್ಷಾಂಶಗಳು, 25 ಅಂಕಗಳು)

5 ನೇ ತರಗತಿಯ ಭಾಷೆಯಲ್ಲಿನ ಒಂದು ಅಧ್ಯಾಯದ (ಪಾಠದ) ನೀಲನಕ್ಷೆ
5ನೇ ತರಗತಿಯ, ಪ್ರಥಮಭಾಷೆ (ಮಾತೃಭಾಷೆ)ಯಲ್ಲಿನ ಗದ್ಯದಲ್ಲಿನ ಒಂದು ಪಾಠ (ಅದ್ಯಾಯ)ದಲ್ಲಿ ಘಟಕ ಪರೀಕ್ಷೆಯ ರಚನೆಗಾಗಿ ಒಂದು ನೀಲನಕ್ಷೆ (ಬ್ಲೂ ಪ್ರಿಂಟ್) ತಯಾರಾಗಿದೆ.

Notes

**ಚಟುವಟಿಕೆ 1:**

*ನಿಮ್ಮ ರಾಜ್ಯದ 5ನೇ ತರಗತಿಯ ಪಠ್ಯಪುಸ್ತಕದಿಂದ ಗದ್ಯಭಾಗದ ಒಂದು ಅಧ್ಯಾಯ (ಪಾಠ) ವನ್ನು ಆಯ್ದು, ಮೇಲೆ ಕೊಟ್ಟಿರುವ ನೀಲ ನಕ್ಷೆಯ ಪ್ರಕಾರ ಒಂದು ಘಟಕ ಪರೀಕ್ಷೆಯನ್ನು ತಯಾರಿಸಿರಿ.*

## 15.3 ಬೇರೆ ಬೇರೆ ರೀತಿಯ ಪರೀಕ್ಷಾಂಶಗಳನ್ನು ಪ್ರಶ್ನೆಗಳನ್ನು ತಯಾರಿಸುವುದು.

ಈ ಕೆಳಗೆ 3 ಪರೀಕ್ಷಾಂಶಗಳನ್ನು ಕೊಡಲಾಗಿದೆ ಅವನ್ನು ಎಚ್ಚರಿಕೆಯಿಂದ ಓದಿರಿ.

1. *ಒಂದು ಸ್ಥಳದ, ಜನಸಂಖ್ಯಾ ಬೆಳವಣಿಗೆಯನ್ನು ಪ್ರಭಾವಿಸುವ ಅಂಶಗಳಾವುವು?*
2. *ಸಂಜೀವಿಗಳ ಮೂರು ಗುಣಲಕ್ಷಣಗಳನ್ನು ಹೆಸರಿಸಿರಿ.*
3. *ಭಾರತದ ರಾಜಧಾನಿಯ ಹೆಸರೇನು?*

ಈ ಮೂರು ಪರೀಕ್ಷಾಂಶಗಳಲ್ಲಿನ ವ್ಯತ್ಯಾಸವನ್ನು ಗಮನಿಸಿದಿರಾ?

ಮೊದಲನೆಯದರಲ್ಲಿ ವಿದ್ಯಾರ್ಥಿಯು, ಜನಸಂಖ್ಯೆ ಬೆಳವಣಿಗೆಯಲ್ಲಿ ಯೋಗಧಾನ ಮಾಡುವ ಎಲ್ಲಾ ಅಂಶಗಳನ್ನು ವಿವರಿಸಬೇಕಾಗಿದೆ. ಈ ರೀತಿಯ ಪ್ರಶ್ನೆಗಳನ್ನು ಸಂಬಂಧರೀತಿ ಎನ್ನವರು. ಪ್ರಬಂಧ ರೀತಿಯಲ್ಲಿ ಎರಡು ವಿಧ ಉತ್ತರ ನೀಡಲು ಇರುವ ಸ್ವಾತಂತ್ರ್ಯದ ಆಧಾರದ ಮೇಲೆ ಅವಲಂಬಿತವಾಗಿ ಈ ಎರಡು ವಿಧಗಳೆಂದರೆ ವಿಸ್ತರಿಸುವ ಉತ್ತರಿಸುವ ವಿಧ (ಮೇಲಿನ ಮೊದಲನೆಯ ಪ್ರಶ್ನೆ ಇರುವುದು) ನಿರ್ಬಂಧಿತ ಉತ್ತರಿಸುವ ವಿಧ, ಈ ವಿಧದಲ್ಲಿ ವಿದ್ಯಾರ್ಥಿಯು ತನ್ನ ಉತ್ತರವನ್ನು ಉತ್ತರಿಸುವಂತಿಲ್ಲ. ಎರಡನೆಯದು ಆ ರೀತಿಯದು ಇಲ್ಲಿ ಮೂರು ಗುಣಲಕ್ಷಣಗಳನ್ನು ಮಾತ್ರ ಬರೆಯಬೇಕು. ಇದು ಅವು ನಿರ್ಬಂಧಿತ ಉತ್ತರ ರೀರಿ ಪರೀಕ್ಷಾಂಶ ಮೇಲಿನವು ದರ ಮೂರನೇ ಪರೀಕ್ಷಾಂಶಗಳನ್ನು ಅರಿಯೋಣ.

### 15.4.1 ವಿಸ್ತರಿತ – ಉತ್ತರ ರೀತಿಯ ಪರೀಕ್ಷಾಂಶಗಳು

ಈ ರೀತಿಯ ಪರೀಕ್ಷಾಂಶಗಳನ್ನು ತಿಳಿದುಕೊಳ್ಳಲು ಕೆಳಕಂಡ ಚಟುವಟಿಕೆ ನಡೆಸೋಣ.

**ಚಟುವಟಿಕೆ –2**

*ಕೆಳಗಿನ ಪ್ರಶ್ನೆಗಳನ್ನು ಓದಿರಿ*

1. *ಪ್ರಯೋಗ ಶಾಲೆಯಲ್ಲಿ ಇಂಗಾಲದ ಡೈ ಆಕ್ಸೈಡ್ ಅನಿಲದ ತಯಾರಿಕೆಯನ್ನು ವಿವರಿಸಿರಿ.*
2. *ಔರಂಗಜೇಬನ ಆಡಳಿತ ಯೋಜನಾ ತಂತ್ರಗಳು ಭಾರತದಲ್ಲಿ ಮೊಘಲ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು. ಈ ಹೇಳಿಕೆಯನ್ನು ಟೀಕಿಸಿ ಅಥವಾ ಸಮರ್ಥಿಸಿ*
3. *ಜಲಜನಕ ಅನಿಲದ ಎರಡು ಭೌತಿಕ ಗುಣಗಳನ್ನು ಬರೆಯಿರಿ.*

*ಮೇಲಿನ ಮೂರು ಪ್ರಶ್ನೆಗಳ ಆಧಾರದ ಮೇಲೆ ಕೆಳಗಿನ ಕೋಷ್ಟಕದಲ್ಲಿ ಮಾಡಿ, ಕೊಟ್ಟಿರುವ ಹೇಳಿಕೆಗೆ ಅನ್ವಯಿಸಿದರೆ (ಹೌದು) ಎಂದು ಗುರ್ತು ಮಾಡಿ, ಅನ್ವಯಿಸದಿದ್ದರೆ (ತಪ್ಪು) ಗುರ್ತು ಹಾಕಿರಿ.*

***ಕೋಷ್ಟಕ 15.3***

| *ಕ್ರ.ಸಂ* | *ಹೇಳಿಕೆ* | *ಪ್ರಶ್ನೆ 1* | *ಪ್ರಶ್ನೆ 2* | *ಪ್ರಶ್ನೆ 3* |
|---|---|---|---|---|
| 1. | ಉತ್ತರ ನೀಡಲು ಸ್ವಾತಂತ್ರ್ಯ ಇದೆ | | | |
| 2. | ಉತ್ತರಿಸುವಾಗ ಊಹೆ ಕನಿಷ್ಟವಾಗಿದೆ. | | | |
| 3. | ಬೇರೆ ಬೇರೆ ಅನೇಕ ಸಂಭ್ಯಾವ್ಯ ಉತ್ತರ ನೀಡುವ ಸಾಮರ್ಥ್ಯವನ್ನು ಅಳೆಯುವುದು | | | |
| 4. | ಮಕ್ಕಳು ತಮ್ಮಲ್ಲಿನ ಅನಿಸಿಕೆಗಳನ್ನು ಸಂಘಟಿಸಿ ಲಿಖಿತ ರೂಪದಲ್ಲಿ ಪ್ರಸ್ತುತ ಪಡಿಸಲು ಅವಕಾಶವಿದೆ | | | |
| 5. | ಪ್ರಶ್ನೆಯನ್ನು ಉತ್ತರಿಸಲು ಬಹಳ ಸಮಯಾವಕಾಸಬೇಕು | | | |
| 6. | ಉತ್ತರಗಳಲ್ಲಿ ಮಕ್ಕಳ ಸೃಜನಾತ್ಮಕ ಸಾಮರ್ಥ್ಯಗಳು ಪ್ರತಿಬಿಂಬಿತವಾಗುತ್ತದೆ | | | |
| 7. | ಪರೀಕ್ಷಕರಿಂದ ಪರೀಕ್ಷಕರಿಗೆ ಅಂಕೀಕರಣದ ಬದಲಾಗಬಹುದು. | | | |

ಮೇಲಿನ ಕೋಷ್ಟಕದಲ್ಲಿ ನೀವು ಕೊಟ್ಟಿರುವ ಉತ್ತರಗಳು ಮತ್ತು ಮೂರು ಪರೀಕ್ಷಾಂಶಗಳನ್ನು ವಿಶ್ಲೇಷಿಸಿದಾಗ ನವು ಪರೀಕಾಂಶ 1 ಮತ್ತು 2 ಗಳು 3ನೇ ಪರೀಕ್ಷಾಂಶಕ್ಕಿಂತ ಭಿನ್ನವಗಿರುವುದನ್ನು ಕಾಣಬಹದು. ಮೊದಲನೆಯ ಎರಡು, ವಿಸ್ತರಿತ (ಮುಕ್ತ) ಉತರ ನೀಡುವ, ಪರೀಕ್ಷಾಂಶವಾಗಿದೆ.ಮೂರನೆಯದು, ನಿರ್ಬಂದಿತ ಉತ್ತರ ರೀತಿಯದು.

ವಿಸ್ತರಿತ ಉತ್ತರಿಸುವ ಪರೀಕ್ಷಾಂಶದಲ್ಲಿ ಮಕ್ಕಳಿಗೆ ಉತ್ತರಿಸಲು ಸಾಕಷ್ಟು ಮುಕ್ತ ಅವಕಾಶವಿದೆ. ಈ ರೀತಿಯ ಉತ್ತರದಲ್ಲಿ ಮಕ್ಕಳಿಗೆ, ಯಾವ ಸಿದ್ಧಾಂತಗಳು, ಪ್ರಮುಖವಾದುವು ಎಂದು ಚಿಂತನೆ ಮಾಡುವ ಮತ್ತು ಅವುಗಳನ್ನು ಸಂಘಟಿಸಿ ತಮ್ಮದೇ ಶೈಲಿಯಲ್ಲಿ ಬರೆಯುವ ಮುಕ್ತತೆ ದೊರಕುತ್ತದೆ. ಇಲ್ಲಿ ಶಿಕ್ಷಕರಿಗೆ ಮೌಲ್ಯಮಾಪನದಲ್ಲಿ ಸಹಾಯವಾಗುತ್ತದೆ, ಇಲ್ಲಿ ಸಂಕೀರ್ಣ ಕೌಶಲ್ಯಗ ಳಾದ, ಸಂಘಟನೆ, ವಿಶ್ಲೇಷಣಾ ಕೌಶಲ್ಯ, ಮತ್ತು ತತ್ವಗಳು, ಪರಿಕಲ್ಪನೆಗಳ ಅರಿವು, ಸಹ ಮಾಪವಾಗುತ್ತವೆ.

Notes

ವಿಸ್ತರಿತ ಉತ್ತರ ರೀತಿಯ ಪರೀಕ್ಷಾಂಶಗಳು ಸಾಕಷ್ಟು ಶಕ್ತಿಯುತವಾಗಿದ್ದರೂ, ಕೆಲವು ಬಲಹೀನತೆಗಳೂ ಇವೆ. ಈ ರೀತಿಯ ಪರೀಕ್ಷಾಂಶಗಳ ಉತ್ತರಗಳಲ್ಲಿ, ಮಕ್ಕಳಿಗೆ ಅಭಿವ್ಯಕ್ತಿಸುವ ಸ್ವಾತಂತ್ರ್ಯ ಹೆಚ್ಚಾಗಿರುವುದರಿಂದ, ಉತ್ತರಗಳಿ ಅಂಕೀಕರನವನ್ನು ನಿರಪೇಕ್ಷ ರೀತಿಯಲ್ಲಿ ಮಾಡಲು ಕಷ್ಟಕರವಾಗುತ್ತದೆ. ಅಂಕೀಕರಣವು, ಪರೀಕ್ಷಕನ ತನ್ನದೇ ಆದ ಮಾನದಂಡ ಮತ್ತು ಮನೋಸ್ಥಿತಿಯನ್ನು ಅವಲಂಭಿಸಿರುವುದು. ಈ ಕಾರಣದಿಂದ, ಒಂದೇ ಉತ್ತರಕ್ಕೇ, ಬೇರೆ ಬೇರೆ ಅಂಕಗಳನ್ನು ಕೊಡಬಹುದು. ಕೇವಲ ವಿಸ್ತರಿತ ಉತ್ತರ ರೀತಿಯ ಪರೀಕ್ಷಾಂಶಗಳನ್ನು ಹೊಂದಿರುವ ಪರೀಕ್ಷೆಯಲ್ಲಿ, ನೀರೀಕ್ಷಿತ ಎಲ್ಲಾ ಕಲಿಕಾ ಫಲ ಗಳನ್ನು ಒಳಗೊಡಿಸಲಾಗುವುದಿಲ್ಲ.

---

ಇ5. ವಿಸ್ತರಿತ ಉತ್ತರ ರೀತಿಯ ಪರೀಕ್ಷಾಂಶಗಳ ಎರಡು ಬಲ ತ್ತು ಎರಡು ಬಲಹೀನತೆ (ದುರ್ಬಳಕೆ)ಗಳನ್ನು ಸೂಕ್ತ ಉದಾಹರಣೆ ಸಹಿತ ಹೇಳಿರಿ.

ಇ6. ಪ್ರತಿ ಶಾಲಾ ವಿಷಯದಲ್ಲೂ, ವಿಸ್ತರಿತ ಉತ್ತರ ರೀತಿಯ ಎರಡು ಪರೀಕ್ಷಾಂಶಗಳನ್ನು, ಉದಾಹರಣೆಯಾಗಿ ಕೊಡಿರಿ.

---

ತರಗತಿಯ ಶಿಕ್ಷಕರು ಉತ್ತಮ ಗುಣಮಟ್ಟದ ವಿಸ್ತರಿತ ಉತ್ತರ ರೀತಿಯ ಪರೀಕ್ಷಾಂಶಗಳನ್ನು ರಚಿಸಬಲ್ಲರು ಮತ್ತು ಮಕ್ಕಳ ಕಲಿಕೆಯನ್ನು ಹೆಚ್ಚಿಸುವಲ್ಲಿ ಉಪಯೋಗಿಸಬಲ್ಲರು, ಈ ರೀತಿಯ ಪರೀಕ್ಷಾಂಶಗಳನ್ನು ರಚಿಸುವಲ್ಲಿ ಕೆಳಗಿನ ಕೆಲವು ಅಂಶಗಳನ್ನು ಪರಿಗಣಿಸಬೇಕೆ.

- ಪ್ರತಿ ಪ್ರಶ್ನೆಯ ಉತ್ತರಗಳ ಗಾತ್ರ ಮಿತಿಯನ್ನು ನಿರ್ಧಾರವಾಗಿ ತಿಳಿಸಿರಿ.
- ಉತ್ತರದಲ್ಲಿ ಉಲ್ಲೇಖಿಸಬೇಕಾದ, ಕೇಂದ್ರೀಕರಿಸಬೇಕಾದ ಅಂಶಗಳನ್ನು ಕುರಿತು, ಮಕ್ಕಳಿಗೆ ಮಾರ್ಗಸೂಚಿಯನ್ನು ಒದಗಿಸಿರಿ.
- ಉತ್ತರದಲ್ಲಿ ಇರುವ ಅಂಶಗಳಿಗೆ ಕೊಡುವ ಅಂಕಾಂಶಗಳ ಬಗ್ಗೆ, ಮಕ್ಕಳಿಗೆ ಪೂರ್ವಭಾವಿಯಾಗಿ ಮಾಹಿತಿ ಒದಗಿಸಿರಿ.

### 15.3.2 ನಿರ್ಬಂಧಿತ ಉತ್ತರ ರೀತಿಯ ಪರೀಕ್ಷಾಂಶಗಳು

ಪ್ರಬಂಧ ರೀತಿಯ ಪ್ರಶ್ನೆಗಳಲ್ಲಿ ನಾವು ಯಾವುದಾದರೂ ನಿರ್ಬಂಧ ಹೇರಿದಾಗ, ಅವುಗಳಿಗೆ ಬರುವ ಉತ್ತರವು ನಿಯಂತ್ರಿತವಾಗುತ್ತದೆ. ಅಥವಾ ಹ್ರಸ್ವವಾಗುವುದು ಚಿಕ್ಕದಾಗಿರುವುದು.

ಕೆಳಗಿನವುಗಳನ್ನು ಎಚ್ಚರಿಕೆಯಿಂದ ಓದಿರಿ.

*1. ನಿಮ್ಮ ನೆಚ್ಚಿನ ಸಾಕು ಪ್ರಾಣಿಯ ಬಗ್ಗೆ ನಿಮ್ಮ ಭಾವನೆಗಳನ್ನು, 50 ಪದಗಳಲ್ಲಿ ಬರೆಯಿರಿ.*

*2. ರೇಡಿಯೋ ಹೋಲಿಸಿದಾಗ, ದೂರ ದರ್ಶನದ ಎರಡು ಅನುಕೂಲತೆಗಳನ್ನು ಹೇಳಿರಿ.*

*3. ಭಾರತದಲ್ಲಿ ಬಡತನಕ್ಕೆ ಹೊಣೆಯಾದ ಅಂಶಗಳನ್ನು ವಿವರಿಸಿ*

*4. ಕೆಳಗೆ ಕೊಟ್ಟಿರುವ ಸ್ಥಳದಲ್ಲಿ, ನೀವು ಶಾಲೆಗೆ ಗೈರು ಹಾಜರಾದ ಕಾರಣಗಳನ್ನು ತಿಳಿಸಿರಿ.*

*5. ಕೆಳಗಿನ ಪ್ರಶ್ನೆಗಳನ್ನು ತಕ್ಷಣವೇ ಒಂದು ಪ್ರಶ್ನೆಗೆ 2 ನಿಮಿಷ ಮಾರದಂತೆ ಉತ್ತರಿಸಿರಿ.*

*ಎ) ನಿಮ್ಮ ರಾಜ್ಯದಲ್ಲಿ ವರ್ಷದ ಯಾವ ತಿಂಗಳಲ್ಲಿ ಮುಂಗಾರು ಬರುತ್ತದೆ?*

*ಬಿ) ಮಳೆ ನೆರಳಿನ ಕ್ಷೇತ್ರ ಅಂದರೆ ಏನು?*

*ಸಿ) ಬೆಟ್ಟದ ಮೇಲೆ, ಹೆಚ್ಚು ಮೇಲೆ ಏರಿದಂತೆಲ್ಲಾ ನಿಮಗೆ ಚಳಿಯಾಗುತ್ತದೆ ಏಕೆ?*

- ಮೊದಲನೆ (1) ಯ ಮತ್ತು ಮೂರನೆಯ (ಎಸ್)ವುಗಳಲ್ಲಿ ಉತ್ತರವು 50 ಪದಗಳು ಮತ್ತು 5 ವಾಕ್ಯಗಳು ಎಂಬ ನಿರ್ಬಂಧಗಳು ಕ್ರಮವಾಗಿ ಇವೆ., ವಿದ್ಯಾರ್ಥಿಯು ಪ್ರಮುಖ ಅಂಶಗಳನ್ನು ಆಯ್ದು, ಸಂಘಟಿಸಿ, ಒಗ್ಗೂಡಿಸಿ ನಿರ್ದೇಶಿತ ಪದಗಳು ಅಥವಾ ವಾಕ್ಯಗಳಲ್ಲಿ ಉತ್ತರಿಸಬೇಕಾಗಿದೆ.

- ಎರಡನೇಯದರಲ್ಲಿ ರೇಡಿಯೋ ಮತ್ತು ದೂರದರ್ಶನಗಳ ನಡುವೆ ಹಲವಾರು ವ್ಯತ್ಯಾಸಗಳಿದ್ದರೂ, ದೂರದರ್ಶನದ ಎರಡು ಅನುಕೂಲತೆಯನ್ನು ಮಾತ್ರ ತಿಳಿಸಬೇಕಾಗಿದೆ.

- ನಾಲ್ಕನೆಯದಲ್ಲಿ, ಉತ್ತರಿಸುವ ಸ್ಥಳಾವಕಾಶ ಸಾಲುಗಳಿಗಷ್ಟೇ ಇದೆ ವಿದ್ಯಾರ್ಥಿಯು, ಕಾರಣಗಳನ್ನು 4 ಸಾಲುಗಳಿಗೆ ಸೀಮಿತಗೊಳಿಸಬೇಕಾಗಿದೆ.

- ಐದನೆಯದರಲ್ಲಿ, ಉತ್ತರಿಸುವ ಸಮಯಾವಕಾಶವನ್ನು ಪ್ರತಿ ಪ್ರಶ್ನೆಗೆ, 2 ನಿಮಿಷವೆಂದು ಸೀಮಿತಗೊಳಿಸಲಾಗಿದೆ.

ಮಕ್ಕಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿದ್ದರೂ, ಉತ್ತರದ ಮೇಲೆ ನಿರ್ಬಂದವಿದೆ. ಈ ರೀತಿಯ ನಿರ್ಬಂಧಿತ ಪರೀಕ್ಷಾಂಶಗಳು, ಸಮಯದ ನಿರ್ವಹಣೆಯಲ್ಲಿ ಉಪಯುಕ್ತವಾಗಿದೆ, ಮತ್ತು ಉತ್ತರಗಳನ್ನು ಹೆಚ್ಚು ನಿರಪೇಕ್ಷವಾಗಿ ತಾರತಮ್ಯವಿಲ್ಲದೆ ಅಂಕೀಕರಿಸಬಹುದು ಬಹಳ ಎಚ್ಚರಿಕೆಯಿಂದ, ರಚಿಸಿದ, ನಿರ್ಬಂಧಿತ ಉತ್ತರ ರೀತಿಯ ಪರೀಕ್ಷಾಂಶಗಳಿಂದ, ಉಚ್ಚ ಕಲಿಕಾ ಫಲಗಳನ್ನು ಉದಾಹರಣೆಗೆ ಗ್ರಹಿಕೆ, ಅನ್ವಯ,ವಿಶ್ಲೇಷಣೆ, ಸಂಶ್ಲೇಷಣೆ, ಮೆಚ್ಚುಗೆ ಮತ್ತು ಸಋಜನಶೀಲಗ್ವಿಣ್ವಳನ್ನು ಗುಣ ಮಾಪನ ಮಾಡಬಹುದು.

---

ಇ7. ಕಲಿಕಾ ಫಲಗಳನ್ನು ಗುಣ ಮಾಪನದಲ್ಲಿ ಬೇರೆ ಬೇರೆ ಪರೀಕ್ಷಾಂಶಗಳಿಗಿಂತ, ವಿಸ್ತರಿತ ಉತ್ತರ ರೀತಿಯ ಪರೀಕ್ಷಾಂಶಗಳು ಹೊಮದಿರುವ, ಮೂರು ಅನುಕೂಲತೆಗಳನ್ನು ಬರೆಯಿರಿ.

ಇ8. ವಿಸ್ತರಿತ ಉತ್ತರ ರೀತಿ ಪರೀಕ್ಷಾಂಶಗಳ ಉತ್ತರಗಳನ್ನು ಅಂಕೀಕರಣ ಮಾಡುವಾಗ, ಬೇರೆ ಬೇರೆ ಪರೀಕ್ಷಕರು ಬೇರೆ ಬೇರೆ ರೀತಿಯಾಗಿ, ಅಂಕೀಕರಿಸಲು ಮೂರು ಕಾರಣಗಳನ್ನು ನೀಡಿ.

ಇ9. ನಿರ್ಬಂದಿತ ಉತ್ತರ ನೀಡಿ ಪರೀಕ್ಷಾಂಶಗಳ, ಉತ್ತರವನ್ನು ನಿರ್ಬಂಧಿಸಲು ಎಷ್ಟು ನಿಬಂಧನೆಗಳನ್ನು ಹೇರಬಹುದು.

---

## 15.3.3 ಉದೇಶಿತ ಉತ್ತರ ರೀತಿಯ ಪರೀಕ್ಷಾಂಶಗಳು

ಕೆಳಗಿನ ಪರೀಕ್ಷಾಂಶಗಳನ್ನು ಓದಿರಿ.

*1. 7+6–3 ರ ಬೆಲೆ ಏನು?*

*2. ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿ ಯಾರು?*

*3. ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷ*

ನಾವು ಈ ರೀತಿಯ ಪರೀಕ್ಷಾಂಶಗಳಿಂದ ಪರಿಚಿತ ಇದ್ದೇವೆ. ಈ ರೀತಿಯ ಪರೀಕ್ಷಾಂಶಗಳನ್ನು, ಬಹಳಷ್ಟು ಪರೀಕ್ಷೆಗಳಲ್ಲಿ ಬಳಸಲಾಗುವುದು. ಈ ರೀತಿಯ ಪರೀಕ್ಷಾಂಶಗಳ ಉತ್ತರವು ನಿರ್ದಿಷ್ಟ ಹಾಗೂ ವಿಶಿಷ್ಟವಾಗಿರುವುದರಿಂದ, ಅಂಕೀಕರಣವು ಗೌಪೇಕ್ಷವಾಗಿದ್ದು, ನಿರ್ದಿಷ್ಟ ನಿಖರವಾಗಿರುತ್ತದೆ. ಇವುಗಳು ಅಂಕೀಕರಣದಲ್ಲಿ ಬೇರೆ ಬೇರೆ ಮಾನದಂಡಗಳಾಗಲಿ, ಯಾವುದೇ ಪ್ರಭಾವವಾಗಲಿ ವರ್ತಿಸುವುದಿಲ್ಲ. ಆದ್ದರಿಂದಲೇ ಇವನ್ನು ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶ ವೆನ್ನುವೆವು.

Notes

ಈ ರೀತಿಯ ಪರೀಕ್ಷಾಂಶಗಳಲ್ಲಿ, ಮಕ್ಕಳು, ಉತ್ತರಿಸುವಾಗ, ಒಂದು ಅಥವಾ ಒಂದು ಸಂಖ್ಯೆ, ಅಥಗವಾ ಒಂದು ಚಿಹ್ನೆಯನ್ನು ಒದಗಿಸಬೇಕಾಗುತ್ತದೆ, ಅಥವಾ ಕೊಟ್ಟಿರುವ ಪರ್ಯಾಯಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಬೇಕಾಗುವುದು, ಸಾಮಾನ್ಯವಾಗಿ, ಈ ರೀತಿಯ ಪರೀಕ್ಷಾಂಶಗಳನ್ನು ಉತ್ತರಿಸಲು, ಕಡಿಮೆ ಸಮಯ ಹಿಡಿಸುವುದು ಮತ್ತು ಬೇರೆ ರೀತಿಯ ಪರೀಕ್ಷಾಂಶಗಳಿಗಿಂತ, ವಿಸ್ತರಿತ, ನಿರ್ಬಂದಿತ ಉತ್ತರ ರೀತಿ ಪರೀಕ್ಷಾಂಶಗಳಿಗಿಂತಲೂ ಹೆಚ್ಚು ಅಂಶಗಳನ್ನುಗಳಿಸಬಹುದು.

ಶಿಕ್ಷಕ ನಿರ್ಮಿತ ಸಾಧನಾ ಸರಿಕ್ಷೆಗಳ್ಲಲಿ ವಿವಿಧ ರೀತಿಯ, ಉದ್ದೇಶಿತ– ಉತ್ತರ ರೀತಿ ಪರೀಕ್ಷಾಂಶಗಳನ್ನು ಉಪಯೋಗಿಸಲಾಗುವುದು.ನೀವು ಬೇರೆ ಬೇರೆ ರೀತಿಯ ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶಗಳ ಬಗ್ಗೆ ನಿಖರ, ನಿದಿಷ್ಠ ಅನಿಸಿಕೆಯನ್ನು ಹೊಂದುವುದು ಅವಶ್ಯಕ.

ಕೆಳಗಿನ ಪರೀಕ್ಷಾಂಶಗಳನ್ನು ಪರಿಗಣಿಸಿರಿ.

1. ಖಾಲಿ ಇರುವ ಜಾಗದಲ್ಲಿ ಸರಿ ಉತ್ತರ ತುಂಬಿರಿ
   ಗ್ರಾಮ ಪಂಚಾಯಿತಿ ಸದಸ್ಯರು ವರ್ಷಗಳಿಗಾಗಿ ಚುನಾಯಿತರಾಗುವರು.

2. ಕೊಟ್ಟಿರುವ ಪರ್ಯಾಯಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ ಬರೆಯಿರಿ.
   ಗ್ರಾಮ ಪಂಚಾಯಿತಿ ಸದಸ್ಯರು ವರ್ಷಗಳಿಗೆ ಚುನಾಯಿತರಾಗುವರು.

1ನೇ ಮತ್ತು 2ನೇ ಪರೀಕ್ಷಾಂಶಗಳಲ್ಲಿ ಏನಾದರೂ ವ್ಯತ್ಯಾಸವಿದೆಯೇ?

1ನೇಯದರಲ್ಲಿ ಮಕ್ಕಳು, ತಾವು ಪಠ್ಯದಲ್ಲಿ ಓದಿರುವುದನ್ನು ನೆನಪಿಸಿಕೊಂಡು, ಉತ್ತರವನ್ನು ಒದಗಿಸಬೇಕು, ಆದರೆ ಎರಡನೇಯದರಲ್ಲಿ ಕೊಟ್ಟಿರುವ ಪರ್ಯಾಯಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಬೇಕು ಹೀಗಾಗಿ, ಮೊದಲನೆಯದು 'ಸರಬರಾಜು ರೀತಿ' ಮತ್ತು ಎರಡನೇಯದು ಆಯ್ಕೆ ರೀತಿ.

ಈಗ ಸೂಕ್ತ ಉದಾಹರಣೆಗಳೊಂದಿಗೆ ಬೇರೆ ಬೇರೆ ಉದ್ದೇಶಿತ ಉತ್ತರ ರೀತಿ ಬೇರೆ ಬೇರೆ ರೀತಿಯ ಪರೀಕ್ಷಾಂಶಗಳನ್ನು ಚರ್ಚಿಸೋಣ.

*ಎ) ಲಘು ಉತ್ತರ ರೀತಿ :*

ಈ ರೀತಿಯ ಪರೀಕ್ಷಾಂಶಗಳು ಸರಳವಾದ ಕಲಿಕಾ ಫಲಗಳ ಗುಣ ಮಾಪನಕ್ಕೆಸೂಕ್ತವಾಗಿರುತ್ತವೆ ಇವುಗಳನ್ನು ಸಾಮಾನ್ಯವಾಗಿ ನೇರ ಪ್ರಶ್ನೆಗಳಿಗೆ ಎನ್ನುತ್ತೇವೆ. ಕೆಲವು ಉದಾಹರಣೆಗಳು

- *ಮಳೆಪಾತವನ್ನು ಅಳೆಯಲು ಯಾವ ಮಾರ್ಪವನ್ನು ಉಪಯೋಗಿಸಲಾಗುವುದು.*
- *ಹತ್ತು ಪೆನ್ನುಗಳು 45 ರೂ ಬೆಲೆ ಬಾಳಿದರೆ, ಒಂದು ಪೆನ್ನುಕೊಳ್ಳಲು ನೀವು ಎಷ್ಟು ಬೆಲೆ ಕೊಡಬೇಕಾಗುವುದು.*
- *ಮೊದಲನೇಪಾನಿಪತ್ ಯುದ್ದವುಯಾವ ವರ್ಷ ನಡೆಯಿತು.*

ಈ ಪ್ರಶ್ನೆಗಳನ್ನು ಉತ್ತರಿಸಲು ಮಕ್ಕಳು, ತಾವು ಅಧ್ಯಯನ ಮಾಡಿರುವ ಅಂಶಗಳನ್ನು ನೆನಪಿಸಿಕೊಳ್ಳಬೇಕಾಗುವುದು ಲಘು ಉತ್ತರ ರೀತಿಯ ಪರೀಕ್ಷಾಂಶಗಳನ್ನು ಸಾಮಾನ್ಯವಾಗಿ ಪದನಾಮ ಕಣ್ಯಂತಶಗಳು ಮತ್ತು ತತ್ವಗಳು ಇವುಗಳ ಮಕ್ಕಳ ಜ್ಞಾನ ಗುಣ ಮಾಪನಕ್ಕಾಗಿ ಉಪಯೋಗಿಸಲಾಗುವುದು. ಶಿಕ್ಷಕರಿಗೆಲಘು ಉತ್ತರರೀತಿಯ ಪ್ರಶ್ನೆಗಳನ್ನು ತಯಾರಿಸುವುದು ಬಹಳ ಸುಲಭ, ಪ್ರತಿ ರೀತಿಯ ಪ್ರಶ್ನೆಗಳನ್ನು ತಯಾರಿಸುವಾಗ, ಅಸಂಮಂಜತೆ ಇಲ್ಲದಂತೆ ಭಾಷೆಯನ್ನು, ವಾಕ್ಯಗಳಲ್ಲಿ ಪದಗಳ ಜೋಡಣೆಯ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕು.

Notes

*ಬಿ) ಪೂರ್ಣಗೊಳಿಸುವ ರೀತಿ :*

ಕೆಲವು ಪರೀಕ್ಷಾಂಶಗಳಲ್ಲಿ,ಮಕ್ಕಳು ಅಪೂರ್ಣ ಹೇಳಿಕೆಗಳನ್ನು ಪೂರ್ಣಗೊಳಿಸಬೇಕು ಇದು ಇನ್ನೊಂದು ರೀತಿಯ ಲಘು ಉತ್ತರ ರೀತಿಯ ಪರೀಕ್ಷಾಂಶವಾಗಿದೆ ಕೆಲವು ಉದಾಹರಣೆಗಳು ಇಲ್ಲವೆ.

- *ಭಾರತದ ಸಂಸತ್ತಿಗೆ, ಸದಸ್ಯರನ್ನು ____________ ವರ್ಷಗಳ ಅವಧಿಗೆ ಚುನಾಯಿಸಲಾಗುತ್ತದೆ.*
- *ಸಸ್ಯಗಳು ಆಹಾರ ತಯಾರಿಸುವ ಪ್ರಕ್ರಿಯೆಯನ್ನು ___________ ಎನ್ನುತ್ತೇವೆ.*
- *ಸಮಭುಜ ತ್ರಿಭುಜದ ಪ್ರತಿಕೋನದ ಅಳತೆಯು __________________ ಆಗಿರುತ್ತದೆ.*

ಈ ಎಲ್ಲಾ ಪರೀಕ್ಷಾಂಶಗಳಲ್ಲಿ, ಸರಿ ಉತ್ತರವನ್ನು ಸರಬರಾಜು ಮಾಡಬೇಕು, ಮತ್ತು ವಾಕ್ಯಗಳನ್ನು, ಹೇಳಿಕೆಯನ್ನು ಪೂರ್ಣಗೊಳಿಸಬೇಕು. ಸಾಮಾನ್ಯವಾಗಿ, ಒಂದು ಪರೀಕ್ಷಾಂಶದಲ್ಲಿ ಒಂದು ಖಾಲಿ ಜಾಗ ಪರೀಕ್ಷಾಂಶದಲ್ಲಿ ಸಾಮಾನ್ಯವಾಗಿ ಕೊನೆಯ ಭಾಗದಲ್ಲಿ ವಾಕ್ಯದಮೊದಲು ಖಾಲಿ ಜಾಗ ಇರಬಾರದು ಈ ರೀತಿಯ ಪರೀಕ್ಷಾಂಶಗಳಲ್ಲಿ ಬಹಳ ಉದ್ದ ಮತ್ತು ಸಂಕೀರ್ಣ ವಾಕ್ಯಗಳನ್ನು ಉಪಯೋಗಿಸಬಾರದು.

*ಸಿ) ಸರಿ – ತಪ್ಪು ಅಥವಾ ಪರ್ಯಾಯ ಉತ್ತರ ರೀತಿಯ ಪರೀಕ್ಷಾಂಶಗಳು*

ಈ ಕೆಳಗಿನ ಪರೀಕ್ಷಾಂಶಗಳನ್ನು ಗಮನಿಸಿರಿ.

ಪ್ರತಿಯೊಂದು ಹೇಳಿಕೆಯನ್ನು ಎಚ್ಚರಿಕೆಯಿಂದ ಓದಿರಿ ಹೇಳಿಕೆಯು ಸತ್ಯವಾದಲ್ಲಿ ಟಿ ಎಂದೂ ತಪ್ಪಾಗಿದ್ದರೆ ಎಫ್ ಎಂದೂ ಗುರುತುಮಾಡಿ.

- 169ರ ವರ್ಗಮೂಲ 13
- ಎರಡನೇ ವಿಶ್ವ ಸಮರವು, 1939ನೇ ಇಸವಿಯಲ್ಲಿ ಕೊನೆಗೊಂಡಿತು.
- ಪ್ರತಿ ಆಯುತವಾಗಿದೆ, ಲೇಖಕರು ಡಾ. ಮನಮೋಹನಸಿಂಗ್‌ರವರು

ಇಲ್ಲ ಮಕ್ಕಳು ಹೇಳಿಕೆಯ ಸತ್ಯತೆ ಅಥವಾ ಮಿಥ್ಯತೆಯನ್ನು ತೀರ್ಮಾನಿಸುತ್ತಾರೆ. ಈ ರೀತಿಯ ಪರೀಕ್ಷಾಂಶದ ಬೇರೆ ರೂಪಗಳೆಂದರೆ ಹೌದು ಅಲ್ಲ, ಸತ್ಯ ಅಸತ್ಯ ಇಲ್ಲ ಉತ್ತರದ ಆಯ್ಕೆಯು, ಕೇವಲ ಎರಡು ಉತ್ತರಗಳಿಗೆ ಮಾತ್ರ ಸೀಮಿತವಾಗಿರುವುದರಿಂದ, ಉತ್ತರಿಸುವ ವ್ಯಕ್ತಿಯು, ಯಾವುದಾದರೂ ಒಂದನ್ನು ಆಯ್ಕೆ ಮಾಡಲೇಬೇಕಾದ ಅನಿವಾರ್ಯತೆ ಇದೆ ಸತ್ಯಾಂಶದ ಜ್ಞಾನ, ಅರಿವು, ಅನ್ವಯ, ಕೌಶಲ್ಯ ಮತ್ತು ಸಮಸ್ಯಾ ಪರಿಹಾರದ ಸಾಮರ್ಥ್ಯಗಳನ್ನು, ಈ ರೀತಿಯ ಪರೀಕ್ಷಾಂಶಗಳಿಗೆ ಕಿರಿಯ ಮಕ್ಕಳಲ್ಲಿ ಮಾಡಬಹುದು. ಆದರೆ ಇಲ್ಲಿ, ಹೆಚ್ಚಾಗಿ ಊಹಿಸುವ ಅವಕಾಶವಿದ್ದು, ಅಂಕೀಕರಣವು, ಶೀಘ್ರವಾಗಿಯೂ ಮಾಡಬಹುದು.

---

**ಚಟುವಟಿಕೆ 3 :**

*ಸಮಾಜ ವಿಜ್ಞಾನದ ಪಠ್ಯಪುಸ್ತಕದಲ್ಲಿನ ವಸ್ತುವಿನಿಂದ, ಕನಿಷ್ಠ 10 ಪರೀಕ್ಷಾಂಶಗಳನ್ನು (ಸರಿ/ತಪ್ಪು ರೀತಿಯ) ರಚಿಸಿರಿ.*

---

Notes

ಮೇಲೆ ಹೇಳಿದಂತೆ, 10 ಪರೀಕ್ಷಾಂಶಗಳನ್ನು ತಯಾರಿಸಿದ ನಂತರ, ಕೆಳಗಿನ ಮಾನದಂಡಗಳಿಗೆ ಅನುಸಾರವಾಗಿವೆ ಎಂದು ಪರಿಶೀಲಿಸಿರಿ.,

ಎ) ಪ್ರತಿ ಪರೀಕ್ಷಾಂಶವೂ, ಸರಳ ಮತ್ತು ವಿಶದವಾದ ಭಾಷೆಯಲ್ಲಿದೆಯೇ?
ಬಿ) ನೀವು ಪಠ್ಯ ಪುಸ್ತಕದ ಭಾಷೆ ಉಪಯೋಗಿಸಿದ್ದೀರಾ?
ಸಿ) ಎಲ್ಲಾ, ಹಲವು ಕೆಲವೊಮ್ಮೆ ಸಾಮಾನ್ಯವಾಗಿ ಮತ್ತು ಯಾವಾಗಲೂ ಎನ್ನುವ ನಿದಿಷ್ಠ ಪದಗಳು ಉಪಯೊಗವಾಗಿಲ್ಲ ತಾನೆ?
ಡಿ) ಹೇಳಿಕೆಗಳು ಪಾರ್ಶ್ವ ಸಿರಿ, ಪಾರ್ಶ್ವ ತಪ್ಪುವಾಗಿದೆಯೇ?
ಎಫ್) ಸುಮಾರು ಸರಿ ಹೇಳಿಕೆಗಳು, ತಪ್ಪು ಹೇಳಿಕೆಗಳು ಸಾಮಾನ ಸಂಖ್ಯೆಯಲ್ಲಿದೆಯೇ?
ಪ್ರತಿ ಪರೀಕ್ಷಾಂಶ ಹೇಳಿಕೆಯೂ ಖಚಿತವಾಗಿ ಸರಿ ಅಥವಾ ತಪ್ಪು, ಆಗಿವೆಯೇ?
ಹೆಚ್) ಎಲ್ಲಾ ಹೇಳಿಕೆಗಳು ಸುಮಾರು ಸಮಾನ ಉದ್ದದಲ್ಲಿವೆಯೇ?
ಐ) ಮಕ್ಕಳಿಗೆ ಖಚಿತ ಮತ್ತು ವಿಶದವಾದ ಸೂಚನೆಗಳನ್ನು ನೀಡಲಾಗಿದೆಯೇ?

"ಸರಿ – ತಪ್ಪು" ಪರೀಕ್ಷಾಂಶಗಳನ್ನು ರಚಿಸುವಾಗ, 'ಎ' 'ಎಫ್' 'ಜಿ' 'ಹೆಚ್' ಮತ್ತು 'ಐ' ಮಾನದಂಡಗಳನ್ನು ಖಚಿತಪಡಿಸಿಕೊಳ್ಳಿರಿ ಮತ್ತು ಬಿ, ಸಿ ಡಿ ಮತ್ತು ಇನಲ್ಲಿನಕರಾತ್ಮಕ ಮಾನದಂಡಗಳನ್ನು ದೂರ ಇರಿಸಿ.

ಡಿ) ಬಹು ಆಯ್ಕೆಯ ಪರೀಕ್ಷಾಂಶಗಳು :

ಕೆಳಗಿನ ಯಾವ ಸಂಖ್ಯೆಗಳು "ವರ್ಗ" ಸಂಖ್ಯೆಗಳು

ಎ) 2

ಬಿ) 4

ಸಿ) 6

ಡಿ) 10

ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುಲ ಪ್ರಯುತ್ನಿಸಿರಿ.

- ಸರಿ – ತಪ್ಪು ಪರೀಕ್ಷಾಂಶಕ್ಕಿಂತ, ಈ ಪರೀಕ್ಷಾಂಶವು, ಯಾವ ಅಂಶಗಳಲ್ಲಿ ಭಿನ್ನವಾಗಿದೆ.
- ಸರಿ ತಪ್ಪು ಪರೀಕ್ಷಾಂಶಕ್ಕಿಂತಲೂ ಪರೀಕ್ಷಿಸಲು,

ನೀವು ಈ ರೀತಿಯ ಪರೀಕ್ಷಾಂಶವನ್ನು, ತರಗತಿಯಲ್ಲಿ ಬಳಸಿದ್ದೀರಾ?

- ಈ ಪರೀಕ್ಷಾಂಶವು, ಬಹು ಆಯ್ಕೆಯುಳ್ಳ ಪರೀಕ್ಷಾಂಶ ಈ ರೀತಿಯ ಪರೀಕ್ಷಾಂಶಗಳನ್ನು ಪಠ್ಯ ಪುಸ್ತಕದಲ್ಲಿ ನೀವು ನೋಡಿರಬಹುದು. ಇವುಗಳಲ್ಲಿ ಒಳಗೊಂಡಿರು ಅಂಶಗಳೆಂದರೆ

– ಇದರಲ್ಲಿ ಪರೀಕ್ಷಾ ಭಾಗ – 1 ಕಾಂಡ ಭಾಗ ಮತ್ತು ಸಂಭಾವ್ಯ ಪರಿಹಾರಗಳ ಪಟ್ಟಿ ಸರಿಯಾದ ಪರ್ಯಾಯವು ಉತ್ತರವಾಗಿದ್ದು, ಉಳಿದ ಪರ್ಯಾಗಳನ್ನು ಗಮನ ತಪ್ಪಿಸುವುವು ಎನ್ನುತ್ತಾರೆ

ಪ್ರಶ್ನೆ ಅಥವಾ ಸಮಸ್ಯೆಯನ್ನು ನೇರ ಪೂರ್ಣ ಅಥವಾ ಅಪೂರ್ಣ ಹೇಳಿಕೆಯಾಗಿ ನೀಡಬಹುದು ಪ್ರತಿಯೊಂದರ

ಉದಾಹರಣೆ ನೋಡೋಣ

| ನೇರ ರೀತಿ | ಪೂರ್ಣ ಹೇಳಿಕೆ ರೀತಿ | ಅಪೂರ್ಣ ಹೇಳಿಕೆ ರೀತಿ |
|---|---|---|
| ಯಾವ ವರ್ಷದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿತು | ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷವನ್ನು ತಿಳಿಸಿರಿ | ಭಾರತಕ್ಕೆ ಸ್ವಾತಂತ್ರ್ಯ ಬಂದ ವರ್ಷ |
| ಎ) 1857<br>ಬಿ) 1919<br>ಸಿ) 1947<br>ಡಿ) 1950 | ಎ) 1857<br>ಬಿ) 1919<br>ಸಿ) 1947<br>ಡಿ) 1950 | ಎ) 1857<br>ಬಿ) 1919<br>ಸಿ) 1947<br>ಡಿ) 1950 |

ಮೇಲಿನದರಲ್ಲಿ 1947 ಎಂಬುದು ಉತ್ತರವಾದರೆ 1857, 1919 ಮತ್ತು 1950ಗಳು ಗಮನ ತಪ್ಪಿಸುವುವು.

ಒಮದು ಸರಿ ಉತ್ತರದ ಬದಲು "ಅತ್ಯುತ್ತಮ ಉತ್ತರ" ರೀತಿಯ, ಬಹು ಆಯ್ಕೆಯ ಪರೀಕ್ಷಾಂಶಗಳನ್ನು ಉಪಯೋಗಿಸಬಹುದು. ಇದನ್ನು ತಿಳಿಯಲು ಕೆಳಗಿನ ಉಪಯುಕ್ತವಾದೀತು.

*ಎ) ಜನಸಂಖ್ಯೆ*

*ಬಿ) ಮಾರುಕಟ್ಟೆ ಸೌಲಭ್ಯ*

*ಸಿ) ಹವಾಮಾನ*

*ಡಿ) ಇರುವ ಸ್ಥಳಾನುಕೂಲ*

ಗಮನಿಸಿ, ಇಲ್ಲಿ ಎಲ್ಲಾ ಪರ್ಯಾಯಗಳು ಸರಿಯಾದುವೆ ಆದರೆ ಲ ಎಂಬುದು ಅತ್ಯುತ್ತಮ ಉತ್ತರವೆಂದು ಕೋರುತ್ತೇವೆ.

ವೃತ್ತಿ ನಿರತ ಶಿಕ್ಷಕರಾಗಿ, ನೀವು ಈ ಬಹು ಆಯ್ಕೆ ರೀತಿಯ ಪರೀಕ್ಷಾಂಶಗಳನ್ನು ರಚಿಸಲು ಕಲಿತಿರಬೇಕು (ಅರಿತಿರಬೇಕು).

ಇಲ್ಲಿ ಕೆಲವು ಸಹಲೆಗಳನ್ನು ಕೊಟ್ಟಿದೆ.

ಎ) ಪ್ರಶ್ನೆಯ ಕಾಂಡ (ಮುಖ್ಯ ಭಾಗ)ವು ಅರ್ಥವತ್ತಾಗಿಯು ನಿಶ್ಚಿತವಾಗಿಯೂ ಪ್ರಸ್ತುತವಾಗಿರಬೇಕು.

ಕೆಳಗಿನ ಕೋಷ್ಟಕದಲ್ಲಿರುವ ಎರಡು ಉದಾಹರಣೆ ಗಳನ್ನು ಹೋಲಿಸಿ ನೊಡಿ.

| ಉದಾ : 1 | ಉದಾ : 2 |
|---|---|
| ದೆಹಲಿ | ಭಾರತದ ರಾಜಧಾನಿ ನಗರ |
| ಎ) ಗಂಗಾನದಿಯ ತಟದಲ್ಲಿದೆ | ಎ) ಮುಂಬಯಿ |
| ಬಿ) ಭಾರತದ ರಾಜಧಾನಿ | ಬಿ) ಚೆನ್ನ |
| ಸಿ) ಪ್ರಖ್ಯಾತ ಕುತುಬ್ ಮಿನಾರ್ ಇದೆ | ಸಿ) ಚಂಡಿಗಢ |
| ಡಿ) ಬಹು ಭಾಷಾ ಸಂಸ್ಕೃತಿ ಇದೆ | ಡಿ) ದೆಹಲಿ |

Notes

ಈ ಉದಾಹರಣೆಗಳಲ್ಲಿ ನೀವು ಏನನ್ನು ಗಮನಿಸುತ್ತೀರಿ? ಇವುಗಳಲ್ಲಿ ಯಾವುದು ಉತ್ತಮ? ಏಕೆ?

ಉದಾಹಣೆ : 1ರಲ್ಲಿ, ಮುಖ್ಯ ಭಾಗವು (ದೆಹಲಿ), ನಮ್ಮ ಉತ್ತರದ ಅವಶ್ಯಕತೆಯನ್ನು ತಿಳಿಸುವುದಿಲ್ಲ. ಆಯ್ಕೆಗಳನ್ನು ನೋಡಿದ ಮೇಲೇ ತಿಳಿಯಬೇಕು ಮುಖ್ಯಭಾಗದಲ್ಲಿ ಸಮಸ್ಯೆಯು ಸ್ಪಷ್ಟವಾಗಿಲ್ಲ.

ಬಿ) ಗಮನ ದೂರಿಕರಿಸುವ ಆಯ್ಕೆಗಳು ಹೊಂದುವಂತಿದ್ದು, ಪರೀಕ್ಷಾಂತರ ಮುಕ್ಯ ಭಾಗದಲ್ಲಿರುವ ಸಮಸ್ಯೆಗೆ, ಯಾವುದೋ ಒಮದು ರೀತಿ ಸಂಬಂಧಿಸಿರ ಬೇಕು.

ಕೆಳಗಿನ ಉದಾಹರಣೆಗಳನ್ನು ಹೋಲಿಸಿ ನೋಡಿರಿ.

| ಉತ್ತಮವಲ್ಲದ ಪರೀಕ್ಷಾಂಶ | ಉತ್ತಮ ಪರೀಕ್ಷಾಂಶ |
|---|---|
| ರೇಡಿಯೋ ಆವಿಷ್ಕರಿಸಿದ ವಿಜ್ಞಾನಿ ಯಾರು? | ರೇಡಿಯೋ ಆವಿಷ್ಕರಿಸಿದ ವಿಜ್ಞಾನಿ ಯಾರು? |
| ಎ) ಮಾರ್ಕೋನಿ<br>ಬಿ) ಡಿಸಾಕ್ ನ್ಯೂಟ್ರ್<br>ಸಿ) ಗ್ರಾಹಮ್ ಬೆಲ್<br>ಡಿ) ಲೂಯಿ ಪಾಶ್ವರ್ | ಎ) ಮಾರ್ಕೋನಿ<br>ಬಿ) ಗ್ರಾಹಮ್ ಬೆಲ್<br>ಸಿ) ಸ್ಯಾಮುಯಲ್ ಮೋಲ್ಸ್<br>ಡಿ) ಎಡಿಸನ್ |

ಎಡಕ್ಕಿರುವ ಪರೀಕ್ಷಾಂಶವು ಕಳಪೆ ಪರೀಕ್ಷಾಂಶ ಏಕೆ? ಗಮನಿಸಿ, ಆಯ್ಕೆಗಳ ಗುಣ ಮಟ್ಟ ಕಳಪೆ, ಏಕೆಂದರೆ ಲೂಯಿ ಪಾಶ್ಚರ್, ಒಬ್ಬ ವೈದ್ಯ ವಿಜ್ಞಾನಿ, ನ್ಯೂಟನ್, ಸಂವಹನಕ್ಕೆ ಸಂಬಂಧಪಟ್ಟವನಲ್ಲ ಹೀಗಾಗಿ ಗಮನ ದೂರಿ ಕರಿಸುವ ಆಯ್ಕೆಗಳಲ್ಲಿ ಎರಡು ಆಯ್ಕೆಗಳು ಕಳಪೆಯಾಗಿವೆ. ಇದರಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಲು ಎರಡೇ ಆಯ್ಕೆಗಳು ಉಳಿದದ್ದರಿಂದ, ಸಂಯುಕ್ತರದ ಆಯ್ಕೆಯ ಸಂಭವ ಹೆಚ್ಚಾಯ್ತು ಸರಿಯುಕ್ತರ ಗೊತ್ತಿಲ್ಲದ, ವಿದ್ಯಾರ್ಥಿಯೂ, ಸರಿಯುತ್ತರವನ್ನು ಊಹೆ ಮಾಡಿ ಅಂಕ ಪಡೆಯ ಬಹುದಾಗಿದೆ. ಆದ್ದರಿಂದ, ಉತ್ತಮ ಬಹುಆಯ್ಕೆಯ ಪರೀಕ್ಷಾಂಶದಲ್ಲಿ, ಪ್ರತಿ ಆಯ್ಕೆಯೂ ಸರಿ ಉತ್ತರದಂತೆ ಮಕ್ಕಳಿಗೆ ತೋರಬೇಕು.

ಸಿ) ಒಮದು ಪರೀಕ್ಷಾಂಶಕ್ಕೆ ಒಂದೇ ಒಂದು ಸರಿ ಉತ್ತರವಿರ ಬೇಕು ಒಂದೇ ಒಂದು ಅತ್ಯುತ್ತಮ ಉತ್ತರವಿರಬೇಕು.

ಡಿ) ಮಕ್ಕಳಿಗೆ ಅಸಂಬದ್ಧ ಸುಳುಹುಗಳನ್ನು ಕೊಡಬೇಡಿರಿ. ಇದರಿಂದ ಉತ್ತರಗೊತಿಲ್ಲದಿದರೂ, ಸರಿಯಾದ ಆಯ್ಕೆ ಮಾಡಲು ಅನುವಾಗುತ್ತದೆ ಸುಳುಹುಳುಗಳಿಂದ ಸರಿಯಾದ ಆಯ್ಕೆ ಗುರ್ತಿಸಲ್ಪಡುತ್ತದೆ. ಕೆಳಗಿನ ಉದಾಹರಣೆ ನೋಡಿರಿ.

| ಕಳಪೆ ಪರೀಕ್ಷಾಂಶ | ಉತ್ತಮ ಪರೀಕ್ಷಾಂಶ |
|---|---|
| *ಬಿಪಿನನು, ಶಾಲೆಯ ಸರಿಯಾದ ಸಮಯ 10 ಗಂಟೆಗೆ ಬದಲಾಗಿ 11 ಗಂಟೆಗೆ ತಲುಪಿದನು* | *ಬಿಪಿನನನು ಶಾಲೆಗೆ, ಸರಿಯಾದ ಸಮಯ 10 ಗಂಟೆಗೆ ಬದ ಲಾಗಿ 11 ಗಂಟೆಗೆ ತಲುಪಿದನು ಅವನು ಎಷ್ಟು ತಡವಾದನು* |
| *ಎ) 30 ನಿಮಿಷ<br>ಬಿ) ಗಂಟೆ<br>ಸಿ) 45 ನಿಮಿಷ<br>ಡಿ) ಎರಡು ಗಂಟೆ* | *ಎ) 30 ನಿಮಿಷ<br>ಬಿ) ಒಂದು ಗಂಟೆ<br>ಸಿ) 45 ನಿಮಿಷಗಳು<br>ಡಿ) ಎರಡು ಗಂಟೆ* |





ಗಮನಿಸಿರಿ, ಎಡಗಡೆ ಇರುವ ಉದಾಹರಣೆಯಲ್ಲಿ, ಪರೀಕ್ಷಾಂಶದ ಮುಖ್ಯ ಭಾಗದಲ್ಲಿ ಒಂದು ಎಂಬ ಸುಳುಹು, ಒಂದು ಗಂಟೆ ಎಂಬ ಉತ್ತರಕ್ಕೆ ನೆರವಾಗುತ್ತದೆ. ಆದರೆ, ಇನ್ನೊಂದು ಉದಾಹರಣೆಯಲ್ಲಿ ಈ ರೀತಿಯ ಸುಳುಹುಇಲ್ಲ.

ಇ) ಗೊತ್ತಿಲ್ಲ ಎಂಬ ಆಯ್ಕೆ ಕೊಡುವುದರಿಂದ, ಮಕ್ಕಳ ಬಗ್ಗೆ, ಭೋದನಾ ಪ್ರಕ್ರಿಯೆಯಲ್ಲಿ, ಅರಿಯಲು ಸಹಾಯಕವಾಗುತ್ತದೆ.

ಎಫ್) ಒಂದಕ್ಕೊಂದು, ಬೆರೆತಿರುವ, ಆಯ್ಕೆಗಳನ್ನು ಕೊಡಬಾರದು ಇದರಿಂದ ಮಕ್ಕಳಿಗೆ ಗೊಂದಲ ವುಂಟಾಗುತ್ತದೆ, ಹಾಗಾಗಿ ಸರಿ ಉತ್ತರ, ಆಯ್ಕೆ ಮಾಡಲು ಗೊಂದಲವಾಗುತ್ತದೆ. ಕೆಳಗಿನಪರೀಕ್ಷಾಂಶಗಳನ್ನು ಪರಿಗಣಿಸಿರಿ.

ಜುಲೈ ತಿಂಗಳಲ್ಲಿ, ಭಾರತದಲ್ಲಿ ಸರಾಸರಿ ಮಳೆ ಪ್ರಮಾಣ
ಎ) 120 ಮಿ.ಮೀ ಗಿಂತ ಕಡಿಮೆ
ಬಿ) 140 ಮೀಗಿಂತ ಕಡಿಮೆ
ಸಿ) 140 ಮಿ.ಮೀ ಮತ್ತು 150 ಮಿ.ಮಿಮಧ್ಯೆ
ಡಿ) 150 ಮಿ.ಮೀ ಗಿಂತ ಹೆಚ್ಚು

ಇಲ್ಲಿ, ಎ) ಸರಿಯಾದರೆ, ಬಿ) ಕೂಡ ಸರಿ ಉತ್ತರ, ಅವೇರಿದೆ ಇ) ಸರಿಯಾದರೆ ಡಿ) ಕೂಡ ಸರಿಯಾಗಿರಬೇಕು ಈ ರೀತಿ ಗೊಂದಲಗಳನ್ನು ಮಾಡದಂತೆ, ಬಹು ಆಯ್ಕೆಯ ಪರೀಕ್ಷಾಂಶವನ್ನು ತಯಾರಿಸಬೇಕು.

---

**ಚಟುವಟಿಕೆ 4 :**

ಪ್ರತಿಯೊಂದು ಪರೀಕ್ಷಾಂಶದಲ್ಲಿ ಅಥವಾ ಆಯ್ಕೆಗಳಿರುವಂತೆ, ಗಣಿತ ವಿಷಯದಲ್ಲಿ ಐದು (5) ಬಹು ಆಯ್ಕೆ ಪರೀಕ್ಷಾಂತಗಳನ್ನು ತಯಾರಿಸಿರಿ.

---

ನಂತರ, ಪ್ರತಿ ಪರೀಕ್ಷಾಂತವನ್ನೂ, ಕೆಳಗಡೆ ಕೊಟ್ಟಿರುವ ಪಟ್ಟಿಯಲ್ಲಿನ ಅಂಶಗಳಿಂದ ಪರಿಶೀಲಿಸಿರಿ ಪರೀಕ್ಷಾಂತರ, ಉತ್ತವವಾದುದೇ, ಅಲ್ಲದೆ ಎಂಬುದು ನೀವು ತಿಳಿಯ ಬಲ್ಲಿರಿ.

*ಪರಿಶೀಲನೆಗಾಗಿ ತನಿಖಾ ಪಟ್ಟಿ*

| | | |
|---|---|---|
| 1. | ಪರೀಕ್ಷಾಂಶವು ವಿಶ್ವದವಾಗಿ ಪ್ರಸ್ತುತವಾಗಿದೆಯೇ? | ಹೌದು/ಇಲ್ಲ |
| 2. | ಮುಖ್ಯ ಸಮಸ್ಯೆ/ಪ್ರಶ್ನೆ, ಕಾಂಡದಲ್ಲಿಯೇ? | ಹೌದು/ಇಲ್ಲ |
| 3. | ಮುಖ್ಯ ಭಾಗವು ಕಾಂಡ ಅಸಂಬದ್ಧ ಅಂಶ ರಹಿತವಾಗಿದೆಯೇ? | ಹೌದು ಇಲ್ಲ |
| 4. | ಆಯ್ಕೆಗಳು, ಮುಖ್ಯ ಭಾಗಕ್ಕೆ ವ್ಯಾಕರಣ ಶುದ್ಧ ವಾಗಿದೆಯೇ | ಹೌದು/ಇಲ್ಲ |
| 5. | ಆಯ್ಕೆಗಳು ಕ್ಲುಪ್ತವಾಗಿದ್ದು, ಅವಶ್ಯಕ ಪದಗಳ ರಹಿತವಾಗಿದೆಯೇ? | ಹೌದು/ಇಲ್ಲ |
| 6. | ಒಂದೇ ಒಂದು ಸರಿ ಉತ್ತರ ಅಥವಾ ಅತ್ಯತ್ತಮ ಉತ್ತರವಿದೆಯೇ? | ಹೌದು/ಇಲ್ಲ |
| 7. | ಪರೀಕ್ಷಾಂಶಗಳು ಉತ್ತರದ ಸುಳುಹು ರಹಿತ ವಾಗಿದೆಯೇ | ಹೌದು/ಇಲ್ಲ |

Notes

8. ಸಂಖ್ಯಾ ಪರ್ಯಾಯಗಳು ಸಂಖ್ಯಾ ಕ್ರಮದಲ್ಲಿವೆಯೇ ಹೌದು/ಇಲ್ಲ

9. ಪರ್ಯಾಯಗಳು ಸಮನಸ್ವಯುವಾಗಿವೆಯೇ? ಹೌದು/ಇಲ್ಲ

ನಿಮ್ಮ ಪರಿಶೀಲನೆಯ ಆಧಾರದ ಮೇಲೆ, ಪರೀಕ್ಷಾಂಶಗಳನ್ನು ಮಾರ್ಪಡಿಸಿ ಸುಧಾರಿಸಬಹುದು.

ಇ) ಹೋಲಿಕೆ ಮಾಡುವುದು (ಹೊಂದಿಸುವುದು) ರೀತಿಯ ಪರೀಕ್ಷಾಂಶಗಳು

---

ಚಟುವಟಿಕೆ 5 :

*ಈ ಕೆಳಗೆ, 2, ಹೊಂದಿಸುವ ರೀತಿಯ ಪರೀಕ್ಷಾಂಶಗಳನ್ನು ಕೊಡಲಾಗಿದೆ ಇವುಗಳಲ್ಲಿ ಉತ್ತಮವಾದ್ದು ಯಾವುದು ಎಂದು ಗುರ್ತಿಸಿರಿ ನಿಮ ಆಯ್ಕೆಯನ್ನು ಕಾರಣ ಸಹಿತ ಬರೆಯಿರಿ.*

*ಹೊಂದಿಸುವ ಅಭ್ಯಾಸ – 1 : "ಎ" ಪಟ್ಟಿಯನ್ನು "ಬಿ" ಪಟ್ಟಿಯೊಂದಿಗೆ ಹೊಂದಿಸಿ*

| *"ಎ" ಪಟ್ಟಿ* | *"ಬಿ" ಪಟ್ಟಿ* |
|---|---|
| *ಬಿಹಾರ* | *ಸೂರ್ಯ ದೇವಾಲಯ* |
| *ತಮಿಳುನಾಡು* | *ಪಾಟ್ನಾ* |
| *ರಾಜಸ್ಥಾನ* | *ಪೊಂಗಲ್ ಹಬ್ಬ* |
| *ಒಡಿಶಾ* | *ಮರಳುಗಾಡು* |

*ಹೊಂದಿಸುವ ಅಭ್ಯಾಸ – 2 :* 'ಎ' ಪಟ್ಟಿಯಲ್ಲಿ ರಾಜ್ಯಗಳ ಹೆಸರುಗಳು ಮತ್ತು 'ಬಿ' ಪಟ್ಟಿಯಲ್ಲಿ ರಾಜಧಾನಿ ಪಟ್ಟಣಗಳ ಹೆಸರುಗಳಿವೆ 'ಎ' ಪಟ್ಟಿಯಲ್ಲಿರುವ ರಾಜ್ಯಗಳನ್ನು 'ಬಿ' ಪಟ್ಟಿಯಲ್ಲಿರುವ ರಾಜಧಾನಿಗಳೊಂದಿಗೆ, ಹೊಂದಿಸಿರಿ.

| *'ಎ' ಪಟ್ಟಿ* | *'ಬಿ' ಪಟ್ಟಿ* |
|---|---|
| *ಬಿಹಾರ* | *ಭುವನೇಶ್ವರ* |
| *ಒಡಿಶಾ* | *ಚೆನ್ನೈ* |
| *ರಾಜಸ್ಥಾನ* | *ಇಟಾನಗರ* |
| *ತಮಿಳುನಾಡ* | *ಜೈಪುರ* |
| | *ಪಾಟ್ನಾ* |
| | *ರಾಯಪುರ* |

---

ಹೊಂದಿಸುವ ರೀತಿಯ ಪರೀಕ್ಷಾಂಶವು, ಮೂಲಭೂತವಾಗಿ 'ಬಹು ಆಯ್ಕೆ' ಪರೀಕ್ಷೆಯಾಗಿದ್ದು, ಮಕ್ಕಳು, ಒಂದು ಪಟ್ಟಿಯ ಒಂದು ಅಂಶವನ್ನು, ಇನ್ನೊಂದು ಪಟ್ಟಿಯಲ್ಲಿನ ಹಲವು ಆಯ್ಕೆಗಳಲ್ಲಿ ಒಂದಕೆಕ ಹೊಂದಿಸುತ್ತಾರೆ. ಈ ರೀತಿಯ ಪರೀಕ್ಷೆಯನ್ನು, ರಚಿಸಲು ಹಾಗೂ ಅಂಕೀಕರಣ ಸುಲಭ. ಕಲಿಕಾ ಫಲವು, ಎರಡು ಅಂಶಗಳ ನಡುವೆ ಸಂಬಂಧವನ್ನು ಗುರ್ತಿಸುವುದಾದಾಗ ಈ ರೀತಿಯ ಪರೀಕ್ಷೆಯು ಬಹಳ ಸೂಕ್ತವಾದದ್ದಾಗಿದೆ.

Notes

ಚಟುವಟಿಕೆಯಲ್ಲಿನ 2ನೇ ಅಭ್ಯಾಸವು ಉತ್ತಮವಾದ್ದಾಗಿದೆ ಏಕೆಂದರೆ, ಕೊಟ್ಟಿರುವ ಸೂಚನೆಗಳು ಖಚಿತವಾಗಿಯೂ, ಪೂರ್ಣವಾಗಿಯೂ ಮತ್ತು ನಿರ್ಧಿಷ್ಟವಾಗಿವೆ ಎರಡೂ ಪಟ್ಟಿಯಲ್ಲಿನ ಅಂಶಗಳು ಸಮನ್ವಯಿತವಾಗಿದ್ದು, ಸಮಾನ ಗುಣಲಕ್ಷಣಗಳನ್ನು ಹೊಂದಿವೆ ಎ ಪಟ್ಟಿಯಲ್ಲಿ ಭಾರತದ 4 ನಾಲ್ಕು ರಾಜ್ಯಗಳ ಹೆಸರಿದ್ದರೆ, ಬಿ ಪಟ್ಟಿಯಲ್ಲಿ ರಾಜಧಾನಿಗಳ ಹೆಸರಿವೆ ಅಭ್ಯಾಸ ಒಂದರಲ್ಲಿ (1) ಎ ಪಟ್ಟಿಯಲ್ಲಿ ಸಮನ್ವಯಿತ ಅಂಶಗಳಿದ್ದರೂ, ಬಿ ಪಟ್ಟಿಯಲ್ಲಿನ ಅಂಶಗಳು ಕಳಪೆಯಾಗಿವೆ.

ಈ ರೀತಿಯ ಹೊಂದಿಸುವ ಅಭ್ಯಾಸಗಳನ್ನು ಯಾವುದೇ ವಿಷಯ ಕ್ಷೇತ್ರದಲ್ಲಾದರೂ, ಉದಾಹರಣೆಗೆ, ಪದಗಳು, ಅವುಗಳ ವಿರುದ್ಧ ಪದಗಳು, ಕ್ರಿಯಾ ಪದಗಳು ಮತ್ತು ಅವುಗಳ ಭೂತಕಾಲದ ರೂಪಗಳು, ಗಣಿತದ ಅಂಶಗಳು ಮತ್ತು ಸೂತ್ರಗಳು, ರಾಷ್ಟ್ರಗಳು ಮತ್ತು ಅಲ್ಲಿನ ಗುಣ ಇತ್ಯಾದಿ, ಹೀಗೆ, ಹೊಂದಿಸುವ ರೀತಿಯ ಅಭ್ಯಾಸವನ್ನು ಒಂದು ಸಮರ್ಥ ಗುಣ ಮಾಪನ ಉಪಕರಣವನ್ನಾಗಿ ಬಳಸಬಹುದು. ಈ ಕೆಳಗಿನ ಅಂಶಗಳು, ಅಭ್ಯಾಸದಲ್ಲಿರಬೇಕು.

- ಸಮನ್ವಿತ ಆಯ್ಕೆಗಳು
- ಆಯಾ ಪಟ್ಟಿಗಳಲ್ಲಿ ಆಯ್ಕೆಗಳು ಮತ್ತು ಅಂಶಗಳನ್ನು ಕ್ರಮದಲ್ಲಿ ಜೋಡಿಸಿರಬೇಕು.
- ಎರಡೂ ಪಟ್ಟಿಗಳಲ್ಲಿನ ಅಂಶಗಳು, ಅಸಮಾನ ಸಂಖ್ಯೆಗಳಲ್ಲಿರಬೇಕು ಇದರಿಮದ ಊಹಿಸುವುದನ್ನು ತಪ್ಪಿಸಬಹುದು.
- ಅಂಶಗಳು, ಆಯ್ಕೆಗಳ ಒಂದೇ ಹಾಳೆಯಲ್ಲದ್ದದ್ದರೆ ಮಕ್ಕಳ, ಕಷ್ಟವಿಲ್ಲದೆ ಉತ್ತರಿಸಬಹುದು.

ಈ ಗುಣಪಟ್ಟಿಗೆ, ನೀವೂ ಕೆಲವು ಅಂಶ ಸೇರಿಸಿ, ಉತ್ತಮ ಗುನ ಮಟ್ಟದ ಹೊಂದಾಣಿಕೆ ಅಂಶಗಳನ್ನು ತಯಾರಿಸಬಹುದು.

### 15.3.4 ಮುಕ್ತಾಂತ್ಯ ಪರೀಕ್ಷಾಂಶಗಳು

ನೀವು ಈಗಾಗಲೇ, ಅನೇಕ ವಿವಿಧ, ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶಗಳು ಮತ್ತು ಅವುಗಳನ್ನು ರಚಿಸುವ ಪ್ರಕ್ರಿಯೆ ಬಗ್ಗೆ ತಿಳಿದ್ದೀರಿ ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶಗಳು, ಖಚಿತ ಮತ್ತು ವಿಶಿಷ್ಟ ಉತ್ತರಗಳನ್ನು ಹೊಂದಿವೆ ಎಂದು ಅರಿತಿರುವಿರಿ. ಮಕ್ಕಳ ಎಲ್ಲಾ ಕಲಿಕಾಂಶಗಳನ್ನು ಉದ್ದೇಶಿತ ಉತ್ತರ ರೂಪದ ಪರೀಕ್ಷೆಯಿಂದ ಅಳೆಯಲು ಸಾಧ್ಯವೇ? ಹಾಗೆಯೇ,ವಿದ್ಯಾರ್ಥಿಯ ಚಿಂತನೆಯ ಹರಹು ಮತ್ತು ಕಾರಣ ಸಕ್ತಿಗಳನ್ನು ಅಳೆಯಲು ಸಾಧ್ಯವೇ?

ಅದು ಅಸಾಧ್ಯವಲ್ಲ ಆದರೂ ಕಷ್ಟಸಾಧ್ಯ ಈಗ, ಈ ಕೆಳಗಿನ ಪರೀಕ್ಷಾಂಶವನ್ನು ಗಮನಿಸಿ.

*ಪರೀಕ್ಷಾಂಶ 1 :* ಒಂದು ವಸ್ತುವಿನ ಕೊಂಡ ಬೆಲೆ ರೂ.500 ಅದನ್ನು ರೂ.600ಕ್ಕೆ ಮಾರಲಾಯಿತು ಲಾಭವನ್ನು ಕಂಡುಹಿಡಿಯಿರಿ.

*ಪರೀಕ್ಷಾಂಶ 2 :* ಒಂದು ವಸ್ತುವನ್ನು ರೂ.100ರ ಲಾಭಕ್ಕೆ ಮಾರಿದರೆ ವಸ್ತುವಿನ ಕೊಂಡ ಬೆಲೆ ಮತ್ತುಮಾರಿದ ಬೆಲೆ ಕಂಡು ಹಿಡಿಯಬಲ್ಲಿರಾ?

ಪರೀಕ್ಷಾ 1ರಲ್ಲಿ, ಖಚಿತವಾದ ಉತ್ತರ ವಿದೇ ಇಲ್ಲಿರೂ 100) ಆದ್ದರಿಂದ ಇದೊಂದು ಉದ್ದೇಶಿತ ಉತ್ತರ ರೀತಿ ಪರೀಕ್ಷಾಂಶ ಆದರೆ ಎರಡನೇಯ ದರ್ಲಲಿ ಖಚಿತ ಉತ್ತರವಿಲ್ಲ ಒಬ್ಬ ವಿದ್ಯಾರ್ಥಿಯು, ಕೊಂಡ ಬೆಲೆ ರೂ.400 ಮತ್ತು ಮಾರಿದ ಬೆಲೆ ರೂ.500 ಎಂದರೆ, ಮತ್ತೊಬ್ಬ ವಿದ್ಯಾರ್ಥಿ ಕೊಂಡ ಬೆಲೆ ರೂ.450, ಮಾರಿದ ಬೆಲೆ ರೂ.550 ಎನ್ನಬಹುದು ಈರೀತಿ ಅನೇಕ ಸರಿ ಉತ್ತರ ಬರಬಹುದು.ಈ ರೀತಿಯ ಪರೀಕ್ಷಾಂಶಗಳನ್ನು ಮುಕ್ತಾಂತ್ಯ ಪರೀಕ್ಷಾಂಶಗಳ್ನೆನುವರು ಕೆಲವು ವೇಳೆ ಸರಿ ಉತ್ತರಗಳ ಸಂಖ್ಯೆಗೆ ಮಿತಿಯೇ ಇಲ್ಲ.

Notes

ಯಾವ ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶಗಳಿಗೆ ಖಚಿತವಾದ, ನಿರ್ದಿಷ್ಟವಾದ ಉತ್ತರವಿದಯೇ ಅವನ್ನು ನಿದಿರ್ಷಂತ್ಯ ಪರೀಕ್ಷಾಂಶವೆನ್ನುವೆವು.ಇವೆರಡೂ ರೀತಿಯ ಪರೀಕ್ಷಾಂಶಗಳ ನಡುವಿನ ವ್ಯತ್ಯಾಸವನ್ನು ಕೆಳಗಿನ ಉದಾಹರಣೆಯಲ್ಲಿ ಗಮನಿಸಬಹುದು.

| ನಿರ್ದಿಷ್ಟಾಂತ್ಯ ರೀತಿ ಪರೀಕ್ಷಾಂಶಗಳು | ಮುಕ್ತಾಂತ್ಯ ರೀತಿ |
|---|---|
| 1. ಖಾಲಿ ಜಾಗ ಭರ್ತಿ ಮಾಡಿರಿ | 1. ಯಾವ ಎರಡು ಸಂಖ್ಯೆಗಳ ಮೊತ್ತ 9 ಆಗುತ್ತದೆಯೇ? |
| 2. ತ್ತಿದ್ದಾನೆ ಪದವನ್ನು ತಿನ್ನು ಪದದ ಕೊನೆಯಲ್ಲಿ ಸೇರಿಸಿ | 2. ತ್ತಿದ್ದಾನೆ ಎನ್ನು ಸೇರಿಸಿ ಪದಗಳನ್ನು ಬರೆಯಿರಿ (ಆಡುತ್ತಿದ್ದಾನೆ), ಬರೆಯುತ್ತಿದ್ದಾನೆ ಇತ್ಯಾದಿ) |
| 3. 5 ಸೆಂ.ಮೀ ಮತ್ತು 9 ಸೆಂ.ಮೀ ಉದ್ದದ ರೇಖಾ ಖಂಡಗಳನ್ನು ಪಾರ್ಶ್ವದಲ್ಲ ಹೊಂದಿ, ಅವುಗಳ ನಡುವಿನ ಕೋನವು ತಿರುವಂತೆ, ತ್ರಿಭುಜವನ್ನು ರಚಿಸಿ | 3. ವಿಷ್ಟು ವಿಧಗಳಲ್ಲಿ, ನೀವು ತ್ರಿಭುಜ ರಚಿಸಬಲ್ಲಿರಿ? |
| 4. ಪಕ್ಕಾ ಮನೆಗಳ ನಿರ್ಮಾಣದಲಿ, ಸಿಮೆಂಟ್ಮತ್ತು ಗಾರೆಯ ಜೊತೆ ಉಪಯೋಗಿಸುವ ಮುಖ್ಯ ಸಾಮಗ್ರಿಯಾವುದು? | 4. ನೀವು ಇಟ್ಟಿಗೆಯನ್ನು ಎಷ್ಟು ವಿಧಗಳಲ್ಲಿ ಉಪ ಯೋಗಿಸಬಹುದು? |
| 5. ಶಾಲೆಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಯಾರು ನಿಯಂತ್ರಿಸುತ್ತಾರೆ? | 5. ನೀವು, ಶಾಲೆಯ ಮುಖ್ಯೋಪಾಧ್ಯರರಾದರೆ, ಶಾಲೆಯ ಪ್ರಗತಿಗೆ ನೀವೇನು ಮಾಡುವಿರಿ. |

ಅಂದರೆ :

- ಉದ್ದೇಶಿತ ಉತ್ತರ ರೀತಿ ಪರೀಕ್ಷೆಯಲ್ಲಿ ಊಹಿಸಲು ಅವಕಾಶವಿದೆ. ಮಕ್ಕಳು, ಕೊಟ್ಟಿರುವ ಆಯ್ಕೆಗಳಿಂದ ಊಹಿಸಬಹುದಾಗಿದೆ. ಒಂದು ವೇಳೆ, ಪರಿಕಲ್ಪನೆ ಜ್ಞಾನಗಳಿಸದಿದ್ದರೂ ಪರೀಕ್ಷಾಂತದ, ಪೂರ್ಣ ಅಂಕವನ್ನು ಪಡೆಯಲು ಅವಕಾಶವಿದೆ ಮಕ್ಕಳು ಪರಿಕಲ್ಪನೆಯನ್ನು ಅರಿತಿಲ್ಲವಾದರೆ ಉತ್ತರಿಸಲಾರರು, ಹೀಗಾಗಿ ಮುಕ್ತಾಂತ್ಯ ಪರೀಕ್ಷಾಂಶಗಳು ಊಹಿಸುವುದನ್ನು ತಡೆಯುತ್ತದೆ.
- ಮುಕ್ತಾಂತ್ಯ ಪರೀಕ್ಷಾಂಶಗಳು, ಸಾಧನೋಪಕರಣವಾಗಿ, ಮಕ್ಕಳು ಸಮಸ್ಯೆಯನ್ನು ಅರಿತಿರಬೇಕು ಎಂದು ಅಪೇಕ್ಷಿಸುತ್ತದೆ. ಇದು ಮಕ್ಕಳ ವಿಕೇಂದ್ರಿತ ಚಿಂತನೆಗೆ ಪ್ರೋತ್ಸಾಹಿಸುತ್ತದೆ (ಒಂದೇ ಸಮಸ್ಯೆಗೆ, ಅನೇಕ ಪರಿಹಾರದ ಹುಡುಕಾಟ) ಮಕ್ಕಳು ಪರಿಹಾರದ ಬಗ್ಗೆ ಬೇರೆ ಬೇರೆ ದೃಷ್ಟಿಕೋನದಿಂದ ಚಿಂತನೆ ಮಾಡಬಹುದು.
- ಹಿಂದೆ, ಪಠ್ಯಭಾಗ–1ರಲ್ಲಿ ಚರ್ಚಿಸಿದಂತೆ, ಕಲಿಕೆಯು ಅರ್ಥೈಸುವ ಕ್ರಿಯೆಯಾಗಿದೆ ಮುಕ್ತಾಂತ್ಯ ಪರೀಕ್ಷಾಂಶಗಳಿಂದ ಮಕ್ಕಳು ಪರಿಕಲ್ಪನೆಯ ಅರ್ಥ ಅರಿಯಬಲ್ಲರೇ ಎಂದು ತಿಳಿಯಬಹುದು ಇದನ್ನು ಅಳೆಯುವುದು, ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶದಿಂದ ಅಳೆಯುವುದು ಕಷ್ಟಕರ ಒಂದು ವೇಳೆ ಮಕ್ಕಳು, ಬಹು ಉತ್ತರಗಳನ್ನು ಕೊಡಬಲ್ಲದಾದರೆ, ಮಕ್ಕಳು ಅರ್ಥೈಸಬಲ್ಲರು ಎಂದರ್ಥ.
- ಮುಕ್ತಾಂತ್ಯ ಪರೀಕ್ಷಾಂಶಗಳು, ಕಂಠಪಾಠದ ಕೆಟ್ಟ ಪರಿಣಾಮವನ್ನು ತೊಲಗಿಸುತ್ತದೆ.
- ಶಾಲೆಯ ಪ್ರಾರಂಭಿಕ ವರ್ಷಗಳಲ್ಲಿ, ಮುಕ್ತಾಂತ್ಯ ಪರೀಕ್ಷಾಂಶಗಳು, ಉತ್ತಮ ಕಲಿಕೆಗೆ ಪ್ರೋತ್ಸಾಹಿಸುವುದಿಲ್ಲದೆ, ಅವಕಾಶಗಳನ್ನು ಕಲ್ಪಿಸುತ್ತವೆ ಕಿರಿಯ ಮಕ್ಕಳು ಉದ್ದೇಶಿತ ಉತ್ತರಗಳ ಪರೀಕ್ಷಾಂಶಗಳಿಗೆ ಸರಿಯಾದ ಉತ್ತರಗಳನ್ನು ಕೊಡದಿರಬಹುದು, ಏಕೆಂದರೆ, ಅವರ ಗಮನವಿರಿಸುವ ಸಯ ಅವಧಿ ಬಹಳ ಕಡಿಮೆ ಅವರು ಧೀರ್ಘಕಾಲ ಗಮನ ಕೇಂದ್ರೀಕರಿಸಲಾರದು ಮುಕ್ತಾಂತ್ಯ ಪರೀಕ್ಷಾಂಶಗಳಲ್ಲಿ ಮಕ್ಕಳೂ ಪ್ರಶ್ನೆ ಮತ್ತು ಅದರ ಬಹು ಉತ್ತರಗಳ ಮೇಲೆ ಗಮನಕೇಂದ್ರ ಕರಿಸುವುದರಿಂದ ಮುಂದಿನ ಕಲಿಕೆಗೆ ಅನುಕೂಲವಾಗುತ್ತದೆ.



Notes

- ಉದ್ದೇಶಿತ ಉತ್ತರ ರೀತಿಯ ಪರೀಕ್ಷಾಂಶಗಳ ಗುಣ ಲಕ್ಷಣವೆಂದರೆ, ಖಚಿತ ಉತ್ತರ. ಒಂದು ಪರೀಕ್ಷಾಂಶದ ಉತ್ತರವನ್ನು ಸರಿಯಾಗಿ ಕೊಡಲಾಗದಿದ್ದರೆ, ಮಕ್ಕಳು ನಿರುತ್ಸಾಹಿತರಾಗುತ್ತಾರೆ ಮತ್ತು ಮುಂದಿನ ಕಲಿಕೆ ಉತ್ಸಾಹರಹಿತವಾಗಿ, ಕಲಿಕೆಯ ಸಾಮರ್ಥ್ಯ ಕಡಿಮೆಯಾಗುವುದು ಹಾಗಲ್ಲದೆ, ಮುಕ್ತಾಂತ್ಯ ಪರೀಕ್ಷಾಂಶಗಳು, ಮಕ್ಕಳಿಗೆ ಯಶಸ್ಸಿನ ರುಚಿ ತೋರಿಸುವುದು ಹೇಗೆಂದರೆ, ಅವರ ಉತ್ತರವೂ ಸರಿಯಾದ ಬಹು ಉತ್ತರಗಳ ಪೈಕಿ ಒಂದಾಗಿರಬಹುದು.

ಇ8. ಈ ಕೆಳಗೆ ಕೆಲವು ಹೇಳಿಕೆಗಳನ್ನು ಕೊಡಲಾಗಿದೆ. ಅವುಗಳನ್ನು ಎಚ್ಚರಿಕೆಯಿಂದ ಓದಿರಿ ಸರಿಯಾದವುಗಳ ಮುಂದೆ ಮತ್ತು ಸರಿಯಿಲ್ಲದವುಗಳ ಮುಂದೆ ಚಿಹ್ನೆ ನಮೂದಿಸಿರಿ.

ಎ) ವಿಸ್ತರಿತ ಉತ್ತರ ರೀತಿಯ ಪರೀಕ್ಷಾಂಶಗಳು ಪ್ರಬಂಧ ರೀತಿಯ ಪರೀಕ್ಷಾಂಶಗಳು
ಬಿ) ಮಕ್ಕಳ ಸೃಜನಶೀಲತೆಯನ್ನು ಅಳೆಯಲು ಉದ್ದೇಶಿತ ಉತ್ತರ ರೀತಿ ಪರೀಕ್ಷಾಂಶಗಳು ಹೆಚ್ಚು ಅಪೇಕ್ಷಣೀಯ
ಸಿ) ಎಂಬುದು ಆಯ್ಕೆ ರೀತಿಯ ಪರೀಕ್ಷಾಂಶ
ಡಿ) ಪ್ರತೆ,ಸರಬರಾಜು ರೀತಿ ಒದಗಿಸುವ ರೀತಿ ಪರೀಕ್ಷಾಂಶವನ್ನು ಆಯ್ಕೆ ರೀತಿಯನ್ನಾಗಿ ಪರಿವರ್ತಿಸಬಹುದು.
ಇ) ಹೊಂದಿಸಿ ಬರೆಯುವ ಪರೀಕ್ಷಾಂಶವು, ಒಂದು ರೀತಿ ಬಹು ಆಯ್ಕೆ ರೀತಿಯ ಪರೀಕ್ಷಾಂಶವಾಗಿದೆ.
ಎಫ್) ಬಹು ಆಯ್ಕೆ ರೀತಿಯ ಪರೀಕ್ಷಾಂಶಗಳಲ್ಲಿ ಸರಿಯಲ್ಲದ ಉತ್ತರಗಳನ್ನು ಕಾಂಡ ಎನ್ನುತ್ತಾರೆ.

## 15.4 ಗುಣಾತ್ಮಕ ಸಾಧನ ಗುಣಮಾಪನ ಉಪಕರಣಗಳ ಮತ್ತು ತಂತ್ರಗಳ ರಚನೆ ಮತ್ತು ಉಪಯೋಗ

*ಸನ್ನಿವೇಶ 1 : ಶ್ರೀ ಸುಮಾರ್‌ರವರು, ಪ್ರಾಥಮಿಕ ತರಗತಿಗಳಲ್ಲಿ ಗಣಿತ ಕಲಿಸುತ್ತಾರೆ ಭೋದಿಸುವ ಸಮಯದಲ್ಲಿ, ಮಕ್ಕಳು ಪ್ರಶ್ನೆಗಳಿಗೆ ಹೇಗೆ ಉತ್ತರಿಸುತ್ತಾರೆ, ಅವರಿಗೆ ಗಣಿತ ಕಲಿಯುವುದರಲ್ಲಿ ನಿಜವಾದ ಆಸಕ್ತಿ ಇದೆಯೇ?ಎಂಬುದನ್ನು ಗಮನಿಸುತ್ತಿದ್ದಾರೆ.ಮಕ್ಕಳು ಗಣಿತದ ಯೋಜನಾ ಕಾರ್ಯಗಳನ್ನು ಕ್ರಿಯಾಕಲಾಪಗಳನ್ನು ಸಮಯಕ್ಕೆ ಸರಿಯಾಗಿ, ಆಸಕ್ತಿಯಿಂದ ಮಾಡುತ್ತಿದ್ದಾರೆಯೇ ಎಂಬುದನ್ನೂ ಗಮನಿಸುತ್ತಿದ್ದಾರೆ.ಜೊತೆ ಜೊತೆಗೆ, ಅವರು, ತಾವು ಕಲಿಸಿದ ಪರಿಕಲ್ಪನೆಗಳನ್ನು ಮಕ್ಕಳು ಅರಿತಿದ್ದಾರೆಯೇ ಎಂದು ಪರೀಕ್ಷಿಸಲು, ಒಂದು ಪರೀಕ್ಷೆ ನೀಡಿದ್ದಾರೆ.*

ನೀವು ತಿಳಿದಿರುವಂತೆ ಕಲಿಕೆಯ ಗುಣಮಾಪನ ಮೌಲ್ಯ ಮಾಪನ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ವಿವರಗಳ ಮೇಲೆ ಆಧಾರಿತವಾಗಿದೆ.ಮಕ್ಕಳ ಪ್ರದರ್ಶನದ ಗುಣಾತ್ಮಕ 1 ಪರಿಮಾಣಾತ್ಮಕ, ಅಂಶಗಳನ್ನು ತಿಳಿಯಲು, ತರಗತಿಯ ಶಿಕ್ಷಕರು, ಅನೇಕ ರೀತಿಯ, ಸಾಧನೋಪಕರಣ ಮತ್ತು ತಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ ಇದನ್ನು ನಾವು ಒಂದು ಸನ್ನಿವೇಶದ ಸಹಾಯದಿಂದ ಚರ್ಚಿಸೋಣ.

ಮೇಲಿನ ಸನ್ನಿವೇಶದಲ್ಲಿ ಶಿಕ್ಷಕರು ಕೇವಲ ಸಾಧಿನಾ ಪರೀಕ್ಷೆ ಮಾತ್ರವಲ್ಲದೆ, ಬೇರೆ ಬೇರೆ ಗುಣಮಾಪನ ತಂತ್ರಗಳಾದ, ಗಮನಿಸುವುದು ಭೋದನಾ ಸಮಯದಲ್ಲಿ ಮಕ್ಕಳ ವೀಕ್ಷಣೆ, ಯೋಜನಾಕಾರ್ಯ, ತರೆ ಕಲಿಕೆಯ ಕ್ರಿಯಾ ಕಲಾಪ, ಪರಿಕಲ್ಪನೆಗೆ ಸಂಬಂಧಿಸಿದ ಕ್ರುಯಾ ಕಲಾಪಗಳ ಸಮೀಕ್ಷೆಗಳನ್ನು, ಉಪಯೋಗಿಸುತ್ತಾರೆ. ಇವೆಲ್ಲವೂ ಅಂದರೆ ಈ ಉಪಕರಣಗಳು, ತಂತ್ರಗಳು, ಗುಣಾತ್ಮಕ ಫಲಿತಾ ಂಶ ನೀಡುತ್ತಿವೆ. ಕೇವಲ ಒಂದು ಪರೀಕ್ಷೆ, ಒಂದು ವಿಧಾನದಿಂದ, ಮಕ್ಕಳ ನಡವಳಿಕೆಯ ಎಲ್ಲಾ ಮಾಹಿತಿ ಗಳನ್ನು ಅರಿಯಲು ಸಾಧ್ಯವಿಲ್ಲ ಎಂಬುದು ಮಿಮಗೂ ತಿಳಿದ ಅಂಶ. ಮಕ್ಕಳ ಪ್ರದರ್ಶನವು, ಶಾಲಾ ಮತ್ತು ಸಹ ಶಾಲಾ ಕ್ಷೇತ್ರದಲ್ಲಿ, ವ್ಯಾಪಕವಾಗಿ, ಉಪಕರಣ ಮತ್ತು ತಂತ್ರಗಳ ಉಪೋಗದಿಂದ, ಗುಣಾತ್ಮಕ ಹಾಗೂ ಪರಿಮಾಣಾತ್ಮಕವಾಗಿ ನಡೆಯುವುದು.

Notes

### 15.4.1 ವೀಕ್ಷಣೆ, ಗಮನಿಸುವುದು

ಶಾಲೆಯಲ್ಲಿ ಭೋದನೆಯ ಸಮಯದಲ್ಲಿ ಮತ್ತು ಶಾಲೆಯ ಇತರ ಚಟುವಟಿಕೆಗಳ ಸಂದರ್ಭಗಳಲ್ಲಿ ನೀವು, ಮಕ್ಕಳ ಅನೇಕ ವಿಚಿತ್ರ ಸ್ವಭಾವಗಳನ್ನು ಕಾಣುವ ಅನುಭವಗಳನ್ನು ಹೊಂದಿರಬಹುದು ಈ ಸ್ವಭಾವಗಳನ್ನು ನೀವು, ಪರೀಕ್ಷೆಗಳಲ್ಲಿ ತಿಳಿಯಲಾರಿರಿ. ಮಕ್ಕಳು ತರಗತಿಯ ಒಳಗೆ ಮತ್ತು ಹೊರಗೆ ವರ್ತಿಸುತ್ತಾರೆ ಎಂಬುದನ್ನು ನೀವು ಕಂಡಿರಬಹುದು ಅವರು ಇತರೆ ಮಕ್ಕಳ ಜೊತೆ ಹೇಗೆ ಸಂವಾದಿಸುತ್ತಾರೆ, ಅವರ ಆಸಕ್ತಿಗಳು, ಇಷ್ಟಗಳು, ಅನಿಷ್ಟಗಳು ಭಾವನೆಗಳು ಮತ್ತು ಇತರೆ ಮಾಹಿತಿಗಳು, ಇವುಗಳಿಂದ ಮಕ್ಕಳ ಪ್ರಗತಿ, ಹಿಂದುಳಿಕೆಯನ್ನು ಅಳೆಯಲು, ಗುಣಮಾಪನದಲ್ಲಿ ಸಹಾಯವಾಗುವುದು.

ವ್ಯವಸ್ಥಿತ ರೀತಿಯಲ್ಲಿ, ಸ್ವಾಭಾವಿಕ ಪರಿಸರದಲ್ಲಿ (ಏರ್ಪಟ್ಟ ಪರಿಸರದಲ್ಲಿ) ಮಕ್ಕಳು ವಿವಿಧ ಶಾಲಾ ಮತ್ತು ಸಹಶಾಲಾ ಚಟುವಟಿಕೆಗಳಲ್ಲಿ ತೋರುವ ಪ್ರದರ್ಶನದ ಬಗ್ಗೆ ಮಾಹಿತಿ ಸಂಗ್ರಹಿಸಲು ಮತ್ತು ಅವರ ಭಾವನಾತ್ಮಕ ನಡವಳಿಕೆಯ ಬಗ್ಗೆ ತಿಳಿಯಲು, ಅವರನ್ನು ಗಮನಿಸುವುದು ಒಂದು ಉಪಯುಕ್ತ ತಂತ್ರವಾಗಿದೆ. ಮಾತನಾಡುವುದು, ಬರೆಯುವುದು, ಹಾಡುಗಾರಿಕೆ, ನೃತ್ಯ, ನಾಟಕ ಸಮಯ ಪಾಲನೆ, ಸೌಹಾರ್ದ ಸಂಬಂಧ, ಹಿರಿಯರಿಗೆ ಗೌರವ ಸಂದಾಯ, ಈ ನಡವಳಿಕೆಯನ್ನು ಪೇಪರ್, ಪೆನ್ನು ಪರೀಕ್ಷೆಯಿಂದ ಅಳೆಯಲಾಗುವುದಿಲ್ಲ. ಈ ಅಂಶಗಳನ್ನು ಕೇವಲ ವೀಕ್ಷಣಾ ತಂತ್ರಗಳಿಂದ ಮಾಪನ ಮಾಡಬಹುದಾಗಿದೆ. ವೀಕ್ಷಣ ತಂತ್ರಗಳೆಂದರೆ ಸಾಧನಗಳೆಂದರೆ, ತನಿಖಾಪಟ್ಟಿ, ಶ್ರೇಯಾಂಕ ಪಟ್ಟಿ, ಸರ್ತ್ಯಘನ ದಾಖಲೆಗಳು, ಶ್ರೀ ಲೇಹಮನ್ (1999) ರ ಪ್ರಕಾರ ವ್ಯಕ್ತಿಯ ನಡವಳಿಕೆಯನ್ನು ವೀಕ್ಷಿಸುವ ಮತ್ತು ದಾಖಲಿಸುವ ಪ್ರಕ್ರಿಯೆಯನ್ನು ವೀಕ್ಷಣಾ ತಂತ್ರ ಎನ್ನಲಾಗುತ್ತದೆ.

ನೀವು ಮಕ್ಕಳನ್ನು ಬಹಳ ಹತ್ತಿರದಿಂದ ನೋಡಲು ಮಕ್ಕಳೊಡನೆ ಅವರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಸಾಧ್ಯವಾಗುತ್ತದೆ. ಮಕ್ಕಳ ಚಟುವಟಿಕೆಗಳಲ್ಲಿ ತೊಡಗಿರುವಾಗ ನೀವು (ಶಿಕ್ಷಕರು) ಅವರನ್ನು ದೂರದಿಂದಲೂ ವೀಕ್ಷಿಸಬಹುದು. ಅಂದರೆ ಮಕ್ಕಳಿಗೆ ತಮ್ಮನ್ನು ನೋಡುತ್ತಿದ್ದಾರೆಂಬ ವಿಷಯ ತಿಳಿದಾಗಲೂ, ಅವರನ್ನು ವೀಕ್ಷಿಸುವುದು ನೇರ ವೀಕ್ಷಣೆಯಾದರೆ, ಅವರಿಗೆ ತಿಳಿಯದೇ ನೋಡುವುದು ಅಪರೋಕ್ಷ ವೀಕ್ಷಣೆಯಾಗುತ್ತದೆ. ವೀಕ್ಷಣೆಯ ಉದ್ದೇಶಪೂರಿತವೂ ಆಗಿರಬಹುದು ಅಥವಾ ಒಂದು ಘಟನೆಯೂ ಆಗಿರಬಹುದು. (ವಿಚಿತ್ರ ನಡವಳಿಕೆಗಳ ವೀಕ್ಷಣೆ) ನೇರ ಅಥವಾ ಪರೋಕ್ಷ ವೀಕ್ಷಣೆಯು ಆಗ್ಗಾಗ್ಗೆ ಮಾಡಿದಾಗ ಮಕ್ಕಳ ಬಗ್ಗೆ ನಿರಂತರ ಮಾಹಿತಿ ದೊರೆಯಲು ಸಹಾಯಕವಾಗಿ ಮಕ್ಕಳ ಕಲಿಕಾ ಪ್ರಕ್ರಿಯೆಯ ಮಾಹಿತಿ ದೊರಕುತ್ತದೆ. ಶಿಕ್ಷಕರು, ತಪ್ಪುಗಳನ್ನು ಅಥವಾ ಸಮಸ್ಯೆಗಳನ್ನು ಸರಿಯಾದ ಸಮಯದಲ್ಲಿ ಅರಿತು ಅವುಗಳ ನಿವಾರಣೆಗೆ ಸೂಕ್ತ ಪರಿಹಾರ ಕ್ರಮಗಳನ್ನು, ಸೂಕ್ತ ಸಮಯದಲ್ಲಿ ತೆಗೆದುಕೊಳ್ಳಲು ಸಹಕಾರಿಯಾಗುವುದು.

ಹೆಚ್ಚು ವೈಜ್ಞಾನಿಕವೂ ಮತ್ತು ಸೂಕ್ತವೂ ಅದ ಸಲಹೆಗಳನ್ನು ಪರಿಣಾಮಕಾರಿ ವೀಕ್ಷಣೆಗಾಗಿ ಈ ಕೆಳಗೆ ಕೊಡಲಾಗಿದೆ.

- ಏನನ್ನು ಗಮನಿಸಬೇಕು, ವೀಕ್ಷಿಸಬೇಕು ಎಂಬುದನ್ನು ಮುಂದಾಗಿಯೇ ಯೋಜಿಸಿ, ವೀಕ್ಷಣಾ ಪಟ್ಟಿಯನ್ನು ತಯಾರಿಸಿ.
- ಒಂದೇ ವೀಕ್ಷಣೆಯಲ್ಲಿ ಅನೇಕ ನಡವಳಿಕೆ, ವರ್ತನೆಗಳನ್ನು ಪರಿಗಣಿಸಬೇಡಿರಿ, ಒಂದೋ ಅಥವಾ ಎರಡು ವರ್ತನೆಯನ್ನು ಗಮನಿಸಿರಿ.
- ವೀಕ್ಷಣಾ ಸಾಧನೋಪಕರಣಗಳಲ್ಲಿ, ಖಚಿತವಾದ ವಿಶದವಾದ ಮತ್ತು ಅಸಮಂಜಸವಲ್ಲದ ಅಂಶಗಳನ್ನು ಉಪಯೋಗಿಸಿರಿ.

- ನಿಮ್ಮ ವೀಕ್ಷಣಾ ವಿವರಗಳನ್ನು, ತಕ್ಷಣವೇ, ಎಚ್ಚರಿಕೆಯಿಂದ ದಾಖಲಿಸಿರಿ, ಇಲ್ಲವಾದರೆ ಮರೆಯುವ ಸಾಧ್ಯತೆ ಇದೆ.
- ವಿಚಿತ್ರ ನಡವಳಿಕೆಯನ್ನು ಕಂಡಾಗ, ಅದನ್ನು ತಕ್ಷಣವೇ ದಾಖಲಿಸಬೇಕು ಹಾಗೂ ಅದನ್ನು ವೀಕ್ಷಣೆಯನ್ನು ಇನ್ನೂ ಹೆಚ್ಚಿನ ವೀಕ್ಷಣೆಗಾಗಿ ಯೋಜನೆಯಲ್ಲಿ ಸೇರಿಸಿ, ಈ ಹಿಂದಿನ ನಡವಳಿಕೆ (ವರ್ತನೆ) ಯು ಆಕಸ್ಮಿಕವೊ ಅಲ್ಲವೊ ಎಂದು ಪರೀಕ್ಷಿಸಬಹುದು.

### 15.4.2 ತನಿಖಾ ಪಟ್ಟಿ

ಮಕ್ಕಳ ವರ್ತನೆಯು ಸನ್ನಿವೇಶಗಳು ಬದಲಾದಂತೆ, ಬದಲಾಗುತ್ತಿರುತ್ತವೆ. ಒಬ್ಬ ವಿದ್ಯಾರ್ಥಿಯ ವರ್ತನೆಗಳ ಶಿಕ್ಷಕರ ವಿಕ್ಷಣಾ ದಾಖಲೆಯು, ಮೌಲ್ಯಮಾಪನ ಪ್ರಕ್ರಿಯೆಯಲ್ಲಿ, ಮಹತ್ವದ ಪಾತ್ರ ವಹಿಸುತ್ತದೆ.

ತನಿಖಾಪಟ್ಟಿಯು, ಮಕ್ಕಳು ನಿರ್ದಿಷ್ಟ ಚಟುವಟಿಕೆಗಳಲ್ಲಿ ತೋರುವ ಪ್ರದರ್ಶನವನ್ನು ದಾಖಲಿಸಲು ಸಹಾಯವಾಗುವ ಒಂದು ಉಪಕರಣವಾಗಿದೆ. ತನಿಖಾ ಪಟ್ಟಿಯಲ್ಲಿ ಮಕ್ಕಳಲ್ಲಿ ಇರುವ ಅಥವಾ ಇರುದಿರುವ ವರ್ತನೆ, ಗುಣಲಕ್ಷಣಗಳು ಅಡಕವಾಗಿರುತ್ತದೆ.

| *ಚಟುವಟಿಕೆಗಳು* | *ಸರಿಯಾಗಿ ಮಾಡಿದ್ದರೆ (ಹೌದು) ಗುರುತು ಮಾಡಿರಿ.* |
|---|---|
| 1. ಬೇಕಾಗಿರುವ ಉಪಕರಣಗಳ ಸಂಗ್ರಹ | __________ |
| 2. ಒಂದು ಬಿಳಿ ಹಾಳೆಯ ಚೂರನ್ನು ತೆಗೆದುಕೊಳ್ಳುವುದು | __________ |
| 3. ಉಪಕರಣಗಳ ಸರಿಯಾದ ಉಪಯೋಗ | __________ |
| 4. ಪೆನ್ಸಿಲ್ಲನ್ನು ಮೊನೆಗೊಳಿಸುವುದು | __________ |
| 5. ರಚನೆಯನ್ನು ಹಂತ ಹಂತವಾಗಿ ಮಾಡುವುದು. | __________ |
| 6. ರೇಖಾ ಕೃತಿಗಳನ್ನು ಹೆಸರಿಸುವುದು | __________ |
| 7. ಇತರೆ (ದಯವಿಟ್ಟು ನಿರ್ದಿಷ್ಟವಾಗಿ ಹೇಳಿರಿ. | __________ |

ಜ್ಯಾಮಿತಿ ರಚನೆಯಲ್ಲಿ ಮಕ್ಕಳ ಪ್ರದರ್ಶನವನ್ನು ದಾಖಲಿಸುವ ತನಿಖಾಪಟ್ಟಿ ಈ ಮೇಲೆ ಕೊಡಲಾಗಿದೆ.

ತನಿಖಾ ಪಟ್ಟಿಯು, ಒಂದು ಘಟನೆಯಲ್ಲಿ (ಕಾರ್ಯದಲ್ಲಿ) ಮಕ್ಕಳ ವರ್ತನೆ, ಗುಣಲಕ್ಷಣಗಳು, ಇವುಗಳನ್ನು ಸೂಕ್ತ ಸ್ಥಳದಲ್ಲಿ (ಸರಿ) ಸಂಕೇತದ (ಅಥವಾ ತಪ್ಪು ಸಂಕೇತ) ಮೂಲಕ ನಮೂದಿಸಲು ಸಾಧ್ಯ ಮಾಡುತ್ತದೆ. ನೀವು ಈ ತನಿಖಾ ಪಟ್ಟಿಯನ್ನು ಮಕ್ಕಳ ಉತ್ತಮ ಕಲಿಕಾಭಿವೃದ್ಧಿಗಾಗಿ ಮಾಡುವ ಯೋಜನೆ ಕಾರ್ಯತಂತ್ರದ ಮಾರ್ಪಾಡುಗಳಿಗೆ ಉಪಯೋಗಿಸಬಹುದು. ಪ್ರತ್ಯೇಕ ತನಿಖಾ ಪಟ್ಟಿಗಳು, ಮಕ್ಕಳಿಗೆ ಯಾವ ಕೌಶಲ್ಯದಲ್ಲಿ ಹೆಚ್ಚಿನ ತರಬೇತಿಬೇಕು. ಮಕ್ಕಳ ವರ್ತನೆಗಳ ಬಗ್ಗೆ, ಶಿಕ್ಷಕರಿಗೆ ತಿಳಿಯಲು ಅನುವಾಗುತ್ತವೆ. ಶಿಕ್ಷಕರು ಈ ರೀತಿಯ ತನಿಖಾ ಪಟ್ಟಿಯನ್ನು ಸಮೂಹ ವರ್ತನೆಯ ವೀಕ್ಷಣೆಗಾಗಿ ಉಪಯೋಗಿಸುತ್ತಿದ್ದರೆ, ಆ ಗುಂಪಿನ ಬಹುಭಾಗ ಮಕ್ಕಳ ವರ್ತನೆಯನ್ನು ಗಮನಿಸಬೇಕು. ಮತ್ತು ಆವರ್ತನೆಗೆ ಹೊರತಾದ ಮಕ್ಕಳ ವರ್ತನೆಯನ್ನು ತನಿಖಾ ಪಟ್ಟಿಯಲ್ಲಿ ಸೇರಿಸಬೇಕು.

*ಚಟುವಟಿಕೆ 5:*

1ನೇ ತರಗತಿ ಮತ್ತು 4ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಸ್ವಚ್ಛತಾ ಅಭ್ಯಾಸವನ್ನು ದಾಖಲಿಸಲು ಪತ್ಯೇಕ ಪಟ್ಟಿಗಳನ್ನು ತಯಾರಿಸಿ, ಪ್ರತಿ ತರಗತಿಯ (1 ಮತ್ತು 4) 10 ವಿದ್ಯಾರ್ಥಿಗಳಿಗೆ ಈ ತನಿಕಾ ಪಟ್ಟಿಯನ್ನು ನಿರ್ವಹಿಸಿರಿ.

Notes

ತನಿಖಾ ಪಟ್ಟಿಯ ನಿಮಗೆ ಅನೇಕ ರೀತಿಯಲ್ಲಿ ಉಪಯುಕ್ತವಾಗಿದೆ. ಮಕ್ಕಳ / ಶಿಕ್ಷಕರ ತರಗತಿಯ ಅವಶ್ಯಕತೆಗೆ ಅನುಗುಣವಾಗಿ ಇವನ್ನು ಅನೇಕ ಉದ್ದೇಶಗಳಿಗಾಗಿ ಆಳವಡಿಸಿಕೊಳ್ಳಬಹುದು. ಇದಲ್ಲದೆ ತನಿಖಾಪಟ್ಟಿಯನ್ನು ಕಲಿಕಾಫಲ ಕಲಿಕಾ ಪ್ರಕ್ರಿಯೆ ಸಮಾಜಿಕ ಅಭಿವೃದ್ಧಿಗಳನ್ನು ಮೌಲ್ಯಮಾಪನ ಮಾಡಲು ಬೆಳವಣಿಗೆಯ ಸಾಕ್ಷ್ಯಾಧಾರಗಳನ್ನು ದಾಖಲಿಸಲು ಉಪಯೋಗಿಸಬಹುದು.
ನಿಖರವಾಗಿ ನಿರ್ವಹಿಸಬಲ್ಲ, ವಿಶಿಷ್ಟವಾದ ನಿರ್ದಿಷ್ಟ ಕ್ರಿಯೆಗಳನ್ನಾಗಿ ವಿಭಜಿಸಬಹುದಾದ ಪ್ರಕ್ರಿಯೆಗಳನ್ನು ಮೌಲ್ಯಮಾಪನ ಮಾಡಲು, ತನಿಖಾಪಟ್ಟಿಯು ಬಹಳ ಉಪಯುಕ್ತ. ತನಿಖಾ ಪಟ್ಟಿಯನ್ನು ತಯಾರಿಸುವುದು ಸುಲಭವಾಗಿದ್ದು ಉಪಯೋಗಿಸಲು ಸರಳ.

### 15.4.3 ಶ್ರೇಯಾಂಕ ಪಟ್ಟಿ

ಕೆಲವೊಮ್ಮೆ ಮಕ್ಕಳ ಪ್ರಗತಿಯ ಬಗ್ಗೆ ಅನೇಕರಿಂದ ಅನೇಕ ರೀತಿಯ ವಿಚಾರಣೆಗಳು ಜಾರುತ್ತಿರುತ್ತವೆ. ನಮ್ಮ ಮಗನು ವಿಜ್ಞಾನ ವಿಷಯದಲ್ಲಿ ಹೇಗೆ ಪ್ರದರ್ಶಿಸುತ್ತಿದ್ದಾನೆ? ಅವನು ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾನೆಯೇ? ಅವನ ಒಟ್ಟಾರೆ ಪ್ರಗತಿ ಹೇಗಿದೆ? ಮುಂದಾದುವು.

ನಿಮ್ಮ ಶಾಲೆಯ ಮುಖ್ಯೋಪಾಧ್ಯಯರೂ ವಿಚಾರಣೆ ಮಾಡಬಹುದು. ನಿಮ್ಮ ತರಗತಿಯ ಸ್ವಚ್ಛತೆಯ ಬಗ್ಗೆ, ನಿಮಗೆ ಸಮಾಧಾನ ವಿದೆಯೆ? ಅಂತರಶಾಲಾ ವಿಜ್ಞಾನ ಪ್ರದರ್ಶನದಲ್ಲಿ ಸುನೀತಾಳ ಪ್ರದರ್ಶಕಗಳು ಸಂದರ್ಶಕರ ಮೆಚ್ಚುಗೆ ಪಡೆಯಿತೆ? ಇತ್ಯಾದಿ ಇತ್ಯಾದಿ.

ಈ ಪ್ರಶ್ನೆಗಳಿಗೆ ವಿಚಾರಣೆಗಳಿಗೆ ನೀವು ಹೇಗೆ ಉತ್ತರಿಸುತ್ತೀರಿ?

ಸಾಮಾನ್ಯವಾಗಿ ನಮ್ಮ ಪ್ರತಿಕ್ರಿಯೆಯು ಪರವಾಗಿಲ್ಲ ಸಮಾಧಾನಕರ ಅತ್ಯುತ್ತಮವಾಗಿತ್ತು. ಉತ್ತಮ ಎಂಬ ಗುಣಾತ್ಮಕವಾಗಿರುತ್ತದೆ. ಅಂದರೆ ನಾವು ನಮ್ಮ ಅನಿಸಿಕೆಯನ್ನು ಮಕ್ಕಳ ಪ್ರದರ್ಶನವನ್ನು ಶ್ರೇಯಾಂಕಿಸುತ್ತಿದ್ದೇವೆ. ಗುಣಾತ್ಮಕವಾಗಿ ಅತ್ಯಂತ ಕಳಪೆ ಸ್ಥರದಿಮದ ಅಥವಾ ಅಸಮಾಧಾನಕರದಿಂದ ಗರಿಷ್ಠ ಸ್ಥರದವರೆಗೆ ಅತ್ಯುತ್ತಮ ಅಥವಾ ಅತಿ ಸಮಾಧಾನಕರದ ವರೆಗೆ.

ಶ್ರೇಯಾಂಕ ಪಟ್ಟಿಯು ಮಕ್ಕಳ ಪ್ರದರ್ಶನವನ್ನು ಹೇಳುವ ಒಂದು ಸಂಖ್ಯಾ ಶ್ರೇಣಿ ಇದರಲ್ಲಿ ಶ್ರೇಯಾಂಕರಿಸುವ ವಸ್ತು ಅಥವಾ ಪ್ರದರ್ಶನಕ್ಕೆ ಒಂದು ಸಂಖ್ಯೆಯನ್ನು ಕೊಡಲಾಗಿದ್ದು ಆ ಸಂಖ್ಯೆಯು ಪ್ರದರ್ಶನಮಟ್ಟ ಅಥವಾ ವಸ್ತುವಿನ ಸ್ಥಿತಿಯನ್ನು ಪ್ರತಿಬಿಂಬಿಸುವುದು ಶ್ರೇಯಾಂಕ ಪಟ್ಟಿಯು ತನಿಖಾ ಪಟ್ಟಿಯ ಮಾದರಿಯಲ್ಲಿಯೇ ಇದ್ದು ಸೂಕ್ಷ್ಮ ವಿವರಣೆ ಬೇಕಾದಾಗ ಉಪಯೋಗಿಸಲ್ಪಡುವುದು. ತನಿಖಾ ಪಟ್ಟಿಯಲ್ಲಿ ನಾವು ಮಕ್ಕಳಲ್ಲಿನ (ಯಾವುದಾದರೂ) ಗುಣ ವಿಶೇಷವನ್ನು ನಮೂದಿಸುತ್ತೇವೆ. ಆದರೆ ಶ್ರೇಯಾಂಕ ಪಟ್ಟಿಯಲ್ಲಿ ವಸ್ತುವಿನ ಗುಣ ವಿಶೇಷ ಸ್ಥರವನ್ನು ಸೂಚಿಸುತ್ತೇವೆ.

*ಉಪಕರಣ – 1 (ಶಾಲಾ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯ ತನಿಖಾಪಟ್ಟಿ*

| ಚಟುವಟಿಕೆಗಳು | ಮಕ್ಕಳು ಸಕ್ರಿಯರಾಗಿದ್ದರೆ (ಹೌದು) ಗುರುತುಹಾಕಿ |
|---|---|
| 1. ತರಗತಿಯಲ್ಲಿನ ಯೋಜನಾ ಕಾರ್ಯದಲ್ಲಿ ವಿದ್ಯಾರ್ಥಿಯು ಸಕ್ರಿಯನಾಗಿದ್ದಾನೆ | ________________ |
| 2. ವಿದ್ಯಾರ್ಥಿಯು ತನ್ನಸಮವಯಸ್ಕರೊಡನೆ ಬೆರೆಯುತ್ತಾನೆ. | ________________ |
| 3. ವಿದ್ಯಾರ್ಥಿಯು ಸಮೂಹ ಸಂವಾದದಲ್ಲಿ ಪಾಲ್ಗೊಳ್ಳುತ್ತಾನೆ. | ________________ |
| 4. ವಿದ್ಯಾರ್ಥಿಯು ಕ್ರೀಡಾಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾನೆ. | ________________ |
| 5. ವಿದ್ಯಾರ್ಥಿಯು ಕೂಟ (ಕ್ಲಬ್) ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದಾನೆ. | ________________ |

*ಉಪಕರಣ – 2 (ಶಾಲಾ ಚಟುವಟಿಕೆಗಳಲ್ಲಿ, ಮಕ್ಕಳ ಪಾಲ್ಗೊಳ್ಳುವಿಕೆಯ ಶ್ರೇಯಾಂಕ ಪಟ್ಟಿ)*

*1. ಅಸಮಾಧಾನಕರ 2. ಸರಾಸರಿಗಿಂತ ಕಡಿಮೆ. 3. ಸರಾಸರಿ 4. ಸರಾಸರಿಗಿಂತ ಉತ್ತಮ*
*5. ಅತ್ಯುತ್ತಮ*

| | | | | | |
|---|---|---|---|---|---|
| 1. ವಿದ್ಯಾರ್ಥಿಯು ತರಗತಿಯ ಯೋಜನಾ ಕಾರ್ಯದಲ್ಲಿ ಸಕ್ರಿಯ | 1 | 2 | 3 | 4 | 5 |
| 2. ವಿದ್ಯಾರ್ಥಿಯು ತನ್ನ ಸಮಯ ವಯಸ್ಕರೊಡನೆ ಬರೆಯುತ್ತಾನೆ | 1 | 2 | 3 | 4 | 5 |
| 3. ವಿದ್ಯಾರ್ಥಿಯ ಸಮೂಹ ಸಂವಾದಲ್ಲಿ ಪಾಲ್ಗೊಳ್ಳುತ್ತಾನೆ | 1 | 2 | 3 | 4 | 5 |
| 4. ವಿದ್ಯಾರ್ಥಿಯು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯನಾಗಿದ್ದಾನೆ | 1 | 2 | 3 | 4 | 5 |
| 5. ವಿದ್ಯಾರ್ಥಿಯ ಕೂಟ (ಕ್ಲಬ್) ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದಾನೆ | 1 | 2 | 3 | 4 | 5 |

ಈ ಮೇಲಿನ ಎರಡು ಉಪಕರಣಗಳ ನಡುವೆ ಯಾವ ವ್ಯತ್ಯಾಸವನ್ನು ಕಾಣುವಿರಿ? ಯಾವ ರೀತಿಯಲ್ಲಿ ಶ್ರೇಯಾಂಕ ಪಟ್ಟಿಯು ತನಿಖಾ ಪಟ್ಟಿಗಿಂತ ಭಿನ್ನವಾಗಿದೆ? ಯಾವುದು ಮಕ್ಕಳ ವರ್ತನೆಯ ಗುಣಾತ್ಮಕ ವಿವರಣೆ ನೀಡುತ್ತದೆ?

ಮೇಲಿನ ಶ್ರೇಯಾಂಕ ಪಟ್ಟಿಯು 5 ಬಿಂದುಗಳದ್ದಾಗಿದೆ. ಮಕ್ಕಳ ವರ್ತನೆಯು ಅತ್ಯುತ್ತಮವಾದರೆ ಅದರ ಶ್ರೇಯಾಂಕ (5) ಸರಾಸರಿಗಿಂತ ಹೆಚ್ಚಾದರೆ (4) ಸರಾಸರಿ (3) ಸರಾಸರಿಗಿಂತ ಕಡಿಮೆ (2) ಅಸಮಾಧಾನಕರವಾದರೆ (1) ಹೀಗೆಯೇ 3 ಬಿಂದುಗಳ ಶ್ರೇಯಾಂಕ ಪಟ್ಟಿಯನ್ನು ತಯಾರಿಸಬಹುದು.
ಗುಣಾತ್ಮಕ ವಿವರಣೆಯನ್ನು ಸೂಕ್ತ ಸಂಖ್ಯೆಯ ಸುತ್ತವೃತ್ತ ಎಳೆದು, ಗುಣದ ಪರಿಮಾಣ ಸೂಚಿಸಬಹುದು. ಇಲ್ಲಿ ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಮಾಪನವಿದೆ.

## 15.4.6 ಪ್ರಶ್ನಾವಳಿ

ಮಕ್ಕಳ ವರ್ತನೆಯ ಅನೇಕ ಗುಣ ವಿಶೇಷಗಳನ್ನು ಗುಣಮಪನ ಮಾಡಲು ಪ್ರಶ್ನಾವಳಿಯ ಒಂದು ಪರಿಣಾಮಕಾರಿ ಉಪಕರಣವಾಗಿದೆ. ಈ ಹಿಂದೆ ಚರ್ಚಿಸಿದಂತೆ, ಸಂದರ್ಶನದಲ್ಲಿ ಬಹಳ ಮಿತಿಗಳಿವೆ. ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಬಹಳ ಸಮಯ ಬೇಕಾಗುವುದು ಅಲ್ಲದೆ ಬಹಳ ಪರಿಶ್ರಮ ಹಾಕಬೇಕು. ಪ್ರಶ್ನಾವಳಿಯ ಒಂದು ಉತ್ತು ಸುಸಾಧ್ಯವಾದ ಪರ್ಯಾಯವಾಗಿದೆ.

Notes

ಇಲ್ಲಿ ಸಮಯ ಮತ್ತು ಶ್ರಮದ ಉಳಿತಾಯವಾಗುವುದು ಪ್ರಶ್ನಾವಳಿಯ ಮೂಲಕ ಏಕಕಾಲದಲ್ಲಿ ಅನೇಕ ಜನರು ಮಾಹಿತಿ ಒದಗಿಸಬಹುದು. ಪ್ರಶ್ನಾವಳಿಯಲ್ಲಿ ಕೆಲವು ವಿಷಯ ಸಮಸ್ಯೆಗಳ ಬಗ್ಗೆ ಲಿಖಿತರೂಪದಲ್ಲಿ ಪರೀಕ್ಷಾಂಶಗಳನ್ನು ಇರಿಸಬಹುದು. ಸಂದರ್ಶನಾರ್ಥಿಗಳು (ವ್ಯಕ್ತಿಗಳು ಪ್ರಶ್ನೆಗಳಿಗೆ ಉತ್ತರ ನೀಡುವರು. ಪ್ರಶ್ನೆಗಳು ಸತ್ಯಾಂಶವನ್ನು ಹೊರತರುವಂತಿರಬೇಕು. ಅಭಿಪ್ರಾಯಗಳನ್ನಲ್ಲ ಪಶ್ನೆಗಳಿಗೆ ಉತ್ತರ ರೂಪದಲ್ಲಿ ಹೊರಬಂದ, ಸತ್ಯಾಂಶಗಳನ್ನು ಪರಿಶೀಲಿಸಬಹುದು ಅಥವಾ ತನಿಖೆ ಮಾಡಬಹುದು. ವಿಶ್ಲೇಷಣೆಯಿಂದ ನಾವು ಸೂಕ್ತ ತೀರ್ಮಾನ ತೆಗೆದುಕೋಳ್ಳಬಹುದು ಉದಾಹರಣೆಗೆ ಮಕ್ಕಳ ಕಲಿಕಾ ಚಟುವಟಿಕೆಗಳಲ್ಲಿ ಮನೆಯಲ್ಲಿನ ಚಟುವಟಿಕೆಗಳು ಪರಿಜನರ ಪ್ರೋತ್ಸಾಹ ನೆರವು ಇವುಗಳನ್ನು ಉತ್ತಮವಾಗಿ ತಯಾರಿಸಿದ ಪ್ರಶ್ನಾವಳಿಯಿಂದ ಕಂಡುಕೊಳ್ಳಬಹುದು.

ಪ್ರಶ್ನಾವಳಿಯು ಸಾಕಷ್ಟು ಪ್ರಮಾಣದ ನಿಖರವಾದ ಪಕ್ಷಪಾತರಹಿತ ಮಾಹಿತಿಯನ್ನು ಒದಗಿಸುವಲ್ಲಿ ಸಹಾಯಕವಾಗಿದೆ. ನಮ್ಮ ಉದದೇಶ ಮತ್ತು ಅವಶ್ಯಕತೆಗೆ ತಕ್ಕಂತೆ ಪ್ರಶ್ನಾವಳಿಯಲ್ಲಿ ಪರೀಕ್ಷಾಂಶಗಳನ್ನು (ಪ್ರಶ್ನೆಗಳು) ತಯಾರಿಸಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗಳೊಡನೆ ನಿರ್ವಹಿಸಬಹುದು. ಪ್ರಶ್ನಾವಳಿಯನ್ನು ಉತ್ತರಿಸುವವರಿಗೆ ಅವರು ಕೊಟ್ಟ ಮಾಹಿತಿಯನ್ನು ಅನಾಮಿಕವಾಗಿರಿಸುವ ಬಗ್ಗೆ ಅರಿವು ಮೂಡಿಸಬೇಕು. ನಂತರ ಕಲೆ ಹಾಕಿದ (ಸಂಗ್ರಹಿಸಿದ) ಮಾಹಿತಿಯನ್ನು ವಿಶ್ಲೇಷಿಸಬೇಕು.

### 15.4.5 ಸಂದರ್ಶನ

ಸಂದರ್ಶನವು ಮುಖಾಮುಖಿ ನೇರವಾಗಿ ವೈಯಕ್ತಿಕ ಸಂವಾದ ಮೂಲಕ ನಿರ್ದಿಷ್ಟ ಉದ್ದೇಶದಿಂದ ಮಾಹಿತಿ ಸಂಗ್ರಹಿಸುವ ಪರಿಣಾಮಕಾರಿ ತಂತ್ರವಾಗಿದೆ. ಮಕ್ಕಳ ಯಾವುದಾದರೂ ನಿರ್ದಿಷ್ಟ ವರ್ತನೆಗೆ ಕಾರಣ ಕಂಡುಕೊಳ್ಳಲು ಅವರೊಡನೆ ನೇರವಾಗಿ ಕೇಳುವುದು ಅತ್ಯುತ್ತಮ ಮಾರ್ಗ, ಶಿಕ್ಷಕರ ಮೇಲೆ ಮಕ್ಕಳು ಹೊಂದಿರುವ ವಿಶ್ವಾಸ, ನಂಬಿಕೆಗಳು ಸರಿಯಾದ ಮಾಹಿತಿ ಪಡೆಯಲು ಸಹಾಯವಾಗುತ್ತವೆ. ಕಾರ್ಯಭಾರದ ಔಚಿತ್ಯಕ್ಕೆ ಅನುರೂಪವಾಗಿ, ಸಂದರ್ಶಕರು ಮುಕ್ತಾಂತ್ಯ ಅಥವಾ ಸಾಂತ್ಯ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಬಹುದು. ಸಂದರ್ಶನದಿಂದ ಸಂಗ್ರಹಿಸಿದ ಮಾಹಿತಿಯನ್ನು ಎಚ್ಚರಿಕೆಯಿಂದ ಲಿಖಿತವಾಗಿ ದಾಖಲಿಸಬೇಕು. ಸಂದರ್ಶನದ ತಯಾರಿಯು ಸಂದರ್ಶಕನು ಮುಖ್ಯ ಅಂಶಗಳ ಮೇಲೆ ಗಮನ ಕೇಂದ್ರೀಕರಿಸಲು ಸಹಕಾರಿಯಾಗುತ್ತದೆ. ಉತ್ತಮವಾಗಿ ವಿನ್ಯಾಸ ಮಾಡಿದ ಪ್ರಶ್ನೆಗಳು ಬರುವ ಉತ್ತರಗಳನ್ನು ತಾತ್ಪರಿಸುವ ಮತ್ತು ವರ್ಗೀಕರಿಸುವ ಕೆಲಸವನ್ನು ಸರಳೀಕರಿಸುವುದು ಮತ್ತು ಉದ್ದೇಶಿತ ವಿಷಯದಿಂದ ಚದುರದಂತೆ ನಿರ್ಬಂಧಿಸುವದು ಆದರೆ ವಿನ್ಯಾಸವಾಗದ ಪ್ರಶ್ನೆಗಳು ಉತ್ತರಿಸುವವರಿಗೆ ಹೆಚ್ಚು ಸ್ವಾತಂತ್ರ್ಯ ಕೊಟ್ಟು ವಿಷಯದ ಪಲ್ಲಟವಾಗಬಹುದು ಸಂದರ್ಶನವು ಮಕ್ಕಳೊಡನೆ ಮತ್ತು ಅನಕ್ಷರಸ್ಥರೊಡನೆ ಪ್ರಶ್ನಿಸಲು ಸಹಕಾರಿಯಾಗಿದೆ. ಸಂದರ್ಶನ ಸಂದರ್ಭದಲ್ಲಿ ಕೆಳಕಂಡ ಮುನ್ನೆಚ್ಚರಿಕೆಗಳನ್ನು ಪರಿಗಣಿಸಬೇಕು.

- ನಿಮ್ಮ ಉದ್ದೇಶ ಪೂರೈಸುವ ರೀತಿಯ ಪ್ರಶ್ನೆ ಕೇಳಿರಿ
- ಉತ್ತರಿಸುವವರಿಗೆ ಉತ್ತರಿಸಲು ಕಾಲಾವಕಾಶ ಕೊಡಿರಿ.
- ಉತ್ತರಿಸುವರಲಲಿ ವಿಶ್ವಾಸ ಹಾಗೂ ನಂಬಿಕೆ ಮೂಡಿಸಿರಿ.
- ಉತ್ತರಿಸುವರೊಡನೆ ಸೌಹಾರ್ದ ಬೆಳೆಸಿಕೊಳ್ಳಿರಿ ಇದರಿಂದ ಸಂದರ್ಶನಕ್ಕೆ ಸ್ಥಿರತೆ ಖಚಿತವಾಗುವುದು.
- ಪ್ರಶ್ನೆಗಳು ಸ್ಪಷ್ಟವಾಗಿರಲಿ

ಸಂದರ್ಶನವು ಉತ್ತರಿಸುವವರ ನಿಲುವಿನ ಸ್ಪಷ್ಟತೆಯನ್ನು ತಿಳಿಯಲು ಅನುಸರಿಸುವ ಒಂದು ಉಪಕರಣ ಆದರೆ ಇದು ದುಬಾರಿ ಮತ್ತು ಬಹಳ ಸಮಯ ಹಿಡಿಯುತ್ತದೆ. ಏಕೆಂದರೆ ಸಂದರ್ಶನವು ಒಬ್ಬ ವ್ಯಕ್ತಿಯೊಡನೆ ಮುಖಾಮುಖಿ ಮಾಡಬೇಕಾಗುವುದು.

Notes

## 15.4.6 ವಿಶೇಷ ಕಾರ್ಯ ಮಾಹಿತಿ (ಪೋರ್ಟ್ ಪೋಲಿಯೋ)

ವಿದ್ಯಾರ್ಥಿ ಕಾರ್ಯ ಮಾಹಿತಿ ಎಂದರೆ, ವಿದ್ಯಾರ್ಥಿಯ ಕಾರ್ಯದ ಉದ್ದೇಶಿತ ಆಯ್ದ ಸಂಗ್ರಹ, ಅದರಲ್ಲಿ ವಿದ್ಯಾರ್ಥಿಯ ಕಾರ್ಯ ಮಾತ್ರವಲ್ಲದೆ, ವಿದ್ಯಾರ್ಥಿಯ ಅತ್ಯುತ್ತಮ ಕಾರ್ಯದ ಮಾಹಿತಿಯೂ ಲಭ್ಯ. ವಿಶೇಷ ಕಾರ್ಯ ಮಾಹಿತಿ ಸಂಗ್ರಹವು ವಿದ್ಯಾರ್ಥಿಗಳ ಗುಣಮಾಪನದ ಒಂದು ಪರಿಣಾಮಕಾರಿ ಉಪಕರಣ. ಈ ವಿಶೇಷ ಕಾರ್ಯ ಮಾಹಿತಿ ಸಂಗ್ರಹವು ಮಕ್ಕಳಲ್ಲಿ ಸವ – ಮೌಲ್ಯಮಾಪನ ಕೌಶಲ್ಯಭಿವೃದ್ಧಿಗೆ ಪರಿಣಾಮಕಾರಿ ಪರಿಕರವಾಗಿದ್ದು, ಸ್ವತಂತ್ರ ಚಿಂತನೆಗೆ ಎಡೆಮಾಡಿಕೊಡುವುದು. ಮಕ್ಕಳು ಸೃಷ್ಟಿಸಿದ ಸಂಗ್ರಹಿಸಿದ ಅತಿ ವಿಶಿಷ್ಟವಾದ ಕಾರ್ಯಗಳನ್ನು ಮಾಹಿತಿಯನ್ನು ಇಲ್ಲಿ ಸಂಗ್ರವಾಗಿರಿಸಲಾಗುವುದು. ಮಕ್ಕಳು, ಇಲ್ಲಿರುವ ಕಾರ್ಯ ಮಾಹಿತಿಯಲ್ಲಿರುವ ಪ್ರತಿ ದಾಖಲೆಯ ಬಗ್ಗೆ ಸ್ವ ಮೌಲ್ಯ ಮಾಪನ ಮಾಡಿಕೊಂಡು ಚಿಂತನಶೀಲರಾಗಲು, ಅನುವಾಗುತ್ತದೆ ಎಲ್ಲಾ ಮಕ್ಕಳ ಕಾರ್ಯ ಮಾಹಿತಿ ಸಂಗ್ರಹವನ್ನು ಆಗ್ಗಾಗ್ಗೆ ಎಲ್ಲರ ಮುಂದೆ ಪ್ರದರ್ಶಿಸಿದಾಗ ಮಕ್ಕಳು ತಾವೇನು ಮಾಡಬಲ್ಲರು ಸಾಧಿಸಬಲ್ಲರು ಎಂಬುದನ್ನು ತಿಳಿದುಕೊಳ್ಳುವ ಅವಕಾಶ ದೊರಯಿತು. ಮುಂದುವರೆಯುವ ಕಲಿಯುವ ಉತ್ಸಾಹ ಮೂಡುತ್ತದೆ. ಈ ರೀತಿಯ ಪ್ರದರ್ಶನವು ಪೋಷಕರು ಶಾಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶ ಮಾಡಿಕೊಡುತ್ತದೆ. ಮತ್ತು ಮಕ್ಕಳ ಶಕ್ತಿ ಸಾಮರ್ಥ್ಯ ಅವರ ವ್ಯಕ್ತಿತ್ವದ ಧನಾತ್ಮಕ ಅಂಶಗಳನ್ನು ಎತ್ತಿ ತೋರುತ್ತದೆ. ವಿಶೇಷ ಕಾರ್ಯ ಮಾಹಿತಿ ಸಂಗ್ರಹದ ಬಲವನ್ನು ಈ ಕೆಳಗೆ ಕೊಡಲಾಗಿದ :

*ವಿಶೇಷ ಕಾರ್ಯ ಮಾಹಿತಿ ಸಂಗ್ರಹದ ಬಲ*

- *ಮಕ್ಕಳು, ತಾವು ಮಾಡಿರುವ ಕಾರ್ಯದ ಬಲ ಮತ್ತು ನಿರ್ಬಲತೆ ಯ ಮೌಲ್ಯಮಾಪನವನ್ನು ಸ್ವತಃ ಮಾಡಿಕೊಳ್ಳುವ ಕೌಶಲ್ಯ ಬೆಳೆಸಿಕೊಳ್ಳುತ್ತಾರೆ.*
- *ಮಕ್ಕಳು ತಮ್ಮ ಗುರಿಯನ್ನು ನಿಗಧಿಪಡಿಸಿಕೊಂಡು ಆ ದಿಶೆಯಲ್ಲಿ ತಮ್ಮ ಪ್ರಗತಿಯ ಮೌಲ್ಯ ಮಾಪನವನ್ನು ಮಾಡಿಕೊಳ್ಳುವ ಜವಾಬ್ದಾರಿ ವಹಿಸಲು ಸಹಕಾರಿಯಾಗಿದೆ.*
- *ಮಕ್ಕಳ ಪ್ರಗತಿಯ ಬಗ್ಗೆ ಚಿಂತನೆ ನಡೆಸುವ ಒಡಗೂಡುವ ಅವಕಾಶ ಕಲ್ಪಿಸುತ್ತದೆ.*
- *ಮಕ್ಕಳ ಬೆಳವಣಿಗೆಯ ಸ್ಥೂಲ ಉದಾಹರಣೆಗಳನ್ನು ಕೊಡುವುದಲ್ಲದೆ, ಅವರ ಪ್ರಸ್ತುತ ಕೌಶಲ್ಯಗಳನ್ನು ತಿಳಿಸುತ್ತದೆ.*
- *ಪೋಷಕರು ತಮ್ಮ ಮಕ್ಕಳ ಪ್ರಗತಿ ಪ್ರದರ್ಶನ ಕಂಡು ಅವರ ಗುಣಮಾಪನ ಮಾಡುವ ಅವಕಾಶ ಕಲ್ಪಿಸುತ್ತದೆ.*

ಶಿಕ್ಷಕರು, ವಿಶೇಷ ಕಾರ್ಯ ಮಾಹಿತಿ ಸಂಗ್ರಹವನ್ನು ಕಲಿಕೆ ಮತ್ತು ಮೌಲ್ಯ ಮಾಪನ ಉದ್ದೇಶದಿಂದ ಬಳಸುವಾಗ, ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಿ ಸಂಗ್ರಹದ ಯಾವ ಭಾಗವನ್ನು ಆಯ್ದುಕೊಂಡಿದೆ ಎಂಬುದಕ್ಕೆ ಮಾರ್ಗ ಸೂಚಿ ನೀಡಬೇಕು ಈ ವಿಷಯದಲ್ಲಿ ಆಯ್ಕೆಯಲ್ಲಿ ಮಕ್ಕಳ ಪಾತ್ರ ಮತ್ತು ಸ್ವಯಂ ಮೌಲ್ಯಮಾಪನ ಮೌಲ್ಯಮಾಪನದ ಮಾನದಂಡಗಳು ಭೋದನೆ ಸಂವಹನೆಯಲ್ಲಿ ಸಂಗ್ರಹದ ಬಳಕೆ ಇತ್ಯಾದಿಗಳ ಬಗ್ಗೆ ನಿರ್ವಹಿಸಬೇಕು.

ವಿಶೇಷ ಮಾಹಿತಿ ಸಂಗ್ರಹಗಳನ್ನು ವಿಶೇಷವಾಗಿ ರೂಪತ್ವ (ರೂಪುಗೊಳ್ಳುವ) ಮೌಲ್ಯಮಾಪನಕ್ಕಾಗಿ ಪರಿಣಾಮಕಾರಿಯಾಗಿ ಬಳಸಬಹುದು. ಉದಾಹರಣೆಗೆ ಮಕ್ಕಳ ಕಾರ್ಯ ಮಾಹಿತಿ ಸಂಗ್ರಹ ದಿಂದ ಮಕ್ಕಳ ಸೃಜನಾತ್ಮಕ ಬರಹಗಳ ಸಂಗ್ರಹದಿಂದ ವ್ಯಾಕರಣದಲ್ಲಿ ವಿಷಯ ಪ್ರಸ್ತುತಿಯಲ್ಲಿ ಮಕ್ಕಳ ಪ್ರಗತಿಯನ್ನು ಗುಣಮಾಪನ ಮಾಡಬಹುದು. ಈ ಸಂಗ್ರಹವು ಕೆಲವು ಕಾಲ ಪರ್ಯಂತ ಸಂಗ್ರಹಿಸಿದವು (6 ತಿಂಗಳು / 1 ವರ್ಷ) ಮಕ್ಕಳೂ ಸಹ ಶಿಕ್ಷಕರ ಜೊತೆ ಮೌಲ್ಯಮಾಪನ ಮಾಪನ ದಂಡನಗಳನ್ನು ಅನುಸರಿಸಿ ಮೌಲ್ಯಮಾಪನ ಮಾಡಿಕೊಳ್ಳಬಹುದು. ಹೀಗಾಗಿ ಕಾರ್ಯ ಮಾಹಿತಿ ಸಂಗ್ರಹವನ್ನು ತರಗತಿಯಲ್ಲಿನ ಬೋಧನೆಯ ಕಾರ್ಯದ ಜೊತೆ ಒಗ್ಗೂಡಿಸಬಹುದು ಎಂದು ತೀರ್ಮಾನಿಸಬಹುದು. ಅದೂ ಅಲ್ಲದೆ ಮಕ್ಕಳ ಸ್ವ ಮೌಲ್ಯ ಮಾಡಿಕೊಳ್ಳುವ ಕೌಶಲ್ಯ ಬೆಳೆಸಿಕೊಳ್ಳುವುದಲ್ಲದೆ ತಮ್ಮ ಕಲಿಕೆಯ ಜವಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ.

Notes

*ಚಟುವಟಿಕೆ 6:*

*ನೀವು ಬೋಧಿಸುತ್ತಿರುವ ತರಗತಿಯಲ್ಲಿ ವಿಜ್ಞಾನ ಪ್ರಯೋಗದಲ್ಲಿನ ಮಕ್ಕಳ ಪ್ರಗತಿಯ ಗುಣ ಮಾಪನಕ್ಕಾಗಿ ಕಾರ್ಯ ಮಾಹಿತಿ ಸಂಗ್ರಹವನ್ನು ರೂಪಿಸಿರಿ.*

## 15.4.7 ಯೋಜನಾಕಾರ್ಯ

ಯೋಜನಾ ಕಾರ್ಯವು, ಪುಸ್ತಕದಲ್ಲಿನ ಜ್ಞಾನ ಮತ್ತು ಮಕ್ಕಳ ಹೊರಗಿನ ಜೀವನದ ನಡುವೆ ಕೊಂಡಿ ಏರ್ಪಡಿಸುವಲ್ಲಿ ಬಹಳ ಪ್ರಯೋಜಕವಾಗಿವೆ. ಬಲ್ಲಾಡ್ ರವರ ಪ್ರಕಾರ ಯೋಜನಾಕಾರ್ಯವಾಗಿವೆ. ಬಲ್ಲಾರ್ಡ್ ರವರ ಪ್ರಕಾರ ಯೋಜನಾಕಾರ್ಯವೆಂದರೆ ನಿಜ ಜೀವನದ ಒಂದು ತುಣಕನ್ನು ಶಾಲೆಗೆ ತಂದತೆ ಶಾಲಾ ವಿಷಯಗಳಲ್ಲಿನ ಯೊಜನಾ ಕಾರ್ಯವು ಅನೇಕ ಉಚ್ಚ ಕೌಶಲ್ಯಗಳಾದ ರಚನಾತ್ಮಕ ಸೃಜನಾತ್ಮಕ ಚಿಂತನಾ ಕೌಶಲ್ಯಗಳನ್ನು ಗಳಿಸಲು ದಾರಿ ಮಾಡಿಕೊಡುತ್ತವೆ. ಯೋಜನಾ ಕಾರ್ಯದಲ್ಲಿ ಮಕ್ಕಳಿಗೆ ಒಂದು ಸಮಸ್ಯೆಯನ್ನು ಕೊಡಲಾಗುತ್ತದೆ ಅವರು ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು. ಯೋಜನಾ ಕಾರ್ಯವನ್ನು ಮಕ್ಕಳು ವೈಯಕ್ತಿಕವಾಗಿಯೂ ಸಮೂಹ (ಗುಂಪು) ದಲ್ಲಿ ತೆಗೆದುಕೊಳ್ಳಬಹದು ಉದಹಾರಣೆಗಾಗಿ ಒಂದು ಯೋಜನಾ ಕಾರ್ಯ ಈ ಕೆಳಗೆ ನೀಡಲಾಗಿದೆ.

ಪಕ್ಷಿ ಸಂಕುಲ ಸಂಖ್ಯೆಯಲ್ಲಿ ಋತು ಬದಲಾವಣೆ – ಅವು ಎಲ್ಲಿ ಕಾಣಸಿಗುತ್ತವೆ. ಹೇಗೆ ಹಾರುತ್ತವೆ (ನೇರವಾಗಿ ತೇಲುತ್ತಾ, ಏರಿಳಿಯುತ್ತಾ) ಅವುಗಳ ದೇಹ ರಚನೆ ಗಾತ್ರ ರೂಪ ರಂಗು, ಅಂಗಾಂಗಳು ಇತ್ಯಾದಿ – ನಡಿಗೆ ಓಟ ಆಹಾರ ಮತುತ ಆಹಾರ ಪದ್ಧತಿ ಗೂಡು, ಮೊಟ್ಟ (ತತ್ತಿ) (ಸಂಖ್ಯೆ, ಗಾತ್ರ ಬಣ್ಣ) ಇತ್ಯಾದಿ.

ಇದೇ ರೀತಿಯಲ್ಲಿ ಶಾಲಾ ಆವರಣದ ಸೌಂದರ್ಯ ವರ್ಧನೆ, ನೆರೆಹೊರೆಯಲ್ಲಿನ ಸಸ್ಯಗಳು ಸ್ಥಳೀಯ ಕೈಗಾರಿಕೆಗಳ ಸರ್ವೇಕ್ಷಣೆ ಇತ್ಯಾದಿಗಳನ್ನು ಮಕ್ಕಳು ಕೈಗೊಳ್ಳಬಹದು. ಯೋಜನಾ ಕಾರ್ಯದಲ್ಲಿ ಆಯ್ಕೆ ಮಾಡಿಕೊಳ್ಳುವ ಯೋಜಿಸುವ ಕಾರ್ಯಾನ್ವಿತಗೊಳಿಸುವ ಮೌಲ್ಯಮಾಪನ ಮಾಡುವ ಮತ್ತು ದಾಖಲಿಸುವ ಚಟುವಟಿಕೆಗಲು ಒಳಗೊಂಡಿರುತ್ತವೆ.

ಯೋಜನಾ ಕಾರ್ಯವು ಶಾಲಾ ವಿಷಯ ಮತ್ತು ಸಹ ಶಾಲಾ ಕ್ಷೇತ್ರಗಳಲ್ಲಿ ಮಕ್ಕಳ ವರ್ತನೆಗಳ ಮೌಲ್ಯಮಾಪನ ಮಾಡಲು, ಒಂದು ಪರಿಣಾಮಕಾರಿ ತಂತ್ರವಾಗಿದೆ. ಇದು ಮಕ್ಕಳು ತಾವು ಕಲಿಕ ಜ್ಞಾನವನ್ನು ಬೇರೆ ಸನ್ನಿವೇಶದಲ್ಲಿ ಅನ್ವಯಿಸುವ ಸಾಮರ್ಥ್ಯವನ್ನು ಶಿಕ್ಷಕರು ತಿಳಿಯಲು ನೆರವಾಗುತ್ತದೆ. ಇದರ ಜೊತೆಗೆ ಮಕ್ಕಳಲ್ಲಿನ ದಾಖಲಿಸುವ ಕೌಶಲ್ಯ ಮಾಹಿತಿ ವಿಶ್ಲೇಷಣೆ ಯೋಜನೆಯ ದಸ್ತಾವೇಜು ತಯಾರಿಸುವ ಕೌಶಲ್ಯಗಳನ್ನು ಶಿಕ್ಷಕರು ತಿಳಿಯಲು ಅನುಕೂಲವಾಗುತ್ತದೆ.

*ಚಟುವಟಿಕೆ –7*

*ನೀವು ಭೋದಿಸುತ್ತಿರುವ ತರಗತಿಯ ಮಕ್ಕಳು ಕೈಗೊಳ್ಳಬಹುದಾದ ಸೂಕ್ತವಾದ 10 ಯೋಜನಾ ಕಾರ್ಯಗಳ ಪಟ್ಟಿ ಮಾಡಿರಿ.*

## 15.4.8 ವ್ಯಕ್ತಿ ವಿಶೇಷ ಅಧ್ಯಯನ (ಕೇಸ್ ಸ್ಟಡಿ)

ಈ ರೀತಿಯ ಅಧ್ಯಯನದಲ್ಲಿ ಒಬ್ಬ ವ್ಯಕ್ತಿಯ ಒಂದು ಪರಿವಾರ, ಒಂದು ಶಾಲೆ ಕುರಿತು ಗಹನವಾಗಿ ತನಿಖಾದ್ಯಯನ ಮಾಡಲಾಗುವುದು. ಶಿಕ್ಷಣದಲ್ಲಿ ಈ ವಿಶೇಷ ಅಧ್ಯಯನವನ್ನು ಮಕ್ಕಳ ಹಿನ್ನಲೆ, ಪರಿಸರ, ಮತ್ತು ಗುಣಲಕ್ಷಣಗಳನ್ನು ತಿಳಿಯಲು ತಿರ್ಮಾನಿಸಲು ನಡೆಸಲಾಗುತ್ತದೆ. ಮಕ್ಕಳ ಈಗಿನ ಸ್ಥಿತಿಗತಿ ಹಿಂದಿನ ಅನುಭವಗಳು ಸಂಬಂಧಿತ ಘಟನೆಗಳ ಬಗ್ಗೆ ತಕ್ಕುದಾದ ಮಾಹಿತಿ ಸಂಗ್ರಹದಿಂದ ಅವರ (ಮಕ್ಕಳ) ಇಂದಿನ ವರ್ತನೆ ಶಾಲೆಯಲ್ಲಿ ಅವರ ನಡವಳಿಕೆ ಪ್ರದರ್ಶನದ ಬಗ್ಗೆ ಹೆಚ್ಚಿನ ಅವಗಾಹನೆ ಮಾಡಿಕೊಳ್ಳಲು ಸಾಧ್ಯ. ಮಕ್ಕಳು ಖಿನ್ನರೂ ಮಂದಮತಿಗಳೂ ಕಲಿಕೆಯಲ್ಲಿ ಹಿಂದುಳಿದಿರುವವರೂ ವ್ಯಗ್ರರೂ, ದುಷ್ಟರೂ ಆಗಿರಬಹುದು. ಸಂಗ್ರಹಿಸಿದ ಮಾಹಿತಿಯ ಗುಣಾತ್ಮಕ ವಿಶ್ಲೇಷಣೆಯಿಂದ ವ್ಯಾಪಕವಾದ ಒಗ್ಗೂಡಿಸಿದ ಚಿತ್ರಣ ಪಡೆಯುಬಹುದು. ಈ ರೀತಿಯ ವ್ಯಕ್ತಿ ವಿಶೇಷ ಅಧ್ಯಯನದಲ್ಲಿ ತನಿಖಾಕಾರನ್ನು (ಶಿಕ್ಷಕರು) ಆ ವ್ಯಕ್ತಿಯಿಂದ ದತ್ತಾಂಶವನ್ನು ಸಂಗ್ರಹಿಸಿ ಕೇವಲ ಆ ವ್ಯಕ್ತಿಗೆ ವಿಶಿಷ್ಟವಾಗಿ ಸೀಮತಿಗೊಳಿಸಿಕೊಂಡು ಅಥವಾ ಒಂದು ಸಣ್ಣ ಗುಂಪಿನ ಸಂಬಂಧಿತ ವ್ಯಕ್ತಿಗಳಿಂದ ಮಾಹಿತಿ ಪಡೆದು, ಗಹನ ಅಧ್ಯಯನಕ್ಕೆ ತೊಡಗುತ್ತಾನೆ.

ವ್ಯಕ್ತಿ ವಿಶೇಷ ಅಧ್ಯಯನವು ಲಂಬಿತ (ವ್ಯಕ್ತಿಯ ಬಗ್ಗೆ ಮಾಹಿತಿಯನ್ನು ದೀರ್ಘಕಾಲಾವಧಿಯವರೆಗೂ ಸಂಗ್ರಹಿಸುತ್ತಿರುವುದು) ಅಥವಾ ಸಮಾಂತರಅಥವಾ ಪ್ರತಿನಿಧಿತ್ವ (ಇತ್ತೀಚಿನಅವಧಿಯ ಮಾಹಿತಿಯನ್ನು (ವ್ಯಕ್ತಿಯ ಬಗ್ಗೆ) ಎಲ್ಲಾ ಸಂಭಾವ್ಯ ಮೂಲಗಳಿಂದ ಸಂಗ್ರಹಿಸುವುದು) ಆಗಿರಬಹುದು.

ಹೇಗಾದರೂ, ಮಾಹಿತಿ ಸಂಗ್ರಹಣೆ, ವಿಶ್ಲೇಷಣೆತಂತ್ರವು ವಸ್ತುನಿಷ್ಠವಾಗಿರದೆ, ವ್ಯಕ್ತಿ ನಿಷ್ಠವಾಗಿರುವ ಭಯ, ಯಾವಾಗಲೂಇದೆ.ತನಿಖಾಕಾರನು, ಈ ವ್ಯಕ್ತಿ ವಿಶೇಷ ಅಧ್ಯಯನದಲ್ಲಿತನಿಖಾಕಾರನು, ಇದಕ್ಕೆಬೇಕಾದ ಕೌಶಲ್ಯಗಳನ್ನು ಹೊಂದಿರಬೇಕು.
ಈ ವ್ಯಕ್ತಿ ವಿಶೇಷ ಅಧ್ಯಯನದಲ್ಲಿಅನುಸರಿಸಬೇಕಾದ ಹಂತಗಳು.

- ಮಕ್ಕಳ ವರ್ತಮಾನ ಸ್ಥಿತಿ ಅರಿಯಲು ನೀವು, ನೇರ ವೀಕ್ಷಣೆ (ಗಮನಿಸುವುದು) ಯಾವುದಾದರೂ ಪರೀಕ್ಷೆ, ಪೋಷಕರೊಡನೆ, ಮಕ್ಕಲ ಸಹ ಪಾಠಿಗಳು, ಸಮವಯಸ್ಕರೊಡನೆ ಸಮಾಲೋಚಿಸಿ, ಮಾಹಿತಿ ಸಂಗ್ರಹಿಸಬಹುದು.
- ಹಿಂದೆ ನಡೆದಿರಬಹುದಾದ ಪರಿಸರ, ಘಟನೆಗಳಿಂದ, ಪಡೆದ ಮಾಹಿತಿಯುಕ್ರಿಯಾಯುಕ್ತ ಊಹಾ ಸಿದ್ಧಾಂತ ರೂಪಿಸಲು ಸಹಾಯಕವಾಗುವುದು.
- ಹಿಂದಿನ ಪರಿಸರ, ಘಟನೆಗಳ ಪರಿಶೀಲನೆ
- ಕಾರಣಗಳ ತನಿಖೆಕಾರ್ಯ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಪರಿಹಾರಕಾರ್ಯದಯೋಜನೆ
- ಅಧ್ಯಯನದ ಹಿಂಬಾಲಿಕೆಕಾರ್ಯ
- ಪರಿಣಾಮಕಾರಿತಂತ್ರದಂತೆ, ವ್ಯಕ್ತಿಯ ಸಮಸ್ಯೆಯನ್ನು ಸರಿಯಾಗಿ ಗುರ್ತಿಸಿ, ಸಾಮಯಿಕ ಪರಿಹಾರಕ್ಕೆಯೋಜಿಸುವುದು.

*ಚಟುವಟಿಕೆ 8:*

*ನಿಮ್ಮ ಶಾಲೆಯಲ್ಲಿ ನಿಯಮಿತವಾಗಿ ಶಾಲೆಗೆ ಬರದ (ಗೈರು ಹಾಜರಾಗುವ) ಒಂದುಅಥವಾಎರಡು ವಿದ್ಯಾರ್ಥಿಗಳನ್ನು ಗುರ್ತಿಸಿರಿ ಅವರ ಪೋಷಕರೊಡನೆ ಸಮ ವಯಸ್ಕ (ಸಹಪಾಠಿ)ರೊಡನೆ ಸಂಪರ್ಕಿಸಿ ಸಮಾಲೋಚಿಸಿ, ಮಾಹಿತಿ ಪಡೆಯಿರಿ ಆ ಮಕ್ಕಳ ಈ ರೀತಿಯಕಂಡು ಹಿಡಿಯಿರಿ. ಈ ರೀತಿಯ ಬೇಡದ ವರ್ತನೆಯನ್ನುತಡೆಗಟ್ಟಲು ಕಾರ್ಯತಂತ್ರಗಳನ್ನು ರೂಪಿಸಿರಿ ಇದರ ಬಗ್ಗೆ ಇದರ ವರದಿ ಬರೆಯಿರಿ.*

Notes

ಮಕ್ಕಳ ಕಲಿಕೆಗೆ, ಅಡ್ಡಿಪಡಿಸುವ ಸಮಸ್ಯೆಗಳನ್ನು ಕುರಿತು, ಪರಿಹಾರಕ್ಕಾಗಿ ಸೂಕ್ತ ಕಾರ್ಯತಂತ್ರರೂಪಿಸಲು, ಈ ರೀತಿಯ ವ್ಯಕ್ತಿ ವಿಶೇಷ ಅಧ್ಯಯನವು ಶಿಕ್ಷಕರಿಗೆ ನೆರವಾಗುವುದು, ಅದಲ್ಲದೆ ಮಕ್ಕಳ ಸಮಗ್ರಗುಣ ಮಾಪನದಲ್ಲೂ, ಶಿಕ್ಷಕರುಗಳಿಗೆ ನೆರವಾಗುವುದು.

## 15.5. ಕ್ರೂಢೀಕರಣಸೋಣ

- ಮಕ್ಕಳು, ಬೇರೆ ಬೇರೆ ವಿಷಯಗಳಲ್ಲಿ ಒಬ್ಬ ವಿದ್ಯಾರ್ಥಿಯುಗಳಿಸುವ ಕಲಿಕೆಯನ್ನು ಅಳೆಯುವುದರಲ್ಲಿ ಸಾಧನ ಪರೀಕ್ಷೆಗಳು ಉಪಕಾರಿಯಾಗಿವೆ. ಕಲಿಕಾಫಲ, ವಿಷಯ, ಪರೀಕ್ಷಾಂಶದಗುಣಮಟ್ಟ, ಪರೀಕ್ಷೆಯನು ನಿರ್ವಹಿಸುವ ಪ್ರಕ್ರಿಯೆ, ಅಂಕೀಕರಣ ಮತ್ತು ಫಲಿತಾಂಶದ ವ್ಯಾಖಾನದಆಧಾರಿತವಾಗಿ, ಶಿಕ್ಷಕ ನಿರ್ಮಿತ ಪರೀಕ್ಷೆಗಳು ತಯಾರಾಗುವುವು.
- ಉತ್ತರಿಸುವ ಪ್ರಕ್ರಿಯೆಯರೀತ್ಯಾ, ಮೂರುರೀತಿಯ ಪರೀಕ್ಷಾಂಶಗಳಿದ್ದು ಮೌಖಿಕ, ಲಿಖಿತ, ಪ್ರದರ್ಶನಾಧಾರಿತ (ಪ್ರಯೋಗಕಾರ್ಯ), ಅವುಗಳನ್ನು ತಯಾರಿಸಿ, ಉಪಯೋಗಿಸಲಾಗುವುದು.
- ಶಿಕ್ಷಕರು ಪರೀಕ್ಷೆತಯಾರಿಸುವಾಗ, ಎಲ್ಲಾರೀತಿಯ ಪರೀಕ್ಷಾಂಶಗಳನ್ನು ಬಳಸಬೇಕು.
- ಘಟಕ ಪರೀಕ್ಷೆಯು ಮೂಲತ: ಶಿಕ್ಷಕ ನಿರ್ಮಿತವಾಗಿದ್ದುರೂಪತ್ವ ಸ್ವರೂಪದ್ದಾಗಿದೆಘಟಕ ಪರೀಕ್ಷೆಯು ಶಿಕ್ಷಕರಿಂದ ಅನೌಪಚಾರಿಕವಾಗಿ ನಿರ್ವಹಿಸಲ್ಪಡುತ್ತದೆ. ಘಟಕ ಪರೀಕ್ಷೆಗಳು, ಶಿಕ್ಷಕರಿಗೆ, ಅವರ ಭೋದನಾ ವಿಧಾನಗಳ ಬಗ್ಗೆ ಹಿಮ್ಮಾಹಿತಿ ಒದಗಿಸಿದರೆ,ಮಕ್ಕಳಿಗೆ ಅವರ ಕಲಿಕಾ ಪ್ರಕ್ರಿಯೆ ಮತ್ತು ಕಲಿಕಾ ಕಠಿಣತೆಗಳ ಬಗ್ಗೆ ಹಿಮ್ಮಾಹಿತಿ ನೀಡುತ್ತದೆ. ಅದಲ್ಲದೆ,ಕಲಿಕಾ ಪರಿಹಾರಕಾರ್ಯ ಮತ್ತು ಶ್ರೀಮಂತಗೊಳಿಸುವ ಕಾರ್ಯಕ್ಕೂ ನೆರವಾಗುತ್ತದೆ.
- ಪರೀಕ್ಷಾಂಶಗಳನ್ನು, ಎರಡುರೀತಿಯಲ್ಲಿ ವರ್ಗೀಕರಿಸಲಾಗಿದೆ ಪ್ರಬಂಧರೀತಿ ವಸ್ತು ನಿಷ್ಠ ರೀತಿ ಪ್ರಬಂಧರೀತಿಯವು, ವಿಸ್ತರಿತಉತ್ತರರೀತಿಯವು ಮತ್ತು ನಿರ್ಬಂದಿತಉತ್ತರರೀತಿಯವು.
- ಬೇರೆ ಬೇರೆ ವಿವಿಧ ವಸ್ತು ನಿಷ್ಠ ರೀತಿಯ ಪರೀಕ್ಷಾಂಶಗಳಿವೆ ಲಘು ಉತ್ತರರೀತಿ, ಬಹು ಆಯ್ಕೆಉತ್ತರರೀತಿ ಹೊಂದಿಸುವ ರೀತಿ, ಪರ್ಯಾಯಉತ್ತರರೀತಿ, ಇತ್ಯಾದಿಗಳನ್ನು ಶಿಕ್ಷಕರು ಉಪಯೋಗಿಸಬಹುದು.
- ಮುಕ್ತಾಂತ್ಯ ಪರೀಕ್ಷಾಂಶಗಳು, ಕಂಠ ಪಾಠ ಮಾಡುವುದನ್ನು ನಿರುತ್ತೇಜಗೊಳಿಸಲು, ಉಪಯುಕ್ತವಾಗಿದೆ, ಹಾಗೂ ಮಕ್ಕಳು ವಿಕೇಂದ್ರೀಕೃತಚಿಂತನೆ ಮಾಡಲು ಪ್ರೋತ್ಸಾಹಿಸುತ್ತವೆ.
- ಮೌಲ್ಯ ಮಾಪನ ತಂತ್ರಗಳಾದ, ವೀಕ್ಷಣೆ ಸಂದರ್ಶನ, ವ್ಯಕ್ತಿ ವಿಶೇಷ ಅಧ್ಯಯನ, ವಿಶೇಷ ಕಾರ್ಯ ಮಾಹಿತಿ, ಇವುಗಳು ಮಕ್ಕಳ ವರ್ತನಾ ವಿಶಿಷ್ಟತೆಗ ಳನ್ನು ಗುಣಮಾಪನ ಮಾಡುವುದರಲ್ಲಿಉಪಯುಕ್ತವಾಗಿದೆ.
- ಗುಣಮಾಪನ ಉಪಕರಣಗಳಾದ, ವೀಕ್ಷಣಾಕಾರ್ಯಕ್ರಮ ಪಟ್ಟಿ, ಸಂದರ್ಶನಕಾರ್ಯಕ್ರಮ ಪಟ್ಟಿ, ತನಿಖಾ ಪಟ್ಟಿ ಶ್ರೇಯಾಂಕ ಪಟ್ಟಿ ಮತ್ತು ಪ್ರಶ್ನೆವಳಿಗಳನ್ನು ಬಳಸಬಹುದು.

## 15.6 ನಿಮ್ಮ ಪ್ರಗತಿ ಪರೀಕ್ಷೆ ಮಾಡಿಕೊಳ್ಳಿರಿ ಮಾದರಿ ಉತ್ತರಗಳ

ಇ1. ಮಕ್ಕಳು ಎಷ್ಟರ ಮಟ್ಟಿಗೆ, ಒಂದುಅಧ್ಯಾಯ ಪಾಠದಲ್ಲಿರುವಜ್ಞಾನ ಮತ್ತು ಕೌಶಲ್ಯಗಳನ್ನು ಗಳಿಸಿದ್ದಾರೆ ಎಂಬುದನ್ನು ತಿಳಿಯಲು, ಸಾಧಾನಾ ಪರೀಕ್ಷೆಗಳು ಉಪಯುಕ್ತವಾಗಿದೆ.

ಇ2. ಮೌಖಿಕ ಪ್ರಶ್ನೆಗಳು

ಇ3. ಎ) ಒಂದುಉತ್ತಮವಾದ, ಶಿಕ್ಷಕ ನಿರ್ಮಿತ ಪರೀಕ್ಷೆಯು ನಿಯಮಿತ ಸಂಖ್ಯೆಯ ದಕ್ಷತೆಗಳನ್ನು ಒಳಗೊಂಡಿರಬೇಕು.

ಬಿ) ಮಕ್ಕಳ ಕಲಿಕಾ ಕಠಿಣತೆಗಳನ್ನು ಗುರುತಿಸಬಲ್ಲದಾಗಿರಬೇಕು.

ಸಿ) ವಿವಿಧರೀತಿಯ ಪರೀಕ್ಷಾಂಶಗಳಿರಬಹುದು.

ಇ4. ಬಿ.ಸಿ.ಡಿ.ಜಿ, ಮತ್ತು ಹೆಚ್, ಹೇಳಿಕೆಗಳು ಘಟಕ ಪರೀಕ್ಷೆಯೊಡನೆ, ಸಂಬಂಧ ಹೊಂದಿವೆ.

ಇ5. ಅನೇಕ ರೀತಿಯ ಮನೋ ಪ್ರಕ್ರಿಯೆಗಳು ಮತ್ತು ಕೌಶಲ್ಯಗ ಳನ್ನು ವಿಸ್ತರಿತಉತ್ತರರೀತಿಯ ಪರೀಕ್ಷಾಂಶಗಳಿಂದ ಅಳೆಯಬಹುದುಇದು, ವಿದ್ಯಾರ್ಥಿಯುಎಷ್ಟರ ಮಟ್ಟಿಗೆ, ಉತ್ತರವನ್ನು ಸಂಯೋಜಿಸಬಲ್ಲ ಮತ್ತು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸಬಲ್ಲ ಎಂಬುದನ್ನು ಶಿಕ್ಷಕರು, ಗುಣಮಾಪನ ಮಾಡಲುಆಸ್ಪದ ಮಾಡುತ್ತದೆ.ಈ ರೀತಿಯ ಪರೀಕ್ಷಾಂಶಗಳನ್ನು ತಯಾರಿಸುವುದು ನಿರ್ಬಂಧಿತಉತ್ತರರೀತಿಯ ಪರೀಕ್ಷಾಂಶಗಳ ತಯಾರಿಗಿಂತಲೂ ಸುಲಭ.

ಇ6. ಶಿಕ್ಷಕರ ವಿವಿಧರೀತಿಯ, ವಿಷಯ ವಸ್ತುಜ್ಞಾನ, ಅಪಿಯಆಧಾರಿತ, ಅಂಕೀಕರಣ, ವ್ಯಾಕರಣದ ಮೇಲಿನ ಹೆಚ್ಚಿನಒತ್ತು ಮತ್ತು ಅಕ್ಷರ ಶುದ್ಧಿಯ ಮೇಲಿನ ಒತ್ತು ಇತ್ಯಾದಿಗಳು, ವಿಸ್ತರಿತಉತ್ತರರೀತಿಯ ಪರೀಕ್ಷಾಂಶಗಳ ಅಂಕೀಕರಣದಲ್ಲಿ ವ್ಯತ್ಯಾಸಉಂಟು ಮಾಡುತ್ತವೆ.

ಇ7. ಸಾಮಾನ್ಯವಾಗಿ, 4 ರೀತಿಯ ನಿರ್ಬಂಧಗಳು ಹೇರಲಾಗುತ್ತವೆಉತ್ತರದಉದ್ದ, ಉತ್ತರದಲ್ಲಿನ ವಿಷಯವಸ್ತು, ಉತ್ತರಿಸಲುಇರುವ ಸ್ಥಳಾವಕಾಶ ಮತ್ತು ಉತ್ತರಿಸಲು ಕಾಲಾವಕಾಸ

ಇ8. a. √ b. x c. x d. √ e. √ f. x

## 15.7 ಹೆಚ್ಚಿನ ಓದಿಗೆ ಸಲಹೆಗಳು


1. ಡಿಯೇಲ್ಆರ್.ಎನ್ಅಸೆಸ್‌ಮೆಂಟ್ಅಂಡ್ ಟೆಸ್ಟಿಂಗ್ ಇನ್ ಸೆಕೆಂಡರಿ ಸ್ಕೂಲ್ಇವಾನ್ಸ್ ಮೆಥುಯೆನ್ಸ್ಎಜುಕೇಶನಲ್, ಲಂಡ್ನ್
2. ಗ್ರೋಲಂಡ್ಎನ್.ಇ.ಅಂಡ್.ಲಿನ್ ಆಫ್.ಎಲ್. (2000) ಮೆಜರ್‌ಮೆಂಟ್ಅಂಡ್ಅಸೆಸ್‌ಮೆಂಟ್ಇನ್‌ಟೀಚಿಂಗ್ ಪಿಯರ್ ಸನ್ಎಜುಕೇಷನ್ ಸಿಂಗಪೂರ್
3. ಲೇಡ್‌ಮನ್ಐ.ಜೆ.ಅಂಡ್ ಮೆಫ್ರೆನ್ಸ್ಕ್ಜಿಬೈಎ (1991) ಮೆಜರ್‌ಮೆಂಟ್ಅಂಡ್ಎವಾಲ್ಯುಎಷನ್ಇನ್ಎಡ್ಯುಕೇಶನ್ಅಂಡ್ ಸೈಕಾಲಜಿ ಹರ್‌ಕೋರ್ಟ್ ಬ್ರೂಸ್‌ಕಾಲೇಜ್ ಪಬ್ಲಿಷರ್ಸ್‌ಯು.ಎಸ್.ಎ


## 15.8 ಪಠ್ಯಾಂತಅಭ್ಯಾಸ ಪ್ರಶ್ನೆಗಳು

1. ಮೌಖಿಕಅಥವಾ ಪ್ರದರ್ಶಕಾರ್ಯ ಪರೀಕ್ಷೆಗಾಗಿ, ಪರೀಕ್ಷಿಸಬೇಕಾದ ಸಾಮರ್ಥ್ಯಗಳು ಮತ್ತು ಪರೀಕ್ಷಾ ಸಾಮಗ್ರಿಗಳನ್ನೊಳಗೊಂಡತೆ, ನಿರ್ದಿಷ್ಟತೆಗಳನ್ನು ತಯಾರಿಸಿರಿ.
2. ಯಾವುದಾದರೂ ವಿಷಯದಲ್ಲಿ ಒಂದು ಘಟಕ ಪರೀಕ್ಷೆಯನ್ನು ತಯಾರಿಸಿರಿ. ಅದರಲ್ಲಿ ಮೌಖಿಕ, ಲಿಖಿತ ಮತ್ತು ಪ್ರದರ್ಶನ ರೀತಿಯ ಪರೀಕ್ಷಾಂಶಗಳನ್ನು ಉಪಯೋಗಿಸಿರಿ.
3. ಭಾಷಾಭಿವೃದ್ಧಿಗಾಗಿ ವಿಶೇಷ ಕಾಯ ಮಾಹಿತಿ ಪತ್ರವನ್ನು ತಯಾರಿಸಿರಿ. ಆ ಕಾರ್ಯ ಮಾಹಿತಿ ಪತ್ರದ ಹಾಳೆಗಳಲ್ಲಿ, ಕಾರ್ಯದ ವಿವರ, ವಿದ್ಯಾರ್ಥಿಯು, ಏತಕ್ಕಾಗಿ ಆ ಕಾರ್ಯ ಹಮ್ಮಿಕೊಂಡನು, ಕಾರ್ಯ ಆರಂಭಿಸಿದ ದಿನಾಂಕ, ಕಾರ್ಯದ ವಿಶೇಷ ಲಕ್ಷಣಗಳು ವಿದ್ಯಾರ್ಥಿಗಳು, ಶಕ್ತಿ ಬಲದ ಬಗ್ಗೆ ಶಿಕ್ಷಕರ ಟಿಪ್ಪಣಿ, ಪರಿಗಣಿಸಕಾರ್ಯ ಮುಂತಾದವುಗಳು ಇರುವಂತೆ ತಯಾರಿಸಿರಿ ಅವರವರಕಾರ್ಯಕ್ಷೇತ್ರಕ್ಕೆಆಧಾರದ ಮೇಲೆ, ಈ ಹಾಳೆಯನ್ನು ತುಂಬುವಂತೆ, ವಿದ್ಯಾರ್ಥಿಗಳಿಗೆ ತಿಳಿಸಿ.

Notes

# ಘಟಕ 16 ಕಲಿಕೆಯ ಸುಧಾರಣೆಗಾಗಿ ಮೌಲ್ಯಮಾಪನದ ಫಲಿತಾಂಶಗಳು

ಸಂರಚನೆ


*16.0 ಪೀಠಿಕೆ*

*16.1 ಕಲಿಕಾ ಉದ್ದೇಶಗಳು*

*16.2 ಮೌಲ್ಯಮಾಪನದ ಫಲಿತಾಂಶಗಳನ್ನು ದಾಖಲಿಸಿ ವರದಿಮಾಡುವುದು.*

*16.2.1 ದಾಖಲು ಮತ್ತು ವರದಿ ಮಾಡುವುದರ ಅಗತ್ಯತೆ.*

*16.2.2 ಕಲಿಕಾ ಪ್ರಗತಿಯ ಪ್ರಕ್ರಿಯೆಯ ದಾಖಲಿಸುವಿಕೆ.*

*16.2.3. ವಿಭಿನ್ನ ಪಾಲುದಾರರಿಗೆ ವರದಿ ಮಾಡುವುದು.;*

*16.3 ಕಲಿಕೆಯ ಸುಧಾರಣೆಗಾಗಿ ಮೌಲ್ಯಮಾಪನದ ಫಲಿತಾಂಶಗಳನ್ನು ಬಳಸುವುದು.*

*16.3.1 ಅನುಪಾಲನ ಕಾರ್ಯಕ್ರಮಗಳು.*

*16.4 ಉಪಸಂಹಾರ*

*16.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಮಾದರಿ ಉತ್ತರಗಳು.*

*16.6 ಸೂಚಿಸಲ್ಪಟ್ಟ ಓದು ಮತ್ತು ಅಧ್ಯಯನ*

*16.7 ಘಟಕದ ನಂತರ ಚಟುವಟಿಕೆಗಳು.*


## 16.0 ಪೀಠಿಕೆ

ಮಗುವಿನ ಕಲಿಕೆ ಮತ್ತು ಬೆಳವಣಿಗೆಯಲ್ಲಿ ಮೌಲ್ಯಮಾಪನದ ಸಹಾಯವನ್ನು ಘಟಕ–14ರಲ್ಲಿ ಈಗಾಗಲೇ ಕಲಿತುಕೊಂಡಿದ್ದೀರ. ಜೊತೆಯಲ್ಲಿ ಘಟಕ 15 ರಲ್ಲಿ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿ ನಿಮ್ಮ ವಿದ್ಯಾರ್ಥಿಗಳ ಸಾಧನೆ ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸಲು ನೀವು ವಿವಿಧ ಮಾಪನಗಳು ಮತ್ತು ತಂತ್ರಗಳನ್ನು ಉಪಯೋಗಿಸುವುದನ್ನು ಕಲಿತಿದ್ದೀರ. ಈ ಫಲಿತಾಂಶಗಳು ಪ್ರತಿಯೊಬ್ಬ ವಿದ್ಯಾರ್ಥಿಯ ಸಾಧನೆ ಮತ್ತು ಬೆಳವಣಿಗೆ ಸಂಬಂಧಿಸಿದಂತೆ ಅಂಕಿಗಳಲ್ಲಿ ಅಥವಾ ಪರಿಮಾಣಾತ್ಮಕವಾಗಿ, ಅಥವಾ ಗುಣಾತ್ಮಕವಾಗಿರಬಹುದು. ಸಂಗ್ರಹಿಸಿದ ದತ್ತಾಂಶ ಮತ್ತು ಆಧಾರಗಳನ್ನು ದಾಖಲಿಸಬೇಕು ಮತ್ತು ವಿಶ್ಲೇಷಿಸಿ ವರ್ಗೀಕರಿಸಬೇಕಾಗುತ್ತದೆ.

Notes

## 16.1 ಕಲಿಕಾ ಉದ್ದೇಶಗಳು

ಈ ಘಟಕದ ಅಧ್ಯಯನದ ನಂತರ ನಿಮಗೆ ಈ ಅಂಶಗಳು ಸಾಧ್ಯವಾಗುತ್ತದೆ.

- ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿನ ವಿದ್ಯಾರ್ಥಿಗಳ ಕಲಿಕಾ ಸಾಧನೆಯಲ್ಲಿನ ದಾಖಲಿಸುವಿಕೆ ಮತ್ತು ವರದಿ ಮಾಡುವುದರ ಅಗತ್ಯತೆಯನ್ನು ಮತ್ತು ಪ್ರಕ್ರಿಯೆಯನ್ನು ವರ್ಣಿಸಲು ಸಹಾಯಕ.
- ವಿದ್ಯಾರ್ಥಿಗಳ ಕಲಿಕೆ ಮತ್ತು ವೈಯಕ್ತಿಕ ಅಗತ್ಯತೆಗಳನ್ನು ಗುರುತಿಸಲು ಮತ್ತು ಮೌಲ್ಯಮಾಪನದ ಫಲಿತಾಂಶಗಳನ್ನು ಬಳಸಿ ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಅನುಪಾಲನ ಕ್ರಿಯೆಯನ್ನು ನಡೆಸಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸುಧಾರಣೆ ತರಲು.
- ವಿದ್ಯಾರ್ಥಿಗಳ ಕಲಿಕೆಯನ್ನು ಬೆಂಬಲಿಸುತ್ತಾ ಸೂಕ್ತವಾದ ಸಹಾಯಕ್ಕಾಗಿ ವಿವಿಧ ಪಾಲುದಾರರೊಂದಿಗೆ ಮೌಲ್ಯಮಾಪನದ ಫಲಿತಾಂಶಗಳನ್ನು ಹಂಚಿಕೊಳ್ಳುವುದು.
- ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚಿಸಲು ಮತ್ತು ಬೋಧನೆಯ ನಿಮ್ಮ ಸ್ವಂತ ತಂತ್ರವನ್ನು ಪರಿಷ್ಕರಿಸಲು, ಮೌಲ್ಯಮಾಪನದ ಫಲಿತಾಂಶಗಳು ನಿಮ್ಮನ್ನು ಪ್ರತಿಬಿಂಬಿಸುತ್ತದೆ.

## 16.2 ಮೌಲ್ಯಮಾಪನದ ಫಲಿತಾಂಶಗಳನ್ನು ದಾಖಲೆ ಮತ್ತು ವರದಿ ಮಾಡುವಿಕೆ

ನೀವು ಪರೀಕ್ಷೆಯನ್ನು ಯಾವಾಗ ನಡೆಸಿದರೂ ನೀವು ಉತ್ತರ ಪ್ರತಿಗಳ ಜೊತೆ ಏನು ಮಾಡುತ್ತೀರಿ ? ನೀವು ಪ್ರತಿಯೊಂದು ಉತ್ತರಕ್ಕು ಅಂಕಗಳನ್ನು ನೀಡಿರುತ್ತೀರಿ ಮತ್ತು ವಿದ್ಯಾರ್ಥಿಯು ಪ್ರತಿಯೊಂದು ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಗುರ್ತಿಸುತ್ತೀರಿ. ಪ್ರತಿಯೊಬ್ಬ ವಿದ್ಯಾರ್ಥಿಯ ಮುಂದೆ ಆ ಅಂಕಗಳನ್ನು ದಾಖಲೆಯಲ್ಲಿ ನಮೂದಿಸುತ್ತೀರಾ. ಭವಿಷ್ಯತ್ತಿನ ಉಪಯೋಗಕ್ಕಾಗಿ ಈ ಅಂಕಗಳ ದಾಖಲೆ ಪುಸ್ತಕವು ಒಂದು ಶಾಶ್ವತ ದಾಖಲೆಯಾಗಿರುತ್ತದೆ. ಅಂಕಗಳ ದಾಖಲೆ ಪುಸ್ತಕದಲ್ಲಿ ಅಂಕಗಳನ್ನು ದಾಖಲಿಸಿದ ನಂತರ ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರಗತಿ ಪತ್ರಗಳನ್ನು ತಯಾರಿಸಿ ಪ್ರತಿಯೊಬ್ಬ ವಿದ್ಯಾರ್ಥಿಗೆ ವಿತರಿಸಿ, ಮಾಹಿತಿ ಪರಿಶೀಲನೆಗಾಗಿ ಪೋಷಕರ ಗಮನಕ್ಕೆ ತರಲಾಗುತ್ತದೆ. ಕೆಲವು ಶಾಲೆಗಳಲ್ಲಿ ಪೋಷಕ ಶಿಕ್ಷಕರ ಸಭೆಯನ್ನು ಪ್ರತಿಯೊಂದು ಪರೀಕ್ಷೆಗಳು ಮುಗಿದ ನಂತರ ನಡೆಸಿ, ಪ್ರತಿಯೊಬ್ಬ ವಿದ್ಯಾರ್ಥಿಗಳ ಪರೀಕ್ಷೆಗಳ ಫಲಿತಾಂಶಗಳನ್ನು ವಿನಿಮಯ ಮಾಡಲಾಗುತ್ತದೆ. ನಮ್ಮ ಶಾಲೆಗಳ ನಿರಂತರ ಮತ್ತು ಸಮಗ್ರ ಅಭ್ಯಾಸಗಳ ಮೇಲೆ ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿನ ಸಾಧನೆಯನ್ನು ದಾಖಲು ಮತ್ತು ವರದಿ ಮಾಡಲಾಗುತ್ತದೆ. ಆದರೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನಕ್ಕೆ ಒತ್ತು ನೀಡುವ ಮೂಲಕ ಮೌಲ್ಯಮಾಪನವು ಕೇವಲ ಪಠ್ಯ ವಿಷಯಗಳಿಗೆ ಮಾತ್ರ ಸೀಮಿತವಾಗಿಲ್ಲ.

ಪ್ರತಿಯೊಬ್ಬ ವಿದ್ಯಾರ್ಥಿಯ ಸಮಗ್ರ ಮೌಲ್ಯ ಮಾಪನ ಅಂದರೆ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ಘಟಕದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳ ಮೌಲ್ಯಮಾಪನದ ಅಳತೆಗಳ ವಿಸ್ತರಣೆಯ ಜೊತೆಗೆ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿನ ಕಾರ್ಯಕ್ಷಮತೆಯನ್ನು ಪರೀಕ್ಷಿಸಿ, ದಾಖಲಿಸುವುದಾಗಿದೆ. ಹಾಗೆಯೇ ದಾಖಲಿಸಿದ ಫಲಿತಾಂಶಗಳು ಹಲವಾರು ಪಾಲುದಾರರಾಗಿ ಕೂಡ ಒಂದು ಸವಾಲಿನ ಕೆಲಸವಾಗಿ ಮಾರ್ಪಟ್ಟಿದೆ. ನಾವು ದಾಖಲೆ ಮತ್ತು ವರದಿ ಮಾಡುವಿಕೆಯ ವಿವಿಧರೂಪಗಳು ಮತ್ತು ಅದರ ಅನ್ವಯಗಳನ್ನು ಚರ್ಚಿಸೋಣ.

Notes

### 16.2.1 ದಾಖಲೆ ಮತ್ತು ವರದಿ ಮಾಡುವುದರ ಅಗತ್ಯತೆ

ಒಮ್ಮೆ ನಿವು ವಿದ್ಯಾರ್ಥಿಗಳ ಕಲಿಕಾ ಪ್ರಗತಿಯು ವಿವಿಧ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಾಗೂ ಸಾಮಾಜಿಕ ವೈಯುಕ್ತಿಕ ಅಗತ್ಯತೆಗಳಿಗೆ ವಿವಿಧ ಮೂಲಗಳಿಗೆ ವಿವಿಧ ವಿಧಾನಗಳ ಮೂಲಕ, ಅವರು ವ್ಯವಸ್ಥಿತವಾಗಿ ವಿಷಯವಾರು ಮತ್ತು ಅವಧಿವಾರು ಗೆ ಸಂಬಂಧಿಸಿದಂತೆ ದಾಖಲಿಸುತ್ತಾರೆ. ಪ್ರತಿಯೊಬ್ಬ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಯನ್ನು ಖಚಿತಪಡಿಸುತ್ತಾ, ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದಲ್ಲಿ ಪ್ರಮುಖವಾಗಿದೆ. ಶಾಲೆಯಲ್ಲಿ ನಿರ್ಧಿಷ್ಟವಾದ ಕಾರ್ಯಗಳನ್ನು ಮಾಡುತ್ತಾ ಕಲಿಕಾ ಕಾರ್ಯ ಕ್ಷಮತೆಯನ್ನು ದಾಖಲಿಸಲು ಸಹಾಯಕ.

---

*ದಾಖಲಿಸುವಿಕೆ : ವಿದ್ಯಾರ್ಥಿಗಳ ಕಲಿಕಾ ಕಾರ್ಯಕ್ಷಮತೆ ಮತ್ತು ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿನ ಪ್ರಗತಿಯನ್ನು, ವಿವಿಧ ಮಾಪನಗಳು ಮತ್ತು ಮೌಲ್ಯಮಾಪನ ತಂತ್ರಗಳ ಮೂಲಕ ವಿವಿಧ ಆಧಾರಗಳನ್ನು ಕ್ರಮಬದ್ಧವಾಗಿ ಸಂಗ್ರಹಿಸುವುದೇ ದಾಖಲಿಸುವಿಕೆ.*

*ವರದಿ ಮಾಡುವುದು: ಒಂದು ಮಗುವಿನ ಕಲಿಕೆ ಮತ್ತು ಪ್ರಗತಿಯು ಕೆಳಹಂತದ ತಿಳುವಳಿಕೆ ಮತ್ತು ಕೌಶಲದ ಮಟ್ಟದಿಂದ ಮತ್ತು ಹೆಚ್ಚು ಸಂಕೀರ್ಣ ಹಂತಗಳ ಕಲಿಕೆಯವರೆಗೂ ಸಂವಹನ ಮತ್ತು ಮೌಲ್ಯಮಾಪನದ ಹಿಮ್ಮಾಹಿತಿಯ ವಿನಿಮಯವನ್ನು ವರದಿ ಮಾಡುವುದು ಎಂದು ಕರೆಯಬಹುದಾಗಿದೆ.*

---

ವಿದ್ಯಾರ್ಥಿಗಳ ಕಲಿಕಾ ಕಾರ್ಯಕ್ಷಮತೆಯ ದಾಖಲೆಗಳನ್ನು ಈ ಕೆಳಕಂಡಂತೆ ವಿವರಿಸಬಹುದಾಗಿದೆ.

1) ವಿದ್ಯಾರ್ಥಿಗಳು ಮತ್ತು ಪೋಷಕರು (2) ಶಿಕ್ಷಕರು ಮತ್ತು ಸಲಹೆಗಾರರು (3) ಯೋಜಕರು ಮತ್ತು ನಿರ್ವಾಹಕರು

*(1) ವಿದ್ಯಾರ್ಥಿಗಳು ಮತ್ತು ಪೋಷಕರು*

ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ವರದಿ ಮಾಡುವಿಕೆಯು ಹೇಗೆ ಸಹಾಯ ಮಾಡುತ್ತದೆ ಎಂದು ನೊಡೋಣ.

- ಇದು ಶಾಲಾ ಕಾರ್ಯಕ್ರಮದ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತದೆ, ವಿದ್ಯಾರ್ಥಿಗಳು ಏನು ಮಾಡುತ್ತಿದ್ದಾರೆ, ಏಕೆ ಅವರು ಮಾಡುತ್ತಿದ್ದಾರೆ ಎಂಬುದನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ನಿರ್ದಿಷ್ಟ ಶಾಲಾ ಚಟುವಟಿಕೆಯ ಹಿಂದಿರುವ ಶಾಲಾ ಕಾರ್ಯಸೂಚಿ ಮತ್ತು ಮಗು ಶಾಲೆಯಲ್ಲಿ ಏನು ಮಾಡುತ್ತಿದ್ದಾಳೆ ಎಂಬುದನ್ನು ಪೋಷಕರು ಕೂಡ ತಿಳಿದುಕೊಳ್ಳುತ್ತಾರೆ.

- ಇದು ವಿದ್ಯಾರ್ಥಿಗಳ ಬಲ ಮತ್ತು ಕಲಿಕೆಯಲ್ಲಿ ದೌರ್ಬಲ್ಯವನ್ನು ಸೂಚಿಸುತ್ತದೆ. ಉದಾಹರಣೆ: ವಿದ್ಯಾರ್ಥಿಯು ಗಣಿತಶಾಸ್ತ್ರದಲ್ಲಿ ಬಲವಾಗಿರಬಹುದು. ಆದರೆ ಅವನು/ಅವಳು ಭಾಷಾ ವಿಷಯದಲ್ಲಿ ದುರ್ಬಲವಾಗಿರಬಹುದು, ಅಥವಾ ಅವನು/ಅವಳು ಆಟದಲ್ಲಿ ಬಲವಾಗಿರಬಹುದು, ಆದರೆ ಪಠ್ಯ ವಿಷಯಗಳಲ್ಲಿ ದುರ್ಬಲವಾಗಿರಬಹುದು ಇತ್ಯಾದಿ. ಇದು ವಿದ್ಯಾರ್ಥಿಗಳು ಪೋಷಕರಿಗೆ ದುರ್ಬಲ ಕ್ಷೇತ್ರಗಳಲ್ಲಿ ಹೆಚ್ಚು ಕೆಲಸ ಮಾಡುವ ಉದ್ದೇಶವನ್ನು ತಿಳಿಸುತ್ತದೆ.

- ಇದು ವಿದ್ಯಾರ್ಥಿಯ ವೈಯುಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಗಳ ಬಗ್ಗೆ ಉತ್ತೇಜಿಸುತ್ತದೆ. ಉದಾಹರಣೆ: ಚರ್ಚಾ ತರಗತಿಗಳಲ್ಲಿ ನಾಚಿಕೆ ಪಡುವ ಮಗುವಿಗೆ ಅವಕಾಶ ನೀಡುವುದು. ಇದು ವಿದ್ಯಾರ್ಥಿಯ ಅಭಿಪ್ರೇರಣೆಗೆ ಸಹಕಾರಿ.

- ವಿದ್ಯಾರ್ಥಿ ತನ್ನ ಸಾಧನೆಯನ್ನು ಗಮನಿಸಿ ತನ್ನ ಸಾಧನೆಯನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಲು ಸಹಕಾರಿ.

Notes

*2) ಶಿಕ್ಷಕರು ಮತ್ತು ಸಲಹೆಗಾರರು:* ಕಲಿಕಾ ಕಾರ್ಯಕ್ಷಮತೆಯ ದಾಖಲೆಯು ಶಿಕ್ಷಕರಿಗೆ ಮತ್ತು ಸಲಹೆಗಾರರಿಗೆ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ವಿವಿಧ ಮಾಹಿತಿಯನ್ನು ಸಂಗ್ರಹಿಸಲು ಸಹಾಯಕ. ಲಭ್ಯ ಆಧಾರಗಳ ಮೇಲೆ ಅವರು ಹೇಗೆ ವಿದ್ಯಾರ್ಥಿಯು ಕಲಿಯುತ್ತಾನೆ / ಪ್ರಗತಿ ಹೊಂದುತ್ತಾನೆ ಎಂಬುದರ ನಿರ್ಣಯಕ್ಕೆ ಬರಲು ಸಾಧ್ಯ. ವಿದ್ಯಾರ್ಥಿಯು ಯಾವ ಸ್ಥಾನದಲ್ಲಿ ನಿಲ್ಲುತ್ತಾನೆ, ವಿದ್ಯಾರ್ಥಿಯ ಅಗತ್ಯತೆಗಳು, ಮತ್ತು ಅವನನ್ನು ಮೇಲೆತ್ತಿ, ಅವನ ವಯಸ್ಸು ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಗತಿ ಹೊಂದಲು ಅರ್ಥ ಮಾಡಿಕೊಳ್ಳಲು ಸಹಾಯಕ.

ಆವರ್ತಕ ಆಧಾರದ ಮೇಲೆ ದಾಖಲೆಗಳ ವಿಶ್ಲೇಷಣೆ ಮತ್ತು ವಿಮರ್ಶೆಯು ಶಿಕ್ಷಕನನ್ನು ಪ್ರತಿಬಿಂಬಿಸಲು ಸಹಾಯ ಮಾಡುತ್ತದೆ.

- ಬೋಧನಾ ತಂತ್ರಗಳು ಮತ್ತು ವಿಧಾನಗಳು
- ತರಗತಿಯ ನಿರ್ವಹಣೆ ಮತ್ತು ಶಾಲೆಯ ಒಳಗೆ ಮತ್ತು
- ಹೊರಗೆ ಲಭ್ಯವಿರುವ ವಸ್ತುಗಳ ಮತ್ತು ಸಂಪನ್ಮೂಲಗಳ ಬಳಕೆ.

ಅವನ/ಅವಳ ಸಾಮರ್ಥ್ಯದ ಸುಧಾರಣೆ. ಇನ್ನೊಂದೆಡೆ ಸಲಹೆಗಾರರು ಕಲಿಕೆಯಲ್ಲಿನ ನಿರ್ಬಂಧಗಳನ್ನು ಪರಿಹರಿಸಬಹುದು. ವಿದ್ಯಾರ್ಥಿಗಳ ಪ್ರಗತಿಯನ್ನು ಖಚಿತಪಡಿಸಿಕೊಳ್ಳುತ್ತಾ, ಮುಖಾಮುಖಿಯಾಗಿ ವೈಯುಕ್ತಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ದಾಖಲಿಸುವಿಕೆ ಮತ್ತು ವರದಿ ಮಾಡುವಿಕೆಯ ಸಮಗ್ರ, ನೈದಾನಿಕವಾಗಿ, ವಿದ್ಯಾರ್ಥಿಗಳ ಕಲಿಕೆಗೆ ಪರಿಣಾಮಕಾರಿಯಾಗಿ, ಮಾರ್ಗದರ್ಶನ ಮಾಡಬಹುದಾಗಿದೆ.

*3) ಯೋಜಕರು ಮತ್ತು ನಿರ್ವಾಹಕರು :* ಈ ಯೋಜನೆಯನ್ನು ಯೋಜಕರು ಮತ್ತು ನಿರ್ವಾಹಕರುಗಳಿಗೆ ದಾಖಲಿಸುವಿಕೆಯನ್ನು ಒದಗಿಸುತ್ತದೆ.

- ಕ್ಲಸ್ಟರ್‌ನಿಂದ ಪ್ರಾರಂಭವಾಗಿ, ಜಿಲ್ಲಾಮಟ್ಟದವರೆಗೂ ಶಿಕ್ಷಣದ ಗುಣಮಟ್ಟದ ಮೇಲ್ವಿಚಾರಣೆ ಮಾಡುವುದಾಗಿದೆ.
- ಅಭ್ಯಾಸಗಳು ಮತ್ತು ಮಧ್ಯಸ್ಥಿಕೆ ಪರಿಣಾಮಕಾರತ್ವವನ್ನು ಪರೀಕ್ಷಿಸುವುದು ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಶಾಲೆಗಳ ವರ್ಗೀಕರಣ,
- ಶಿಕ್ಷಕರ ಕಾರ್ಯಕ್ಷಮತೆಗೆ ಬದ್ಧವಾಗಿರಲು ಶಿಕ್ಷಕರ ಕಾರ್ಯಕ್ಷಮತೆಯನ್ನು ಪರೀಕ್ಷಿಸುವುದು ಮತ್ತು ಶಿಕ್ಷಕರ ಶಿಕ್ಷಣದಲ್ಲಿ ರಾಜ್ಯಮಟ್ಟದಲ್ಲಿ ವ್ಯಾಪಕ ಸುಧರಣೆಗಳನ್ನು ಪಠ್ಯಕ್ರಮ ಬೆಳವಣಿಗೆಯಲ್ಲಿ ಕೈಗೊಳ್ಳುವುದು.

Notes

ಇಲ್ಲಿಯವರೆಗೂ ದಾಖಲೆ ಮತ್ತು ವರದಿ ಮಾಡುವುದು, ಮೌಲ್ಯಮಾಪನದ ಒಂದು ಅವಿಭಾಜ್ಯ ಅಂಗವಾಗಿದೆ. ಏನೆಲ್ಲಾ ಅಂಶಗಳನ್ನು ದಾಖಲಿಸಲಾಗಿದೆಯೋ ಆ ಎಲ್ಲಾ ಅಂಶಗಳು ಆಧಾರಗಳು ಮತ್ತು ದತ್ತಾಂಶಗಳನ್ನು ವಿನಿಮಯ ಮಾಡಬೇಕಾಗಿದೆ. ತಪ್ಪುಗಳನ್ನು ಹುಡುಕುವುದರ ಬದಲಾಗಿ, ಪೂರ್ವ ಭಾವಿಯಾಗಿ, ಪ್ರಗತಿಶೀಲ ಮತ್ತು ಸರಿಪಡಿಸುವ ಉದ್ದೇಶದಿಮದ ವಿನಿಮಯ ಮಾಡಬೇಕಾಗಿದೆ. ಇದು ವಿದ್ಯಾರ್ಥಿಗಳು ತಮ್ಮ ಪ್ರಗತಿಯನ್ನು ಉತ್ತಮಪಡಿಸಿಕೊಳ್ಳುತ್ತಾ ಹಿಂದುಳಿಯುವುದನ್ನು ತಪ್ಪಿಸಬಹುದಾಗಿದೆ. ವಿದ್ಯಾರ್ಥಿಗಳ ಕಾರ್ಯ ಕ್ಷಮತೆಯನ್ನು ಹೆಚ್ಚಿಸಲು, ಯಾರು ಅದನ್ನು ಮಾಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ದಾಖಲಿಸುವಿಕೆಯ ಕಾರ್ಯಗಳನ್ನು ಆಧರಿಸಿ, ವರದಿ ಮಾಡುವವರು, ವಿಭಿನ್ನ ಪಾಲುದಾರರಿಗೆ, ವಿಭಿನ್ನವಾಗಿರಬೇಕು. ಅವನ/ಅವಳಿಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ಪಾಲುದಾರನು ಕೆಲವು ಕ್ರಿಯಾ ಅಂಶಗಳನ್ನು ಹೊಂದಿರಬೇಕಾಗುತ್ತದೆ.

ಉದಾ: ಮಗು ಅವ್ಯವಸ್ಥೆಯನ್ನು ಎದುರಿಸುತ್ತಿದ್ದರೆ, ಆ ಮಗುವಿನ ಪೋಷಕರು ದಾಖಲಿಸಬೇಕಾಗುತ್ತದೆ. ಆ ಮಗುವನ್ನು ಇತರೆ ವಿದ್ಯಾರ್ಥಿಗಳೊಂದಿಗೆ ಹೊಂದಾಣಿಕೆಯನ್ನು ತರಬೇಕಾಗುತ್ತದೆ. ಅವನು/ಅವಳು ಶಾಲೆಗೆ ಶುಭ್ರಬಟ್ಟೆ ಮತ್ತು ತಲೆ ಬಾಚಿದ ರೀತಿಯಲ್ಲಿ ಬಂದಾಗ, ಮಗು, ಇಂಗ್ಲೀಷ್ ತರಗತಿಗಳನ್ನು ತಪ್ಪಿಸುತ್ತಿದೆ ಎಂದಾಗ, ಇಂಗ್ಲೀಷ್ ಶಿಕ್ಷಕರು ವಿಶೇಷವಾದ ವೈಯುಕ್ತಿಕ ಗಮನವನ್ನು ಆ ಮಗುವಿಗೆ ನಿಡಬೇಕಾಗುತ್ತದೆ. ವಿದ್ಯಾರ್ಥಿಯ ದೌರ್ಬಲ್ಯಗಳನ್ನು ವರದಿ ಮಾಡುವುದಲ್ಲದೆ ವಿದ್ಯಾರ್ಥಿಗಳ ವೈಯುಕ್ತಿಕ ದೌರ್ಬಲ್ಯಗಳು ಮತ್ತು ಬಲಗಳನ್ನು ಗುರ್ತಿಸಿ ವರದಿ ಮಾಡುವುದಾಗಿದೆ. ವಿದ್ಯಾರ್ಥಿಗಳ ದೃಷ್ಟಿಕೋನದಿಂದ ವರದಿ ಮಾಡುವ ಸಮಯ ಬಹಳ ಮುಖ್ಯವಾಗಿದೆ. ಮೌಲ್ಯಮಾಪನ ದಾಖಲೆಯನ್ನು ತಕ್ಷಣವೇ ಹಂಚಬೇಕು ಮತ್ತು ವಿಶೇಷವಾಗಿ ಪಠ್ಯ ಕ್ಷೇತ್ರಗಳಲ್ಲಿನ ಫಲಿತಾಂಶಗಳನ್ನು ತಕ್ಷಣ ಪಡೆಯಲು ಸಾಧ್ಯ. ಆದಾಗ್ಯೂ ಪ್ರತಿಯೊಂದು ಅವಧಿ ಮುಗಿದ ನಂತರ ಪೋಷಕರಿಗೆ ಮೌಲ್ಯಮಾಪನ ದಾಖಲೆಗಳನ್ನು ಹಂಚಬೇಕು. ಶೈಕ್ಷಣಿಕ ಕಾರ್ಯಯೋಜನೆಯನ್ನು ಯೋಜಿಸಲು ಪ್ರಾರಂಭಿಸಲು ಮುಖ್ಯ ಶಿಕ್ಷಕನ ಗಮನಕ್ಕೆ ಮೌಲ್ಯಮಾಪನ ದಾಖಲೆಯನ್ನು ತರಬೇಕಾಗುತ್ತದೆ. ತನ್ನ ವಿದ್ಯಾರ್ಥಿಗಳ ಸಂಪದೀಕರಣ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿಷಯವಾರು ಶಿಕ್ಷಕರು ತಕ್ಷಣ ದಾಖಲಿಸಬೇಕಾಗುತ್ತದೆ.

ಇ1. ವರದಿ ಮಾಡುವಿಕೆಯ ಅನ್ವಯ ಈ ಕೆಳಕಂಡಂತಿದೆ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು

## 16.2.2 ಕಲಿಕೆಯ ಪ್ರಗತಿಗಾಗಿ ದಾಖಲಿಸುವಿಕೆಯ ಪ್ರಕ್ರಿಯೆ

ಮಗುವಿನ ಮುಂದಿನ ಕಲಿಕೆಗೆ ಸಂಬಂಧಿಸಿದಂತೆ ಸಾಂಪ್ರದಾಯಿಕ ಗುರುತಿಸುವಿಕೆಯ ವ್ಯವಸ್ಥೆ ಮೂಲಕ ವರದಿ ಮಾಡುವುದು, ಅರ್ಥಪೂರ್ಣವಾಗಿಲ್ಲ. ಇಂಗ್ಲೀಷಿನಲ್ಲಿ 45 ಅಂಕಗಳನ್ನು ಪಡೆದಾಗ, ಒಬ್ಬ ವಿದ್ಯಾರ್ಥಿಯು ಅವನ/ಅವಳ ಮೇಲೆ ನಡೆಸಿದ ಪರೀಕ್ಷೆಯಲ್ಲಿ ಎಷ್ಟು ಚೆನ್ನಾಗಿ ಅಂಕಗಳನ್ನು ಗಳಿಸಿದ್ದಾನೆ ಎಂಬ ಕಲ್ಪನೆಯನ್ನು ನೀಡುತ್ತದೆ. ಕೆಲವು ಇತರೆ ಮಾಹಿತಿಯಲ್ಲದೆ ಆ ಅಂಕಗಳಿಗೆ ಅರ್ಥವನ್ನು ನಿಡಲು ಸಾಧ್ಯವಿಲ್ಲ. ಆದ್ದರಿಂದ ಸ್ಕೋರ್ ಅನ್ನು ಅರ್ಥೈಸಬಾರದು. ಕಚ್ಚಾ ಅಂಕಗಳ ಆಧಾರದ ಮೇಲೆ ಇಂಗ್ಲೀಷ್ ಭಾಷೆಯಲ್ಲಿ ಸೋಫಿ ಪಡೆದ ಅಂಕಗಳು ಎಂದರೆ ಅವಳು ಈ ವಿಷಯದಲ್ಲಿ ಉತ್ತಮವಾಗಿಲ್ಲ. ಇದನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಈ ಕೆಳಗಿನವುಗಳನ್ನು ಮಾಡಿ.

**ಚಟುವಟಿಕೆ – 1**

ಈ ಕೆಳಕಂಡಂತೆ ಇಂಗ್ಲೀಷ್‌ನಲ್ಲಿ ಸೋಫಿಯ ಕಾರ್ಯಕ್ಷಮತೆಯ ಮಾಹಿತಿಯನ್ನು ನಾವು ನೋಡೋಣ.

- ಸಾಮಾನ್ಯವಾಗಿ ವಿಷಯದಲ್ಲಿ ಗಳಿಸಿದ ಅತ್ಯುನ್ನತ ಸ್ಕೋರ್ 70 ಆಗಿದೆ.
- ಆ ತರಗತಿಯಲ್ಲಿ ವಿಧ್ಯಾರ್ಥಿ ಪಡೆದ ಗರಿಷ್ಠ ಸ್ಕೋರ್ : 53 ಆಗಿದೆ.
- ಆ ತರಗತಿಯಲ್ಲಿನ ಕಡಿಮೆ ಸ್ಕೋರ್ 12 ಆಗಿದೆ.
- ಆ ತರಗತಿಯ ಸರಾಸರಿ ಸ್ಕೋರ್ 27 ಆಗಿದೆ.
- ಅವರ ತರಗತಿಯಲ್ಲಿ ಕೇವಲ 7% ನಷ್ಟು ವಿದ್ಯಾರ್ಥಿಗಳು 45 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.
- ಇಂಗ್ಲೀಷ್ ತರಗತಿಗಳಿಗೆ ಸೋಫಿ ನಿಯಮಿತವಾಗಿ ಹಾಜರಾಗುತ್ತಾಳೆ.
- ಸೋಫಿಗೆ ಇಂಗ್ಲೀಷ್ ವಿಷಯದ ಬಗ್ಗೆ ಇಷ್ಟವಿದೆ.

*ಇಂಗ್ಲೀಷನಲ್ಲಿ ಸೋಫಿ ಕಾರ್ಯಕ್ಷಮತೆಯ ಬಗ್ಗೆ ನಿಮ್ಮ ತೀರ್ಮಾನಗಳನ್ನು ಬರೆಯಿರಿ.*

---

ಹೀಗಾಗಿ ಕಾರ್ಯಕ್ಷಮತೆಯ ಸೂಚ್ಯಾಂಕಗಳು, ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳ ಮೌಲ್ಯ ಮಾಪನವನ್ನು ಒಳಗೊಂಡಿರುವ ಅರ್ಥಪೂರ್ಣ ಹಾಗೂ ಹಿಂದಿನ ಕಾರ್ಯಕ್ಷಮತೆಯ ಮೌಲ್ಯಮಪನ ದತ್ತಾಂಶದ ಸಂಪೂರ್ಣ ದಾಖಲೆ ಮತ್ತು ವರದಿ ಮಾಡುವುದಾಗಿದೆ. ನಿಮ್ಮ ವಿದ್ಯಾರ್ಥಿಗಳ ವಿವಿಧ ಮೌಲ್ಯಮಾಪನದ ಫಲಿತಾಂಶಗಳನ್ನು ವರದಿ ಮಾಡುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಿ.

- ವೈಯುಕ್ತಕವಾಗಿ ದಾಖಲಿಸಬೇಕು.
- ದಾಖಲಿಸುವಿಕೆಯ ಸ್ವರೂಪವು ದತ್ತಾಂಶದ ಪ್ರಕಾರ ಮತ್ತು ಅದನ್ನು ಅವಲಂಬಿಸಿ ಬದಲಾಗುತ್ತದೆ.
- ಆಧಾರದ ಮೇಲೆ ವಸ್ತುನಿಷ್ಟವಾಗಿ ದಾಖಲಿಸಲಾಗುತ್ತದೆ.
- ತುಂಬಾ ಸಾಮಾನ್ಯವಾಗಿ, ನಿಖರವಾಗಿ ಹೇಳಬೇಕಾದ ಸಂದರ್ಭದಲ್ಲಿ ಗುಣಾತ್ಮಕ ದತ್ತಾಂಶವನ್ನು ದಾಖಲಿಸಬೇಕಾಗುತ್ತದೆ. ಎಲ್ಲಾ ಪಾಲುದಾರರಿಗೂ ಅರ್ಥವಾಗುವ ಸಲುವಾಗಿ ತುಂಬ ಸರಳವಾದ ಭಾಷೆಯನ್ನು ಬಳಸಿ ಸ್ಪಷ್ಟಪಡಿಸಬೇಕಾಗುತ್ತದೆ.
- ದಾಖಲಿಸುವಿಕೆಯನ್ನು ಸಕಾರಾತ್ಮಕವಾಗಿ ಮಾಡಬೇಕಾಗಿದೆ.
- ವಿವಿಧ ಪಾಲುದಾರರ ಮಟ್ಟಕ್ಕೆ ಅನುಗುಣವಾಗಿ ಸೂಕ್ತ ದತ್ತಾಂಶವನ್ನು ದಾಖಲಿಸಬೇಕಾಗುತ್ತದೆ.
- ಕ್ರಿಯೆಯನ್ನು ಸೂಚಿಸುವ ರಿತಿಯಲ್ಲಿ ಮೌಲ್ಯಮಾಪನ ದತ್ತಾಂಶವನ್ನು ದಾಖಲು ಮಾಡಬೇಕಾಗಿದೆ.

ವಿದ್ಯಾರ್ಥಿಗಳ ಸಾಧನೆಗಳನ್ನು ದಾಖಲಿಸಲು ಕಾರ್ಯಕ್ಷಮತೆ, ಪ್ರಗತಿ (ಆರು ಮತ್ತು 8ನೇ ತರಗತಿ) ಪತ್ರವನ್ನು ವಿನ್ಯಾಸಗೊಳಿಸೋಣ.

Notes

ಕಾರ್ಯಕ್ಷಮತೆ ಪ್ರಗತಿಪತ್ರದಲ್ಲಿ, ಕಾರ್ಯಕ್ಷಮತೆ ವರದಿಗಳ ಪ್ರದರ್ಶನ ಸೂಚಕಗಳು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರಬೇಕು. ಇದು ಪಠ್ಯ ಕ್ಷೇತ್ರದ '5 ಠಿಠುಟಿಣ ಡಿಚಿಣುಟಿರ, ಛಿಚಿಟಜ' ರೂಪದಲ್ಲಿ ಇರಬಹುದು.

| | | |
|---|---|---|
| ಶ್ರೇಣಿ ಎ | 80% ಮತ್ತು ಅದಕ್ಕಿಂತ ಹೆಚ್ಚಿನ | ಉನ್ನತ |
| ಶ್ರೇಣಿ ಬಿ | 65% – 79% | ಅತ್ಯತ್ತಮ |
| ಶ್ರೇಣಿ ಸಿ | 50% – 64% | ಉತ್ತಮ |
| ಶ್ರೇಣಿ ಡಿ | 35% – 49% | ಸಾಧಾರಣ |
| ಶ್ರೇಣಿ ಇ | 35% ಕ್ಕಿಂತ ಕಡಿಮೆ | ವಿಶೇಷ ಗಮನದ ಅಗತ್ಯತೆ |

ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿ 3–ಪಾಯಿಂಟ್ ಸ್ಕೇಲನ್ನು ಬಳಸಬಹುದಾಗಿದೆ.

| | |
|---|---|
| ಶ್ರೇಣಿ ಎ | ಉನ್ನತ |
| ಶ್ರೇಣಿ ಬಿ | ಅತ್ಯುತ್ತಮ |
| ಶ್ರೇಣಿ ಸಿ | ಮುಂದಿನ ಗಮನದ ಅವಶ್ಯಕತೆ |

*<u>ವಿದ್ಯಾರ್ಥಿಯ ಕಾರ್ಯಕ್ಷಮತೆಯ ಪತ್ರದ ವರದಿ</u>* :

*ಎ) <u>ವಿದ್ಯಾರ್ಥಿಯ ವಿವರ</u>*

ಕಲಿಕಾರ್ಥಿಯ ಹೆಸರು : ______________________________

ಶಾಲೆಯ ಹೆಸರು : ______________

ತರಗತಿ : ________ ವಿಭಾಗ : ________ ನೊಂದಣಿ ಸಂಖ್ಯೆ ________ ವರ್ಷ ________

*ಬಿ) <u>ಪಠ್ಯಕ್ಷೇತ್ರದಲ್ಲಿ ಕಾರ್ಯಕ್ಷಮತೆ</u>*

| ಕ್ರಮ ಸಂಖ್ಯೆ | ವಿಷಯ | ಅವಧಿ–ಋ ಅಂಕಗಳು/ಶ್ರೇಣಿ | | | | ಅವಧಿ–ಋಋ ಅಂಕಗಳು/ಶ್ರೇಣಿ | | | | ಅವಧಿ–ಋಋಋ ಅಂಕಗಳು/ಶ್ರೇಣಿ | | | |
|---|---|---|---|---|---|---|---|---|---|---|---|---|---|
| | | ಮೌ | ಬ | ಪ್ರಾ | ಒಟ್ಟು | ಮೌ | ಬ | ಪ್ರಾ | ಒಟ್ಟು | ಮೌ | ಬ | ಪ್ರಾ | ಒಟ್ಟು |
| 1 | ವಿಷಯ–1 | | | | | | | | | | | | |
| 2 | ವಿಷಯ–2 | | | | | | | | | | | | |
| 3 | ವಿಷಯ–3 | | | | | | | | | | | | |
| 4 | ಗಣಿತ | | | | | | | | | | | | |
| 5 | ಸಾಮಾನ್ಯ ವಿಜ್ಞಾನ | | | | | | | | | | | | |
| 6 | ಸಮಾಜ ವಿಜ್ಞಾನ | | | | | | | | | | | | |

Notes

*ಸಿ) ಪಠ್ಯೇತರ ಕ್ಷೇತ್ರದಲ್ಲಿ ಕಾರ್ಯಕ್ಷಮತೆ*

| *ಕ್ರಮ ಸಂಖ್ಯೆ* | *ಪಠ್ಯೇತರ ಕ್ಷೇತ್ರಗಳು* | *ಶ್ರೇಣಿಯ ಅವಧಿ-1* | *ಶ್ರೇಣಿಯ ಅವಧಿ-2* | *ಶ್ರೇಣಿಯ ಅವಧಿ-3* |
|---|---|---|---|---|
| 1 | ಕಲಾ ಶಿಕ್ಷಣ | | | |
| 2 | ಕಾರ್ಯಾನುಭವ ಶಿಕ್ಷಣ | | | |
| 3 | ಆರೋಗ್ಯ ಮತ್ತು ದೈಹಿಕ ಶಿಕ್ಷಣ | | | |

*ಡಿ) ವೈಯುಕ್ತಿಕ ಮತ್ತು ಸಾಮಾಜಿಕ ಗುಣಗಳು*

| ಕ್ರಮ ಸಂಖ್ಯೆ | ವೈಯುಕ್ತಿಕ ಮತ್ತು ಸಾಮಾಜಿಕ ಗುಣಗಳು | ಶ್ರೇಣಿಯ ಅವಧಿ-1 | ಶ್ರೇಣಿಯ ಅವಧಿ-2 | ಶ್ರೇಣಿಯ ಅವಧಿ-3 |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |

ವೈಯುಕ್ತಿಕ ಮತ್ತು ಸಾಮಾಜಿಕ ಗುಣಗಳನ್ನು ಸ್ವಚ್ಛತೆ, ಸಹಕಾರ, ಶಿಸ್ತು, ವಿಧೇಯತೆ, ಭಾವನೆಗಳ ಸ್ಥಿರತೆ, ಜವಾಬ್ದಾರಿ, ಶ್ರದ್ಧೆ, ಪರಿಸರ ಜಾಗೃತಿ, ತಾಳ್ಮೆ, ನಾಯಕತ್ವದ ಗುಣ, ದೇಶಭಕ್ತಿ, ಸಮಾಜ ಸೇವೆ, ಪೌರ ಪ್ರಜ್ಞೆ, ಹಿರಿಯರಿಗೆ ಗೌರವ, ಸಾಂಸ್ಕೃತಿಯ ಪರಂಪರೆಯ ರಕ್ಷಣೆಯ ಆಧಾರಗಳನ್ನು ಒಳಗೊಂಡಿರುತ್ತದೆ.

| *ಕ್ರಮ ಸಂಖ್ಯೆ* | *ಸಹ ಪಠ್ಯ ಚಟುವಟಿಕೆಗಳು* | *ಶ್ರೇಣಿಯ ಅವಧಿ* | *ಶ್ರೇಣಿಯ ಅವಧಿ* | *ಶ್ರೇಣಿಯ ಅವಧಿ* |
|---|---|---|---|---|
| 1 | ಸಾಹಿತ್ಯ (ಓದುಗಾರಿಕೆ, ಪಠಣ, ಚರ್ಚೆ, ಸೃಜನಶೀಲ ಬರವಣಿಗೆ) | | | |
| 2 | ವೈಜ್ಞಾನಿಕ (ಸಂಘದ ಚಟುವಟಿಕೆಗಳು, ಪರಿಸರ ಅಧ್ಯಯನ, ಗಣಕ ಸಾಕ್ಷರತೆ) | | | |
| 3 | ಕಲಾತ್ಮಕ (ಚಿತ್ರಕಲೆ, ಕಸೂತಿ ಕೆಲಸ) | | | |
| 4 | ಸಾಂಸ್ಕೃತಿಕ (ಸಂಗೀತ, ಪ್ರದರ್ಶನ ಕಲೆ) | | | |
| 5 | ದೈಹಿಕ (ಒಳಾಂಗಣ, ಹೊರಾಂಗಣ, ಯೋಗಾಭ್ಯಾಸ) | | | |
| 6 | ಇತರೆ (ರೆಡ್ ಕ್ರಾಸ್, ಸ್ಕೌಟ್, ಎನ್.ಸಿ.ಸಿ, ಸಾಹಸ ಚಟುವಟಿಕೆಗಳು) | | | |

Notes

ಇ) ಹಾಜರಾತಿ

| ಅವಧಿ-1 | | ಅವಧಿ-2 | | ಅವಧಿ-3 | |
|---|---|---|---|---|---|
| ಒಟ್ಟು ಕೆಲಸದ ದಿನಗಳು | ಹಾಜರಾತಿ | ಒಟ್ಟು ಕೆಲಸದ ದಿನಗಳು | ಹಾಜರಾತಿ | ಒಟ್ಟು ಕೆಲಸದ ದಿನಗಳು | ಹಾಜರಾತಿ |
| | | | | | |
| | | | | | |

ಎಫ್) ಟಿಪ್ಪಣಿಗಳು :

| ಕ್ರಮ ಸಂಖ್ಯೆ | ಟಿಪ್ಪಣಿಗಳು | ಟಿಪ್ಪಣಿಗಳು | ಅವಧಿ-1 | ಅವಧಿ-2 | ಅವಧಿ-3 |
|---|---|---|---|---|---|
| 1 | ತರಗತಿ ಶಿಕ್ಷಕ | ಶಕ್ತಿ, ಉತ್ತಮ ಪಡಿಸಬಹುದಾದ ಕ್ಷೇತ್ರಗಳು | | | |
| 2 | ಮುಖ್ಯ ಶಿಕ್ಷಕ | ಶಕ್ತಿ, ಉತ್ತಮ ಪಡಿಸಬಹುದಾದ ಕ್ಷೇತ್ರಗಳು | | | |
| 3 | ಪೋಷಕರು | ಶಕ್ತಿ, ಉತ್ತಮ ಪಡಿಸಬಹುದಾದ ಕ್ಷೇತ್ರಗಳು | | | |

*ಹೆಚ್. ಸಹಿ*

*ಪೋಷಕರು* *ತರಗತಿ ಶಿಕ್ಷಕರು* *ಮುಖ್ಯ ಶಿಕ್ಷಕರು*

---

*ಚಟುವಟಿಕೆ-2*

*ವಿದ್ಯಾರ್ಥಿಯ ಕಾರ್ಯ ಕ್ಷಮತೆಯನ್ನು ಸೂಚಿಸಿದ ಸ್ವರೂಪದ ಪ್ರಕಾರ ದಾಖಲಿಸ ಬಹುದು, ಈ ಸ್ವರೂಪ ಬಳಸಲು ಸಿದ್ಧವಾಗಿದೆಯೇ? ಇಲ್ಲದಿದ್ದರೆ ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ ನೀವು ಯಾವ ಮಾರ್ಪಾಡನ್ನು ಮಾಡಲು ಬಯಸುತ್ತೀರಿ?*

---

ಮೇಲೆ ಚರ್ಚಿಸಲಾದ 6 ಮತ್ತು 8ನೇ ತರಗತಿಯ ಪ್ರಗತಿ ಪತ್ರಕ್ಕೆ ಸಂಬಂಧಿಸಿದಂತೆ ವರದಿಯ ವಿಷಯವಾರು ಪಠ್ಯ ಕ್ಷೇತ್ರದಲ್ಲಿ 3 ಆಯಾಮಗಳಿಗೆ ಸಂಬಂಧಿಸಿದಂತೆ (ಬರವಣಿಗೆ, ಮೌಖಿಕ ಮತ್ತು ಪ್ರಾಯೋಗಿಕ) ನೀವು ಶಿಕ್ಷಕರಾಗಿ ಉತ್ಸುಕತೆಯಿಂದ ನಿಮ್ಮ ವಿದ್ಯಾರ್ಥಿಗಳಲ್ಲಿ ಕಲಿಕಾ ಮಟ್ಟವನ್ನು ಹೆಚ್ಚಿಸಿದ್ದೇ ಆದಲ್ಲಿ ನಿಮ್ಮ ಉದ್ದೇಶ ಸಾಧನೆ ಪೂರ್ತಿಯಾಗುತ್ತದೆ.

ಇ2. ಪಠ್ಯ ಮತ್ತು ಪಠ್ಯೇತರ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ದಾಖಲಿಸುವಿಕೆಯ ಪ್ರಕ್ರಿಯೆಯಲ್ಲಿ ಏರಿಳಿತಗಳಿಗೆ ಕಾರಣಗಳನ್ನು ತಿಳಿಸಿ.

## ಕಲಿಕೆ ಮತ್ತು ಗುಣಮಾಪನ

| ಕ್ರಮ ಸಂಖ್ಯೆ | ಆಯಾಮಗಳು | ಸೂಚಕಗಳು | ಅವಧಿವಾರು ಶ್ರೇಣಿ | | |
|---|---|---|---|---|---|
| | | | ಅವಧಿ–1 | ಅವಧಿ–2 | ಅವಧಿ–3 |
| 1 | ವೀಕ್ಷಣೆ ಮತ್ತು ದಾಖಲಿಸುವಿಕೆ. | ಒಂದು ವಸ್ತು ಘಟನೆ ಅಥವ ಒಂದು ವಿದ್ಯಮಾನವನ್ನು ವೀಕ್ಷಿಸಲು ಸಮಯ ಪ್ರಜ್ಞೆಯನ್ನು ಬಳಸುವುದು. | | | |
| | | ಸಾಮಾನ್ಯ ವಸ್ತು ಘಟನೆಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸುವುದು | | | |
| | | ವಿವಿಧ ವಸ್ತು ಘಟನೆಗಳ ನಡುವಿನ ಹೋಲಿಕೆಗಳನ್ನು ಗುರ್ತಿಸುವುದು | | | |
| | | ಒಂದು ಘಟನೆ ಅಥವ ಪ್ರಕ್ರಿಯೆಯನ್ನು ವರದಿ ಮತ್ತು ವಿವರಿಸುವುದು | | | |
| | | ಮೌಕಿಕ ಮತ್ತು ಲಿಖಿತ ನಿರೂಪಣೆಗಳು | | | |
| | | ಚಿತ್ರಗಳು, ನಕ್ಷೆಗಳು ಮತ್ತು ಕೋಷ್ಟಕಗಳನ್ನು ಓದುವುದು | | | |
| | | ಸಂಕೀರ್ಣತೆಯನ್ನು ಕ್ರಮೇಣವಾಗಿ ಹೆಚ್ಚಿಸುತ್ತದೆ. | | | |
| 2 | ಚರ್ಚೆ | ಇತರರ ಅಭಿಪ್ರಾಯ ಮತ್ತು ಆಲೋಚನೆಗಳನ್ನು ಕೇಳುವುದು, | | | |
| | | ಗುಂಪಿನಲ್ಲಿ ಒಬ್ಬರ ಆಲೋಚನೆ, ಕಲ್ಪನೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು, | | | |
| | | ಇತರರ ಆಲೋಚನೆ ಮತ್ತು ಅಭಿಪ್ರಾಯಗಳನ್ನು ಪುನರಾವರ್ತಿಸುವುದು ಮತ್ತು ಪ್ರತಿಕ್ರಿಯಿಸುವುದು. | | | |
| | | ಇತರರ ಹಿಮ್ಮಾಹಿತಿಯನ್ನು ಸ್ವೀಕರಿಸುವ ಮುಕ್ತತೆ ಮತ್ತು ಇತರರು ಹೊಂದಿರುವ ವಿವಿಧ ದೃಷ್ಟಿಕೋನ, | | | |
| | | ಇತರರ ಪ್ರತಿಕ್ರಿಯೆಯನ್ನು ಆಧರಿಸಿ ಒಬ್ಬರ ಆಲೋಚನೆಗಳನ್ನು ಪರಿಶೀಲಿಸಲಾಗುತ್ತಿದೆ. | | | |
| | | ಶಾಲೆಯ ಹೊರಗಿನ ಅಪರಿಚಿತರನ್ನು ಸಹ, ಇತರರಿಂದ ಕಂಡುಕೊಳ್ಳುವುದು. | | | |

Notes

Notes

| | | | | | |
|---|---|---|---|---|---|
| 4 | ವಿವರಣೆ | ವೀಕ್ಷಿಸಲ್ಪಟ್ಟ ಘಟನೆ / ಚಟುವಟಿಕೆಯ ಆಧಾರದ ಮೇಲೆ ಒಬ್ಬರ ಸ್ವಂತ ಕಾರಣ ಕೊಡುವುದನ್ನು ರೂಢಿಸುವುದು. | | | |
| | | ಒಬ್ಬರ ಸ್ವಂತ ತಾರ್ಕಿಕತೆಗೆ ವಿಮರ್ಶಾತ್ಮಕವಾಗಿ ಯೋಚಿಸುವುದು. | | | |
| | | ತಾರ್ಕಿಕ ಸಂಪರ್ಕಗಳನ್ನು ಮಾಡುತ್ತಿದ್ದು. | | | |
| | | ಪರಿಕಲ್ಪನೆ ಅಥವಾ ಪತ್ರಗಳನ್ನು ಸಂಬಂಧದ ರೂಪದಲ್ಲಿ ವಿವರಿಸಲು ಸರಳ ಊಹೆಗಳನ್ನು ಮಾಡುವುದು. | | | |
| 5 | ವರ್ಗೀಕರಣ : | ವೀಕ್ಷಿಸಲ್ಪಡುವ ಗುಣಲಕ್ಷಣಗಳ ಆಧಾರದ ಮೇಲೆ ವಸ್ತುಗಳ ಗುಂಪನ್ನು ಗುರ್ತಿಸುವುದು. | | | |
| | | ವಸ್ತುಗಳ ಗುಂಪುಗಳ ವಿಭಿನ್ನತೆಗಳು/ ವ್ಯತ್ಯಾಸಗಳನ್ನು ಗುರ್ತಿಸುವುದು. | | | |
| | | ವಸ್ತುಗಳ ಗುಂಪುಗಳ ಹೋಲಿಕೆಗಳನ್ನು ಗುರ್ತಿಸುವುದು. | | | |
| | | ಒಂದು ಚರಾಂಶದ ಆಧಾರದ ಮೇಲೆ ನಿರ್ದಿಷ್ಟ ಸಮಯದಲ್ಲಿ ವಸ್ತುಗಳ ಗುಂಪು ರಚನೆ. | | | |
| 6 | ಪ್ರಶ್ನಿಸುವುದು: | ವಸ್ತುಗಳು, ಘಟನೆಗಳು ಮತ್ತು ಜನರ ಕುರಿತಂತೆ ಮಾಹಿತಿ ಸಂಗ್ರಹಿಸಲು ಪ್ರಶ್ನೆಗಳನ್ನು ಕೇಳುವುದು. | | | |
| | | ಆಳವಾದ ವಿಶ್ಲೇಷಣೆ ಮಾಡಲು ಅನುಕೂಲವಾಗುವಂತೆ ವಿಮರ್ಶಾತ್ಮಕ ಪ್ರಶ್ನೆಗಳನ್ನು ಕೇಳುವುದು | | | |
| | | ಪ್ರಾಕಲ್ಪನೆಯನ್ನು ಆಧರಿಸಿ ಪ್ರಶ್ನೆಗಳನ್ನು ಕೇಳುವುದು. | | | |
| | | ತಮ್ಮ ಸ್ವಂತ ಅನ್ವೇಷಣೆಗಳ ಮೂಲಕ ಉತ್ತರಿಸಬಹುದಾದ ಪ್ರಶ್ನೆಗಳನ್ನು ಗುರ್ತಿಸುವುದು. | | | |
| | | ವಿಚಾರಣೆಯ ಮೂಲಕ ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ ಎಂದು ಗುರ್ತಿಸುವುದು. | | | |



Notes

| | | | | | |
|---|---|---|---|---|---|
| 7 | ವಿಶ್ಲೇಷಣೆ: | ತಮ್ಮದೇ ಆದ ಭಾಷೆಯಲ್ಲಿ ಘಟನೆ / ಸಂದರ್ಭವನ್ನು ವ್ಯಾಖ್ಯಾನಿಸುವುದು. | | | |
| | | ಯಾವುದೇ ವಿದ್ಯಮಾನ / ಘಟನೆಗಳಿಗೆ ಸಾಧ್ಯವಾಗುವಂತಹ ಕಾರಣಗಳನ್ನು ಗುರ್ತಿಸುವುದು / ಊಹಿಸುವುದು. | | | |
| | | ಸಂಶೋಧನಾ ಮಾದರಿಗಳಿಗೆ ಹೊಂದಿಕೆಯಾಗದೇ ಇರುವ ಆಧಾರಗಳನ್ನು ಪರೀಕ್ಷಿಸುವುದು. | | | |
| | | ಆಧಾರವನ್ನು ಉತ್ತಮ ಅರ್ಥದಲ್ಲಿ ವಿಭಿನ್ನ ಕಲ್ಪನೆಗಳ ಮೂಲಕ ಬದಲಾಗುತ್ತಿರುವ ಕಲ್ಪನೆಗಳಿಗೆ ಅನುಗುಣವಾಗಿ ಪ್ರತಿ ತೀರ್ಮಾನವನ್ನು ಹೊಸ ಸವಾಲೆಂದು ಪರಿಗಣಿಸುವುದು. | | | |
| | | ಅನುಭವ / ಪ್ರಯೋಗಗಳ ಆಧಾರದ ಮೇಲೆ ಊಹೆಗಳನ್ನು ಮಾಡುವುದು. | | | |
| 8 | ಪ್ರಾಯೋಗಿಕ: | ಒಂದು ಗುಂಪಿನಲ್ಲಿ ಪ್ರತ್ಯೇಕವಾಗಿ, ಆರೈಕೆಯೊಂದಿಗೆ ವಸ್ತುಗಳು ಅಥವಾ ಉಪಕರಣಗಳನ್ನು ನಿರ್ವಹಿಸುವುದು. | | | |
| | | ವ್ಯವಸ್ಥಿತ ಹಂತಗಳ ಮೂಲಕ ಗುಂಪಿನಲ್ಲಿ ಪ್ರತ್ಯೇಕವಾಗಿ ಚಟುವಟಿಕೆಗಳನ್ನು ಮಾಡುವುದು. | | | |
| | | ಜೀವಂತ ಜೀವಿಗಳಿಗೆ ಗೌರವ ಮತ್ತು ಪ್ರೀತಿಯನ್ನು ತೋರಿಸುವುದು. | | | |
| | | ಕನಿಷ್ಟ ವ್ಯರ್ಥ ವಸ್ತುಗಳಿಗೆ ಕಾಳಜಿಯನ್ನು ತೋರಿಸುವುದು. | | | |
| | | ಆದಷ್ಟು ಮರು ಬಳಕೆ ಮತ್ತು ಮರುಬಳಕೆಯ ಕಡೆ ಗಮನ ಹರಿಸುವುದು. | | | |
| | | ರೀಡಿಂಗ್‌ಗಳನ್ನು ತೆಗೆದುಕೊಳ್ಳುವಾಗ ಹೋಲಿಕೆಗಳನ್ನು ಮತ್ತು ಪ್ರಮಾನಿತ ಮತ್ತು ಪ್ರಮಾಣಿತವಲ್ಲದ ಮಾಪನಗಳನ್ನು ಬಳಸುವುದು. | | | |
| | | ತಮ್ಮದೇ ಆದ ವಿಷಯಗಳನ್ನು ಹೊಸ ವಿಷಯಗಳನ್ನು ಸುಧಾರಿಸುವುದು ಮತ್ತು ರಚಿಸುವುದು. | | | |

Notes

| | | | | | |
|---|---|---|---|---|---|
| 9 | ನ್ಯಾಯ, ಸಮಾನತೆ, ಸಹಕಾರಕ್ಕಾಗಿ ಕಾಳಜಿ: | ಮಕ್ಕಳ ವಿಭಿನ್ನ ಜೀವನ/ಅನುಭವ/ಸಂಸ್ಕೃತಿಯ ವೀಕ್ಷಣೆಗೆ ಅನುಗುಣವಾಗಿರುವುದು. | | | |
| | | ಅವಕಾಶವಂಚಿತ ಮತ್ತು ವಿಕಲಾಂಗರ ಬಗ್ಗೆ ಸೂಕ್ಷ್ಮತೆಯನ್ನು ಹೊಂದಿರುವುದು. | | | |
| | | ಸಮಾಜ ಮತ್ತು ಕುಟುಂಬದಲ್ಲಿನ ಅಸಮಾನತೆಗಳ ಬಗ್ಗೆ ಜಾಗೃತರಾಗಿರುವುದು. | | | |
| | | ಪ್ರತಿಫಲಿಸಲು ಮತ್ತು ಪ್ರಶ್ನಿಸಲು ಸಾಧ್ಯವಾಗಬೇಕು. | | | |
| | | ಕೇವಲ ಕಾರಣಕ್ಕಾಗಿ ಬಲವಾದ ಅರ್ಥದಲ್ಲಿ ನ್ಯಾಯ ಮತ್ತು ನ್ಯಾಯಕ್ಕಾಗಿ ಕಾರ್ಯ ನಿರ್ವಹಿಸಲು ಸಿದ್ಧವಾಗಿರಬೇಕು. | | | |
| 10 | ಸಹಕಾರ: | ಒಬ್ಬರ ಸ್ವಂತ ಶಕ್ತಿ ಮತ್ತು ದೌರ್ಬಲ್ಯಗಳನ್ನು ಒಪ್ಪಿಕೊಳ್ಳುವುದು. | | | |
| | | ಇತರರ ಅಭಿಪ್ರಾಯಗಳನ್ನು ಶ್ಲಾಘಿಸುವುದು. | | | |
| | | ಸಾಮೂಹಿಕ ಕೆಲಸಕ್ಕಾಗಿ ಜವಾಬ್ದಾರಿಗಳನ್ನು ಉಪಕ್ರಮಗಳನ್ನು ತೆಗೆದುಕೊಳ್ಳುವುದು. | | | |
| | | ಇತರರೊಮದಿಗೆ ಕೆಲಸವನ್ನು ಮತ್ತು ಹಂಚಿಕೊಳ್ಳುವುದು, ಇದು ಇತರರಿಗೆ ಸಹಾಯವಾಗಿ ಪರಿಗಣಿಸಲಾಗುತ್ತದೆ. | | | |

Notes

**ತರಗತಿ 5 ರಲ್ಲಿನ ಭಾಷಾ ಕಾರ್ಯಕ್ಷಮತೆಯನ್ನು ದಾಖಲಿಸುವುದು**

ಭಾಷಾ ಕಲಿಕೆಯೆಂದರೆ ಓದುಗಾರಿಕೆ, ಮಾತುಗಾರಿಕೆ, ಆಲಿಸುವಿಕೆ, ಬರವಣಿಗೆ ಎಂಬ 4 ಭಾಷಾ ಕೌಶಲಗಳನ್ನು ಅಳವಡಿಸಿಕೊಳ್ಳುವುದು. ಆದ್ದರಿಂದ ನೀವು ಅದೇ 3 ಪಾಯಿಂಟ್ ಸ್ಕೇಲ್‌ಅನ್ನು ಬಳಸಿ ಪ್ರತಿಯೊಂದರ ಅಡಿಯಲ್ಲಿ ಸಾಮರ್ಥ್ಯಗಳನ್ನು ದಾಖಲಿಸಲು ಇ.ವಿ.ಎಸ್ ನಲ್ಲಿನ ಸೂಚಕಗಳನ್ನು ರೇಟಿಂಗ್‌ನಲ್ಲಿ ಬಳಸಲಾಗುತ್ತದೆ. ಅವನ/ಅವಳ ವರ್ಗ ಆಧಾರಿತ 3 ಅವಧಿಗಳಲ್ಲಿ ಸಾಮರ್ಥ್ಯದ ವೀಕ್ಷಣೆ.

| | | ಅವಧಿ ಆಧಾರಿತ ಶ್ರೇಣಿ | | |
|---|---|---|---|---|
| ಕ್ರ. ಸಂಖ್ಯೆ | ಸೂಚಕಗಳು | ಅವಧಿ 1 | ಅವಧಿ 2 | ಅವಧಿ 3 |
| 1 | ಆಲಿಸುವಿಕೆ: ಮೌಖಿಕ ಪಠ್ಯವನ್ನು ಅರ್ಥಮಾಡಿಕೊಳ್ಳಲು ಆಲಿಸುವಿಕೆ (ಒಂದು ಕೊಠಡಿಯ ಉಪನ್ಯಾಸ, ಟಿ.ವಿ, ರೇಡಿಯೋ, ಪ್ರಸಾರ ಪ್ರಕಟಣೆಗಳು, ಚರ್ಚೆಗಳು, ಸೂಚನೆಗಳು ಇತ್ಯಾದಿ, ಶಿಕ್ಷಕ ನಿರ್ದೇಶಿಸಿದ ವಾಕ್ಯ ವೃಂದಗಳನ್ನು ವಾಕ್ಯಗಳನ್ನು ಲಿಪ್ಯಂತರ ಮಾಡಬಹುದು. | | | |
| 2 | ಮಾತುಗಾರಿಕೆ: ಪದಗಳು ಮತ್ತು ನುಡಿಗಟ್ಟುಗಳನ್ನು ಗುರ್ತಿಸುವುದು, ಭವಿಷ್ಯ ಮತ್ತು ಊಹೆಗಳನ್ನು ಮಾಡುವುದು. ಮೌಖಿಕ ಪಠ್ಯದಲ್ಲಿನ ಪ್ರಮುಖ ಅಂಶಗಳನ್ನು ಸಾರಾಂಶೀಕರಿಸುವುದು. ಪ್ರತಿಕ್ರಿಯೆಗಳನ್ನು ಒದಗಿಸಿ, ತೀರ್ಮಾನಗಳನ್ನು ಮಾಡಿ ತೀರ್ಮಾನಗಳನ್ನು ರಚಿಸುವುದು. ವಿಭಿನ್ನ ಪಠಣಗಳನ್ನು ಬಳಸಿಕೊಳ್ಳುವುದು. ಸಂರಚನಾತ್ಮಕ ಗುಂಪು ಚರ್ಚೆಗಳಲ್ಲಿ ಅನುಭವಗಳನ್ನು, ವೀಕ್ಷಣೆಗಳನ್ನು ಮತ್ತು ಕಲ್ಪನೆಗಳನ್ನು ಹಂಚಿಕೊಳ್ಳುವುದು. ಸಂಕ್ಷಿಪ್ತವಾಗಿ, ನಿಖರವಾಗಿ, ಭಾವನೆಗಳನ್ನು ಕಲ್ಪನೆಗಳನ್ನು ಅಭಿವ್ಯಕ್ತಿಸುವುದು ಮತ್ತು ಪ್ರತಿಕ್ರಿಯಿಸುವುದು. ಸ್ವಂತ ಅಭಿಪ್ರಾಯಗಳನ್ನು, ತೀರ್ಮಾನಗಳನ್ನು ಬೆಂಬಲಿಸುವುದು, ಇತ್ಯಾದಿ ಉದಾಹರಣೆಗಳ ಜೊತೆಯಲ್ಲಿ ದಿನನಿತ್ಯದ ವಿಷಯಗಳನ್ನು ಕುರಿತಂತೆ ಸಂವಾದಗಳನ್ನು ನಡೆಸುವುದು. | | | |

Notes

| | | | | |
|---|---|---|---|---|
| 3 | ಓದುಗಾರಿಕೆ : ಮೌಖಿಕವಾಗಿ ಮತ್ತು ಮೌನವಾಗಿ ಸೂಕ್ತ ಪಠ್ಯಗಳನ್ನು ಓದುವುದು. ವಿವಿಧ ಸಂದರ್ಭಗಳಲ್ಲಿ ಈ ಮೋದಲಿನ ಅನುಭವ, ಮಾಹಿತಿ ಮತ್ತು ಜ್ಞಾನವನ್ನು ಬಳಸುವುದು. ನಿಘಂಟು ಅಥವಾ ಶಬ್ದಕೋಶವನ್ನು ಬಳಸುವುದು. ಆರಂಭದಲ್ಲಿ ಪಠ್ಯಕ್ಕೆ ಪ್ರತಿಕ್ರಿಯಿಸುವುದು. ಲೇಖನಗಳು, ಕವನಗಳು, ವರದಿಗಳು ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಮೆಚ್ಚುಗೆ ವ್ಯಕ್ತಪಡಿಸುವುದು. | | | |
| 4 | ಬರವಣಿಗೆ : ಕಾಗದಗಳನ್ನು, ವಿವರಣೆಗಳನ್ನು, ಪೋಸ್ಟರ್‌ಗಳನ್ನು, ಸೂಚನೆಗಳನ್ನು ತಯಾರಿಸಿ, ಸಂದೇಶಗಳನ್ನು ಬರೆಯುವುದು. ಪ್ರಮುಖ ಅಂಶಗಳನ್ನು ಬೆಂಬಲಿಸಲು ಸತ್ಯಾಂಶಗಳನ್ನು ವಿವರಗಳು, ಉದಾಹರಣೆಗಳನ್ನು ಒದಗಿಸುವುದು ಸೂಕ್ತ ಅನುಕ್ರಮದಲ್ಲಿ ಕಲ್ಪನೆಗಳನ್ನು ಸಂಘಟಿಸುವುದು. | | | |

**ಚಟುವಟಿಕೆ–3**

*3ನೇ ತರಗತಿ ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ದಾಖಲಿಸಲು ಒಂದು ನಮೂನೆಯನ್ನು ಅಭಿವೃದ್ಧಿಪಡಿಸಿ ಸ್ಥಳೀಯ ಬದಲಾವಣೆಯನ್ನು ಪರಿಗಣನೆಗೆ ತೆಗೆದುಕೊಂಡು 3 ಪಾಯಿಂಟ್ ಸ್ಕೇಲ್ ರಚಿಸಿ*

*3ನೇ ತರಗತಿ ಗಣಿತ ವಿಷಯದಲ್ಲಿನ ಕಾರ್ಯ ಕ್ಷಮತೆಯ ದಾಖಲಿಸುವಿಕೆ :*

ಗಣಿತಶಾಸ್ತ್ರದಲ್ಲಿ ಸಾಮಾನ್ಯವಾಗಿ ಪ್ರಕ್ರಿಯೆ ಆಧಾರಿತ ಮೌಲ್ಯಮಾಪನವನ್ನು ಮಾಡಲಾಗುತ್ತದೆ. ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಕೆಲಸ ಮಾಡುತ್ತಾರೆ ನಿವು ಗಮನಿಸಬೇಕಾದ ಗಣಿತಶಾಸ್ತ್ರದಲ್ಲಿನ ಯಾವುದೇ ಸಮಸ್ಯೆಯನ್ನು ಸಣ್ಣ ಹಂತಗಳನ್ನಾಗಿ ವಿಂಗಡಿಸಬಹುದು. ಪ್ರತಿಯೊಂದು ಹಂತವು ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಕ್ರಿಯೆಯ ಯಶಸ್ವಿಯಾಗುವುದಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಯು ಗುರುತಿಸಲ್ಪಡಬೇಕು ಮತ್ತು ಖ್ಯಾತಿಯನ್ನು ಹೊಂದಿರಬೇಕಾಗುತ್ತದೆ. ಈ ದೃಷ್ಟಿಕೋನದಲ್ಲಿ ಪ್ರತಿಯೊಂದು ಸಮಸ್ಯೆಯು ಕೂಡ 1, 2, 3 ರ 3 ಶ್ರೇಣಿಗಳ ಅಡಿಯಲ್ಲಿ ಮೌಲ್ಯಮಾಪನ ಮತ್ತು ವರ್ಗೀಕರಿಸಲಾಗುತ್ತದೆ.

ಶ್ರೇಣಿ 1 : ಒಬ್ಬ ವಿದ್ಯಾರ್ಥಿಯು ಪ್ರಕ್ರಿಯೆಯ ಒಂದು ಭಾಗವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಸಾಧ್ಯವಿಲ್ಲ.
ಶ್ರೇಣಿ 2 : ವಿದ್ಯಾರ್ಥಿ ಸಂಪೂರ್ಣ ಪ್ರಕ್ರಿಯೆಯನ್ನು ಭಾಗಶಃ ಪೂರ್ಣಗೊಳಿಸಬಹುದು.
ಶ್ರೇಣಿ 3 : ವಿದ್ಯಾರ್ಥಿಯು ಸಂಪೂರ್ಣ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಬಹುದು.

ಆದರೆ ಒಬ್ಬ ಶಿಕ್ಷಕನಾಗಿ ನೀವು 4–5 ವಿದ್ಯಾರ್ಥಿಗಳ ದಾಖಲೆಯನ್ನು ಇಟ್ಟುಕೊಳ್ಳಬೇಕು. 3ನೇ ತರಗತಿಯ ವಿದ್ಯಾರ್ಥಿಗಾಗಿ ದಾಖಲಿಸುವಿಕೆಯ ನಮೂನೆಯ ಉದಾಹರಣೆಯನ್ನು ನೀಡಲಾಗುತ್ತದೆ. ಈ ಕೆಳಕಂಡಂತೆ

Notes

| ಕ್ರ ಸಂ | ವಿಷಯ | ಅವಧಿ – 1 | | | ಅವಧಿ – 2 | | | ಅವಧಿ – 3 | | |
|---|---|---|---|---|---|---|---|---|---|---|
| | | ತರಗತಿ ಕೆಲಸ | ಗೃಹ ಪಾಠ | ಪ್ರಾಯೋಗಿಕ | ತರಗತಿ ಕೆಲಸ | ಗೃಹ ಪಾಠ | ಪ್ರಾಯೋಗಿಕ | ತರಗತಿ ಕೆಲಸ | ಗೃಹ ಪಾಠ | ಪ್ರಾಯೋಗಿಕ |
| 1 | ಆಕಾರಗಳು ಮತ್ತು ವಿನ್ಯಾಸ | | | | | | | | | |
| 2 | ಸಂಖ್ಯೆ ಓದುವಿಕೆ ಮತ್ತು ಬರವಣಿಗೆ | | | | | | | | | |
| 3 | ಸಂಕಲನ | | | | | | | | | |
| 4 | ವ್ಯವಕಲನ | | | | | | | | | |
| 5 | ಸಮಯ | | | | | | | | | |
| 6 | ಪಂಚಾಂಗ | | | | | | | | | |
| 7 | ತೂಕ | | | | | | | | | |
| 8 | ಹಣ | | | | | | | | | |
| 9 | ಸಂಪುಟ | | | | | | | | | |
| 10 | ಗೃಹಪಾಠ | | | | | | | | | |
| 11 | ಭಾಗಾಕಾರ | | | | | | | | | |
| 12 | ದತ್ತಾಂಶ ನಿರ್ವಹಣೆ | | | | | | | | | |

**ಚಟುವಟಿಕೆ – 4**

*ತರಗತಿ–4 ರ ಮಗುವಿಗೆ ಗಣಿತಶಾಸ್ತ್ರದಲ್ಲಿ ದಾಖಲಿಸುವಿಕೆಯ ನಮೂನೆಯನ್ನು ಅಭಿವೃದ್ಧಿಪಡಿಸಿ, ಸ್ಥಳೀಯ ಬದಲಾವಣೆಗಳು ಮತ್ತು ವಿಷಯದ ನಿರೀಕ್ಷಿತ ಸಾಮರ್ಥ್ಯವನ್ನು ಪರಿಗಣಿಸಿ.*

ಇ3. ವಿವಿಧ ವಿಷಯ ಪ್ರದೇಶಗಳಲ್ಲಿ ವಿವಿಧ ಕಾರಣಗಳಿಂದಾಗಿ ಕಲಿಕೆಯ ಕಾರ್ಯಕ್ಷಮತೆಯ ನಮೂನೆಗಳಲ್ಲಿ ವ್ಯತ್ಯಾಸಗಳನ್ನು ಸೂಚಿಸಿ.

## 16.2.3 ವಿವಿಧ ಪಾಲುದಾರರೊಂದಿಗೆ ದಾಖಲಿಸುವುದು

ಪ್ರತಿಯೊಬ್ಬ ಪಾಲುದಾರನು ತನ್ನ ಸ್ವಂತ ರೀತಿಯಲ್ಲಿ ವಿದ್ಯಾರ್ಥಿಗಳ ಪ್ರಗತಿಗೆ ಕೊಡುಗೆ ನೀಡಬಹುದು. ದಾಖಲಿಸಿದ ಫಲಿತಾಂಶಗಳನ್ನು ವಿವಿಧ ಪಾಲುದಾರರ ಜೊತೆಗೆ ಹಿಮ್ಮಾಹಿತಿಯಾಗಿ ಹಂಚಿಕೊಳ್ಳಬೇಕು. ಈ ಹಂಚಿಕೆಯನ್ನು ದಾಖಲಿಸುವಿಕೆ ಎಂದು ಕರೆಯುತ್ತಾರೆ. ಇದು ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ವಾಸ್ತವಿಕ ಚಿತ್ರಣವಾಗಿದೆ. ಇದು ಯಾವಾಗಲೂ ವಿದ್ಯಾಥಿಗಳ ಸಾಮರ್ಥ್ಯದ ಮೇಲೆ ಹೆಚ್ಚು ಕೇಂದ್ರೀಕೃತವಾಗಿರುತ್ತದೆ. ನಮ್ಮ ನಿರೀಕ್ಷೆಯ ಆಧಾರದ ಮೇಲೆ ದಾಖಲಿಸುವಿಕೆಯು ವಿವಿಧ ಸ್ವರೂಪಗಳನ್ನು ತೆಗೆದುಕೊಳ್ಳುತ್ತದೆ.

Notes

ಉದಾಹರಣೆ : ಮುಖ್ಯ ಶಿಕ್ಷಕರಿಗೆ ಒಂದು ವರ್ಗದ ಕಾರ್ಯ ಕ್ಷಮತೆಯ ಅಗತ್ಯವಿರುತ್ತದೆ. ಒಟ್ಟಾರೆಯಾಗಿ ಒಬ್ಬ ಶಿಕ್ಷಕ ಮಗುವಿನ ಕಾರ್ಯಕ್ಷಮತೆಯನ್ನು ತಿಳಿಯಲು ಬಯಸಬಹುದು. ಅವನು/ಅವಳು ಬೋಧಿಸುತ್ತಿದ್ದ ನಿರ್ದಿಷ್ಟ ವಿಷಯ, ನಿಖರವಾದ ವಿಷಯವನ್ನು ತಿಳಿಯಲು ಮಗು ಬಯಸ ಬಹುದು, ಎಲ್ಲಿ ಅವನು/ಅವಳು ಗುಂಪಿನಲ್ಲಿ ಹಿಂದುಳಿದಿದ್ದಾರೆ ಎಂದು ತಮ್ಮ ಮಕ್ಕಳ ಸಾಮಾಜಿಕ ಗುಣಗಳನ್ನು ತಿಳಿಯಲು ಪೋಷಕರು ಇಚ್ಚಿಸುತ್ತಾರೆ. ವಿವಿಧ ಪಾಲುದಾರರು ವಿವಿಧ ವಿದ್ಯಾರ್ಥಿಗಳ ಕಾರ್ಯ ಕ್ಷಮತೆಯನ್ನು ದಾಖಲಿಸುವಿಕೆಯ ಅಗತ್ಯತೆಯನ್ನು, ಉಪಯೋಗವನ್ನು ಈ ಮೊದಲು ಚರ್ಚಿಸಲಾಗಿದೆ.

## 16.3 ಕಲಿಕೆಯನ್ನು ಉತ್ತಮಪಡಿಸಲು ಮೌಲ್ಯಮಾಪನದ ಫಲಿತಾಂಶಗಳನ್ನು ಬಳಸುವುದು

### 16.3.1 ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರ್ತಿಸಲು ಮೌಲ್ಯಮಾಪನದ ಫಲಿತಾಂಶಗಳ ವಿಶ್ಲೇಷಣೆ

ನೀವುದಾಖಲೆಯನ್ನು ಪೂರ್ಣವಾಗಿ ತುಂಬಿ ಮತ್ತು ಪಾಲುದಾರರೊಂದಿಗೆ ಹಂಚಿಕೊಳ್ಳಲು ಸಿದ್ಧರಾಗಿ. ಒಮ್ಮೆ ಇದರಲ್ಲಿ ದಾಖಲಾಗಿರುವ ದತ್ತಾಂಶವನ್ನು ನೀವು ವಿಮರ್ಶಾತ್ಮಕವಾಗಿ ವಿಶ್ಲೇಷಿಸಬಹುದು. ನೀವು ವಿಭಿನ್ನ ಮಾರ್ಗಗಳ ಮೂಲಕ ಮಾಡಬಹುದಾಗಿದೆ.

1. ವಿಷಯವಾರು ವಿಶ್ಲೇಷಣೆ
2. ಘಟಕವಾರು ವಿಶ್ಲೇಷಣೆ
3. ಕಲಿಕಾ ಫಲಿತಾಂಶ ಆಧಾರಿತ ವಿಶ್ಲೇಷಣೆ
4. ಅವಧಿ ಆಧಾರಿತ ವಿಶ್ಲೇಷಣೆ.

ವಿಶ್ಲೇಷಣೆಯ ಕೆಲವು ಉದಾಹರಣೆಗಳನ್ನು ಈ ಕೆಳಗೆ ನೀಡಲಾಗಿದೆ.

*ಕೋಷ್ಟಕ–1 ವಿಷಯವಾರು ವಿಶ್ಲೇಷಣೆ*

| ಕ್ರ. ಸಂ. | ವಿಷಯುಗಳು | ವಿವಿಧ ವಿದ್ಯಾರ್ಥಿಗಳು ಪಡೆದ ಅಂಕಗಳು | | | | | | |
|---|---|---|---|---|---|---|---|---|
| | | ಎ | ಬಿ | ಸಿ | ಡಿ | ಇ | ಎಫ್ | ಜಿ |
| 1 | ಭಾಷೆ (ಎಫ್.ಎಂ. 100) | 41 | 10 | 40 | 50 | 44 | 38 | 48 |
| 2 | ಗಣಿತಶಾಸ್ತ್ರ (ಎಫ್.ಎಂ. 100) | 64 | 28 | 80 | 70 | 66 | 69 | 68 |
| 3 | ಪರಿಸರ ವಿಜ್ಞಾನ (ಎಫ್.ಎಂ 100) | 58 | 23 | 64 | 22 | 59 | 56 | 75 |

ವಿದ್ಯಾರ್ಥಿಗಳ ಫಲಿತಾಂಶವನ್ನು ತೋರಿಸುವ ಮೇಲಿನ ಕೋಷ್ಟಕವನ್ನು ಪರೀಕ್ಷಿಸೋಣ.

ತೀರ್ಮಾನಗಳನ್ನು ಈ ಕೆಳಕಂಡಂತೆ ತೆಗೆದುಕೊಳ್ಳಬಹುದಾಗಿದೆ.

- ಒಟ್ಟಾರೆಯಾಗಿ ತರಗತಿಯು ಭಾಷೆಯಲ್ಲಿ ದುರ್ಬಲವಾಗಿದ್ದು ಬಹುತೇಕರು ಶೇ. 50% ಅಂಕಗಳಿಗಿಂತ ಕಡಿಮೆ ಅಂಕಗಳು ಪಡೆದಿದ್ದಾರೆ.
- ಪರಿಸರ ವಿಜ್ಞಾನ ಮತ್ತು ಗಣಿತಶಾಸ್ತ್ರಕ್ಕಿಂತಲೂ ಭಾಷಾಶಾಸ್ತ್ರದಲ್ಲಿ ವಿದ್ಯಾರ್ಥಿಗಳ ಸಾಧನೆ ದುರ್ಬಲವಾಗಿದೆ. ವಿದ್ಯಾರ್ಥಿಗಳು ಗಣಿತಶಾಸ್ತ್ರದಲ್ಲಿ ಚೆನ್ನಾಗಿ ಸಾಧನೆ ಮಾಡಿದ್ದಾರೆ.
- ಆದರೆ ಇನ್ನು ಉತ್ತಮವಾಗಿ ಮಾಡಬಹುದಾಗಿತ್ತು.
- ವಿದ್ಯಾರ್ಥಿ ಸಿ ಎಂಬುವವನು ಗಣಿತ ಮತ್ತು ಇ.ವಿ.ಎಸ್‌ನಲ್ಲಿ ಚೆನ್ನಾಗಿ ಸಾಧನೆ ಮಾಡಿದ.

– ಆದರೆ ಭಾಷೆಯಲ್ಲಿ ಸಾಧನೆ ಮಾಡಲಿಲ್ಲ. ವಿದ್ಯಾರ್ಥಿ ಬಿ ಯ ಸಾಧನೆ ಎಲ್ಲಾ ವಿಷಯಗಳಲ್ಲಿ ಕಳಪೆಯಾಗಿದೆ.
– ಭಾಷೆಯ ಪರೀಕ್ಷಾ ಅಂಶಗಳ ತೊಂದರೆಯ ಮೊತ್ತವನ್ನು ವಿಶ್ಲೇಷಿಸಬೇಕಾಗಿದೆ.

***ಕೋಷ್ಟಕ–2 ಘಟಕವಾರು ವಿಶ್ಲೇಷಣೆ***

**ಘಟಕದ ಹೆಸರು : 1. ____________ 2. ____________ 3. ____________**

| ಎಫ್. ಎಂ. 50 | | | |
|---|---|---|---|
| *ವಿದ್ಯಾರ್ಥಿಗಳು* | *ಘಟಕ–1* | *ಘಟಕ–2* | *ಘಟಕ–3* |
| ಎ | 40 | 25 | 10 |
| ಬಿ | 37 | 30 | 8 |
| ಸಿ | 30 | 30 | 15 |
| ಡಿ | 42 | 30 | 15 |
| ಇ | 32 | 29 | 11 |

ಮೇಲಿನ ಕೋಷ್ಟಕದಿಂದ ನಾವು ಕೆಳಗಿನ ತೀರ್ಮಾನಗಳನ್ನು ರಚಿಸಬಹುದು.
– ಘಟಕ–1 ರಲ್ಲಿ ಎಲ್ಲ ವಿದ್ಯಾರ್ಥಿಗಳು ಚೆನ್ನಾಗಿ ಮಾಡಿದ್ದಾರೆ.
– ಘಟಕ–2 ರಲ್ಲಿ ಎಲ್ಲ ವಿದ್ಯಾರ್ಥಿಗಳು ಕಲಿಕೆ ಮಾಡಿದ್ದಾರೆ.
– ಘಟಕ–3 ರಲ್ಲಿ ಪರೀಕ್ಷಾ ಅಂಶಗಳ ಕಠಿಣತೆಯ ಮಟ್ಟವನ್ನು ವಿಶ್ಲೇಷಿಸಬೇಕಾಗಿದೆ.
– ವಿದ್ಯಾರ್ಥಿ ಡಿ ಗುಂಪಿನಲ್ಲಿ ಎಲ್ಲ ವಿಷಯಗಳನ್ನು ಚೆನ್ನಾಗಿ ಮಾಡಿದ್ದಾನೆ. ಆದರೆ ಘಟಕ–3 ರಲ್ಲಿ ಇನ್ನು ಉತ್ತಮವಾಗಿ ಮಾಡಬೇಕಾಗಿದೆ.
– ವಿದ್ಯಾರ್ಥಿ ಸಿ ಎಲ್ಲಾ 3 ಘಟಕಗಳಲ್ಲಿ ಚೆನ್ನಾಗಿ ಮಾಡಲು ಸಾಧ್ಯವಾಗಲಿಲ್ಲ.

***ಕೋಷ್ಟಕ–3 ಕಲಿಕಾ ಫಲಿತಾಂಶ ಆಧಾರಿತ ವಿಶ್ಲೇಷಣೆ***

**ಉದ್ದೇಶ – ಅರ್ಥಗ್ರಹಿಕೆ**

ವಿದ್ಯಾರ್ಥಿಗಳು : ಅರ್ಥಗ್ರಹಿಕೆಯ ಅಡಿಯಲ್ಲಿ ವಿವಿಧ ನಿದಿಷ್ಟಾಂಶಗಳೊಂದಿಗೆ ಅಂಕಗಳನ್ನು ಪಡೆಯಲಾಗಿದೆ. (ಪ್ರತಿ ನಿರ್ಧಿಷ್ಟಾಂಶ 50)

| ವಿದ್ಯಾರ್ಥಿಗಳು | ಅರ್ಥಗ್ರಹಿಕೆಯ ಅಡಿಯಲ್ಲಿ ವಿವಿಧ ನಿದಿಷ್ಟಾಂಶಗಳೊಂದಿಗೆ ಅಂಕಗಳನ್ನು ಪಡೆಯಲಾಗಿದೆ. (ಪ್ರತಿ ನಿರ್ಧಿಷ್ಟಾಂಶ 50) | | | | | |
|---|---|---|---|---|---|---|
| | ಭಾಷಾಂತರ | ಉದಾ ನೀಡುವುದು | ಸಂಬಂಧಗಳನ್ನು ನೋಡುವುದು | ಹೋಲಿಕೆ | ವರ್ಗೀಕರಣ | ಅಥೈಸುವಿಕೆ |
| ಎ | 35 | 33 | 5 | 10 | 58 | 5 |
| ಬಿ | 44 | 34 | 6 | 8 | 10 | 6 |
| ಸಿ | 43 | 33 | 8 | 9 | 12 | 5 |
| ಡಿ | 42 | 35 | 10 | 13 | 10 | 8 |
| ಈ | 38 | 26 | 5 | 8 | 5 | 4 |

Notes

ಮೇಲಿನ ಕೋಷ್ಟಕದಿಂದ ನಾವು ಈ ಕೆಳಗಿನ ತೀರ್ಮಾನಗಳನ್ನು ರಚಿಸಬಹುದು.

- ಉದಾಹರಣೆಗಳನ್ನು ಉದಾಹರಿಸಿ ಭಾಷಾಂತರಕ್ಕೆ ಸಂಬಂಧಿಸಿದ ಕಲಿಕೆಯ ಫಲಿತಾಂಶಗಳಲ್ಲಿ ವಿದ್ಯಾರ್ಥಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ.
- ಸಂಬಂಧಗಳನ್ನು ನೋಡುವುದರಲ್ಲಿ ಮತ್ತು ಅರ್ಥೈಸಲು ಸಂಬಂಧಿಸಿದ ಕಲಿಕೆಯ ಫಲಿತಾಂಶಗಳಲ್ಲಿ ವಿದ್ಯಾರ್ಥಿಗಳು ತೀರಾ ಕಡಿಮೆ ಸಾಧನೆ ಮಾಡಿದ್ದಾರೆ.
- ಸ್ಪಷ್ಟೀಕರಣ ನೀಡುವಲ್ಲಿ ಮತ್ತು ಹೋಲಿಸುವಲ್ಲಿ ಕಲಿಕೆಯ ಫಲಿತಾಂಶಗಳಲ್ಲಿ ವಿದ್ಯಾರ್ಥಿಗಳು ಸ್ವಲ್ಪವೇ ಸಾಧನೆ ಮಾಡಿದ್ದಾರೆ. ಇವು ಮತ್ತಷ್ಟು ಸುಧಾರಣೆಯಾಗಬಹುದು.
- 'ಡಿ' ನ ಒಟ್ಟಾರೆ ಕಲಿಕೆಯ ಕಾರ್ಯಕ್ಷಮತೆಯು ಗುಂಪಿನಲ್ಲಿ ಉತ್ತಮವಾಗಿರುತ್ತದೆ. ಆದರೆ 'ಇ' ನ ಒಟ್ಟಾರೆ ಕಾರ್ಯಕ್ಷಮತೆ ಅರ್ಥಗ್ರಹಿಕೆಗೆ ಸಂಬಂಧಿಸಿದ ಫಲಿತಾಂಶಗಳಲ್ಲಿ ಗುಂಪಿನಲ್ಲಿ ಕೆಟ್ಟದಾಗಿದೆ.
- ಇತರ ಕ್ಷೇತ್ರಗಳಿಗೆ ಅನುವಾದಿಸಲು ವಿದ್ಯಾರ್ಥಿ ಬಿ ಯು ತನ್ನ ಫಲಿತಾಂಶವನ್ನು ಸಂಬಂಧಿತ ಫಲಿತಾಂಶದಲ್ಲಿ ಪುನರಾವರ್ತಿಸಲು ಸಾಧ್ಯವಾಗಿಲ್ಲ. ಹೀಗಾಗಿ ಕಲಿಕೆಯ ಕಾರ್ಯ ಕ್ಷಮತೆಯನ್ನು ವಿಶ್ಲೇಷಿಸಲು ಹಲವು ತೀರ್ಮಾನಗಳನ್ನು ತೆಗೆದುಕೊಳ್ಳ ಬಹುದು.

ವಿದ್ಯಾರ್ಥಿಗಳ ಬಲ ಮತ್ತು ದೌರ್ಬಲ್ಯಗಳನ್ನು ಮುಂದಿನ ದಿನಗಳಲ್ಲಿ ಈ ಕೆಳಕಂಡಂತೆ ವಿಶ್ಲೇಷಿಸಬಹುದಾಗಿದೆ. ಇಲ್ಲಿ ಒಂದು ಉದಾಹರಣೆ.

*ಕೋಷ್ಟಕ – 4 ಅವಧಿವಾರು ವಿಶ್ಲೇಷಣೆ*

| ವಿದ್ಯಾರ್ಥಿಗಳು | ಅವಧಿ –1 | | | ಅವಧಿ–2 | | | ಅವಧಿ–3 | | |
|---|---|---|---|---|---|---|---|---|---|
| | ಭಾಷೆ | ಗಣಿತ | ಇ.ವಿ.ಎಸ್ | ಭಾಷೆ | ಗಣಿತ | ಇ.ವಿ.ಎಸ್ | ಭಾಷೆ | ಗಣಿತ | ಇ.ವಿಎಸ್ |
| ಎ | | | | | | | | | |
| ಬಿ | | | | | | | | | |
| ಸಿ | | | | | | | | | |
| ಡಿ | | | | | | | | | |
| ಇ | | | | | | | | | |

**ಚಟುವಟಿಕೆ – 5**

*ಈಗ ಕೋಷ್ಟಕ–4ರನ್ನು ಆಧರಿಸಿ ನೀವು ತೀರ್ಮಾನಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿ.*

*ಸುಳಿವುಗಳು: ನಿಮ್ಮ ವಿಶ್ಲೇಷಣೆಯನ್ನು ಆಧರಿಸಿರ ಬಹುದು (ನಾನು) ವಿದ್ಯಾರ್ಥಿಗಳ ಕಲಿಕೆಯ ಕಾರ್ಯಕ್ಷಮತೆಯು ಒಂದು ಗುಂಪು ಮತ್ತು ವೈಯುಕ್ತಿಕ ವಿದ್ಯಾರ್ಥಿಗಳಾಗಿ ಪ್ರಗತಿ ಪುರಾವೆಗಳಿವೆಯೇ ? ಅವಧಿಯ ಆಧಾರದ ಮೇಲೆ ವಿಷಯವಾರು ಕಾರ್ಯಕ್ಷಮತೆ ಪ್ರಗತಿ ಇದೆಯೇ ? ಯಾವ ವಿಷಯದ ಕ್ಷೇತ್ರ ಉತ್ತಮ ಪ್ರಗತಿಯನ್ನು ತೋರಿಸುತ್ತದೆ ಮತ್ತು ಯಾವ ವಿಷಯ ಕ್ಷೇತ್ರವು ಪ್ರಗತಿಯನ್ನು ತೋರಿಸುವುದಿಲ್ಲ, ಯಾವ ವಿದ್ಯಾರ್ಥಿಗಳು ಸಾಧನೆಯಲ್ಲಿ ಸ್ಥಿರತೆಯನ್ನು ಹೊಂದಿರುತ್ತಾರೆ ? ಮತ್ತು ಯಾವ ವಿದ್ಯಾರ್ಥಿಗಳು ಹಿಂದುಳಿದಿದ್ದಾರೆ ?*

Notes

## 16.3.2 ಅನುಪಾಲನ ಕಾರ್ಯಕ್ರಮಗಳು

ವೃತ್ತಿಪರ ಶಿಕ್ಷಕರಾಗಿ ವಿದ್ಯಾರ್ಥಿಗಳ ಕಲಿಕೆಯ ಕಾರ್ಯಕ್ಷಮತೆಯನ್ನು ವಿಶ್ಲೇಷಿಸಿದ ನಂತರ ನೀವು ಏನು ಮಾಡುತ್ತೀರಿ ?

ವಿದ್ಯಾರ್ಥಿಗಳು ತಮ್ಮ ದೌರ್ಬಲ್ಯಗಳಿಂದ ಮತ್ತು ತಮ್ಮ ಕಲಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳುವ ರೀತಿಯಲ್ಲಿ ಮತ್ತು ಅವುಗಳಿಂದ ಹೊರಬರಲು ಅನುಕೂಲಕರವಾಗುವ ರಿತಿಯಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಈ ಕೆಳಗಿನ ವಿಧಗಳನ್ನು ತೆಗೆದುಕೊಳ್ಳಿ.

- ಸಲಹೆಗಾರರಾಗಿ ಶಿಕ್ಷಕ
- ಕಲಿಕಾ ದೌರ್ಬಲ್ಯಗಳಿಗೆ ಪರಿಹಾರ ಸೂಚಿಸುವವನಾಗಿ
- ಪುಷ್ಟೀಕರಣ
- ಶಿಕ್ಷಕರ ಸ್ವಂತ ಪ್ರತಿಫಲನೆ.

*ಶಿಕ್ಷಕ ಒಬ್ಬ ಸಲಹೆಗಾರರಾಗಿ:* ನೀವು ಸಲಹೆಗಾರರ ಪಾತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಬೇಕಾಗುತ್ತದೆ. ಸ್ವತಃ ಮಗು ಗುರಿ ತಲುಪಲು ಮಗುವಿಗೆ / ಅವಳಿಗೆ / ಹೇಗೆ ಸಹಾಯ ಮಾಡಬಹುದು. ಅವಳ/ ಅವನ ಕಲಿಕೆಯ ನಿರ್ಬಂಧಗಳನ್ನು ಹೇಗೆ ತೆಗೆದುಹಾಕಬಹುದು ? ವಿವಿಧ ರೂಪದ ಪರಿಹಾರಗಳಾವುವು ?

ಇವುಗಳನ್ನು ಹುಡುಕಲು ಪ್ರಯತ್ನಿಸುವಾಗ ನೀವು ಸಮಾಲೋಚನೆ ಮಾಡುತ್ತಿದ್ದೀರಿ.

---

***ವ್ಯಕ್ತಿಯು ಕಲಿಯಲು ಒದಗಿಸುವ ಅವಕಾಶ, ಅಂದರೆ ಕಲಿಯಲು, ಅನುಭವಿಸಲು, ಅನುಭವ ಮತ್ತು ಅಪೇಕ್ಷಿತ ಬದಲಾವಣೆ ವ್ಯಕ್ತಿಗಳ ನಡುವೆ ಏರ್ಪಡಿಸುವುದನ್ನು ಸಮಾಲೋಚನೆ ಎಂದು ವ್ಯಾಖ್ಯಾನಿಸಬಹುದು.***

---

ಅವನು/ಅವಳು ಮಾಡುವ ತಪ್ಪುಗಳನ್ನು ನೀವು ಚರ್ಚಿಸುವ ಅಗತ್ಯವಿದೆ. ವಿದ್ಯಾರ್ಥಿಯ ಕೆಲವು ತಪ್ಪು ಗ್ರಹಿಕೆಯಿಂದ ಅಥವಾ ಅಸಡ್ಡೆಯಿಂದ ತಪ್ಪು ಸಂಭವವಿದೆ ಎಂಬುದನ್ನು ನೀವು ತಿಳಿದುಕೊಳ್ಳುವ ಅಗತ್ಯವಿರುತ್ತದೆ. ಆದ್ದರಿಂದ ತನ್ನ ಸ್ವಂತ ಸಾಮರ್ಥ್ಯದಿಂದ ಅವನ/ಅವಳ ತಪ್ಪುಗಳನ್ನು ತಿದ್ದಿಕೊಳ್ಳಲು ಅವಕಾಶವನ್ನು ನೀಡುವ ಅಗತ್ಯವಿದೆ. ಕೆಲವು ಸಲ ವಿದ್ಯಾರ್ಥಿಗಳು ಪೆನ್ನು, ಜಾರುವಿಕೆಯಿಂದ / ಮರೆಯುವುದರಿಂದ / ಆಯಾಸದಿಂದ / ಅಸಡ್ಡೆಯಿಂದ ತಪ್ಪುಗಳನ್ನು ಮಾಡುತ್ತಾರೆ. ಇಂತಹ ಪ್ರಕರಣಗಳಲ್ಲಿ ನೀವು ವಿದ್ಯಾರ್ಥಿಗಳ ತಪ್ಪುಗಳನ್ನು ಗುರ್ತಿಸಲು ಮತ್ತು ಅವುಗಳನ್ನು ಅವರೇ ಸರಿಪಡಿಸಲು ತಿಳಿಸಬೇಕಾಗುತ್ತದೆ. ಇದನ್ನು ಅವನ/ಅವಳ ಗೆಳೆಯರ ಗುಂಪಿನ ಸಹಾಯದ ಮೂಲಕವು ಮಾಡಬಹುದಾಗಿದೆ. ಆದರೆ ವಿದ್ಯಾರ್ಥಿಗಳು ಏನನ್ನು ಕಲಿಯದಿದ್ದರೆ, ನೀವು ಅವರಿಂದ ಅವರ ತಪ್ಪುಗಳನ್ನು ಅವರೇ ಸರಿಪಡಿಸಿಕೊಳ್ಳುತ್ತಾರೆ ಎನ್ನುವ ನಿರೀಕ್ಷೆಯನ್ನು ಇಟ್ಟುಕೊಳ್ಳಬಾರದು. ವಿದ್ಯಾರ್ಥಿಗಳು ಏನನ್ನು ಮಾಡಲು ಸಾಧ್ಯವಿಲ್ಲವೋ ಅಂತಹ ಸಮಯದಲ್ಲಿ ಏನಾದರೂ ಮಾಡಲು ಹೋಗಿ ಅವರು ತಪ್ಪುಗಳನ್ನು ಮಾಡುತ್ತಾರೆ. ಇಂತಹ ಪ್ರಕರಣಗಳಲ್ಲಿ ಶಿಕ್ಷಕನು ವ್ಯವಸ್ಥಿತವಾದಂತಹ ಪರಿಹಾರ ಕಾರ್ಯಕ್ರಮಗಳನ್ನು ಯೋಚಿಸಿ ಅಂತಹ ಸಂದರ್ಭಗಳಿಂದ ವಿದ್ಯಾರ್ಥಿಗಳ ಕಲಿಕೆಯನ್ನು ಸುಲಭಗೊಳಿಸಬಹುದಾಗಿದೆ.

ವಿದ್ಯಾರ್ಥಿ ಅಭಿಪ್ರೇರಣೆಯನ್ನು ಹೊಂದಿಲ್ಲದಿದ್ದಾಗ ಮತ್ತು ಹೊಂದಾಣಿಕೆಯ ಸಮಸ್ಯೆಗಳು ಇದ್ದಾಗ, ಆತನ ಸುಪ್ತ ಪ್ರತಿಭೆಗಳನ್ನು ಗುರ್ತಿಸಲು ವೈಯುಕ್ತಿಕವಾಗಿ ಸಮಾಲೋಚನೆಯನ್ನು ಮುಖಾಮುಖಿ ನಡೆಸುವಾಗ ಆತನ ವೈಯುಕ್ತಿಕ ಪ್ರಗತಿಯನ್ನು ಗುರ್ತಿಸಲು ಸಾಧ್ಯ. ಈ ಇಂತಹ ಅಡಚಣೆಗಳಿಗೆ ನಿಮ್ಮ ವರ್ತನೆಯು ವೃತ್ತಿಪರವಾಗಿ ಪ್ರೋತ್ಸಾಹದಾಯಕವಾಗಿ, ಬೆಂಬಲಿಸುವುದಾಗಿರಬೇಕು. ವಿದ್ಯಾರ್ಥಿಗಳ ಸಾಮರ್ಥ್ಯದ ಮೇಲೆ ಪೂರ್ಣ ನಂಬಿಕೆ ಮತ್ತು ವಿಶ್ವಾಸವನ್ನು ಹೊಂದಿರುವ ಅಗತ್ಯವಿರುತ್ತದೆ.

Notes

*ಕಲಿಕಾ ತೊಂದರೆಗಳಿಗೆ ಪರಿಹಾರ*

ನೈದಾನಿಕತೆಯ 4 ಪ್ರಮುಖ ಹಂತಗಳು ಮತ್ತು ಕಲಿಕಾ ತೊಂದರೆಗಳ ಪರಿಹಾರೋಪಾಯ :

1. ಯಾವ ವಿದ್ಯಾರ್ಥಿಗಳು ಕಲಿಕಾತೊಂದರೆಯನ್ನು ಹೊಂದಿದ್ದಾರೆ ಎಂದು ಗುರುತಿಸುವುದು.
2. ಕಲಿಕಾ ತೊಂದರೆಗಳ ನಿರ್ದಿಷ್ಟ ಸ್ವರೂಪವನ್ನು ಗುರ್ತಿಸುವುದು.
3. ಕಲಿಕಾ ತೊಂದರೆಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗುರ್ತಿಸುವುದು ಮತ್ತು
4. ಸೂಕ್ತ ಪರಿಹಾರ ಕ್ರಮಗಳನ್ನು ಅನ್ವಯಿಸುವುದು.

– *ಯಾವ ವಿದ್ಯಾರ್ಥಿಗಳು ಕಲಿಕಾತೊಂದರೆಯನ್ನು ಹೊಂದಿದ್ದಾರೆ ಎಂದು ಗುರುತಿಸುವುದು.*
ಯಾರಿಗೆ ತೊಂದರೆಗಳಿವೆ ಎಂದು ನಿರ್ಧರಿಸುವುದು. ವಿದ್ಯಾರ್ಥಿಗಳ ವಿಷಯವಾರು ಮತ್ತು ಅವಧಿವಾರು ಅಂಕಗಳನ್ನು ವಿಶ್ಲೇಷಿಸಿದಾಗ, ನೀವು ವಿದ್ಯಾರ್ಥಿಗಳ ಕಲಿಕಾ ತೊಂದರೆಗಳನ್ನು ಗುರ್ತಿಸಲು ಸಾಧ್ಯ. ವಿವಿಧ ರೀತಿಯ ವೀಕ್ಷಣಾ ತಂತ್ರಗಳಾದ ದರ್ಜಾಮಾಪನೆ, ತಾಳೆ ಪಟ್ಟಿ ಮುಂತಾದ ದಾಖಲೆಗಳು ಗುರುತಿಸುವ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

– *ಕಲಿಕಾ ತೊಂದರೆಗಳ ನಿರ್ದಿಷ್ಟ ಸ್ವರೂಪವನ್ನು ಗುರ್ತಿಸುವುದು.*
ವಿದ್ಯಾರ್ಥಿ ಎಲ್ಲ ತೊಂದರೆಯನ್ನು ಎದುರಿಸುತ್ತಿದ್ದಾನೆ ಎಂದು ತಕ್ಷಣದಲ್ಲಿ ನಿರ್ಧರಿಸುವುದು, ನಿವು ಕಲಿಕಾ ಘಟಕವನ್ನು ಅಥವಾ ಫಲಿತಾಂಶ ಆಧಾರಿತ ಮತ್ತು ವಿಷಯಕ್ಷೇತ್ರದಲ್ಲಿ ನೀವು ಸರಿಯಾದ ಸ್ಥಳವನ್ನು ಗುರ್ತಿಸಲು ಸಾಧ್ಯ.

– *ಕಲಿಕಾ ತೊಂದರೆಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗುರ್ತಿಸುವುದು ಮತ್ತು ಅನುಚಿತವಲ್ಲದ ಬೋಧನಾವಿಧಾನಗಳು,* ಕಲಿಕಾ ತೊಂದರೆಗಳ ಮೇಲೆ ಪ್ರಭಾವ ಬೀರುತ್ತದೆ. ಸಂಕೀರ್ಣ ಬೋಧನಾ ಸಾಮಗ್ರಿಗಳು, ಅವೈಜ್ಞನಿಕ ಪಠ್ಯಕ್ರಮದ ಸಂಪದೀಕರಣವು ಎಲ್ಲ ವಿದ್ಯಾರ್ಥಿಗಳು ನಿರ್ದಿಷ್ಟ ಘಟಕದಲ್ಲಿ ಸರಿಯಾದ ರೀತಿಯಲ್ಲಿ ಸಾಧನೆ ಮಾಡುತ್ತಿಲ್ಲವೆಂದರೆ ವಿಷಯದ ನಿರೂಪಣೆಯ ಕಠಿಣತೆ ಅಥವಾ ವಿದ್ಯಾರ್ಥಿಗಳಿಗೆ ತಲುಪದ ರೀತಿಯಲ್ಲಿ ಪ್ರಸರಿಸಲಾಗಿರುವ ವಿಷಯದ ನಿರೂಪಣೆ ಎಂದು ಅಂತಿಮ ತೀರ್ಮಾನಕ್ಕೆ ಬರಬಹುದಾಗಿದೆ. ಕೆಲವೊಮ್ಮೆ ಕಲಿಕಾ ತೊಂದರೆಗಳು ಮನೋಭಾವ, ಆಸಕ್ತಿ, ಅಭಿಪ್ರೇರಣೆ ಮತ್ತು ಇತರ ಅಂಶಗಳಿಂದ ಪ್ರಭಾವಿಸಲ್ಪಟ್ಟಿರುತ್ತವೆ. ಗಣಿತಶಾಸ್ತ್ರ ಮತ್ತು ಗಣಿತಶಾಸ್ತ್ರದ ಶಿಕ್ಷಕನ ಮೇಲೆ ಋಣಾತ್ಮಕ ಮನೋಭಾವವನ್ನು ವಿದ್ಯಾರ್ಥಿ ಹೊಂದಿದ್ದರೆ, ಗಣಿತಶಾಸ್ತ್ರದಲ್ಲಿನ ಅಂಕಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಕಲಕಾ ತೊಂದರೆಗಳ ಮೇಲೆ ಬೀರುವ ಪರಿಣಾಮಗಳೆಂದರೆ ಬಹುಮುಖ ಮತ್ತು ಸಂಕೀರ್ಣವಾಗಿದೆ. ಹೇಗಾದರೂ ಆಗಲಿ ವಿಶೇಷ ಪರೀಕ್ಷೆ, ವೀಕ್ಷಣೆಯನ್ನು ಕಲಿಕಾರ್ಥಿಗಳ ಮೇಲೆ ಕೇಂದ್ರೀಕರಿಸಿದಾಗ ಗುಂಪುಚರ್ಚೆಯನ್ನು, ಸಂದರ್ಶನ, ವಿದ್ಯಾರ್ಥಿಗಳ ಪೋಷಕರೊಂದಿಗೆ ಸಭೆ, ಪೋಷಕ ಶಿಕ್ಷಕ ಸಂಘದ ಸಭೆಯನ್ನು ಕಲಿಕಾರ್ಥಿಗಳ ತೊಂದರೆಯ ಬಗ್ಗೆ ಮಾಹಿತಿಯನ್ನು ನೀಡಲು ಸಾಧ್ಯ.

– *ಸೂಕ್ತ ಪರಿಹಾರ ಕ್ರಮಗಳನ್ನು ಅನ್ವಯಿಸುವುದು*
ಪರಿಹಾರಾತ್ಮಕ ಕಾರ್ಯ ಕ್ರಮಗಳಲ್ಲಿ ಪರೀಕ್ಷೆಗಳ ಮೂಲಕ ಸಂಗ್ರಹಿಸಿದ ದತ್ತಾಂಶ ಮತ್ತು ಮೌಲ್ಯಮಾಪನ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತವೆ. ನೀನು ಹೀಗೆ ಮಾಡಿದ್ದೀಯ ಎಂದು ಹೇಳುವುದರ ಮೂಲಕ ನಿರ್ದಿಷ್ಟವಾದ ಸ್ಪಷ್ಟನೆಗಳನ್ನು ವಿದ್ಯಾರ್ಥಿಗಳಿಗೆ ನೀಡಬಹುದಾಗಿದೆ. ನಿರ್ದಿಷ್ಟ ನೈದಾನಿಕ ಪರೀಕ್ಷೆಗಳನ್ನು ನಡೆಸಿ, ಅವನ ದೌರ್ಬಲ್ಯಗಳನ್ನು ಮತ್ತು ಅವನ ಅಗತ್ಯತೆಗಳ ಕಡೆ ಗಮನಹರಿಸಿ, ನೀನು ಎಲ್ಲಿ ತಪ್ಪು ಮಾಡುತ್ತಿದ್ದೀಯ ಮತ್ತು ನೀನು ಹೀಗೆ ಅಭ್ಯಾಸ ಮಾಡಬೇಕು ಎಂದು ಹೇಳಬೇಕಾಗಿದೆ.

ನಿರಂತರ ಪರೀಕ್ಷಾ ಅಭ್ಯಾಸಗಳನ್ನು ನೀಡುವುದರ ಮೂಲಕ ವಿದ್ಯಾರ್ಥಿಯು ಯಶಸ್ಸನ್ನು ಗಳಿಸಿದೆ ಎನ್ನುವ ಮನೋಭಾವನೆಯನ್ನು ಬೆಳೆಸಬೇಕಾಗಿದೆ. ಉದಾ: ಅವನು/ಅವಳು ಗೃಹ ಕಾರ್ಯದಲ್ಲಿ ಹೆಚ್ಚು ಪ್ರಾವಿಣ್ಯತೆ ಹೊಂದಿಲ್ಲದಿದ್ದರೆ, ಅವನು/ಅವಳು ಭಾಗಕಾರದಲ್ಲಿ ಪ್ರಾಮುಖ್ಯತೆ ಹೊಂದಿಲ್ಲದಿದ್ದರೆ, ಆದ್ದರಿಂದ ಅವರಿಗೆ ಗೃಹಕಾರ್ಯದ ಅಭ್ಯಾಸ ಮತ್ತು ಅವನು/ಅವಳು ಯಶಸ್ವಿನ ಭಾವನೆಯನ್ನು ಭಾಗಾಕಾರ ಅಭ್ಯಾಸ ನೀಡುವುದಕ್ಕಿಂತ ಮುಂಚೆ ಹೊಂದಿರಬೇಕಾಗುತ್ತದೆ.  ನೀನು ಭಾಗಾಕಾರದಲ್ಲಿ ಸಮಸ್ಯೆಗಳನ್ನು ಸುಲಭವಾಗಿ ಚರ್ಚಿಸಬಲ್ಲೆ ಮತ್ತು ಗುಣಾಕಾರದಲ್ಲಿ ಅಭ್ಯಾಸವನ್ನು ಮಾಡು ಬಹಳ ಬೇಗ ಮತ್ತು ಸರಿಯಾಗಿ ನಿನ್ನ ಅಲ್ಪಕಾಲೀನ ಗುರಿಗಳನ್ನು ಮತ್ತು ಜ್ಞಾನದ ಪ್ರಗತಿಯನ್ನು ಹೊಂದಬಲ್ಲೆ ಎಂಬ ಅಭಿಪ್ರೇರಣೆಯನ್ನು ನಿಡಬೇಕಾಗುತ್ತದೆ. ನೀನು ಸಾಕಷ್ಟು ಅಭ್ಯಾಸ ಮಾಡಿ ಈಗ ಪ್ರಗತಿಯನ್ನು ಕಾಣುತ್ತಿದ್ದೀಯಾ ಎಂದು ಹೇಳಿ, ಪರಿಹಾರ ಬೋಧನೆಯ ಪರಿಣಾಮಕಾರತ್ವವನ್ನು ಒದಗಿಸಬೇಕಾಗುತ್ತದೆ.

ಇ5. ತಪ್ಪುಗಳು ಮತ್ತು ದೋಷಗಳ ನಡುವಿನ ವ್ಯತ್ಯಾಸ ತಿಳಿಸಿ. ವಿದ್ಯಾರ್ಥಿಗಳ ಗೃಹ ಪಾಠದಲ್ಲಿ ಪ್ರತಿದಿನ ಗಮನಿಸಿರುವ ಉದಾಹರಣೆಗಳನ್ನು ನೀಡಿ.

ಇ6. ನಿಮ್ಮ ವಿಷಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಕಲಿಕಾ ನ್ಯೂನತೆಗಳನ್ನು ಗುರುತಿಸಿ ಪರಿಹಾರ ಕ್ರಮಗಳನ್ನು ಅನುಸರಿಸಲು ಬಳಸಿದ ಹಂತಗಳ ಬಗ್ಗೆ ಚರ್ಚಿಸಿ.

*ಸಂಪದೀಕರಣ*

ಯಾವ ಮಗು ಉತ್ತಮವಾಗಿ ಸಾಧನೆ ಮಾಡುತ್ತಿದ್ದಾನೆ ಅಂತಹ ಮಗುವಿನ ಬಗ್ಗೆ ನೀವು ಕಾಳಜಿಯನ್ನು ಹೊಂದಿರಬೇಕಾಗುತ್ತದೆ.  ಅವನು/ಅವಳು ಉತ್ತಮವಾಗಿ ಅವನ/ಅವಳ ಸಾಮರ್ಥ್ಯಕ್ಕೆ ತಕ್ಕಂತೆ ಸಾಧನೆ ಮಾಡುತ್ತಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.  ಆದ್ದರಿಂದ ನೀವು ಉನ್ನತ ಮಟ್ಟದ ಕಲಿಕಾ ಸಾಮಗ್ರಿಗಳನ್ನು ಆ ಮಗುವಿಗೆ ಅಥವಾ ಅವನು/ಅವಳಿಗೆ ಉನ್ನತ ಮಟ್ಟದ ಕಲಿಕಾ ಚಟುವಟಿಕೆಗಳನ್ನು ವಿನ್ಯಾಸಗೊಳಿಸಲು ಸಾಧ್ಯ.  ಉದಾ: ಒಂದು ಸಾಧಾರಣ ಮಗುವಿಗೆ ವಾಕ್ಯ ರಚನೆ ಮಾಡುವ ಚಟುವಟಿಕೆಯನ್ನು ಕೊಟ್ಟಾಗ, ಆ ಮಗು ಎರಡು ಕಷ್ಟದ ಪದಗಳನ್ನು ಬಳಸಿ ವಾಕ್ಯ ರಚಿಸಲು ಹೇಳಬಹುದು. ಪ್ರತಿಭೆಯನ್ನು ಪೋಷಿಸಲು ನೀವು ಕಲಿಕಾ ಕಠಿಣತೆಯ ಮಟ್ಟವನ್ನು ಹೆಚ್ಚಿಸಬಹುದಾಗಿದೆ.

*ಶಿಕ್ಷಕರ ಸ್ವಂತ ಪ್ರತಿಫಲನ*

ಶಿಕ್ಷಕರಾಗಿ ನೀವು ನಿಮ್ಮ ಸ್ವಂತ ಕಾರ್ಯ ಕ್ಷಮತೆಯನ್ನು ಪ್ರತಿಫಲಿಸುವ ಅಗತ್ಯವಿದೆ.  ನಿಮ್ಮನ್ನು ನಿವು ಈ ಕೆಳಕಂಡಂತೆ ಪಶ್ನಿಸಬಹುದು.

- ನಾನು ಪ್ರತಿಯೊಬ್ಬ ವಿದ್ಯಾರ್ಥಿಗೆ ಸಾಕಷ್ಟು ಭೋದನೆ ಮಾಡಿದ್ದೇನೆಯೇ ?
- ನಾನು ಹೇಗೆ ವಿಭಿನ್ನ ?
- ನಾನು ಮಗುವಿನ ಕಾರ್ಯಕ್ಷಮತೆಯನ್ನು ಅಥವಾ ಗುಂಪಿನ ವಿದ್ಯಾರ್ಥಿಯನ್ನು ಹೇಗೆ ವ್ಯತ್ಯಾಸ ಮಾಡಬಹುದು ?
- ನನ್ನ ವಿದ್ಯಾರ್ಥಿಗಳಿಗೆ ಪರ್ಯಾಯ ಕಾರ್ಯಗಳನ್ನು ಅಭಿವೃದ್ಧಿ ಪಡಿಸಲು ಸಾಧ್ಯವೇ ?
- ನನ್ನ ವಿದ್ಯಾರ್ಥಿಗಳ ನಿರ್ದಿಷ್ಟ ಸಾಮರ್ಥ್ಯವನ್ನು ಪರೀಕ್ಷಿಸಲು ಯಾವ ಮಾಪನ/ ತಂತ್ರ ಉತ್ತಮವಾಗಿದೆ ?

ವಿದ್ಯಾರ್ಥಿಗಳು ತಮ್ಮ ಉತ್ತಮ ಸಾಮರ್ಥ್ಯಗಳನ್ನು ತಿಳಿಯಲು ತನ್ನ ಉತ್ತಮ ಬೋಧನಾ ತಂತ್ರಗಳ ಮೂಲಕ ಹಾಗೇ ಮೌಲ್ಯಮಾಪನದ ಮೂಲಕ ತಿಳಿಯಲು ಶಿಕ್ಷಕನಾದವನು ಸಹಾಯಕನಾಗಿರಬೇಕು.  ಮೌಲ್ಯ ಮಾಪನ ಮಾಡುವಾಗ ಅವನು/ಅವಳು ಮೌಲ್ಯಮಪನವನ್ನು ಉತ್ತಮವಾಗಿ ವಿನ್ಯಾಸಗೊಳಿಸಿ ವಿದ್ಯಾರ್ಥಿಗಳ ಕಡೆಯಿಂದ ಸ್ವಾಭಾವಿಕವಾಗಿ ಪ್ರತಿಕ್ರಿಯೆ ತೋರಿಸಲು ಮತ್ತು ಸೂಕ್ತವಾಗಿ ವೀಕ್ಷಿಸಲು ಸಾಧ್ಯವಾಗುತ್ತದೆ.

Notes

**ಚಟುವಟಿಕೆ – 6**

ನಿಮ್ಮ ಕೊನೆಯ ಘಟಕ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ವಿಶ್ಲೇಷಿಸಿ ಮತ್ತು ಉತ್ತಮ ರೀತಿಯಲ್ಲಿ ಹೇಗೆ ಪ್ರಶ್ನೆಗಳನ್ನು ರಚಿಸ ಬಹುದಾಗಿತ್ತು ಎಂಬುದನ್ನು ಸಮರ್ಥಿಸಿ, ಉದಾಹರಣೆಯನ್ನು ಕೆಳಗೆ ನೀಡಲಾಗಿದೆ.

| ಕೇಳಲಾದ ಪ್ರಶ್ನೆಗಳು | ಅಭಿವೃದ್ಧಿಪಡಿಸಿದ ಪ್ರಶ್ನೆಗಳು |
|---|---|
| ಪಕ್ಷಿಗಳು ಏಕೆ ವಲಸೆ ಹೋಗುತ್ತವೆ | ಚಳಿಗಾಲದಲ್ಲಿ ಚಿಲ್ಕ ಸರೋವರಕ್ಕೆ ವಲಸೆ ಹೋಗಲು ಯಾವುದಾದರೂ 3 ಕಾರಣಗಳನ್ನು ವಿವರಿಸಿ. |
| | |

ಮೇಲೆ ನೀಡಿರುವ ಉದಾಹರಣೆಯಲ್ಲಿ ಸುಧಾರಿತ ಆವೃತ್ತಿಯ ಪ್ರಶ್ನೆಗಳನ್ನು ವಿಶ್ಲೇಷಿಸೋಣ. ಇಲ್ಲಿ ವಿದ್ಯಾರ್ಥಿಗೆ ನಿರ್ವಹಿಸಲು ಒಂದು ನಿರ್ದಿಷ್ಟ ಕೆಲಸವನ್ನು ನೀಡಲಾಗಿದೆ. ಅವನು/ಅವಳಿಗೆ ಇಲ್ಲಿ 3 ಯಾವುದಾದರೂ 3 ಕಾರಣಗಳನ್ನು ಆಯ್ಕೆ ಮಾಡಲು ಸ್ವಾತಂತ್ರ ನಿಡಲಾಗಿದೆ. ಈ ಅಂಶವು ಒಂದು ಸನ್ನಿವೇಶವನ್ನು ಒದಗಿಸುತ್ತದೆ. ವಿದ್ಯಾರ್ಥಿಯ ಅರ್ಥಗ್ರಹಿಕೆಯ ಮಟ್ಟವನ್ನು ತಿಳಿಯಲು ಅಂಶವು ಸಂಬಂಧಿಸಿದ ಅಂಶಕ್ಕೆ ಪ್ರತಿಕ್ರಿಯೆಯೂ ಕೂಡ ವಸ್ತುನಿಷ್ಟವಾಗಿರುತ್ತದೆ.

## 16.4 ಉಪಸಂಹಾರ

- ವಿದ್ಯಾರ್ಥಿಗಳ ಕಲಿಕಾ ಕಾರ್ಯಕ್ಷಮತೆಯು ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿ ಹೇಗಿದೆ ಎಂದು ಪರೀಕ್ಷಿಸಲು ಸಂಗ್ರಹಿಸಿದ ವಿವಿಧ ಮಾಪನಗಳು ಮತ್ತು ತಂತ್ರಗಳು ಹಾಗೂ ವ್ಯವಸ್ಥಿತ ದಾಖಲಿಸುವಿಕೆಯ ಆಧಾರಗಳನ್ನು, ದಾಖಲಿಸುವಿಕೆಯನ್ನು ಸೂಚಿಸುತ್ತದೆ.

- ಕಲಿಕಾ ಸಮಯದಲ್ಲಿ ವಿದ್ಯಾರ್ಥಿಯು ಹೇಗೆ ಕಲಿಕಾ ಪ್ರಗತಿಯನ್ನು ಕಡಿಮೆ ಮಟ್ಟದಿಂದ ಆತನ ತಿಳುವಳಿಕೆ ಮತ್ತು ಕೌಶಲ್ಯಗಳ ಅಳವಡಿಕೆ ಮತ್ತು ಉನ್ನತ ಅಥವಾ ಇನ್ನು ಉನ್ನತ ಮಟ್ಟದ ಕಲಿಕಾ ಕೌಶಲಗಳನ್ನು ಸಂವಹನಿಸುವ ಮತ್ತು ಹಿಮ್ಮಾಹಿತಿಯನ್ನು ಹಂಚುವ ಹಾಗೂ ಮೌಲ್ಯಮಾಪನದ ಅಂಶಗಳನ್ನು ಸೂಚಿಸುತ್ತದೆ.

- ವಿಭಿನ್ನ ಪಾಲುದಾರರು ಮತ್ತು ವಿವಿಧ ರೀತಿಯಲ್ಲಿ ವಿದ್ಯಾರ್ಥಿಗಳ ಮೌಲ್ಯಮಾಪನ ದಾಖಲೆಗಳನ್ನು ವರದಿ ಮಾಡಬೇಕು. 1) ಕಲಿಯುವವರು ಮತ್ತು ಪೋಷಕರು (2) ಶಿಕ್ಷಕರು ಸಲಹೆಗಾರರು ಯೋಜಕರು ನಿರ್ವಾಹಕರು,

- ವಿದ್ಯಾರ್ಥಿಯ ಸಾಮರ್ಥ್ಯ ವರದಿಯ ಪತ್ರದ ಪರಿಮಾಣಗಳನ್ನು ಬರೆಯಬೇಕು.
  (1) ವಿದ್ಯಾರ್ಥಿಯ ವಿವರ (2) ಪಠ್ಯಕ್ಷೇತ್ರದಲ್ಲಿ ವಿದ್ಯಾರ್ಥಿಯ ಸಾಧನೆ (3) ಪಠ್ಯೇತರ ಕ್ಷೇತ್ರದಲ್ಲಿ ವಿದ್ಯಾರ್ಥಿಯ ಸಾಧನೆ (4) ವಿದ್ಯಾರ್ಥಿಯ ವೈಯುಕ್ತಿಕ, ಸಾಮಾಜಿಕ ಗುಣಗಳು (5) ವಿದ್ಯಾರ್ತಿಗಳ ಪಠ್ಯೇತರ ಚಟುವಟಿಕೆಗಳು (7) ವಿದ್ಯಾರ್ಥಿಗಳ ಹಾಜರಾತಿ (8) ಪ್ರಾಂಶುಪಾಲರ, ಶಿಕ್ಷಕರ, ತರಗತಿ ಶಿಕ್ಷಕರ ರಿಮಾರ್ಕ್ಸ್ (9) ಕಲಿಕಾರ್ಥಿಯ ಒಟ್ಟಾರೆ ಫಲಿತಾಂಶ

- ಇ.ವಿ.ಎಸ್ ಕಾರ್ಯಕ್ಷಮತೆಯನ್ನು ದಾಖಲಿಸಬೇಕಾಗುತ್ತದೆ.
  (1) ವೀಕ್ಷಣೆ ಮತ್ತು ದಾಖಲಿಸುವಿಕೆ (2) ಚರ್ಚೆ (3) ಅಭಿವ್ಯಕ್ತಿ (4) ವಿವರಣೆ (5) ವರ್ಗೀಕರಣ (6) ಪ್ರಶ್ನಿಸುವಿಕೆ (7) ವಿಶ್ಲೇಷಣೆ (8) ಪ್ರಯೋಗ (9) ನ್ಯಾಯ ಮತ್ತು ಸಮಾನತೆಯ ಕಾಳಜಿ (10) ಸಹಕಾರ.

- ಭಾಷೆಯಲ್ಲಿ ಕಲಿಕಾ ಕಾರ್ಯಕ್ಷಮತೆಯ ದಾಖಲಿಸುವಿಕೆಯು ಈ ಕೆಳಕಂಡ ಮೂಲ ಕೌಶಲ್ಯಗಳನ್ನು ಒಳಗೊಂಡಿರುತ್ತದೆ. (1) ಆಲಿಸುವಿಕೆ (2) ಮಾತುಗಾರಿಕೆ (3) ಓದುಗಾರಿಕೆ (4) ಬರವಣಿಗೆ,

- ಗಣಿತಶಾಸ್ತ್ರದಲ್ಲಿ ಕಲಿಕಾ ಕಾರ್ಯಕ್ಷಮತೆಯ ದಾಖಲಿಸುವಿಕೆಯು ಈ ವಿಭಿನ್ನ ಘಟಕಗಳನ್ನು ನಿರ್ದಿಷ್ಟ ತರಗತಿಗೆ ಒಳಗೊಂಡಿರುತ್ತದೆ.

- ಫಲಿತಾಂಶಗಳನ್ನು ವಿಶ್ಲೇಷಿಸಬಹುದು. (1) ವಿಷಯವಾರು (2) ಘಟಕವಾರು (3) ಫಲಿತಾಂಶ ಆಧಾರಿತ, ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಗೊಳಿಸುವ ಕ್ರಮಗಳನ್ನು ಕೈಗೊಳ್ಳ ಬಹುದು.

- ಫಲಿತಾಂಶದ ವಿಶ್ಲೇಷಣೆಯ ಆಧಾರದ ಮೇಲೆ ಈ ಕೆಳಕಂಡ ಅನುಸರಣೀಯ ಕಾರ್ಯ ಕ್ರಮಗಳು ಕೆಳಕಂಡಂತಿವೆ. ಪರಿಹಾರ ಮತ್ತು ಪುಷ್ಟೀಕರಣ ಕಾರ್ಯ ಕ್ರಮಗಳು, ಸಮಾಲೋಚನೆ ಮುಂತಾದವುಗಳನ್ನು ಶಿಕ್ಷಕ ಕೈಗೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳ ಕಲಿಕಾ ಕಾರ್ಯಕ್ಷಮತೆಯನ್ನು ಪರೀಕ್ಷಿಸಲು ಬಳಸಿದ ಮಾಪನಗಳು ಮತ್ತು ತಂತ್ರಗಳನ್ನು ಶಿಕ್ಷಕನಾದವನು ಪ್ರತಿಫಲಿಸಬೇಕು.

## 16.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಮಾದರಿ ಉತ್ತರಗಳು

ಇ1. ವಿದ್ಯಾರ್ಥಿಗಳ ಫಲಿತಾಂಶದ ದಾಖಲಿಸುವಿಕೆಯು ಬಹಳ ಸಹಕಾರಿ.

(1) ಶಿಕ್ಷಕರು :

- ವಿಭಿನ್ನ ಮಾಹಿತಿಯನ್ನು ಕಲೆಹಾಕಿ ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಅರ್ಥಮಾಡಿಕೊಳ್ಳಲು,
- ವಿದ್ಯಾರ್ಥಿಗಳ ಪರಿಪೂರ್ಣ ವಿವರಗಳನ್ನು ಅಭಿವೃದ್ಧಿಪಡಿಸಲು ವಿದ್ಯಾರ್ಥಿ ಹೇಗೆ ಕಲಿಯುತ್ತಿದ್ದಾನೆ/ಪ್ರಗತಿ ಹೊಂದುತ್ತಿದ್ದಾನೆ ಎಂಬುದರ ತೀರ್ಮಾನಕ್ಕೆ ಬರಲು,
- ವಿದ್ಯಾರ್ಥಿ ಯಾವ ಹಂತದಲ್ಲಿದ್ದಾನೆ,
- ಯಾವ ಅಗತ್ಯಗಳನ್ನು ವಿದ್ಯಾರ್ಥಿಗೆ ನೀಡಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಲು

(2) ಪೋಷಕರಿಗೆ :

- ವಿದ್ಯಾರ್ಥಿ ಶಾಲೆಯಲ್ಲಿ ಏನು ಮಾಡುತ್ತಿದ್ದಾನೆ ಎಂಬುದನ್ನು ತಿಳಿಯಲು.
- ಕಲಿಕೆಯಲ್ಲಿ ವಿದ್ಯಾರ್ಥಿಯ ಬಲ ಮತ್ತು ದೌರ್ಬಲ್ಯಗಳನ್ನು ತಿಳಿಯಲು
- ವಿದ್ಯಾರ್ಥಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಮುಂದೆ ಹೋಗುವಂತೆ ಅಭಿಪ್ರೇರಿಸಲು.
- ವಿದ್ಯಾರ್ಥಿಯ ಅಗತ್ಯಕ್ಕೆ ತಕ್ಕಂತೆ ಪರಿಹಾರ ಕ್ರಮಗಳನ್ನು ಚಟುವಟಿಕೆಗಳನ್ನು ಆಯೋಜಿಸಲು.

3) ವಿದ್ಯಾರ್ಥಿಗಳಿಗೆ :

- ವಿದ್ಯಾರ್ಥಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸ್ವಯಂ ಅಭಿಪ್ರೇರಣೆಯನ್ನು ಮೂಡಿಸಲು.

Notes

- ವೈಯುಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಅಭಿವೃದ್ಧಿ ಪಡಿಸಲು,
- ಏನು ಮಾಡುತ್ತಿದ್ದಾರೆ, ಮತ್ತು ಹೇಗೆ ಮಾಡುತ್ತಿದ್ದಾರೆ ಎಂಬುದನ್ನು ತಿಳಿದು ಅವರ ದೌರ್ಬಲ್ಯ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಲು ಸಹಕಾರಿ.

ಇ2. ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿ ದಾಖಲಿಸುವಿಕೆಯ ಪ್ರಕ್ರಿಯೆಯಲ್ಲಿ ಈ ಕೆಳಕಂಡ ವ್ಯತ್ಯಾಸಗಳನ್ನು ಗಮನಿಸಬಹುದಾಗಿದೆ.
ವಿದ್ಯಾರ್ಥಿಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ಅವರ ಬೆಳವಣಿಗೆಯ ಕಾರ್ಯಕ್ಷಮತೆಯನ್ನು ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಸೂಕ್ತ ತಂತ್ರಗಳನ್ನು ಕೈಗೊಳ್ಳಬೇಕಾಗಿದೆ. ವಿದ್ಯಾರ್ಥಿಗಳ ಪ್ರಗತಿಯ ದಾಖಲೆಗಳನ್ನು ಪ್ರಮುಖ ಆಧಾರಗಳನ್ನಾಗಿ ದಿನ ನಿತ್ಯದ ಬೋಧನಾ ಕಲಿಕ ಪ್ರಕ್ರಿಯೆಯನ್ನು ಯೋಜಿಸಲು ಮತ್ತು ಬೋಧನೆಯ ಯೋಜನೆಯನ್ನು ರೂಢಿಸಲು ಬಳಸಲಾಗುತ್ತದೆ. ಈ ಘಟಕದಲ್ಲಿ ಏನು, ಏಕೆ ಹೇಗೆ ಎಂದು ದಾಖಲೆ ಮತ್ತು ವರದಿ ಮಾಡುವುದಾಗಿದೆ. ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಕ್ಷೇತ್ರಗಳಲ್ಲಿ ಮೌಲ್ಯಮಪನದ ಫಲಿತಾಂಶಗಳು ಮತ್ತು ಅನುಸರಣೀಯ ಕಾರ್ಯಕ್ರಮಗಳನ್ನು ಹೇಗೆ ಯೋಜಿಸಬೇಕು ಮತ್ತು ವಿದ್ಯಾರ್ಥಿ ಕಲಿಕೆ ಮತ್ತು ಮೌಲ್ಯಮಾಪನ ದಾಖಲೆಗಳ ವಿಶ್ಲೇಷಣೆಯ ಆಧಾರದ ಕನಿಷ್ಠ 8 ಘಂಟೆಗಳ ಅಧ್ಯಯನ ಈ ಘಟಕವನ್ನು ಓದಿ ಮುಗಿಸಲು ಅವಶ್ಯಕವಾಗಿ ಬೇಕಾಗಿದೆ.

ಇ3.

- ಭಾಷೆಯಲ್ಲಿ ಕಲಿಕಾ ಕಾರ್ಯಕ್ಷಮತೆಯ ದಾಖಲಿಸುವಿಕೆಯು ಕೆಲವು ಮೂಲಭೂತ ಕೌಶಲಗಳು ಹೀಗಿವೆ. (1) ಆಲಿಸುವಿಕೆ, (2) ಮಾತುಗಾರಿಕೆ (3) ಓದುಗಾರಿಕೆ (4) ಬರೆವಣಿಗೆ
- ಇ.ವಿ.ಎಸ್. ನಲ್ಲಿ ಕಲಿಕಾ ಕಾರ್ಯಕ್ಷಮತೆಯ ದಾಖಲಿಸುವಿಕೆಯು ಹೀಗಿವೆ. (1) ವೀಕ್ಷಣೆ ಮತ್ತು ದಾಖಲಿಸುವಿಕೆ (2) ಚರ್ಚೆ (3) ಅಭಿವ್ಯಕ್ತಿ (4) ವಿವರಣೆ (5) ವರ್ಗೀಕರಣ (6) ಪ್ರಶ್ನಿಸುವಿಕೆ (7) ವಿಶ್ಲೇಷಣೆ (8) ಪ್ರಯೋಗ (9) ನ್ಯಾಯ ಮತ್ತು ಸಮಾನತೆಗಾಗಿ ಕಾಳಜಿ (9) ಸಹಕಾರ.
- ನಿರ್ದಿಷ್ಟ ತರಗತಿಗೆ ಸಂಬಂಧಿಸಿದಂತೆ ವಿವಿಧ ಘಟಕಗಳನ್ನು ಒಳಗೊಂಡಂತೆ ಗಣಿಶಾಸ್ತ್ರದಲ್ಲಿ ಕಲಿಕಾ ಕಾರ್ಯ ಕ್ಷಮತೆಯ ದಾಖಲಿಸುವಿಕೆ.

ಇ4. ದೋಷಗಳು ಸಂಭವಿಸುತ್ತವೆ. ಆದರೆ ತಪ್ಪುಗಳನ್ನು ಮಾಡಲಾಗುತ್ತದೆ. ದೋಷಗಳು ಹಾಗೆಯೇ ಸಂಭವಿಸಬಹುದು, ಆದರೆ ತಪ್ಪುಗಳು ಮನುಷ್ಯನ ಕ್ರಿಯೆಗಳನ್ನು ಒಳಗೊಂಡಿರುತ್ತದೆ. ನಿಖರತೆ ಅಥವಾ ಸರಿಯಾದ ವಿಚಲನೆಯೇ ದೋಷ. ತಪ್ಪುಗಳು ದೋಷಗಳಿಂದ ಸಂಭವಿಸುತ್ತದೆ. ತಪ್ಪುಗಳು ತಪ್ಪು ನಿರ್ಧಾರ, ಅಸಡ್ಡೆ ಅಥವಾ ಮರೆವಿನಿಂದ ಸಂಭವಿಸುತ್ತದೆ.

ಇ5. ನೀವು ಒಬ್ಬ ಶಿಕ್ಷಕರಾಗಿ, ನಿಮ್ಮ ವಿಷಯಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಕಲಿಕಾ ತೊಂದರೆಗಳಿಗೆ ಪರಿಹಾರೋಪಾಯವಾಗಿ ಈ ಕೆಳಗಿನ ಹಂತಗಳನ್ನು ಅನುಸರಿಸಬಹುದು.

- ವಿದ್ಯಾರ್ಥಿಯ ವಿಷಯವಾರು ಮತ್ತು ಅವಧಿವಾರು ಕಾರ್ಯ ಕ್ಷಮತೆಯ ಆಧಾರದ ಮೇಲೆ ಆತ ಎದುರಿಸುತ್ತಿರುವ ಕಲಿಕಾ ತೊಂದರೆಗಳನ್ನು ವಿಶ್ಲೇಷಿಸಲಾಗುತ್ತದೆ.
- ರೋಗನಿರೋಧಕ ವಿಧಾನದ ಮೂಲಕ ಕಲಿಕಾ ತೊಂದರೆಯ ನಿರ್ದಿಷ್ಟ ಸ್ವರೂಪವನ್ನು ಗುರ್ತಿಸಲು ಸಾಧ್ಯ.
- ಕಲಿಕಾ ತೊಂದರೆಗಳ ಮೇಲೆ ಪ್ರಭಾವ ಬೀರುವ ಅಂಶಗಳಾದ ಮನೋಭಾವ,
- ಆಸಕ್ತಿ, ಅಭಿಪ್ರೇರಣೆ ಇತ್ಯಾದಿ. ಸೂಕ್ತ ಪರಿಹಾರ ಕ್ರಮಗಳನ್ನು ಅನ್ವಯಿಸುವುದು.

## 16.6 ಹೆಚ್ಚಿನ ವಚನಕ್ಕಾಗಿ ಸಲಹೆಗಳು


1. ಭಾರತ ಸರ್ಕಾರ (1986 & 1992) ನ್ಯಾಶನಲ್ ಪಾಲಿಸಿ ಆನ್ ಎಜುಕೇಷನ್ ಮಿನಿಸ್ಟ್ರ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಡಿಪಾರ್ಟಮೆಂಟ್ ಆಫ್ ಎಜುಕೇಷನ್, ನ್ಯೂಡೆಲ್ಲಿ.
2. ಭಾರತ ಸರ್ಕಾರ (1991) ಮಿನಿಮಮ್ ಲೆವೆಲ್ ಆಫ್ ಲರ್ನಿಂಗ್ ಆಟ್ ದಇ ಪ್ರೈಮರಿ ಸ್ಟೇಜ್, ರಿಪೋಟ್ ಆಫ್ ಕಮಿಟಿ ಸೆಟ್ ಅಪ್ ಬೈ ಮಿನಿಸ್ಟ್ರೀ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಓಅಇಖಖ ನ್ಯೂಡೆಲ್ಲಿ.
3. ಭಾರತ ಸರ್ಕಾರ (2005) ನ್ಯಾಶನಲ್ ಕರಿಕುಲಮ್ ಫ್ರೇಂ ವರ್ಕ್, ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವೆಲಪ್‌ಮೆಂಟ್ ಓಅಇಖಖ ನ್ಯೂಡೆಲ್ಲಿ.
4. ಗ್ರೋನ್‌ಲಂಡ್, ಎನ್ 2 & ಟಿನ್ ಆರ್ (1990) ಮೆಸರ್‌ಮೆಂಟ್ ಅಂಡ್ ಎವಾಲ್ಯುಏಷನ್ ಇನ್ ಟೀಚಿಂಗ್ (6 ನೇ ಎಡಿಷನ್ ) ಮ್ಯಾಕ್ ಮಿಲನ್ ಪಬ್ಲಿಷಿಂಗ್, ನ್ಯೂಯಾರ್ಕ್.
5. ರಾಜಪೂತ್ ಎಸ್ ಇ ಟಿ ಎ & 1 (2002) ಹ್ಯಾಂಡ್ ಬುಕ್ ಆನ್ ಪೇಪರ್ ಸೆಟಿಂಗ್, ಓಅಇಖಖ ನ್ಯೂಡೆಲ್ಲಿ.
6. ಶೆಟ್ಟರ್ ಬಿ & ಪೀಟರ್ಸ್ ಹೆಚ್.ಜೆ (1992) ಗೈಡನ್ಸ್ ಟೆಕ್ನಿಕ್ಸ್ ಫಾರ್ ಇಚಿಡಿವಿಯಲ್ ಅಪ್ರೈಸಲ್ ಅಮಡ್ ಡೆವೆಲಂಪ್‌ಮೆಂಟ್ ಮ್ಯಾಕ್‌ಮಿಲನ್ ಕಂಪನಿ ನ್ಯೂಯಾರ್ಕ್.


## 16.7 ಪಠ್ಯಾಂಕ ಅಭ್ಯಾಸ ಪ್ರಶ್ನೆಗಳು

1. ಮಕ್ಕಳ ಕಲಿಕಾ ಪ್ರದರ್ಶನವನ್ನೂ ವರದಿ ಮಾಡಬೇಕಾದ ಸಂಬಂಧಿತ ವಿವಿಧ ವ್ಯಕ್ತಿ, ಸಂಸ್ಥೆಗಳಾರು? ಕಲಿಕಾರ್ಥಿಯ ಕಲಿಕೆಯನ್ನು ಹೆಚ್ಚಿಸುವಲ್ಲಿ ಇವರುಗಳ ಕೊಡುಗೆ ಏನು? ವಿವರಿಸಿರಿ.
2. ದಾಖಲೆಗಾಗಿ, ಕೊಟ್ಟಿರುವ ಪಟ್ಟಿಯಲ್ಲಿ ಮಾರ್ಗದರ್ಶನಗಳು, ಶಿಕ್ಷಕರಿಗೆ ಹೇಗೆ ಸಹಾಯಕ, ಚರ್ಚಿಸಿರಿ.
3. ಗುಣಮಾಪನದ ಫಲಿತಾಂಶಗಳನ್ನು ಆಧರಿಸಿ, ಕಲಿಕೆಯನ್ನು ಹೆಚ್ಚಿಸಲು, ಶಿಕ್ಷಕರು ಕೈಗೊಳ್ಳಬೇಕಾದ ಕಾರ್ಯಹೆಜ್ಜೆಗಳನ್ನು ವಿವರಿಸಿರಿ.
4. ನಿಮ್ಮ ವಿಷಯ ಕ್ಷೇತ್ರದಲ್ಲಿ ಕಲಿಕಾರ್ಥಿಯಲ್ಲಿನ ಕಲಿಕಾ ಕಠಿಣತೆಗಳನ್ನು, ತನಿಖೆ (ತಪಾಸಣೆ) ಮಾಡಲು ತನಿಖಾ(ತಪಾಸಣಾ) ಪರೀಕ್ಷೆ ಮತ್ತು ವೃದ್ಧಿಮಾಪನ ಪರೀಕ್ಷೆಗಳಿಗಾಗಿ, ಪರೀಕ್ಷಾಂಶಗಳನ್ನು ರಚಿಸುವ ಹಂತಗಳನ್ನು (ಹೆಜ್ಜೆಗಳನು) ವಿಸ್ತೃತವಾಗಿ ವಿವರಿಸಿ.